ಭಾನುವಾರ, ಸೆಪ್ಟೆಂಬರ್ 5, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 248 | ಪುಟ 22

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಕೋವಿಡ್ ದುರಿತ ಕಾಲದ ಶಿಕ್ಷಕರ ಅನುಭವಗಳು ಹೇಗಿದ್ದವು? ಶಿಕ್ಷಕರ ದಿನದಂದು ಒಂದು ಹೊರಳು ನೋಟ...

ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಟೂಲ್ ಕಿಟ್ 6

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್‌.ವಿ. ರಮಣ ಅಭಿಪ್ರಾಯ

ಕಾನೂನು ವೃತ್ತಿ: ಮಹಿಳೆಯರ ಪ್ರಾತಿನಿಧ್ಯ ಹೆಚ್ಚಲಿ 7

ಶಿಕ್ಷಕರ ದಿನದ ಶುಭಾಶಯಗಳು

ಕೀಲು ನೋವೆ? ಮೂಳೆ ನೋವೆ? ನರಗಳ ನೋವೆ?
ಉಳುಕಿದ ನೋವೆ? ಬೆನ್ನು ನೋವೆ? ಸ್ನಾಯು ಸೆಳೆತವೆ?

ಇಲ್ಲಿದೆ ಶಾಶ್ವತ ಪರಿಹಾರ. 'ಅಮೃತರತ್ನ'
ನೋವು ನಿವಾರಕ ತೈಲ ಮತ್ತು ಮಾತ್ರೆ

ಗಂಟು ನೋವು, ಬೆನ್ನು ನೋವು, ಕತ್ತು ನೋವು, ಸ್ನಾಯು ಬೇನೆ, ಉಳುಕು ಕಾಯಿಲೆಗಳಿಗೆ ಒಂದು 'ಅಮೃತರತ್ನ' ಗುಳಿಗೆಯನ್ನು ಸೇವಿಸಿ, 'ಅಮೃತರತ್ನ' ನೋವು ನಿವಾರಕ ತೈಲವನ್ನು ನೋವಿರುವ ದೇಹದ ಭಾಗಕ್ಕೆ ಹಚ್ಚಿದಲ್ಲಿ, ಶೀಘ್ರ ಉಪಶಮನ ದೊರೆಯುವುದು.

ಎಲ್ಲಾ ಆಯುರ್ವೇದಿಕ್ ಮತ್ತು ಅಲೋಪಥಿಕ್ ಔಷಧಿ ಅಂಗಡಿಗಳಲ್ಲಿ ದೊರೆಯುತ್ತದೆ. Also available at : amazon.in

Amrutha Rathna PAIN OIL

ಅಮೃತರತ್ನ ತೈಲ ಅಮೃತರತ್ನ ಮಾತ್ರೆ

ಆರೋಗ್ಯದ ಕಾಳಜಿಯೊಂದಿಗೆ ಜೀವನದ ಕ್ಷಣ ಕ್ಷಣವನ್ನು ಆನಂದಿಸಿ!

ಜೀವನದ ಪ್ರತಿ ನಿಮಿಷದಲ್ಲೂ ಹರ್ಷೋಲ್ಲಾಸ ನಿಮ್ಮದಾಗಲಿ!

ಕೊನೆ ಗಳಿಗೆಯಲ್ಲಿ ಕುರುಹು ಕಂಡು ಆಸ್ಪತ್ರೆಗೆ ಹೋಗುವುದನ್ನು ಕಾಯಬೇಡಿ
ದೇಹದಲ್ಲಿ ಊತ • ಹಸಿವಿನ ಕೊರತೆ • ದಣಿವು • ಕಡಿಮೆ ರೋಗನಿರೋಧಕ ಶಕ್ತಿ
ನಿಮಗೆ ಮೇಲಿನ ಯಾವುದೇ ಒಂದು ಕುರುಹು ಕಂಡುಬಂದಲ್ಲಿ ಕೂಡಲೇ ನಿಮ್ಮ ವೈದ್ಯರನ್ನು ಭೇಟಿ ಮಾಡಿ.

ಆಯುರೊಲಿವ್

ಎಚ್ಚರಿಕೆ ⚠ ನಿಮ್ಮ ಯಕೃತ್ತಿನ ಆರೋಗ್ಯ

ಪ್ರತಿದಿನ ಆರೋಗ್ಯ ಕಾಳಜಿ ವಹಿಸಿ

AYUROLIV

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ: From the house of A & J Health Care, Bangalore
For a Healthy Society
Ph: 8762226000, 9243112373.

ಉಸಿರಾಡಲಿ ಆಮ್ಲಜನಕ ಘಟಕ

• ಜಿ.ಬಿ.ನಾಗರಾಜ್

ಒಳನೋಟ

ಬೇಕಿದೆ ಪೂರಕ ಸಿದ್ಧತೆ

ಪ್ರತಿಕ್ರಿಯಿಸಿ: 9606038256
feedback@prajavani.co.in

ಚಿತ್ರದುರ್ಗ: ಕೋವಿಡ್ ಸಂಭಾವ್ಯ ಮೂರನೇ ಅಲೆಯಲ್ಲಿ ರೋಗಿಗಳಿಗೆ ಪ್ರಾಣವಾಯು ಕೊರತೆ ಆಗದಂತೆ, ಸರ್ಕಾರವು ಸಮರೋಪಾದಿಯಲ್ಲಿ ಸ್ಥಾಪಿಸುತ್ತಿರುವ ವೈದ್ಯಕೀಯ ಆಮ್ಲಜನಕ ಘಟಕಗಳು ಕೇವಲ ತೋರಿಕೆಯೇ ಎಂಬ ಅನುಮಾನ ಹುಟ್ಟಿಕೊಂಡಿದೆ. ಮೂಲಸೌಲಭ್ಯ ಅಭಿವೃದ್ಧಿಪಡಿಸಲಾಗಿದೆಯಾದರೂ ಅಗತ್ಯ ಮಾನವ ಸಂಪನ್ಮೂಲ, ತಂತ್ರಜ್ಞರ ನೇಮಕಾತಿ ಇನ್ನೂ ನಡೆದಿಲ್ಲ.

ಈ ತಿಂಗಳಾಂತ್ಯ ಅಥವಾ ಅಕ್ಟೋಬರ್‌ನಲ್ಲಿ ಮೂರನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ. ರೋಗಿಗಳ ಪ್ರಾಣ ರಕ್ಷಣೆಯಲ್ಲಿ ಪ್ರಮುಖ ಅಸ್ತ್ರವಾಗುವ ಆಮ್ಲಜನಕದ ಮೇಲೆ ಸರ್ಕಾರ ಹೆಚ್ಚಿನ ಗಮನ ಕೇಂದ್ರೀಕರಿಸಿದೆ. ಆದರೆ, ಆಮ್ಲಜನಕ ಉತ್ಪಾದನೆ, ಸಂಗ್ರಹ ಹಾಗೂ ಪೂರೈಕೆಗೆ ಸಂಬಂಧಿಸಿದಂತೆ ಕೈಗೊಂಡಿರುವ ಸಿದ್ಧತೆಗಳ ಕುರಿತು ವೈದ್ಯರಲ್ಲಿಯೇ ತೃಪ್ತಿ ಇಲ್ಲ.

ಕೋವಿಡ್ ಎರಡನೇ ಅಲೆ ಎದುರಾದಾಗ ವೈದ್ಯಕೀಯ ಆಮ್ಲಜನಕ 'ಪ್ರಾಣವಾಯು' ಎಂಬುದು ನಿರೂಪಿತವಾಗಿದೆ. ಜೀವ ಉಳಿಸಿಕೊಳ್ಳಲು ಜನರು ಪರದಾಡಿದ ರೀತಿ ಈಗಲೂ ಕಣ್ಮುಂದೆ ಇದೆ. ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿದ ದುರಂತದ ಕರಾಳ ನೆನಪು ಕಾಡುತ್ತಿದೆ. ಮೂರನೇ ಅಲೆಯ ಸಂದರ್ಭದಲ್ಲಿ ಇಂತಹ ತೊಂದರೆ ಎದುರಾಗಬಾರದು ಎಂದು ಹೈಕೋರ್ಟ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ನೂರಾರು ಘಟಕಗಳನ್ನು ಸ್ಥಾಪಿಸಿರುವುದಾಗಿ ಸರ್ಕಾರ ಬೀಗುತ್ತಿದೆ. ವಾಸ್ತವವಾಗಿ, ಅವುಗಳಲ್ಲಿ ಆಮ್ಲಜನಕ ಉತ್ಪಾದನೆಯಾಗಿ ಸಂಕಷ್ಟದ ಸಂದರ್ಭದಲ್ಲಿ ನೆರವಾಗಬಲ್ಲವೇ ಎಂಬುದರ ಬಗ್ಗೆ ಖಚಿತತೆ ಇಲ್ಲ.

ತಂತ್ರಜ್ಞರ ಕೊರತೆ: ಆಮ್ಲಜನಕ ಉತ್ಪಾದನಾ ಘಟಕಗಳ ನಿರ್ವಹಣೆ ಹಾಗೂ ಪ್ರಾಣವಾಯು ಪೂರೈಕೆಯಲ್ಲಿ ತಂತ್ರಜ್ಞರ ಕೊರತೆ ಎದ್ದು ಕಾಣುತ್ತಿದೆ. ಬಯೊ ಮೆಡಿಕಲ್ ಎಂಜಿನಿಯರ್ ಸೇರಿ ಇತರ ತಂತ್ರಜ್ಞರ ನೇಮಕಾತಿ ಇನ್ನೂ ನಡೆಯಬೇಕಿದೆ. ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲಿ ಐಸಿಯು ನಿರ್ವಹಣೆಗೆ ಬೆರಳೆಣಿಕೆಯ ತಂತ್ರಜ್ಞರಿದ್ದಾರೆ. ಆಮ್ಲಜನಕ ಉತ್ಪಾದನಾ ಘಟಕದ ನಿರ್ವಹಣೆ ಇವರ ಹೆಗಲಿಗೆ ಬಿದ್ದಿದೆ. ಆಮ್ಲಜನಕವನ್ನು ಟ್ಯಾಂಕಿಗೆ ತುಂಬುವ, ಕೊಳವೆ ಮಾರ್ಗದ ಮೂಲಕ ರವಾನೆ ಮಾಡುವ ಜ್ಞಾನವಷ್ಟೇ ಇವರಿಗೆ ಗೊತ್ತಿರುವುದು.

'ಆಮ್ಲಜನಕ ಉತ್ಪಾದನಾ ಘಟಕಗಳ ನಿರ್ವಹಣೆಗೆ 38 ಬಯೊ ಮೆಡಿಕಲ್ ಎಂಜಿನಿಯರ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ. ಆಮ್ಲಜನಕ ಉತ್ಪಾದನೆ, ಪೂರೈಕೆಯ ಬಗ್ಗೆ ವೈದ್ಯಕೀಯ ಹಾಗೂ ವೈದ್ಯಕೀಯೇತರ ಸಿಬ್ಬಂದಿಗೂ ತರಬೇತಿ ನೀಡಲಾಗುತ್ತಿದೆ. ನಿರ್ವಹಣೆಯ ಕೌಶಲಗಳನ್ನು ಬೆಳೆಸಲಾಗುತ್ತದೆ' ಎನ್ನುತ್ತಾರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಡಾ.ಕೆ.ವಿ. ತ್ರಿಲೋಕ ಚಂದ್ರ.

ಘಟಕಕ್ಕೆ 30ಗಳ ಗಡುವು

ಹೊಸದಾಗಿ 247 ಆಮ್ಲಜನಕ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಅನುಮತಿ ನೀಡಿದೆ. 103 ಘಟಕಗಳು ಕಾರ್ಯಾರಂಭಿಸಿರುವುದಾಗಿ ಸರ್ಕಾರ ಹೇಳುತ್ತಿದೆ. ಅಂದರೆ, ನಿತ್ಯ ನೂರು ಟನ್ ಆಮ್ಲಜನಕ ಉತ್ಪಾದನೆ ಆಗುತ್ತಿದೆ. ಸೆಪ್ಟೆಂಬರ್ ಅಂತ್ಯದ ಹೊತ್ತಿಗೆ ಎಲ್ಲ ಘಟಕಗಳ ಕಾರ್ಯಾರಂಭಕ್ಕೆ ಗಡುವು ವಿಧಿಸಲಾಗಿದೆ. ಎಲ್ಲವೂ ಶುರುವಾದರೆ 240 ಟನ್ ವೈದ್ಯಕೀಯ ಆಮ್ಲಜನಕ ಲಭ್ಯವಾಗುತ್ತದೆ.

ಎಂಟು ಸಾವಿರ ಆಮ್ಲಜನಕ ಸಾಂದ್ರಕಗಳನ್ನು ಸರ್ಕಾರ ಈಗಾಗಲೇ ಖರೀದಿಸಿದೆ. ಆಮ್ಲಜನಕ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲು ಪ್ರತಿ ಜಿಲ್ಲಾ ಆಸ್ಪತ್ರೆಗೆ ಹೆಚ್ಚುವರಿಯಾಗಿ 13 ಸಾವಿರ ಲೀಟರ್ ಹಾಗೂ ತಾಲ್ಲೂಕು ಆಸ್ಪತ್ರೆಗೆ ಆರು ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲಿ ಈಗಾಗಲೇ ಆರು ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್‌ಗಳಿವೆ. ಸಿಲಿಂಡರ್‌ಗಳಿಗೆ ಆಮ್ಲಜನಕ ಭರ್ತಿ ಮಾಡುವ ರೀಫಿಲ್ಲಿಂಗ್ ಘಟಕ ಸ್ಥಾಪನೆ ಕೆಲಸ ರಾಜ್ಯದ ಎಂಟು ಜಿಲ್ಲೆಯಲ್ಲಿ ಇನ್ನೂ ಆರಂಭವಾಗಿಲ್ಲ.



ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಆಮ್ಲಜನಕ ಉತ್ಪಾದನಾ ಘಟಕ ಪ್ರಜಾವಾಣಿ ಚಿತ್ರ– ಭವಾನಿ ಮಂಜು

ಪಿಎಸ್‌ಎ ಘಟಕಗಳ ಸಂಖ್ಯೆ

1,573	ಪಿಎಂ ಕೇರ್ಸ್ ಅಡಿ ರಾಜ್ಯಗಳಿಗೆ ಮಂಜೂರಾದ ಪಿಎಸ್‌ಎ ಘಟಕಗಳ ಸಂಖ್ಯೆ
300	ಆಗಸ್ಟ್ ಮೊದಲ ವಾರದಲ್ಲಿ ವಿವಿಧ ರಾಜ್ಯಗಳಲ್ಲಿ ಅಳವಡಿಸಲಾಗಿದ್ದ ಪಿಎಸ್‌ಎ ಘಟಕಗಳ ಸಂಖ್ಯೆ
1,273	ಆಗಸ್ಟ್ ಮೊದಲ ವಾರದಲ್ಲಿ ವಿವಿಧ ರಾಜ್ಯಗಳಲ್ಲಿ ಅಳವಡಿಸಬೇಕಿದ್ದ ಪಿಎಸ್‌ಎ ಘಟಕಗಳ ಸಂಖ್ಯೆ

> ಆಮ್ಲಜನಕ ಉತ್ಪಾದನಾ ಘಟಕ ಹೆಚ್ಚಿಸಲಾಗಿದೆ. ಹೀಗಾಗಿ, ಪ್ರಾಣವಾಯುವಿಗೆ ಕೊರತೆ ಎದುರಾಗುವ ಸಾಧ್ಯತೆ ಕಡಿಮೆ. ನಿರ್ವಹಣೆಗೆ ಸಂಬಂಧಿಸಿದಂತೆ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತಿದೆ
>
> **ಡಾ.ಕೆ.ವಿ.ತ್ರಿಲೋಕ ಚಂದ್ರ,** ಆರೋಗ್ಯ ಇಲಾಖೆ ಆಯುಕ್ತ

8ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 8

ಶೂಟಿಂಗ್, ಬ್ಯಾಡ್ಮಿಂಟನ್: ಭಾರತದ 'ಜೋಡಿ'ಯ ಮೋಡಿ

ಟೋಕಿಯೊ ಪ್ಯಾರಾಲಿಂಪಿಕ್ಸ್‌ನ ಶೂಟಿಂಗ್‌ನಲ್ಲಿ ಹರಿಯಾಣದ ಮನೀಷ್ ನರ್ವಾಲ್ ಒಲಿಂಪಿಕ್ಸ್ ದಾಖಲೆಯೊಂದಿಗೆ ಚಿನ್ನ ಗೆದ್ದರೆ ಫರಿದಾಬಾದ್‌ನ ಸಿಂಘರಾಜ್ ಅಡಾನ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಬ್ಯಾಡ್ಮಿಂಟನ್‌ನಲ್ಲಿ ಪ್ರಮೋದ್ ಭಗತ್ ಭಾರತಕ್ಕೆ ಮೊದಲ ಚಿನ್ನ ಗಳಿಸಿಕೊಟ್ಟರು. ಮನೋಜ್ ಸರ್ಕಾರ್ ಕಂಚು ಗಳಿಸಿದರು.

TOKYO 2020
PARALYMPIC GAMES

ಶೂಟಿಂಗ್ ವಿಭಾಗ ಎಸ್‌ಎಚ್–1

ಚಿನ್ನ ಮನೀಷ್ ನರ್ವಾಲ್ (ಭಾರತ) 218.2

ಬೆಳ್ಳಿ ಸಿಂಘರಾಜ್ ಅಡಾನ (ಭಾರತ) 216.7

ಕಂಚು ಸೆರ್ಜಿ ಮಲಿಶೆವ್ (ರಷ್ಯಾ) 196.8

ಬ್ಯಾಡ್ಮಿಂಟನ್ ವಿಭಾಗ ಎಸ್‌ಎಲ್–3

ಚಿನ್ನ ಪ್ರಮೋದ್ ಭಗತ್ (ಭಾರತ). ಎದುರಾಳಿ ಡ್ಯಾನಿಯಲ್ ಬೆತೆಲ್ (ಬ್ರಿಟನ್) 21-14, 21-17

ಕಂಚು ಮನೋಜ್ ಸರ್ಕಾರ್ (ಭಾರತ). ಎದುರಾಳಿ ದೈಸುಕೆ ಫುಜಿಹರ (ಜಪಾನ್) 22-20, 21-13

ಭಾರತದ ಈ ವರೆಗಿನ ಸಾಧನೆ: ಒಟ್ಟು ಪದಕ 17 | ಚಿನ್ನ 4 | ಬೆಳ್ಳಿ 7 | ಕಂಚು 6 | ಪದಕ ಪಟ್ಟಿಯಲ್ಲಿ ಸ್ಥಾನ 26

ಫೈನಲ್‌ಗೆ ಕನ್ನಡಿಗ ಅಧಿಕಾರಿ



ಬ್ಯಾಡ್ಮಿಂಟನ್‌ನ ಪುರುಷರ ಸಿಂಗಲ್ಸ್‌ನಲ್ಲಿ ಐಎಎಸ್ ಅಧಿಕಾರಿ ಕನ್ನಡಿಗ ಸುಹಾಸ್ ಯತಿರಾಜ್ ಅವರು ಎಸ್‌ಎಲ್–4 ವಿಭಾಗದಲ್ಲಿ ಫೈನಲ್ ಪ್ರವೇಶಿಸಿದರು. ಎಸ್‌ಎಚ್–6 ವಿಭಾಗದಲ್ಲಿ ಕೃಷ್ಣ ನಗಾರ್ ಪದಕದ ಭರವಸೆ ಮೂಡಿಸಿದ್ದಾರೆ.

ಅಸಂಘಟಿತ ವಲಯಕ್ಕೆ ಪತ್ರಿಕಾ ವಿತರಕರು: ಸಚಿವ ಹೆಬ್ಬಾರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಪತ್ರಿಕಾ ವಿತರಕರನ್ನು ಅಸಂಘಟಿತ ಕಾರ್ಮಿಕ ವಲಯಕ್ಕೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ತಿಳಿಸಿದರು.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಶನಿವಾರ ಹಮ್ಮಿಕೊಂಡಿದ್ದ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ತಿಂಗಳಿಗೆ ₹20 ಸಾವಿರ ವೇತನ ಪಡೆಯುವವರನ್ನು ಬಿಟ್ಟು ಉಳಿದವರನ್ನೆಲ್ಲಾ ಅಸಂಘಟಿತ ಕಾರ್ಮಿಕರೆಂದು ಪರಿಗಣಿಸಲಾಗುತ್ತದೆ. ಇವರಿಗಾಗಿ ಕೇಂದ್ರ ಸರ್ಕಾರ 'ಇ-ಶ್ರಮ್' ಪೋರ್ಟಲ್ ಜಾರಿಗೊಳಿಸಿದೆ. ಇದಕ್ಕೆ ರಾಜ್ಯದಲ್ಲೂ ಚಾಲನೆ ನೀಡಲಾಗಿದೆ. ಇದರಲ್ಲಿ ನೋಂದಣಿ ಮಾಡಿಕೊಂಡವರಿಗೆ ವಿಶೇಷ ಗುರುತಿನ ಚೀಟಿ ನೀಡಲಾಗುತ್ತದೆ' ಎಂದರು.

'ರಾಜ್ಯದಲ್ಲಿ 1.5 ಕೋಟಿಗೂ ಅಧಿಕ ಅಸಂಘಟಿತ ಕಾರ್ಮಿಕರಿದ್ದಾರೆ. ಅವರೆಲ್ಲರಿಗೂ ವಿಮೆ ಸೌಲಭ್ಯ ಕಲ್ಪಿಸಲಾಗುವುದು. ಇದರ ಅನ್ವಯ ಕಾರ್ಮಿಕರೊಬ್ಬರು ಮೃತಪಟ್ಟರೆ ಅವರ ಕುಟುಂಬಕ್ಕೆ ₹2 ಲಕ್ಷ ಪರಿಹಾರ ಸಿಗಲಿದೆ. ಶಾಶ್ವತ ಅಂಗವಿಕಲರಾದರೆ ₹1.5 ಲಕ್ಷ ಹಾಗೂ ಅಂಗವಿಕಲರಾದರೆ ₹ 1 ಲಕ್ಷ ನೆರವು ನೀಡಲಾಗುತ್ತದೆ' ಎಂದರು.

'ಪತ್ರಿಕಾ ವಿತರಕರ ಹಿತಕಾಯಲು ರಾಜ್ಯ ಸರ್ಕಾರ ಬದ್ಧವಾಗಿದೆ. ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ಜೊತೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ವಿತರಕರ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಲಾಗುವುದು' ಎಂದು ತಿಳಿಸಿದರು.

'ಲಾರಿ, ಕ್ಯಾಬ್, ಮ್ಯಾಕ್ಸಿಕ್ಯಾಬ್ ಚಾಲಕರ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತದೆ' ಎಂದರು.

ರಾಜ್ಯ ಕೋವಿಡ್ ಅಂಕಿ–ಅಂಶ

29,54,047 ▲ ಒಟ್ಟು ಸೋಂಕಿತರು
(29,53,064 ನಿನ್ನೆಯ ವಿವರ)

17,746 ▼ ಸಕ್ರಿಯ ಪ್ರಕರಣಗಳು

28,98,874 ▲ ಗುಣಮುಖರಾದವರು

37,401 ಒಟ್ಟು ಸಾವು ▲

ದಿನದ ಏರಿಕೆ		
ಹೊಸ ಪ್ರಕರಣ	983	▼
ಗುಣಮುಖ	1,620	▲
ಸಾವು	21	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟ

ಸರ್ಕಾರ ರಚನೆ ಮುಂದೂಡಿದ ತಾಲಿಬಾನ್ 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ನನಗೆ ವಿದ್ಯಾರ್ಥಿಗಳೇ 'ಉತ್ತಮ ಶಿಕ್ಷಕ' ಪ್ರಶಸ್ತಿ ಕೊಡ್ತಾರೆ...
ಎಲ್ರಿಗೂ ಒಳ್ಳೆಯ ಮಾರ್ಕ್ಸ್ ಸಿಗುತ್ತೆ..

ಕರ್ನಾಟಕ ಪೊಲೀಸ್ ಕಾಯ್ದೆ ತಿದ್ದುಪಡಿ ಪ್ರಸ್ತಾವಕ್ಕೆ ಸಂಪುಟ ಸಭೆ ಒಪ್ಪಿಗೆ

ರಾಜ್ಯದಲ್ಲಿ ಆನ್‌ಲೈನ್ ಜೂಜು ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣವನ್ನು ಪಣವಾಗಿಟ್ಟು ನಡೆಸುವ ಎಲ್ಲ ಬಗೆಯ ಆನ್‌ಲೈನ್ ಜೂಜನ್ನು ನಿಷೇಧಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಅದಕ್ಕೆ, ಪೂರಕವಾಗಿ ಕರ್ನಾಟಕ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಶನಿವಾರ ಒಪ್ಪಿಗೆ ನೀಡಿದೆ.

ಆನ್‌ಲೈನ್ ಜೂಜಾಟಕ್ಕೆ ವೇದಿಕೆ ಕಲ್ಪಿಸುವವರು ಮತ್ತು ಜೂಜಿನಲ್ಲಿ ತೊಡಗುವವರ ವಿರುದ್ಧ ಕ್ರಮ ಕೈಗೊಳ್ಳಲು ಯಾವುದೇ ನಿರ್ದಿಷ್ಟವಾದ ಕಾನೂನುಗಳು ಇಲ್ಲ. ಈ ವಿಷಯವನ್ನು ಕರ್ನಾಟಕ ಪೊಲೀಸ್ ಕಾಯ್ದೆಯ ವ್ಯಾಪ್ತಿಗೆ ತಂದು, ದಂಡ ಮತ್ತು ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ ಪ್ರಸ್ತಾವಕ್ಕೆ ಸಭೆ ಅಂಗೀಕಾರ ನೀಡಿದೆ.

ಸಭೆಯ ಬಳಿಕ ವಿವರ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, 'ಆನ್‌ಲೈನ್ ಜೂಜು ನಿಷೇಧಿಸುವಂತೆ ಕೋರಿರುವ ಅರ್ಜಿಯ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ಹೈಕೋರ್ಟ್ ಸೂಚನೆಗೆ ಪೂರಕವಾಗಿ ಕರ್ನಾಟಕ ಪೊಲೀಸ್ ಕಾಯ್ದೆಗೆ ತಿದ್ದುಪಡಿ ಮಾಡಲು ನಿರ್ಧರಿಸಲಾಗಿದೆ' ಎಂದರು.

ಆನ್‌ಲೈನ್ ಮೂಲಕ ಹಣವನ್ನು ಪಣವಾಗಿಟ್ಟು ಆಡುವ ಎಲ್ಲ ಬಗೆಯ ಆಟಗಳನ್ನೂ ಆನ್‌ಲೈನ್ ಜೂಜು ಎಂದು ಪರಿಗಣಿಸಲಾಗುವುದು ಎಂದರು.

6ನೇ ಪುಟ ನೋಡಿ

ಚಿನ್ನದ ಲೇಪ ಅಕ್ರಮ: ಅಧಿಕಾರಿ ಖುಲಾಸೆ

ಮೈಸೂರು ಅರಮನೆಯ ಗೋಡೆ, ಕಂಬಗಳಿಗೆ ಚಿನ್ನದ ಲೇಪನ, ಆನೆಗಳಿಗೆ ನೆಲಹಾಸು ಹಾಕುವ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ಆರೋಪ ಮತ್ತು ಅರಮನೆಯ ಒಳಾಂಗಣ, ಹೊರಾಂಗಣದಲ್ಲಿ ಅಕ್ರಮವಾಗಿ ಚಿತ್ರೀಕರಣಕ್ಕೆ ಅನುಮತಿ ನೀಡಿದ್ದ ಆರೋಪದ ಪ್ರಕರಣಗಳಲ್ಲಿ ಮೈಸೂರು ಅರಮನೆ ಮಂಡಳಿಯ ಉಪ ನಿರ್ದೇಶಕ ಟಿ.ಆರ್. ಸುಬ್ರಹ್ಮಣ್ಯ ವಿರುದ್ಧ ಶಿಸ್ತು ಕ್ರಮಕ್ಕೆ ಲೋಕಾಯುಕ್ತರು ಸಲ್ಲಿಸಿದ್ದ ಎರಡು ಶಿಫಾರಸುಗಳನ್ನು ಸಂಪುಟ ತಿರಸ್ಕರಿಸಿದೆ.

6ನೇ ಪುಟ ನೋಡಿ

ಜಿ.ಪಂ., ತಾ.ಪಂ. ಕ್ಷೇತ್ರ ಪುನರ್ ವಿಂಗಡಣೆಗೆ ಪ್ರತ್ಯೇಕ ಆಯೋಗ

ಬೆಂಗಳೂರು: ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆ ಹಾಗೂ ಮೀಸಲಾತಿ ನಿಗದಿಗೆ ಪ್ರತ್ಯೇಕ ಆಯೋಗ ರಚಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಪೂರಕವಾಗಿ ಪಂಚಾಯತ್ ರಾಜ್ ಕ್ಷೇತ್ರ ಪುನರ್‌ವಿಂಗಡಣಾ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಸಂಪುಟ ಶನಿವಾರ ಒಪ್ಪಿಗೆ ನೀಡಿದೆ.

6ನೇ ಪುಟ ನೋಡಿ

ಖಾಸಗಿ ಆಸ್ಪತ್ರೆಗಳ ಮೂಲಕ ಕಾರ್ಮಿಕರಿಗೆ ಲಸಿಕೆ ಹಾಕಿಸಲು ಕಾರ್ಯಾದೇಶ

ಲಸಿಕೆಗೆ ಕಾರ್ಮಿಕ ನಿಧಿಯ ₹700 ಕೋಟಿ?

• ವಿಜಯಕುಮಾರ್ ಎಸ್‌.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣಕ್ಕೆ ಮೀಸಲಿಟ್ಟಿರುವ ಕಾರ್ಮಿಕ ಕಲ್ಯಾಣ ನಿಧಿ ಮೇಲೆ ಸದಾ ಕಣ್ಣಿಟ್ಟಿರುವ ಕಾರ್ಮಿಕ ಇಲಾಖೆ, ಕೋವಿಡ್ ಲಸಿಕೆ ಕೊಡಿಸುವ ನೆಪದಲ್ಲಿ ₹700 ಕೋಟಿಯಷ್ಟು ಮೊತ್ತ ಕರಗಿಸಲು ಮುಂದಾಗಿದೆ.

ಸರ್ಕಾರಿ ಆಸ್ಪತ್ರೆಗಳಲ್ಲೇ ಉಚಿತವಾಗಿ ಲಸಿಕೆ ದೊರೆಯುತ್ತಿದ್ದರೂ, ಕಲ್ಯಾಣ ನಿಧಿಯ ಹಣ ಕೊಟ್ಟು ಖಾಸಗಿ ಆಸ್ಪತ್ರೆಗಳ ಮೂಲಕ ಲಸಿಕಾ ಅಭಿಯಾನ ನಡೆಸಲು ಇಲಾಖೆ ಈಗಾಗಲೇ ಕಾರ್ಯಾದೇಶವನ್ನೂ ನೀಡಿದೆ.

2006–07ರಿಂದ ಈವರೆಗೆ ಕಟ್ಟಡಗಳ ಮಾಲೀಕರಿಂದ ಸೆಸ್ (ಕರ) ರೂಪದಲ್ಲಿ ಸಂಗ್ರಹವಾದ ನಿಧಿಯಲ್ಲಿ ಸದ್ಯ ₹10 ಸಾವಿರ ಕೋಟಿಯಷ್ಟು ಹಣವಿದೆ. ಆ ಹಣವನ್ನು, ಸದಾ ಅಪಾಯದ ಮಧ್ಯೆಯೇ ದುಡಿಯುವ ಕಾರ್ಮಿಕರ ಕಲ್ಯಾಣಕ್ಕೆ ಬಳಸಬೇಕಿದೆ. ವಸತಿ, ಆರೋಗ್ಯ, ಶಿಕ್ಷಣ ಹಾಗೂ ಸೌಲಭ್ಯ ಕಲ್ಪಿಸಲು ಬಳಸಬೇಕಾದ ಕಾರ್ಮಿಕ ಇಲಾಖೆ, ಲಸಿಕೆ ಹೆಸರಿನಲ್ಲಿ ಅನಗತ್ಯವಾಗಿ ಖರ್ಚು ಮಾಡಲು ಯೋಜನೆ ರೂಪಿಸಿದೆ ಎಂದು ಕಾರ್ಮಿಕ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ.

6ನೇ ಪುಟ ನೋಡಿ

'ವಿನಿಯೋಗಿಸುತ್ತಿರುವುದು ಸಣ್ಣ ಮೊತ್ತ'



'ಖಾಸಗಿ ಆಸ್ಪತ್ರೆಗಳ ಮೂಲಕ ಕಾರ್ಮಿಕರಿಗೆ ಲಸಿಕೆ ಕೊಡಿಸಲು ವಿನಿಯೋಗಿಸುತ್ತಿರುವುದು ಸಣ್ಣ ಮೊತ್ತ' ಎಂದು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಸ್ಪಷ್ಟಪಡಿಸಿದರು.

'ಸರ್ಕಾರಿ ಕೋಟಾದಲ್ಲಿ 1.5 ಲಕ್ಷ ಕಾರ್ಮಿಕರಷ್ಟೇ ಲಸಿಕೆ ಪಡೆದಿದ್ದಾರೆ. ಸರ್ಕಾರಿ ಕೋಟಾದಲ್ಲೇ ಎಲ್ಲರಿಗೂ ಲಸಿಕೆ ನೀಡುವುದು ತಡವಾಗಬಹುದು. ಕಾರ್ಮಿಕರಿಗೆ ಲಸಿಕೆ ಕೊಡಿಸಲು ಕಾರ್ಮಿಕ ಇಲಾಖೆ ಮುಂದಾಗಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೇಳಿವೆ' ಎಂದರು. 'ಸರ್ಕಾರಿ ಕೋಟಾಕ್ಕೆ ಹೆಚ್ಚಿನ ಲಸಿಕೆ ಲಭ್ಯವಾದರೆ, ಖಾಸಗಿ ಆಸ್ಪತ್ರೆಯಿಂದ ಲಸಿಕೆ ಪಡೆಯುವುದನ್ನು ಕ್ರಮೇಣ ಕಡಿಮೆ ಮಾಡುತ್ತೇವೆ' ಎಂದು ಹೇಳಿದರು.

ಅಂಕಿ–ಅಂಶ

30 ಲಕ್ಷ
ನೋಂದಾಯಿತ ಕಾರ್ಮಿಕರು

20 ಲಕ್ಷ
ನೋಂದಣಿಯಾಗದ ವಲಸೆ ಕಾರ್ಮಿಕರು

₹780 ಕೋಟಿ
ಎಲ್ಲ ಕಾರ್ಮಿಕರಿಗೆ ಎರಡು ಡೋಸ್ ಲಸಿಕೆ ಕೊಡಿಸಲು ತಗಲುವ ಅಂದಾಜು ವೆಚ್ಚ

ನಿಮ್ಮ ಪರಿಪೂರ್ಣ ಸಂಗಾತಿಯ ಜೊತೆ
ಹೊಸ ಕುಟುಂಬವನ್ನು
m4marry.com ನೊಂದಿಗೆ ಹುಡುಕಿ.



Register for free

m4marry.com
Where *families* find each other

Call: 79949 10999 9048112340

ಬೆಂಗಳೂರು ನಗರ

ಭಾನುವಾರದ ಉಷ್ಣಾಂಶ 27° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ. ಸಂಜೆ ಮಳೆ ಸಾಧ್ಯತೆ

ಹವಾಮಾನ	ಸೋಮವಾರ	ಮಂಗಳವಾರ	ಬುಧವಾರ
	28° 20°	29° 20°	29° 20°

☀ ಸೂರ್ಯೋದಯ: 6:08 ಸೂರ್ಯಾಸ್ತ : 6:28 ☾ ಚಂದ್ರೋದಯ: ರಾ. 3:30 ಚಂದ್ರಾಸ್ತ: ಸಂ. 4:41 ಶನಿವಾರದ ಹವಾಮಾನ : ಗರಿಷ್ಠ 27° ಕನಿಷ್ಠ 20°

ಅನಧಿಕೃತ ಸ್ಕ್ಯಾನಿಂಗ್ ಕೇಂದ್ರಕ್ಕೆ ಬೀಗ

ಬೆಂಗಳೂರು: ಹೊಸೂರು ರಸ್ತೆಯ ರೂಪೇನ ಅಗ್ರಹಾರದಲ್ಲಿರುವ ಅಸ್ವದ್ ಆಸ್ಪತ್ರೆಯಲ್ಲಿ ಅನಧಿಕೃತವಾಗಿ ನಡೆಸುತ್ತಿದ್ದ ಸ್ಕ್ಯಾನಿಂಗ್ ಕೇಂದ್ರವನ್ನು ಮುಚ್ಚಿ, ಮೂರು ಸ್ಕ್ಯಾನಿಂಗ್ ಉಪಕರಣಗಳನ್ನು ಶನಿವಾರ ವಶಪಡಿಸಿಕೊಳ್ಳಲಾಗಿದೆ.

ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆಯ ನಿಷೇಧ) ಕಾಯ್ದೆಯ ಅನ್ವಯ ಬೆಂಗಳೂರು ನಗರ ಜಿಲ್ಲಾ ಸಲಹಾ ಸಮಿತಿ, ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿ ಸದಸ್ಯರು ಆಸ್ಪತ್ರೆಗೆ ಭೇಟಿ ನೀಡಿ, ತಪಾಸಣೆ ನಡೆಸಿದರು. ಈ ವೇಳೆ ಅನಧಿಕೃತವಾಗಿ ಕೇಂದ್ರವನ್ನು ನಡೆಸಲಾಗುತ್ತಿದೆ ಎನ್ನುವುದು ದೃಢಪಟ್ಟಿದೆ. '2018 ರಲ್ಲಿಯೇ ಕೇಂದ್ರದ ಸ್ಕ್ಯಾನಿಂಗ್ ನೋಂದಣಿ ಅವಧಿ ಮುಗಿದಿದೆ. ಸ್ಕ್ಯಾನಿಂಗ್ ಮಾಡಿಸಲು ಅನುಸರಿಸಬೇಕಾದ ಪ್ರಕ್ರಿಯೆಗಳಲ್ಲಿಯೂ ಲೋಪ ಕಂಡುಬಂದಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶ್ರೀನಿವಾಸ್ ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್

ಲೋಕೋಪಯೋಗಿ ಇಲಾಖೆ

ರಾಮನಗರ ವಿಶೇಷ ವಿಭಾಗ, ರಾಮನಗರ.

ಟೆಂಡರ್ ಪ್ರಕಟಣೆ

ಸಂಖ್ಯೆ: 04/2021–22 ದಿನಾಂಕ: 02.09.2021

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2021–22ನೇ ಸಾಲಿನಲ್ಲಿ ಅರ್ಹಗುತ್ತಿಗೆದಾರರಿಂದ ಒಟ್ಟು 01 ಸಂಖ್ಯೆಯ ಅಂದಾಜು ಮೊತ್ತ ರೂ. 50.00 ಲಕ್ಷಗಳ ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ ಮುಂತಾದ ಇತರ ಮಾಹಿತಿಗಳನ್ನು **http://www.eproc.karnataka.gov.in** ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

(1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು **ದಿನಾಂಕ: 06.09.2021 ರಿಂದ 21.09.2021 ರವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. (2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು **ದಿನಾಂಕ: 21.09.2021 ವೇಳೆ 16:00 ಗಂಟೆಯೊಳಗೆ** ಸಲ್ಲಿಸುವುದು. (3) ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 22.09.2021 ವೇಳೆ 16:30 ಗಂಟೆಗೆ.** (ಸಾಧ್ಯವಾದಲ್ಲಿ).

"ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು".

ಸಹಿ/– ಕಾರ್ಯಪಾಲಕ ಇಂಜಿನಿಯರ್,
ವಾಸಾಸಂಇ/ರಾನ/ಬ್ರಾಂಚ್/231/2021–22 **ಲೋಕೋಪಯೋಗಿ ಇಲಾಖೆ, ರಾಮನಗರ ವಿಶೇಷ ವಿಭಾಗ**

‘ಹೈಬ್ರಿಡ್ ವಿಡಿಯೊ ಸಂವಾದ ಮಾದರಿ ವಿಸ್ತರಿಸಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಹೈಕೋರ್ಟ್‌ನಲ್ಲಿ ಅಳವಡಿಸಿಕೊಂಡಿರುವ ಹೈಬ್ರಿಡ್ ವಿಡಿಯೊ ಸಂವಾದ ಮಾದರಿಯನ್ನು ಜಿಲ್ಲಾ ಹಾಗೂ ತಾಲ್ಲೂಕು ನ್ಯಾಯಾಲಯಗಳಿಗೂ ವಿಸ್ತರಿಸಬೇಕು' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ಎ.ಎಸ್. ಓಕಾ ಹೇಳಿದರು.

ಬೆಂಗಳೂರು ವಕೀಲರ ಸಂಘದ ವತಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಜೊತೆ ಸನ್ಮಾನ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, 'ಎಲ್ಲ ನ್ಯಾಯಾಲಯಗಳಲ್ಲೂ ಇ-ಸೇವಾ ಕೇಂದ್ರ ಆರಂಭಿಸಬೇಕು. ವಿದ್ಯುನ್ಮಾನ ವಿಧಾನಗಳಲ್ಲೇ ಸಾಕ್ಷ್ಯಗಳನ್ನು ದಾಖಲು ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಐದು ವರ್ಷ ಹಳೆಯ ಕೇಸುಗಳನ್ನು 2021ರ ಡಿಸೆಂಬರ್ ಒಳಗೆ ವಿಲೇವಾರಿಗೆ ಗುರಿ ಹೊಂದಲಾಗಿತ್ತು. ಆದರೆ, ಕೋವಿಡ್ ಕಾರಣದಿಂದ ವಿಳಂಬವಾಗಿದೆ. ಆದರೆ, 2022ರ ಜೂನ್ ವೇಳೆಗೆ ಕರ್ನಾಟಕದಲ್ಲಿ ಖಂಡಿತಾ ಐದು ವರ್ಷಕ್ಕಿಂತ ಹಿಂದಿನ ಕೇಸುಗಳಿರುವುದಿಲ್ಲ' ಎಂದ ಅವರು, 'ಸಮಾಜದ ತಳಮಟ್ಟದವರಿಗೆ ಆದ್ಯತೆಯ ಮೇಲೆ ನ್ಯಾಯದಾನ ಮಾಡಲು ವಕೀಲರು, ನ್ಯಾಯಾಧೀಶರು ಶ್ರಮಿಸಬೇಕು' ಎಂದರು.

'ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎನ್ನುವುದಕ್ಕಿಂತ ಕರ್ನಾಟಕ ಸಿಜೆ ಎಂದು ಕರೆಸಿಕೊಳ್ಳುವುದರಲ್ಲಿ ಖುಷಿ ಇದೆ. ವಕೀಲ ಉದಯ್ ಹೊಳ್ಳ ತಮ್ಮನ್ನು ಕನ್ನಡಿಗ ಎಂದು ಬಣ್ಣಿಸಿದರು. ಅದನ್ನು ನಾನು ಒಪ್ಪುತ್ತೇನೆ' ಎಂದರು.

ನ್ಯಾಯಮೂರ್ತಿ ಬಿ.ವಿ. ನಾಗರತ್ನ ಮಾತನಾಡಿ, 'ಕನ್ನಡ ಮಣ್ಣಿಗೆ ನಾನು ಸದಾ ಋಣಿಯಾಗಿರುತ್ತೇನೆ. ದೆಹಲಿಯಿಂದ ಬೆಂಗಳೂರಿಗೆ ಬಂದು ವಕೀಲಿಕೆ ಆರಂಭಿಸಿದ್ದು, ತಮ್ಮ ಜೀವನದ ಮಹತ್ವದ ನಿರ್ಧಾರ' ಎಂದು ವೃತ್ತಿ ಜೀವನವನ್ನು ಮೆಲುಕು ಹಾಕಿದರು.

'ತಂದೆ-ಮಗ, ಕೆ.ಎಸ್. ಹೆಗ್ಡೆ ಮತ್ತು ಅವರ ಮಗ ಸಂತೋಷ್ ಹೆಗ್ಡೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿರುವ ದಾಖಲೆ ಇದೆ. ಇದೀಗ ನಾನು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಆಗಿರುವುದರಿಂದ ತಂದೆ-ಮಗಳು ಸರ್ವೋನ್ನತ ನ್ಯಾಯಾಲಯಕ್ಕೆ ಏರಿದಂತಾಗಿದೆ' ಎಂದು ನಾಗರತ್ನಾ ಹೇಳಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, 'ನ್ಯಾಯಾಂಗ ತನ್ನ ಸಂಸ್ಕೃತಿಯನ್ನು ಉಳಿಸಿಕೊಂಡು ಹೋದಾಗ ದೇಶ ಸುಭದ್ರವಾಗಿರುತ್ತದೆ. ನ್ಯಾಯಾಂಗ ಮತ್ತು ಸರ್ಕಾರ ಎರಡರ ಉದ್ದೇಶವೂ ಪ್ರಜಾತಂತ್ರ ಕಲ್ಯಾಣ ರಾಜ್ಯವನ್ನು ಸೃಷ್ಟಿಸುವುದಾಗಿದೆ ಎಂದು ಅಭಿಪ್ರಾಯಪಟ್ಟರು.

ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್, ವಕೀಲರಾದ ಉದಯ್ ಹೊಳ್ಳ, ಕೆ.ಎನ್. ಪುಟ್ಟೇಗೌಡ ಅವರು ಓಕಾ ಮತ್ತು ಬಿ.ವಿ. ನಾಗರತ್ನಾ ಅವರ ಕಾರ್ಯವೈಖರಿಯನ್ನು ನೆನಪಿಸಿಕೊಂಡರು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕಗೊಂಡಿರುವ ಎ.ಎಸ್. ಓಕಾ ಮತ್ತು ಬಿ.ವಿ. ನಾಗರತ್ನಾ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಬೆಂಗಳೂರು ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಎ.ಎನ್. ಗಂಗಾಧರಯ್ಯ, ಹೈಕೋರ್ಟ್ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಇದ್ದರು ಪ್ರಜಾವಾಣಿ ಚಿತ್ರ

ಒತ್ತುವರಿ: ಮರು ಸರ್ವೆಗೆ ಆದೇಶ

ಮೈಸೂರು: ತಾಲ್ಲೂಕಿನಲ್ಲಿ ನಡೆದಿರುವ ಭೂ ಹಗರಣಗಳ ಕುರಿತು ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಹೊರಡಿಸಿದ್ದ ಅದೇಶಗಳಿಗೆ ಮರು ಜೀವ ಲಭಿಸಿದೆ.

ಮೈಸೂರು ತಾಲ್ಲೂಕು ಜಯಪುರ ಹೋಬಳಿ, ಕಸಬಾ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು ಬೆಳಗೊಳ ಗ್ರಾಮದ ಕೆಲವು ಸ್ಥಳಗಳನ್ನು ಮರು ಸರ್ವೆ ಮಾಡುವಂತೆ ಭೂದಾಖಲೆಗಳ ಇಲಾಖೆ ಆಯುಕ್ತರು ಆದೇಶಿಸಿದ್ದಾರೆ. ಪರಿಶೀಲನೆ ಕಾರ್ಯಕ್ಕೆ ಮೈಸೂರು ಜಿಲ್ಲೆಯ ಅಧಿಕಾರಿಗಳನ್ನು ಹೊರಗಿಟ್ಟು ತಂಡ ರಚಿಸಲಾಗಿದೆ.

ಮಂಡ್ಯ ಜಿಲ್ಲೆ ಭೂ ದಾಖಲೆಗಳ ಉಪನಿರ್ದೇಶಕ ಬಿ.ಜಿ.ಉಮೇಶ್, ತುಮಕೂರಿನ ಸುಜಯ್ ಕುಮಾರ್, ದಾವಣಗೆರೆಯ ಭೂದಾಖಲೆಗಳ ಸಹಾಯಕ ನಿರ್ದೇಶಕ ಟಿ.ಕೆ.ಲೋಹಿತ್ ತಂಡದಲ್ಲಿದ್ದಾರೆ. ಆ.31 ರಂದು ಆದೇಶ ಹೊರಡಿಸಿದ್ದು, 10 ದಿನಗಳ ಒಳಗೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.

> **'ಮನೀಷ್ ಮೌದ್ಗಿಲ್ ಅವರು ಈ ಆದೇಶ ಹೊರಡಿಸಿದ್ದಾರೆ. ಸರ್ವೆ ಇಲಾಖೆ ಆಯುಕ್ತರಾದ ಕೂಡಲೇ ಅವರು ಈ ರಾಜ್ಯಕ್ಕೆ ಸುಪ್ರೀಂ ಆದರೇ?**
> **ಸಾ.ರಾ.ಮಹೇಶ್,** ಶಾಸಕ

ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತುಗಳನ್ನು ("**ಷೆಡ್ಯೂಲ್ ಸ್ವತ್ತುಗಳು**") ಅದರ ಮಾಲೀಕರಿಂದ ಖರೀದಿಸಲು ಉದ್ದೇಶಿಸಿದ್ದಾರೆ. ಸದರಿ ಮಾಲೀಕರು ಈ ಕೆಳಗೆ ಅವರ ಹೆಸರುಗಳ ಮುಂದೆ ತಿಳಿಸಿರುವ ಷೆಡ್ಯೂಲ್ ಸ್ವತ್ತಿಗೆ ತಾವೇ ಮಾಲೀಕರೆಂದು ಪ್ರತಿನಿಧಿಸಿದ್ದಾರೆ ಹಾಗೂ ಈ ಷೆಡ್ಯೂಲ್ ಸ್ವತ್ತುಗಳ ಮುಂದೆ ನಮೂದಿಸಿರುವ ಕರಾರುದಾರರನ್ನು ಹೊರತುಪಡಿಸಿ, ಬೇರೆ ಯಾವುದೇ ವ್ಯಕ್ತಿಯು ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮು ಅಥವಾ ಆಸಕ್ತಿಯನ್ನು ಹೊಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತುಗಳ ಸಂಬಂಧವಾಗಿ ಯಾವುದೇ ಹಕ್ಕು, ಹಕ್ಕುಬಾಧ್ಯತೆ, ಕ್ಲೇಮು ಅಥವಾ ಆಸಕ್ತಿಯನ್ನು ಯಾವುದೇ ವ್ಯಕ್ತಿಗಳು ಹೊಂದಿದ್ದರೆ ಅಥವಾ ಮೇಲಿನ ವ್ಯವಹಾರದ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆ/ಗಳನ್ನು ಹೊಂದಿದ್ದರೆ, ಅಂತಹವರು ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **ಹದಿನೈದು (೧೫)** ದಿನಗಳ ಒಳಗೆ ಬೆಂಬಲಾರ್ಥ ದಾಖಲೆಗಳೊಡನೆ ಈ ಕೆಳಕಂಡ ಸಹಿದಾರರಿಗೆ ಅವುಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ, ಕೆಳಕಂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಅದರ ಮಾಲೀಕರು ಮತ್ತು ಕರಾರುದಾರರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿಯು ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ಯಾವುದೇ ಕ್ಲೇಮು/ಗಳು ಇದ್ದಲ್ಲಿ ಅವುಗಳನ್ನು ಉಪೇಕ್ಷಿಸಿರುತ್ತಾರೆ ಎಂದು ಪರಿಗಣಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಟಿ. ಬೇಗೂರು ಗ್ರಾಮದ ಈ ಕೆಳಕಂಡ ಸರ್ವೆ ನಂಬರುಗಳ ಜಮೀನುಗಳಿಗೆ ಚಕ್ಕುಬಂದಿ :

ಮಾಲೀಕರು	ಕರಾರುದಾರರ ಹೆಸರು	ಸರ್ವೆ ನಂ.	ವಿಸ್ತೀರ್ಣ		ಚಕ್ಕುಬಂದಿ			
			ಎಕರೆ	ಗುಂಟ	ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
ಶ್ರೀಮತಿ. ವಿಜಯಮ್ಮ, ಶ್ರೀ. ಹನುಮಂತಯ್ಯ (ಬಿನ್ ದಿ. ಗಂಗಾ ಬೈಲಯ್ಯಾ) ಮತ್ತು ಇತರರು.	ಶ್ರೀಮತಿ. ಸಾರಿಕಾ ಮೆಹ್ತಾ (ಕೊಂ ಶ್ರೀ. ಪವನ್ ಕುಮಾರ್ ಮೆಹ್ತಾ) ('ನಿಯೋಜಿತರು')	208/1	2	0	ಸರ್ವೆ ನಂ. 210	ಬ್ಯಾಡರಹಳ್ಳಿ ಗ್ರಾಮದ ಗಡಿ ಮತ್ತು ರಸ್ತೆ	ಸರ್ವೆ ನಂ. 208/1ರ ಉಳಿದ ಜಮೀನು	ಸರ್ವೆ ನಂ. 208/2
ಶೀ. ಎ. ಅಂಜನ್ ಕುಮಾರ್ (ಬಿನ್ ಎಲ್. ಕೃಷ್ಣಮೂರ್ತಿ)	ಶ್ರೀಮತಿ. ಸಾರಿಕಾ ಮೆಹ್ತಾ (ಕೊಂ ಶ್ರೀ. ಪವನ್ ಕುಮಾರ್ ಮೆಹ್ತಾ) ('ನಿಯೋಜಿತರು')	208/1	0	36	ಸರ್ವೆ ನಂ. 208/1ರ ಉಳಿದ ಜಮೀನು	ಬ್ಯಾಡರಹಳ್ಳಿ ಗ್ರಾಮದ ಗಡಿ ಮತ್ತು ರಸ್ತೆ	ಸರ್ವೆ ನಂ. 244	ಸರ್ವೆ ನಂ. 208/1ರ ಉಳಿದ ಜಮೀನು
ಶ್ರೀ.ಮರಿಹೊನ್ನಯ್ಯ ಮತ್ತು ಶ್ರೀ.ಮುನಿಯಪ್ಪ (ಬಿನ್ ದಿ.ಶ್ರೀ. ಮರಿಯಪ್ಪ)	ಶ್ರೀಮತಿ. ಸಾರಿಕಾ ಮೆಹ್ತಾ (ಕೊಂ ಶ್ರೀ. ಪವನ್ ಕುಮಾರ್ ಮೆಹ್ತಾ)	208/1	0	37	ಸರ್ವೆ ನಂ. 210	ಸರ್ವೆ ನಂ. 208/1ರ ಉಳಿದ ಜಮೀನು	ಸರ್ವೆ ನಂ. 243	ಸರ್ವೆ ನಂ. 208/1ರ ಉಳಿದ ಜಮೀನು
ಶ್ರೀ. ಶಶಿಧರ್ ಶೆಟ್ಟಿ (ಬಿನ್ ಶ್ರೀ. ನಾರಾಯಣ ಶೆಟ್ಟಿ)	ಶ್ರೀಮತಿ. ಸಾರಿಕಾ ಮೆಹ್ತಾ (ಕೊಂ ಶ್ರೀ. ಪವನ್ ಕುಮಾರ್ ಮೆಹ್ತಾ)	210/2	0	39	ಸರ್ವೆ ನಂ. 210/5	ಸರ್ವೆ ನಂ. 208/1	ಸರ್ವೆ ನಂ. 242/1, 242/4 & 243/6	ಸರ್ವೆ ನಂ. 210/3
	ಶ್ರೀಮತಿ. ಸಾರಿಕಾ ಮೆಹ್ತಾ (ಕೊಂ ಶ್ರೀ. ಪವನ್ ಕುಮಾರ್ ಮೆಹ್ತಾ)	210/3	1	26	ಸರ್ವೆ ನಂ. 210/4B	ಸರ್ವೆ ನಂ. 208/1 & 208/2	ಸರ್ವೆ ನಂ. 210/2 & 210/5	ಸರ್ವೆ ನಂ. 211/3 & 210/6
	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್ ಚಂದ್ ಜೈನ್)	244/2	1	33	ಸರ್ವೆ ನಂ. 244/1, 243/1, 243/2 & 243/4	ರಸ್ತೆ	ಸರ್ವೆ ನಂ. 244/6	ಸರ್ವೆ ನಂ. 208/1
ಶ್ರೀ. ಲಿಂಗಯಪ್ಪ (ಬಿನ್ ಶ್ರೀ. ವೀರಣ್ಣ)	ಶ್ರೀಮತಿ. ಸಾರಿಕಾ ಮೆಹ್ತಾ (ಕೊಂ ಶ್ರೀ. ಪವನ್ ಕುಮಾರ್ ಮೆಹ್ತಾ)	210/5	0	39	ಸರ್ವೆ ನಂ. 210/1	ಸರ್ವೆ ನಂ. 210/2	ಸರ್ವೆ ನಂ. 240 & 242/1	ಸರ್ವೆ ನಂ. 210/3
ಶ್ರೀ.ಚಂದ್ರಶೇಖರ್ (ಬಿನ್ ದಿ. ಶ್ರೀ. ತಿಮ್ಮರಾಯಪ್ಪ)	ಶ್ರೀ. ಸಿ.ಪಿ. ಸುನಿಲ್ ಕುಮಾರ್ (ಬಿನ್ ದಿ. ಶ್ರೀ.ಸಿ.ಅರ್. ಪ್ರಕಾಶ್)	211/2	0	30	ಸರ್ವೆ ನಂ. 211/1	ಸರ್ವೆ ನಂ. 210/6	ಸರ್ವೆ ನಂ. 211/3	No. 212/2
ಶ್ರೀ.ಚಂದ್ರಶೇಖರ್ (ಬಿನ್ ದಿ. ಶ್ರೀ. ತಿಮ್ಮರಾಯಪ್ಪ)	ಶ್ರೀಮತಿ. ಸಾರಿಕಾ ಮೆಹ್ತಾ (ಕೊಂ ಶ್ರೀ. ಪವನ್ ಕುಮಾರ್ ಮೆಹ್ತಾ)	210/7	0	20	ಸರ್ವೆ ನಂ. 212/2	ಸರ್ವೆ ನಂ. 209/1 & 209/2	ಸರ್ವೆ ನಂ. 210/6	ಸರ್ವೆ ನಂ. 213/1
ಶ್ರೀ. ಬೈರೇಗೌಡ (ಬಿನ್ ದಿ. ಶ್ರೀ. ಹುಚ್ಚಪ್ಪ)	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್ ಚಂದ್ ಜೈನ್)	210/6	0	18	ಸರ್ವೆ ನಂ. 211/2 & 211/3	ಸರ್ವೆ ನಂ. 208/2 & 209/1	ಸರ್ವೆ ನಂ. 210/3	ಸರ್ವೆ ನಂ. 210/7
		211/3	1	9	ಸರ್ವೆ ನಂ. 210/4A	ಸರ್ವೆ ನಂ. 210/6	ಸರ್ವೆ ನಂ. 210/3 & 210/4B	ಸರ್ವೆ ನಂ. 211/1 & 211/2
ಶ್ರೀಮತಿ. ಲಕ್ಷ್ಮಮ್ಮ (ಕೊಂ ದಿ. ಶ್ರೀ. ಎನ್ ಟಿ. ತಿಮ್ಮಯ್ಯ)	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್ ಚಂದ್ ಜೈನ್)	210/ 4B	0	31	ಸರ್ವೆ ನಂ. 210/1 & 210/4A	ಸರ್ವೆ ನಂ. 210/3	ಸರ್ವೆ ನಂ. 210/1	ಸರ್ವೆ ನಂ. 211/3
ಶ್ರೀ.ದೊಡ್ಡ ರಂಗಯ್ಯ (ಬಿನ್ ದಿ.ಶ್ರೀ.ನರಸಪ್ಪ) ಮತ್ತು ಶ್ರೀ.ದೊಡ್ಡಹುಲ್ಲೂರಯ್ಯ (ಬಿನ್ ದಿ. ಶ್ರೀ. ನರಸಪ್ಪ)	ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್ ಚಂದ್ ಜೈನ್)	243/1	0	29	ಸರ್ವೆ ನಂ. 242/3	ಸರ್ವೆ ನಂ. 244/2	ಸರ್ವೆ ನಂ. 244/1	ಸರ್ವೆ ನಂ. 243/2 & 243/3
ಶ್ರೀಮತಿ. ಪೂಜಾ ಮೆಹ್ತಾ (ಬಿನ್ ಶ್ರೀ. ಬಿಮಲ್ ಚಂದ್ ಜೈನ್)		243/2	0	12	ಸರ್ವೆ ನಂ. 243/3	ಸರ್ವೆ ನಂ. 244/2	ಸರ್ವೆ ನಂ. 243/1	ಸರ್ವೆ ನಂ. 243/4 & 243/5
		243/3	0	15	ಸರ್ವೆ ನಂ. 242/3	ಸರ್ವೆ ನಂ. 243/2	ಸರ್ವೆ ನಂ. 243/1	ಸರ್ವೆ ನಂ. 243/5 & 243/6
		243/4	0	20	ಸರ್ವೆ ನಂ. 243/5	ಸರ್ವೆ ನಂ. 244/2	ಸರ್ವೆ ನಂ. 243/2	ಸರ್ವೆ ನಂ. 208/1
		243/5	0	19	ಸರ್ವೆ ನಂ. 243/6	ಸರ್ವೆ ನಂ. 243/4	ಸರ್ವೆ ನಂ. 243/3 & 243/2	ಸರ್ವೆ ನಂ. 208/1
		243/6	0	19	ಸರ್ವೆ ನಂ. 242/3 & 242/4	ಸರ್ವೆ ನಂ. 243/5	ಸರ್ವೆ ನಂ. 243/3	ಸರ್ವೆ ನಂ. 208/1 & 210/2
		244/1	2	25	ಸರ್ವೆ ನಂ. 242/3	ಸರ್ವೆ ನಂ. 244/2 & 244/6	ಸರ್ವೆ ನಂ. 245	ಸರ್ವೆ ನಂ. 243/1

ಎನ್.ಕ್.ದಿಲೀಪ್ / ಎಸ್. ರಘುನಂದನ / ಅಂಕುಶ್ ವಿ ಎಚ್
ತತ್ವಾ ಲೀಗಲ್ ಬೆಂಗಳೂರು, ವಕೀಲರು
ಫಿನಿಕ್ಸ್ ಪಿನಾಕಲ್
ದಿನಾಂಕ : 05.09.2021 ನಂ.46, ಹಲಸೂರು ರಸ್ತೆ, ಬೆಂಗಳೂರು – 560042

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

CIN: L85110KA1993PLC013869
ನೋಂದಾಯಿತ ಕಚೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್,
ಬೆಂಗಳೂರು – 560 106. ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ–ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

ಸೂಚನೆ

ಈ ಪ್ರಕಟಣೆಯ ಮೂಲಕ ಸದಸ್ಯರಿಗೆ ತಿಳಿಸುವುದು ಏನೆಂದರೆ, ಕಾಲ ಕಾಲಕ್ಕೆ ತಿದ್ದುಪಡಿಗೊಂಡಿರುವ ಕಂಪನಿಗಳ ಕಾಯ್ದೆ, 2013ರ ("ಕಂಪನಿಗಳ ಕಾಯ್ದೆ") ಸೆಕ್ಷನ್ 108 ಮತ್ತು 110 ಗಳನ್ನು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಾವಳಿಗಳು, 2014 ("ನಿರ್ವಹಣಾ ನಿಯಮಾವಳಿಗಳು") ರೊಂದಿಗೆ ಓದಿಕೊಂಡಂತೆ ಮತ್ತು ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ, ಇವರು ಹೊರಡಿಸಿರುವ ("ಎಂಸಿಎ ಸುತ್ತೋಲೆಗಳು") ದಿನಾಂಕ ಏಪ್ರಿಲ್ 8, 2020, ಏಪ್ರಿಲ್ 13, 2020, ಸೆಪ್ಟಂಬರ್ 28, 2020 ಮತ್ತು ಡಿಸೆಂಬರ್ 31, 2020ರ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ಮತ್ತು 17/2020ರ ಪ್ರಕಾರ, ಕಂಪನಿಯು ರಿಮೋಟ್ ಇ-ವೋಟಿಂಗ್ ("ಇ-ವೋಟಿಂಗ್") ಮುಖಾಂತರ ತನ್ನ ಉದ್ದೇಶಿತ "ಸೆಂಟಮ್ ಇಲೆಕ್ಟ್ರಾನಿಕ್ಸ್ ಲಿಮಿಟೆಡ್ – ರಿಸ್ಟ್ರಿಕ್ಟೆಡ್ ಸ್ಟಾಕ್ ಯೂನಿಟ್ ಪ್ಲಾನ್ 2021" ಅನ್ನು ಅನುಮೋದಿಸುವಂತೆ ಕೋರಿ ಮತ್ತು ಕಂಪನಿಯ ಸಬ್ಸಿಡಿಯರಿಗಳಲ್ಲಿನ ಅರ್ಹ ಉದ್ಯೋಗಿಗಳಿಗೆ ಸ್ಟಾಕ್ ಆಪ್ಷನ್ ಒದಗಿಸಲು ಮಂಜೂರಾತಿ ಕೋರಿ, ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ ("ಎನ್‌ಎಸ್‌ಡಿಎಲ್") ಮತ್ತು ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ("ಸಿಡಿಎಸ್‌ಎಲ್") (ಒಟ್ಟಾಗಿ "ಡೆಪಾಸಿಟರೀಸ್" ಎನ್ನಲಾಗುವ) ಇವರಿಂದ ಸಂದಾಯವಾಗಿರುವ ಕಟ್–ಆಫ್ ದಿನಾಂಕ ಎಂದರೆ., ಆಗಸ್ಟ್ 27, 2021 (ಶುಕ್ರವಾರ) ರಂದು ಕೆಲಸದ ಸಮಯದ ಕೊನೆಯವರೆಗೆ ಕಂಪನಿಯ ಸದಸ್ಯರ ರಜಿಸ್ಟರ್‌ನಲ್ಲಿ/ಫಲಾನುಭವಿ ಮಾಲಿಕರ ಪಟ್ಟಿಯಲ್ಲಿ ಹೆಸರು ನಮೂದಾಗಿರುವ ಷೇರುದಾರರಿಗೆ ಮತ್ತು ಇಲೆಕ್ಟ್ರಾನಿಕ್ ಹೋಲ್ಡಿಂಗ್ಸ್ ಹೊಂದಿರುವವರು ತಮಗೆ ಸಂಬಂಧಿತ ಡೆಪಾಸಿಟರಿ ಪಾರ್ಟಿಸಿಪಂಟ್ಸ್ ಮುಖಾಂತರ ಡೆಪಾಸಿಟರಿಯಲ್ಲಿ ಹಾಗೂ ಭೌತಿಕ ಹೋಲ್ಡಿಂಗ್ಸ್ ಹೊಂದಿರುವವರು ಕಂಪನಿಯ ರಜಿಸ್ಟರ್ ಮತ್ತು ಷೇರು ವರ್ಗಾವಣೆ ಏಜೆಂಟ್ ಆಗಿರುವ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ("ಕೆಫಿನ್‌ಟೆಕ್") ರವರೊಂದಿಗೆ ತಮ್ಮ ಇ-ಮೇಲ್ ವಿಳಾಸಗಳನ್ನು ನೊಂದಾಯಿಸಿಕೊಂಡಿರುವ ಎಲ್ಲಾ ಷೇರುದಾರರಿಗೆ ಪೋಸ್ಟಲ್ ಬ್ಯಾಲಟ್ ನೋಟಿಸ್ ಜೊತೆಗೆ ಎಕ್ಸ್‌ಪ್ಲೇನೆಟರಿ ಸ್ಟೇಟ್‌ಮೆಂಟ್ (ಇಲೆಕ್ಷನ್ ಫಾರಂನಲ್ಲಿ) ರವಾನಿಸುವ ಕಾರ್ಯವನ್ನು ಶನಿವಾರ, ಸೆಪ್ಟಂಬರ್ 4, 2021 ರಂದು ಪೂರ್ಣಗೊಳಿಸಿರುತ್ತದೆ.

ಕಂಪನಿಗಳ ಕಾಯ್ದೆಯ ಸೆಕ್ಷನ್ 108 ಮತ್ತು 110 ಗಳನ್ನು ಮ್ಯಾನೇಜ್‌ಮೆಂಟ್ ರೂಲ್ಸ್‌ನ ರೂಲ್ 20 ಮತ್ತು 22 ಗಳೊಂದಿಗೆ, ಸೆಬಿ ಲಿಸ್ಟಿಂಗ್ ನಿಯಮಾವಳಿಗಳ ನಿಯಮಾವಳಿ 44 ರೊಂದಿಗೆ ಮತ್ತು ಎಂಸಿಎ ಸುತ್ತೋಲೆಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಪ್ರಕಾರ ಕಂಪನಿಯು ಇ-ವೋಟಿಂಗ್ ಸೌಲಭ್ಯವನ್ನು ಒದಗಿಸುತ್ತಿದೆ. ಕಂಪನಿಯು ತನ್ನ ಷೇರುದಾರರಿಗೆ ಇ-ವೋಟಿಂಗ್ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ, ಕೆಫಿನ್‌ಟೆಕ್ ಸಂಸ್ಥೆಯನ್ನು ತನ್ನ ಸೇವಾ ಪೂರೈಕೆದಾರನನ್ನಾಗಿ ನಿಯೋಜಿಸಿಕೊಂಡಿರುತ್ತದೆ. ಎಂಸಿಎ ಸುತ್ತೋಲೆಗಳ ಅನುಸರಣೆಯ ಪ್ರಕಾರ, ಸದರಿ ಪೋಸ್ಟಲ್ ಬ್ಯಾಲೆಟ್‌ಗಾಗಿ ಷೇರುದಾರರಿಗೆ ಫಿಜಿಕಲ್ ಪೋಸ್ಟಲ್ ಬ್ಯಾಲಟ್ ನೋಟಿಸ್ ಜೊತೆಗೆ ಪೋಸ್ಟಲ್ ಬ್ಯಾಲಟ್ ಫಾರಂಗಳ ಹಾಗೂ ಪ್ರಿಪೇಡ್ ಬಿಜನೆಸ್ ಲಕೋಟೆಯನ್ನು ರವಾನಿಸಲಾಗುತ್ತಿಲ್ಲ ಮತ್ತು ಷೇರುದಾರರು ಜಾಗ್ರತೆಯಿಂದ ಪೋಸ್ಟಲ್ ಬ್ಯಾಲಟ್ ನೋಟಿಸ್‌ನಲ್ಲಿರುವ ಸೂಚನೆಗಳನ್ನು ಓದಿಕೊಂಡು, ಇ-ವೋಟಿಂಗ್ ಮೂಲಕ ಮಾತ್ರ ತಮ್ಮ ಅಸೆಂಟ್ (ಪರವಾಗಿ) ಅಥವಾ ಡಿಸೆಂಟ್ (ವಿರೋಧವಾಗಿ) ಸೂಚಿಸಬೇಕೆಂದು ವಿನಂತಿಸಲಾಗಿದೆ.

ವಿದ್ಯುನ್ಮಾನ ವಿಧಾನದ ಮೂಲಕ ಮತದಾನ ಮಾಡುವ ಪ್ರಕ್ರಿಯೆಯು ಸೆಪ್ಟಂಬರ್ 6, 2021 (ಸೋಮವಾರ) ರಂದು ಬೆಳಗ್ಗೆ 9.00 ಗಂಟೆಯಿಂದ ಪ್ರಾರಂಭವಾಗುತ್ತದೆ ಮತ್ತು ಅಕ್ಟೋಬರ್ 5, 2021 (ಮಂಗಳವಾರ) ರಂದು ಸಂಜೆ 5.00 ಗಂಟೆಗೆ ಮುಕ್ತಾಯಗೊಳ್ಳುತ್ತದೆ. ಅಕ್ಟೋಬರ್ 5, 2021 (ಮಂಗಳವಾರ) ರಂದು ಸಂಜೆ 5.00 ಗಂಟೆಯ ನಂತರ ವಿದ್ಯುನ್ಮಾನ ವಿಧಾನದಲ್ಲಿ ಮತ ಚಲಾಯಿಸಲು ಅವಕಾಶವಿರುವುದಿಲ್ಲ. ಇ-ವೋಟಿಂಗ್ ಪ್ರಕ್ರಿಯೆ ಮತ್ತು ವಿಧಾನ ಕುರಿತಂತೆ ಪೋಸ್ಟಲ್ ಬ್ಯಾಲಟ್ ನೋಟಿಸ್‌ನಲ್ಲಿ ನೀಡಲಾಗಿರುವ ಇ-ವೋಟಿಂಗ್ ಸೂಚನೆಗಳನ್ನು ಗಮನಿಸಬೇಕೆಂದು ಸದಸ್ಯರನ್ನು ಕೋರಲಾಗಿದೆ. ಇ-ವೋಟಿಂಗ್‌ಗೆ ಸಂಬಂಧಿತ ಸದಸ್ಯರ ಮತದಾನ ಹಕ್ಕುಗಳು, ಕಟ್–ಆಫ್ ದಿನಾಂಕದಂದು ಪೇಡ್‌ಅಪ್ ಇಕ್ವಿಟಿ ಷೇರ್ ಕ್ಯಾಪಿಟಲ್‌ನಲ್ಲಿ ಅವರು ಹೊಂದಿರುವ ಷೇರುಗಳ ಅನುಪಾತದಲ್ಲಿರುತ್ತದೆ. ಕಟ್–ಆಫ್ ದಿನಾಂಕದೊಳಗೆ ಸದಸ್ಯ ಆಗಿಲ್ಲದಿರುವವರು, ಸದರಿ ಪ್ರಕಟಣೆಯನ್ನು ಮಾಹಿತಿಗಾಗಿ ಮಾತ್ರ ಎಂದು ಪರಿಗಣಿಸತಕ್ಕದ್ದು. ಸದರಿ ಪೋಸ್ಟಲ್ ಬ್ಯಾಲಟ್ ನೋಟಿಸ್‌ನ್ನು ಕಂಪನಿಯ ವೆಬ್‌ಸೈಟ್‌ನಿಂದ (www.centumelectronics.com), ಕೆಫಿನ್‌ಟೆಕ್ ವೆಬ್‌ಸೈಟ್‌ನಿಂದ (https://evoting.kfintech.com) ಮತ್ತು ಕಂಪನಿಯ ಇಕ್ವಿಟಿ ಷೇರುಗಳು ಪಟ್ಟಿಯಾಗಿರುವ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಹಾಗೂ ಬಿಎಸ್‌ಇ ಲಿಮಿಟೆಡ್‌ನಂತಹ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ನ ನಿಗದಿತ ಸೆಕ್ಷನ್‌ಗಳಿಂದ ಕೂಡ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸದರಿ ಇ-ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಲೆಂದು, ಕಂಪನಿಯು ಶ್ರೀ. ಎಸ್.ಪಿ.ನಾಗರಾಜನ್, ಕಾರ್ಯನಿರತ ಕಂಪನಿ ಕಾರ್ಯದರ್ಶಿ (ಸಿಪಿ ನಂ. 4738), ಬೆಂಗಳೂರು ಇವರನ್ನು ಪರಿಶೀಲಕರನ್ನಾಗಿ ಕಂಪನಿಯ ನಿರ್ದೇಶಕರ ಮಂಡಳಿಯು ನಿಯೋಜಿಸಿರುತ್ತದೆ.

ಕೋವಿಡ್–19 ಸಾಂಕ್ರಾಮಿಕ ಭೀತಿಯಿಂದಾಗಿ ಮತ್ತು ಎಂಸಿಎ ಸುತ್ತೋಲೆಗಳ ಪ್ರಕಾರ, ಕಂಪನಿಯು ಪೋಸ್ಟಲ್ ಬ್ಯಾಲಟ್ ನೋಟಿಸ್‌ನ್ನು ವಿದ್ಯುನ್ಮಾನ ವಿಧಾನದಲ್ಲಿ ಮಾತ್ರ ರವಾನಿಸಿದೆ ಮತ್ತು ಸದರಿ ಪೋಸ್ಟಲ್ ಬ್ಯಾಲಟ್‌ಗಾಗಿ ಭೌತಿಕ ಪೋಸ್ಟಲ್ ಬ್ಯಾಲಟ್ ನೋಟಿಸ್ ಜೊತೆಗೆ ಫಾರಂಗಳು ಹಾಗೂ ಪ್ರಿಪೇಡ್ ಬಿಜಿನೆಸ್ ಲಕೋಟೆಗಳನ್ನು ಯಾವುದೇ ಸದಸ್ಯರಿಗೆ ರವಾನಿಸಿರುವುದಿಲ್ಲ. ಅಂತೆಯೇ, ಸದಸ್ಯರ ಅಸೆಂಟ್ ಅಥವಾ ಡಿಸೆಂಟ್ ಅಭಿಪ್ರಾಯಗಳನ್ನು ಇ-ವೋಟಿಂಗ್ ವ್ಯವಸ್ಥೆಯ ಮುಖಾಂತರವಷ್ಟೆ ಪಡೆದುಕೊಳ್ಳಲಾಗುತ್ತದೆ. ಆದ್ದರಿಂದ, ಇನ್ನೂವರೆಗೆ ತಮ್ಮ ಇ-ಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳದಿರುವ ಸದಸ್ಯರು, ಕೆಳಕಂಡ ವಿಧಾನಗಳನ್ನು ಅನುಸರಿಸಿ ತಮ್ಮ ಇ-ಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳಬೇಕೆಂದು ವಿನಂತಿಸಲಾಗಿದೆ:

1. ಎಂಸಿಎ ಸುತ್ತೋಲೆಗಳ ಪ್ರಕಾರ ಸದರಿ ಪೋಸ್ಟಲ್ ಬ್ಯಾಲಟ್‌ಗೆ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಲು, ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳದಿರುವ ಸದಸ್ಯರಿಗೆ ಇ-ವೋಟಿಂಗ್ ನೋಟಿಸ್ ರವಾನಿಸಲು ಸಾಧ್ಯವಾಗುವುದಿಲ್ಲ, ಆದ್ದರಿಂದ ಅಂತಹ ಸದಸ್ಯರು https://ris.kfintech.com/clientservices/mobilereg/mobileemailreg.aspx ಲಿಂಕ್‌ಗೆ ಭೇಟಿ ನೀಡಿ, ಅದರಲ್ಲಿ ನೀಡಲಾಗಿರುವ ಮಾರ್ಗಸೂಚಿಗಳನ್ನು ಅನುಸರಿಸಿ ತಮ್ಮ ಇ-ಮೇಲ್ ವಿಳಾಸವನ್ನು ಕಂಪನಿಯ ರಜಿಸ್ಟಾರ ಮತ್ತು ಷೇರು ವರ್ಗಾವಣೆ ಏಜೆಂಟ್ ಆಗಿರುವ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಇವರೊಂದಿಗೆ ತಾತ್ಕಾಲಿಕವಾಗಿ ನೊಂದಾಯಿಸಿಕೊಳ್ಳಬಹುದು. ಹೀಗೆ ಯಶಸ್ವಿಯಾಗಿ ತಮ್ಮ ಇ-ಮೇಲ್ ವಿಳಾಸ ನೊಂದಾಯಿಸಿಕೊಂಡ ಬಳಿಕ, ಷೇರುದಾರರಿಗೆ ಸದರಿ ನೋಟಿಸ್ ಮತ್ತು ಇ-ವೋಟಿಂಗ್ ಪ್ರಕ್ರಿಯೆಗಳ ವಿವರಗಳನ್ನು ಹೊಂದಿರುವ ಸಾಫ್ಟ್ ಕಾಪಿ, ಸದರಿ ಪೋಸ್ಟಲ್ ಬ್ಯಾಲಟ್‌ಗೆ ಇ-ಮತದಾನ ಮಾಡಲು ಅಗತ್ಯವಿರುವ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಸಮೇತ ರವಾನಿಸಲಾಗುತ್ತದೆ. ಯಾವುದೇ ವಿಚಾರಣೆಗಳಿದ್ದಲ್ಲಿ, ಷೇರುದಾರರು ಸದರಿ ವಿಳಾಸಕ್ಕೆ ಬರೆಯಬಹುದು einward.ris.@kfintech.com.
2. ಷೇರುದಾರರು ತಮ್ಮ ಇಮೇಲ್ ವಿಳಾಸವನ್ನು ಶಾಶ್ವತವಾಗಿ ನೊಂದಾಯಿಸಿಕೊಳ್ಳಲು, ಇಲೆಕ್ಟ್ರಾನಿಕ್ ಹೋಲ್ಡಿಂಗ್ಸ್ ಹೊಂದಿರುವವರು ತಮ್ಮ ಸಂಬಂಧಿತ ಡೆಪಾಸಿಟರಿ ಪಾರ್ಟಿಸಿಪಂಟ್ಸ್ ಮುಖಾಂತರ ಡೆಪಾಸಿಟರಿಯರಲ್ಲಿ ಮತ್ತು ಭೌತಿಕ ಹೋಲ್ಡಿಂಗ್ಸ್ ಹೊಂದಿರುವವರು ಕಂಪನಿಯ ರಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ಆಗಿರುವ, ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಸೆಲೆನಿಯಂ, ಟವರ್ ಬಿ, ಪ್ಲಾಟ್ 31 ಮತ್ತು 32, ಗಚಿಬೌಲಿ, ಫೈನಾನ್ಶಿಯಲ್ ಜಿಲ್ಲೆ, ನಾನಾಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ, ಹೈದರಾಬಾದ್– 500032, ಭಾರತ ಇವರನ್ನು ಸಂಪರ್ಕಿಸಿ ನಿಗದಿತ ಪ್ರಕ್ರಿಯೆಗಳ ಪ್ರಕಾರ ತಮ್ಮ ವಿಳಾಸಗಳನ್ನು ನೊಂದಾಯಿಸಿಕೊಳ್ಳಬಹುದು.
3. ಈಗಾಗಲೇ ತಮ್ಮ ಇ-ಮೇಲ್ ವಿಳಾಸಗಳನ್ನು ನೊಂದಾಯಿಸಿಕೊಂಡಿರುವ ಷೇರುದಾರರು, ತಮ್ಮ ಇ-ಮೇಲ್ ವಿಳಾಸಗಳಿಗೆ ನೋಟಿಸ್‌ಗಳನ್ನು/ದಾಖಲಾತಿಗಳನ್ನು/ವಾರ್ಷಿಕ ವರದಿಗಳನ್ನು ವಿದ್ಯುನ್ಮಾನ ವಿಧಾನದ ಮೂಲಕ ರವಾನಿಸಲು ಅನುವಾಗುವಂತೆ ಮಾಡಲು, ಕಂಪನಿಯ ರಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ ಆಗಿರುವ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಇವರೊಂದಿಗೆ ತಮ್ಮ ಇ-ಮೇಲ್ ವಿಳಾಸಗಳನ್ನು ವ್ಯಾಲಿಡೇಟ್ ಮಾಡಿಕೊಳ್ಳಬೇಕೆಂದು ವಿನಂತಿಸಲಾಗಿದೆ.

ಕಂಪನಿಯ ಚೇರ್ಮನ್ನರಿಗೆ ಅಥವಾ ಚೇರ್ಮನ್ನರಿಂದ ಅಧಿಕೃತವಾಗಿ ನಿಯೋಜಿತ ಇತರೆ ಒಬ್ಬ ವ್ಯಕ್ತಿಗಾಗಲಿ, ಪರಿಶೀಲಕರು ತಮ್ಮ ವರದಿಯನ್ನು ಸಲ್ಲಿಸುತ್ತಾರೆ ಮತ್ತು ಅಕ್ಟೋಬರ್ 7, 2021 (ಗುರುವಾರ) ರೊಳಗಾಗಿ ಇ-ವೋಟಿಂಗ್ ಫಲಿತಾಂಶಗಳನ್ನು ಘೋಷಿಸಲಾಗುತ್ತದೆ ಹಾಗೂ ಸದರಿ ಫಲಿತಾಂಶಗಳನ್ನು ಕಂಪನಿಯ www.centumelectronics.com ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್, ಬಿಎಸ್‌ಇ ಲಿಮಿಟೆಡ್, ಮತ್ತು ರಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟ ರವರುಗಳಿಗೆ ಕೂಡ ಮಾಹಿತಿ ನೀಡಲಾಗುತ್ತದೆ.

ವಿದ್ಯುನ್ಮಾನ ವಿಧಾನದ ಮೂಲಕ ಮತ ಚಲಾಯಿಸುವ ಕುರಿತಂತೆ ಸದಸ್ಯರಿಗೆ ಯಾವುದೇ ವಿಚಾರಣೆ ಅಥವಾ ಕುಂದು ಕೊರತೆ ಇದ್ದಲ್ಲಿ, ಅಂತಹವರು https://evoting.kfintech.com (ಕೆಫಿನ್ ವೆಬ್‌ಸೈಟ್) ಇದರಲ್ಲಿನ ಡೌನ್‌ಲೋಡ್ ಸೆಕ್ಷನ್‌ನಲ್ಲಿ ಲಭ್ಯವಿರುವ ಹೆಲ್ಪ್ ಮತ್ತು ಪದೇ ಪದೇ ಕೇಳುವ ಪ್ರಶ್ನೆಗಳು ("FAQs") ಹಾಗೂ ಇ-ವೋಟಿಂಗ್ ಯೂಸರ್ ಮ್ಯಾನುಯಲ್ ಪರಿಶೀಲಿಸಬಹುದು ಅಥವಾ ಶ್ರೀ. ಎನ್ ಶಿವಕುಮಾರ್, ಡೆಪ್ಯೂಟಿ ಮ್ಯಾನೇಜರ್ ಇವರನ್ನು shivakumar.n@kfintech.com/evoting@kfintech.com ವಿಳಾಸಗಳಲ್ಲಿ ಸಂಪರ್ಕಿಸಬಹುದು ಅಥವಾ ಕೆಫಿನ್ ಟೋಲ್ ಫ್ರೀ ನಂ. 1–800–309–4001 ಸಂಖ್ಯೆಗೆ ಸಂಪರ್ಕಿಸಬಹುದು ಅಥವಾ ಹೆಚ್ಚಿನ ಯಾವುದೇ ಸ್ಪಷ್ಟೀಕರಣಗಳಿಗಾಗಿ investors@centumelectronics.com ವಿಳಾಸಕ್ಕೆ ಇಮೇಲ್ ಬರೆಯಬಹುದು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/–
ಬೆಂಗಳೂರು **ನಾಗರಾಜ್ ಕೆ ವಿ**
ಸೆಪ್ಟೆಂಬರ್ 4, 2021 **ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಾಯೆನ್ಸ್ ಆಫೀಸರ್**

ಸುದ್ದಿ 2 ನಿಮಿಷ

ವಿಜ್ಞಾನ ಸಮ್ಮೇಳನ: ಡಾ.ಜಿ. ಜಗದೀಶ್ ಸೇರಿ ಮೂವರಿಗೆ ಪ್ರಶಸ್ತಿ

ಬೆಂಗಳೂರು: ಸ್ವದೇಶಿ ವಿಜ್ಞಾನ ಆಂದೋಲನ–ಕರ್ನಾಟಕ ಸಂಸ್ಥೆಯು ಇದೇ 15ರಿಂದ 17ರವರೆಗೆ 16ನೇ ಕನ್ನಡ ವಿಜ್ಞಾನ ಸಮ್ಮೇಳನವನ್ನು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದು, ವಿಜ್ಞಾನಿ ಡಾ.ಜಿ. ಜಗದೀಶ್ ಸೇರಿದಂತೆ ಮೂವರು ವಿಶೇಷ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ರಾಜ್ಯ ಘಟಕದ ಅಧ್ಯಕ್ಷ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಮಾತನಾಡಿ, 'ಡಾ.ಎಂ. ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ'ಕ್ಕೆ ಭಾರತೀಯ ವಿಜ್ಞಾನ ಸಂಸ್ಥೆಯ ಏರೋಸ್ಪೇಸ್ ವಿಭಾಗದ ಮುಖ್ಯಸ್ಥ ಡಾ.ಜಿ. ಜಗದೀಶ್ ಆಯ್ಕೆಯಾಗಿದ್ದಾರೆ. ' ಭೀಮಸೇನ್ ಜೋಶಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕಾರ'ಕ್ಕೆ ಸಂಗೀತ ವಿದ್ವಾಂಸ ವಿದ್ಯಾಭೂಷಣ್ ಹಾಗೂ 'ಡಾ.ಸಿ.ಎನ್.ಆರ್. ರಾವ್ ವಿಜ್ಞಾನ ಪುರಸ್ಕಾರ'ಕ್ಕೆ ಸಿಐಆರ್‌ಸಿ ನಿರ್ದೇಶಕ ಡಾ. ಕೃಷ್ಣವೆಂಕಟೇಶ್ ಆಯ್ಕೆಯಾಗಿದ್ದಾರೆ' ಎಂದು ಮಾಹಿತಿ ನೀಡಿದರು.

'ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಹಾಗೂ ವಿವಿಧ ಸರ್ಕಾರಿ ಇಲಾಖೆಗಳ ಸಹಯೋಗದಲ್ಲಿ ಸಮ್ಮೇಳನವನ್ನು ಮಾಡಲಾಗುತ್ತಿದೆ. ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಿಂದ ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಅನ್ವೇಷಣಾಭಿವೃದ್ಧಿ ಸಂಸ್ಥೆಗಳ ವಿಜ್ಞಾನಿಗಳು ಭಾಗವಹಿಸುತ್ತಾರೆ. ಪಾರಂಪರಿಕ ಮತ್ತು ಆಧುನಿಕ ವಿಜ್ಞಾನದ ಎಲ್ಲ ಆಯಾಮಗಳ ವೈಜ್ಞಾನಿಕ ಲೇಖನಗಳನ್ನು ಕನ್ನಡದಲ್ಲಿ ಮಾತ್ರ ಮಂಡಿಸಲು ಅವಕಾಶ ಇರುತ್ತದೆ' ಎಂದು ಹೇಳಿದರು.

351 ಅಭ್ಯರ್ಥಿಗಳಿಗೆ ಉದ್ಯೋಗ ಭಾಗ್ಯ

ಬೆಂಗಳೂರು: ನಗರದ ಮಲ್ಲೇಶ್ವರದಲ್ಲಿ ಶನಿವಾರ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ 351 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಲಾಯಿತು.

ಮೇಳದಲ್ಲಿ 42ಕ್ಕೂ ಹೆಚ್ಚು ಕಂಪನಿಗಳು ಅಭ್ಯರ್ಥಿಗಳ ಸಂದರ್ಶನ ನಡೆಸಿದವು. ಒಟ್ಟು 2,050 ಅಭ್ಯರ್ಥಿಗಳು ನೋಂದಾಯಿಸಿಕೊಂಡು, 1510 ಅಭ್ಯರ್ಥಿಗಳು ಹಾಜರಾಗಿದ್ದರು. ಈ ಪೈಕಿ 582 ಅಭ್ಯರ್ಥಿಗಳನ್ನು ಪಟ್ಟಿ ಮಾಡಿದ ನಂತರ ಅಂತಿಮವಾಗಿ 351 ಅಭ್ಯರ್ಥಿಗಳು ವಿವಿಧ ಕಂಪನಿಗಳ ಕೆಲಸಕ್ಕೆ ಆಯ್ಕೆಯಾದರು.

ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲ ಖಾತೆ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಿಸಿದರು.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 5ರಂದು ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಬ್ಯಾಡರಹಳ್ಳಿ, ಅಂಜನಾ ನಗರ, ಬಿಇಎಲ್ ಬಡಾವಣೆ, ಬಿಇಎಲ್ ಬಡಾವಣೆ ಎರಡನೇ ಹಂತ, ಗಿಡ್ಡದಕೋನೇನಹಳ್ಳಿ, ಮುದ್ದಿನ ಪಾಳ್ಯ, ಬಿಡಿಎ 8–9ನೇ ಹಂತ, ರೈಲ್ವೆ ಬಡಾವಣೆ, ಉಪಕಾರ್ ಬಡಾವಣೆ, ಭವಾನಿ ಬಡಾವಣೆ, ಬಾಲಾಜಿ ಬಡಾವಣೆ, ಗೊಲ್ಲರಹಟ್ಟಿ, ರತ್ನ ನಗರ, ಮಾಡ್ರನ್ ಬಡಾವಣೆ, ಬಿಎಂಟಿಸಿ ಡಿಪೊ, ಮಹದೇಶ್ವರ ನಗರ, ಮುನೇಶ್ವರ ನಗರ, ಚನ್ನಪ್ಪ ಬಡಾವಣೆ, ಶ್ರೀನಿವಾಸ ನಗರ, ಹೆಗ್ಗನಹಳ್ಳಿ ಮುಖ್ಯರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶ.

ಕೊಡಿಗೇಹಳ್ಳಿ, ಸ್ಕಂದನಗರ, ಚಿಕ್ಕಗೊಲ್ಲರಹಟ್ಟಿ, ಪದ್ಮಾವತಿ ಬಡಾವಣೆ, ಸೀಗೇಹಳ್ಳಿ, ಬಿಬಿಎಂಪಿ ಪ್ಲಾಂಟ್, ರಂಗೇಗೌಡ ಬಡಾವಣೆ, ಕನ್ನಹಳ್ಳಿ, ಶಾಂತಿಲಾಲ್ ಬಡಾವಣೆ, ಎನ್.ಜಿ.ಎಫ್. ಬಡಾವಣೆ, ಬಾಲಾಜಿ ಬಡಾವಣೆ, ಎಂ.ಪಿ.ಎಂ. ಬಡಾವಣೆ, 9ನೇ ಬ್ಲಾಕ್, ಮಲ್ಲತ್ತಹಳ್ಳಿ, ಕೆಂಗುಂಟೆ, ಜ್ಞಾನಗಂಗೋತ್ರಿ ನಗರ, ಉಲ್ಲಾಳ ಮುಖ್ಯರಸ್ತೆ, ಲಕ್ಷ್ಮಿ ಆಸ್ಪತ್ರೆ, ಚನ್ನಿಗಪ್ಪ ಕೈಗಾರಿಕಾ ಪ್ರದೇಶ, ಕಾವೇರಿ ಡಾಬಾ, ರಂಗಮಂದಿರ, ಈರಣ್ಣಪಾಳ್ಯ, ಲುಲುಬಜಾರ್, ಎಚ್.ಎಂ.ವಿ. ಶಾಲೆ, ಆರ್ಚಿಡ್ ಶಾಲೆ, ಜಯಲಕ್ಷ್ಮಮ್ಮ ಬಡಾವಣೆ, ಕೊಟ್ಟಿಗೆಪಾಳ್ಯ, ಸಜ್ಜೆಪಾಳ್ಯ, ಸುಮನಹಳ್ಳಿ, ಸುಂಕದಕಟ್ಟೆ ಮುಖ್ಯರಸ್ತೆ, ನೀಲಗಿರಿ ತೋಪು, ಹೊಯ್ಸಳ ನಗರ, ಮೋಹನ್ ಥಿಯೇಟರ್ ಹತ್ತಿರ, ಸಂಜೀವಿನಿ ನಗರ, ನೀಲಕಂಠೇಶ್ವರ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ ಹಾಗೂ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅವರು ವಿಶ್ವೇಶ್ವರಯ್ಯನವರ ಪ್ರತಿಮೆ ಅನಾವರಣಗೊಳಿಸಿದರು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕರಿಸಿದ್ದಪ್ಪ, ವಿಶ್ವೇಶ್ವರಯ್ಯ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಸತೀಶ್ ಮೋಕ್ಷಗುಂಡಂ, ಬ್ರಿಗೇಡ್ ಸಮೂಹದ ಅಧ್ಯಕ್ಷ ಎಂ.ಆರ್.ಜೈಶಂಕರ್, ಶಿಲ್ಪಿ ಮಾಯನ್ ಎನ್.ಬಡಿಗೇರ್ ಇದ್ದರು

‘ವಿಶ್ವೇಶ್ವರಯ್ಯ ಕಾಲೇಜಿಗೆ ಸ್ವಾಯತ್ತತೆ: ಮಸೂದೆ ಮಂಡನೆ’

ಬೆಂಗಳೂರು: 'ನಗರದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿಗೆ (ಯುವಿಸಿಇ) ಐಐಟಿ ಮಾದರಿಯಲ್ಲಿ ಸ್ವಾಯತ್ತತೆ ನೀಡುವ ಸಂಬಂಧ ಅಧಿವೇಶನದಲ್ಲಿ ಮಸೂದೆ ಮಂಡಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ತಿಳಿಸಿದರು.

ಬ್ರಿಗೇಡ್ ಗೇಟ್ ವೇ ಕ್ಯಾಂಪಸ್‌ನಲ್ಲಿ ನಿರ್ಮಿಸಿರುವ ಸರ್.ಎಂ.ವಿಶ್ವೇಶ್ವರಯ್ಯನವರ 11.6 ಅಡಿ ಎತ್ತರದ ಲೋಹದ ಪ್ರತಿಮೆ ಅನಾವರಣಗೊಳಿಸಿ ಶನಿವಾರ ಮಾತನಾಡಿದರು.

'ಉನ್ನತ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ಒತ್ತು ನೀಡುವುದು ನಮ್ಮ ಉದ್ದೇಶ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲೂ ಇದಕ್ಕೆ ಹೆಚ್ಚಿನ ಮಹತ್ವ ಇದೆ. ಯುವಿಸಿಇಗೆ ಆಡಳಿತಾತ್ಮಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ವಾಯತ್ತತೆ ನೀಡಲು ನಿರ್ಧರಿಸಲಾಗಿದೆ. ಡಾ.ಎಸ್. ಸಡಗೋಪನ್ ನೇತೃತ್ವದ ಸಮಿತಿ ನೀಡಿರುವ ವರದಿ ಮತ್ತು ಶಿಫಾರಸುಗಳನ್ನು ಅಂಗೀಕರಿಸಲಾಗಿದೆ' ಎಂದರು.

ವಿಶ್ವೇಶ್ವರಯ್ಯ ಸಮಾಧಿ ಅಭಿವೃದ್ಧಿಗೆ ಟ್ರಸ್ಟ್: 'ಚಿಕ್ಕಬಳ್ಳಾಪುರದ ಮುದ್ದೇನಹಳ್ಳಿ ಗ್ರಾಮದಲ್ಲಿರುವ ಸರ್. ಎಂ.ವಿಶ್ವೇಶ್ವರಯ್ಯನವರ ಸಮಾಧಿ ಅಭಿವೃದ್ಧಿಗೆ ವಿಟಿಯು ಕುಲಪತಿ ಅಧ್ಯಕ್ಷತೆಯಲ್ಲಿ ಟ್ರಸ್ಟ್ ರಚನೆ ಮಾಡಲಾಗುತ್ತದೆ' ಎಂದು ತಿಳಿಸಿದರು.

ಪ್ರತಿಮೆ ಹೇಗಿದೆ: ಬ್ರಿಗೇಡ್ ಸಮೂಹ ಸ್ಥಾಪಿಸಿರುವ ಪ್ರತಿಮೆಯು ಒಟ್ಟು 1,300 ಕೆ.ಜಿ. ತೂಕವಿದೆ. ಇದಕ್ಕಾಗಿ 1,000 ಕೆ.ಜಿ. ತಾಮ್ರ ಮತ್ತು 300 ಕೆ.ಜಿ. ಮಿಶ್ರಲೋಹ ಬಳಸಲಾಗಿದೆ. ಖ್ಯಾತ ಶಿಲ್ಪಿ ಮಾಯನ್ ಎನ್.ಬಡಿಗೇರ್ ಹಾಗೂ ಅವರ ತಂಡದವರು ಇದನ್ನು ರೂಪಿಸಿದ್ದಾರೆ.

ಅಂಜನಾಪುರ: ಭತ್ತದ ಸಸಿ ನಾಟಿ ಮಾಡಿ ಅಸಮಾಧಾನ ಹೊರ ಹಾಕಿದ ನಿವಾಸಿಗಳು

ರಸ್ತೆ ಹೊಂಡಕ್ಕೆ ತೆಪ್ಪ ಇಳಿಸಿ ಆಕ್ರೋಶ

ಪ್ರಜಾವಾಣಿ ವಾರ್ತೆ



ರಸ್ತೆಯಲ್ಲಿನ ಹೊಂಡದಲ್ಲಿ ಭತ್ತದ ಸಸಿ ನಾಟಿ ಮಾಡುತ್ತಿರುವ ಸ್ಥಳೀಯರು

ಬೆಂಗಳೂರು: ಹೊಂಡ ಬಿದ್ದು ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿರುವ ಅಂಜನಾಪುರ ಮುಖ್ಯ ರಸ್ತೆಯಲ್ಲಿ ತುಂಬಿಕೊಂಡಿರುವ ನೀರಿನಲ್ಲಿ ತೆಪ್ಪ ಇಳಿಸಿ ಅದರಲ್ಲಿ ಕುಳಿತು ಮತ್ತು ಭತ್ತದ ಸಸಿ ನಾಟಿ ಮಾಡುವ ಮೂಲಕ ಸ್ಥಳೀಯರು ವಿಭಿನ್ನವಾಗಿ ಶನಿವಾರ ಪ್ರತಿಭಟನೆ ನಡೆಸಿದರು.

2007ರಲ್ಲಿ ಸುತ್ತಮುತ್ತಲ ಬಡಾವಣೆಗಳು ಬಿಬಿಎಂಪಿಗೆ ಸೇರ್ಪಡೆಯಾದರೂ, ಈ ರಸ್ತೆ ನಿರ್ವಹಣೆ ಮಾತ್ರ ಬಿಡಿಎ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ) ವ್ಯಾಪ್ತಿಯಲ್ಲೇ ಇದೆ. ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗೆ ಜಲಮಂಡಳಿಯಿಂದ ಅಗೆದು ಮಣ್ಣು ಮುಚ್ಚಲಾಗಿದೆ. ಆದರೆ, ರಸ್ತೆ ಮರು ನಿರ್ಮಾಣ ಮಾತ್ರ ಆಗಿಲ್ಲ.

ರಸ್ತೆ ಹುಡುಕಾಡಿಕೊಂಡು ತೆರಳಬೇಕಾದ ಸ್ಥಿತಿಯಿಂದ ರೋಸಿ ಹೋಗಿರುವ ನಿವಾಸಿಗಳು, ಶನಿವಾರ ದಿಢೀರ್ ಪ್ರತಿಭಟನೆ ನಡೆಸಿದರು. ತೆಪ್ಪವೊಂದನ್ನು ತಂದು ಅದರಲ್ಲಿ ಕುಳಿತು ಬಿಡಿಎ ಅಧಿಕಾರಿಗಳು ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ವಿರುದ್ಧ ಘೋಷಣೆ ಮೊಳಗಿಸಿದರು. ಬಳಿಕ ಭತ್ತದ ಸಸಿಗಳನ್ನು ತಂದು ರಸ್ತೆಯ ಹೊಂಡದಲ್ಲೇ ನಾಟಿ ಮಾಡಿದ ನಿವಾಸಿಗಳು ಸರ್ಕಾರದ ವಿರುದ್ಧ ತಮ್ಮ ಸಿಟ್ಟು ಹೊರ ಹಾಕಿದರು.

ಕನಕಪುರ ರಸ್ತೆಯ ದೊಡ್ಡಕಲ್ಲಸಂದ್ರ ಮೆಟ್ರೊ ನಿಲ್ದಾಣದ ಸಮೀಪದಿಂದ ಆರಂಭವಾಗುವ ಅಂಜನಾಪುರ ಮುಖ್ಯ ರಸ್ತೆಯಲ್ಲಿ ಗೊಟ್ಟಿಗೆರೆ ತನಕ ಇದೇ ಸ್ಥಿತಿ ಇದೆ. ಎಲೆಕ್ಟ್ರಾನಿಕ್ ಸಿಟಿ, ಬೊಮ್ಮಸಂದ್ರ ಕಡೆಗೆ ಹೋಗಲು ಇರುವ ಪ್ರಮುಖ ಸಂಪರ್ಕ ರಸ್ತೆ ಇದಾಗಿದೆ. 12 ವರ್ಷಗಳಿಂದ ಅಭಿವೃದ್ಧಿ ಕಾಣದಿರುವುದರಿಂದ ರಸ್ತೆಯ ತುಂಬೆಲ್ಲಾ ಗುಂಡಿಗಳೇ ತುಂಬಿಕೊಂಡಿವೆ. ಮಳೆಗಾಲದಲ್ಲಿ ಗುಂಡಿಗಳಲ್ಲಿ ನೀರು ತುಂಬಿಕೊಂಡರೆ ವಾಹನ ಚಾಲನೆ ಮಾಡುವುದೇ ಕಷ್ಟವಾಗಿದೆ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಬಂದ ಶಾಸಕ ಎಂ. ಕೃಷ್ಣಪ್ಪ ಅವರನ್ನು ಸುತ್ತಮುತ್ತಲ ಬಡಾವಣೆಯ ಮಹಿಳೆಯರು ತರಾಟೆಗೆ ತೆಗೆದುಕೊಂಡರು. '12 ವರ್ಷಗಳಿಂದ ಸಮಸ್ಯೆ ಸರಿಪಡಿಸಲು ಆಗಿಲ್ಲ ಏಕೆ' ಎಂದು ಪ್ರಶ್ನಿಸಿದರು. ಮಾಧ್ಯಮ ಪ್ರತಿನಿಧಿಗಳಿಗೆ ಶಾಸಕರು ಸ್ಪಷ್ಟನೆ ನೀಡುವಾಗಲೂ ಘೋಷಣೆ ಕೂಗಿ ತಮ್ಮ ಅಸಮಾಧಾನ ಹೊರ ಹಾಕಿದರು.

ರಸ್ತೆ ದುಸ್ಥಿತಿ ಬಗ್ಗೆ 'ಪ್ರಜಾವಾಣಿ' ಗುರುವಾರ ವರದಿ ಪ್ರಕಟಿಸಿತ್ತು. ಸ್ಥಳೀಯ ನಿವಾಸಿಗಳೊಂದಿಗೆ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಅವರನ್ನು ಅಂದೇ ಭೇಟಿ ಮಾಡಿದ್ದ ಎಂ.ಕೃಷ್ಣಪ್ಪ, ರಸ್ತೆ ಅವ್ಯವಸ್ಥೆ ಮನವರಿಕೆ ಮಾಡಿಸಿದ್ದರು. ಕೂಡಲೇ ಕಾಮಗಾರಿ ಆರಂಭಿಸಲು ಅಧಿಕಾರಿಗಳಿಗೆ ಸೂಚನೆ ನೀಡುವುದಾಗಿ ಎಸ್.ಆರ್. ವಿಶ್ವನಾಥ್ ಭರವಸೆ ನೀಡಿದ್ದರು.

'ಗಣೇಶ ಹಬ್ಬದ ಬಳಿಕ ಕಾಮಗಾರಿ ಆರಂಭ'

'ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದ್ದು, 15 ದಿನಗಳಲ್ಲಿ ಮುಗಿಯಲಿದೆ. ಗೌರಿ ಮತ್ತು ಗಣಪತಿ ಹಬ್ಬ ಮುಗಿದ ಕೂಡಲೇ ಕಾಮಗಾರಿ ಆರಂಭವಾಗಲಿದೆ' ಎಂದು ಶಾಸಕ ಎಂ. ಕೃಷ್ಣಪ್ಪ ಭರವಸೆ ನೀಡಿದರು.

'12 ವರ್ಷಗಳಿಂದ ರಸ್ತೆ ಇದೇ ಸ್ಥಿತಿಯಲ್ಲಿದೆ ಎಂಬುದನ್ನು ಒಪ್ಪಲಾಗದು. ಕಾವೇರಿ ನೀರಿನ ಸಂಪರ್ಕಕ್ಕೆ ಮತ್ತು ಒಳಚರಂಡಿ ಪೈಪ್‌ಲೈನ್ ಅಳವಡಿಕೆ ವಿಳಂಬವಾಗಿದ್ದರಿಂದ ಕಾಮಗಾರಿ ಆರಂಭಿಸಲು ತಡವಾಗಿದೆ' ಎಂದು ಸ್ಪಷ್ಟಪಡಿಸಿದರು.

ವಾಹನ ಸಂಚಾರಕ್ಕೆ ಯೋಗ್ಯವಾಗುವಂತೆ ಗುಂಡಿ ಮುಚ್ಚುವ ಕಾಮಗಾರಿ ಭಾನುವಾರದಿಂದಲೇ ಆರಂಭವಾಗಲಿದೆ. ಇದಲ್ಲದೇ ಈ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿಗೂ ಟೆಂಡರ್ ಕರೆಯಲಾಗಿದೆ ಎಂದು ಹೇಳಿದರು.

Inners for Winners

RAMRAJ ©

BANIANS • BRIEFS • TRUNKS

SHOWROOMS

KG ROAD | MALLESHWARAM | KORAMANGALA | BASAVESHWAR NAGAR | RR NAGAR | YESHWANTHPUR | JP NAGAR | R.T NAGAR
VIJAYA NAGAR | RAJAJI NAGAR | BASAVANAGUDI | JAYA NAGAR | HOSPET | BANASHANKARI | TUMKUR | KANAKAPURA | YELAHANKA
RAMNAGARA | HESARAGATTA | NELAMANGALA | RAMAMURTHY NAGAR | CHINTAMANI | HSR LAYOUT | KENGERI UPANAGARA

Available at company showroom & all leading textile shops / www.ramrajcotton.in

ನಗರದಲ್ಲಿ ಇಂದು

ಗೌರಿ ನೆನಹು: ಗೌರಿ ಲಂಕೇಶ್ ಅಗಲಿ ನಾಲ್ಕು ವರ್ಷ, ಸ್ಥಳ: ಗೌರಿ ಸಮಾಧಿ, ಚಾಮರಾಜಪೇಟೆ, ಬೆಳಿಗ್ಗೆ 8.30

ಶಿಕ್ಷಕರ ದಿನಾಚರಣೆ: ಉದ್ಘಾಟನೆ: ಬಿ.ಸಿ. ನಾಗೇಶ್, ಉತ್ತಮ ಶಿಕ್ಷಕರಿಗೆ ಸನ್ಮಾನ: ರಾಕೇಶ್ ಸಿಂಗ್, ಪ್ರತಿಭಾ ಪುರಸ್ಕಾರ: ಗೌರವ್ ಗುಪ್ತ, ಮುಖ್ಯ ಅತಿಥಿ: ಪುಟ್ಟಣ್ಣ, ಅತಿಥಿಗಳು: ಡಿ. ರಂದೀಪ್, ಮನೋಜ್ ಕುಮಾರ್ ಜೈನ್, ತುಳಸಿ ಮದ್ದಿನೇನಿ, ಬಸವರಾಜು, ಡಾ.ಕೆ.ಹರೀಶ್ ಕುಮಾರ್, ರವೀಂದ್ರ ಎಸ್.ಜಿ., ದಯಾನಂದ ಕೆ.ಎ., ಅಧ್ಯಕ್ಷತೆ: ಉದಯ್ ಗರುಡಾಚಾರ್, ಆಯೋಜನೆ: ಬಿಬಿಎಂಪಿ, ಶಿಕ್ಷಣ ಇಲಾಖೆ, ಸ್ಥಳ: ಸರ್. ಪುಟ್ಟಣ್ಣಚೆಟ್ಟಿ ಪುರಭವನ, ಬೆಳಿಗ್ಗೆ 10

ಶಿಕ್ಷಕರ ದಿನಾಚರಣೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಉನ್ನತ ಶಿಕ್ಷಣ ಇಲಾಖೆ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜ್, ಬೆಳಿಗ್ಗೆ 10.30

'ಮುಖ್ಯಮಂತ್ರಿಗಳ ರೈತ ವಿದ್ಯಾ ನಿಧಿ' ಯೋಜನೆ ಲೋಕಾರ್ಪಣೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ವಿದ್ಯಾ ನಿಧಿ ವರ್ಗಾವಣೆಗೆ ಚಾಲನೆ: ನರೇಂದ್ರ ಸಿಂಗ್ ತೋಮರ್, ವಿದ್ಯಾರ್ಥಿಗಳಿಗೆ ಸಾಂಕೇತಿಕ ಚೆಕ್ ವಿತರಣೆ: ಶೋಭಾ ಕರಂದ್ಲಾಜೆ, ಉಪಸ್ಥಿತಿ: ಬಿ.ಸಿ. ಪಾಟೀಲ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 10.30

ಗೌರಿ–ಗಣೇಶ ಹಬ್ಬದ ಪ್ರಯುಕ್ತ ಪೌರ ಕಾರ್ಮಿಕರಿಗೆ ಸಾಮೂಹಿಕ ಬಾಗಿನ ಕಾರ್ಯಕ್ರಮ ಹಾಗೂ ಶಿಕ್ಷಕರ ದಿನಾಚರಣೆ ಪ್ರಯುಕ್ತ ಶಿಕ್ಷಕರು–ವೈದ್ಯರಿಗೆ ಗೌರವ ಸನ್ಮಾನ: ಮುಖ್ಯ ಅತಿಥಿಗಳು: ರಾಮಲಿಂಗಾರೆಡ್ಡಿ, ಸೌಮ್ಯಾ ರೆಡ್ಡಿ, ಮಂಜುಳಾ ಅರುಣ್ ಕುಮಾರ್, ಆಯೋಜನೆ: ಸೇವಕ್ಸ್ ಮಹಿಳಾ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಸಿಂಧೂರ ಕಲ್ಯಾಣ ಮಂಟಪ, ಜೆಪಿನಗರ 6ನೇ ಹಂತ, ಮಧ್ಯಾಹ್ನ 3

ಶಿಕ್ಷಕರ ದಿನಾಚರಣೆ ಹಾಗೂ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ವಿಶೇಷ ಆಹ್ವಾನಿತರು: ನಿರ್ಮಲಾ ಸೀತಾರಾಮನ್, ರಾಜೀವ್ ಚಂದ್ರಶೇಖರ್, ಪ್ರಾಸ್ತಾವಿಕ ನುಡಿ: ಬಿ.ಸಿ. ನಾಗೇಶ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಮಧ್ಯಾಹ್ನ 3

ಕ್ರೀಡಾಪಟುಗಳೊಂದಿಗೆ ಸಂವಾದ ಹಾಗೂ ಮೈದಾನ ಪರಿವೀಕ್ಷಣೆ: ಅನುರಾಗ್ ಠಾಕೂರ್, ಆಯೋಜನೆ: ಕೇಂದ್ರ ಮಾಹಿತಿ ಮತ್ತು ಪ್ರಸಾರ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಸ್ಥಳ: ಕಿತ್ತೂರು ರಾಣಿ ಚೆನ್ನಮ್ಮ ಮೈದಾನ, ಜಯನಗರ, ಸಂಜೆ 4

ಒಕ್ಕಲಿಗರ ಜಾಲತಾಣ ಲೋಕಾರ್ಪಣೆ: ನಿರ್ಮಲಾನಂದನಾಥ ಸ್ವಾಮೀಜಿ, ಮುಖ್ಯ ಅತಿಥಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಉಪಸ್ಥಿತಿ: ಸೌಮ್ಯನಾಥ ಸ್ವಾಮೀಜಿ, ಉಪಸ್ಥಿತಿ: ಎಸ್.ಆರ್. ವಿಶ್ವನಾಥ್, ಎನ್. ಕೃಷ್ಣಪ್ಪ, ಅಧ್ಯಕ್ಷತೆ: ಬಿ. ಪಾಂಡುಕುಮಾರ್, ಆಯೋಜನೆ: ಜಸ್ಟೀಸ್ ಹೊಂಬೇಗೌಡ ಕ್ಷೇಮಾಭಿವೃದ್ಧಿ ಸಂಘ, ರೈತ ಸಂಪದ, ಸ್ಥಳ: ಆದಿ ಚುಂಚನಗಿರಿ ಶಾಖಾ ಮಠ, ವಿಜಯನಗರ, ಸಂಜೆ 5.30

ನಿರ್ಮಲಾನಂದನಾಥ ಸ್ವಾಮೀಜಿ

68 ಕೋಟಿ ಡೋಸ್ ದಾಟಿದ ಲಸಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ನೀಡಲಾದ ಕೋವಿಡ್–19 ಲಸಿಕೆಯ ಸಂಖ್ಯೆ 68 ಕೋಟಿ ಡೋಸ್ ದಾಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ. ಶನಿವಾರ ಒಂದೇ ದಿನ ದೇಶದಾದ್ಯಂತ 62.25 ಲಕ್ಷಕ್ಕೂ ಹೆಚ್ಚು ಡೋಸ್ ಲಸಿಕೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಬನ್ನೇರುಘಟ್ಟ: ರಣಹದ್ದು ಜಾಗೃತಿ ದಿನಾಚರಣೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಅಂತರ ರಾಷ್ಟ್ರೀಯ ರಣಹದ್ದುಗಳ ಜಾಗೃತಿ ದಿನವನ್ನು ಶನಿವಾರ ಆಚರಿಸಲಾಯಿತು.

ರಣಹದ್ದುಗಳ ಜಾಗೃತಿ ದಿನಾಚರಣೆ ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಮೊದಲ ಶನಿವಾರ ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ರಣಹದ್ದುಗಳ ಸಂರಕ್ಷಣೆ ಮಾರ್ಗಗಳ ಬಗ್ಗೆ ಪ್ರವಾಸಿಗರಿಗೆ ತಿಳಿಸಿಕೊಡಲಾಯಿತು. ಪ್ರವಾಸಿಗರಿಂದ ಅವುಗಳ ಸಂರಕ್ಷಣೆಗೆ ಸಂಕಲ್ಪ ಮಾಡಿಸಿ ಸಹಿ ಸಂಗ್ರಹಿಸಲಾಯಿತು.

ಜೈವಿಕ ಉದ್ಯಾನದ ಕಾರ್ಯನಿರ್ವಹಣಾಧಿಕಾರಿ ವನಶ್ರೀ ವಿಪಿನ್‌ಸಿಂಗ್, ಶಿಕ್ಷಣಾಧಿಕಾರಿ ಅಮಲಾ, ರಾಮನಗರ ರಾಮದೇವರಬೆಟ್ಟ ಉಪವಲಯ ಅರಣ್ಯಾಧಿಕಾರಿ ಕುಮಾರ್, ಅರಣ್ಯ ರಕ್ಷಕ ಸುಮ, ಪರಿಸರವಾದಿ ವೈ.ಪ್ರಶಾಂತ್‌ಕುಮಾರ್ ಇದ್ದರು.

MBBS

Ministry Of Health Of Russia
SMOLENSK STATE MEDICAL UNIVERSITY, RUSSIA
Invites Indian students for direct Government Admissions
Recognized by India, WHO, USA & UK, Min. Qual. 50% in XII in PCB

UNIVERSITY - Founded in 1920, 101 years old, Smolensk is 380 km west of Moscow, Very high standards of education, strict disciplinary system. **1500** Indian students (**650** Girls) studying, **167** got degree in **2021**, English Medium in all years, Closed type campus system, **8** attached hospitals (**6000** Beds). **MCI SCREENING TEST** – Our graduates of **2008** to **2020** have given **BEST** results among graduates of all foreign medical colleges (Official web sites of Indian Embassy, Moscow and National Board of Examination, New Delhi who conducts MCI Screening Test confirm this).

SPECIAL HOSTELS ONLY FOR INDIAN STUDENTS WITH INDIAN MESS

Fee (Tuition+Hostel+Med.Ins.) – **USD 6000** (Approx. Rs. 4,50,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.

Scholarship to all Indian students.
Bank loans from Indian banks are available.
Contact Foreign advisor to Chancellor: Dr.Alok Aeron+79605805555(Russia)
Official web site: www.sgmu.info DM us on insta: @sgmu.info
Admission details: admission.sgmu.live
INFORMATION CENTERS (Parents of Students or Our Graduates):
Bangalore & Manglore: Mrs. Sudha Kamath - 9740622038
Chitradurga: Mr. R. Venkatashiva – 9448839235
Mysore: Dr. Mothukar – 8105616675, Mr. Ganesh S. - 8073709996
Hubli-Dharwad & Belgavi: Dr. Suchita Halli - 9916187559
Karwar: Mrs. Bhat – 8884057559; **Hassan:** Ms. Nayana B.R. – 9606265744

ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್ (ರಿ)

ಸಂಸ್ಥಾಪಕರ ದಿನ

ಪ್ರೊ. ಎನ್. ಅನಂತಾಚಾರ್
ಸಂಸ್ಥಾಪಕರು, ಎ. ಪಿ. ಎಸ್. ವಿದ್ಯಾ ಸಂಸ್ಥೆಗಳು
ಎನ್.ಆರ್. ಕಾಲೋನಿ, ಬೆಂಗಳೂರು–560 019.

ಶಿಕ್ಷಕರ ದಿನಾಚರಣೆಯ

ಈ ಶುಭ ಸಂದರ್ಭದಲ್ಲಿ ನಮ್ಮ **ಸಂಸ್ಥಾಪಕರ 111ನೆಯ ಜನ್ಮ ದಿನೋತ್ಸವದ ಸ್ಮರಣೆಗಾಗಿ** ಟ್ರಸ್ಟಿಗಳು, ಟ್ರಸ್ಟಿನ ಸದಸ್ಯರು, ಅಧ್ಯಾಪಕ-ಅಧ್ಯಾಪಕೇತರ ವರ್ಗ, ವಿದ್ಯಾರ್ಥಿಗಳು ಹಾಗೂ ಹಳೆಯ ವಿದ್ಯಾರ್ಥಿಗಳು ಭಾವಪೂರ್ಣ ಗೌರವವನ್ನು ಸಮರ್ಪಿಸುತ್ತಿದ್ದಾರೆ.

ಶ್ರೀ. ಟಿ. ವಿ. ಮಾರುತಿ
ಅಧ್ಯಕ್ಷರು

ಶ್ರೀ. ಎ. ಆರ್. ಆಚಾರ್ಯ
ಪ್ರಧಾನ ಕಾರ್ಯದರ್ಶಿಗಳು

5-9-1910 to 21-4-1976

ಅನ್ನದಾತರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಉದಾತ್ತ ನೆರವು

ಮುಖ್ಯಮಂತ್ರಿ ರೈತ ವಿದ್ಯಾ ನಿಧಿ

ಕಾರ್ಯಕ್ರಮದ ಲೋಕಾರ್ಪಣೆ

ದಿನಾಂಕ: 05–09–2021, ಭಾನುವಾರ । **ಸಮಯ:** ಬೆಳಿಗ್ಗೆ 10.30 ಗಂಟೆಗೆ
ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನ ಸೌಧ, ಬೆಂಗಳೂರು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಮಾನ್ಯ ಕೃಷಿ ಸಚಿವರಾದ **ಶ್ರೀ ಬಿ.ಸಿ. ಪಾಟೀಲ್** ರವರು ರೈತರೊಂದಿಗೆ ಗದ್ದೆಯಲ್ಲ ಬೆಳೆಯನ್ನು ವೀಕ್ಷಿಸುತ್ತಿರುವುದು.

ರಾಜ್ಯದ ರೈತಾಪಿ ಮಕ್ಕಳ ಉನ್ನತ ವ್ಯಾಸಂಗಕ್ಕೊಂದು ವರದಾನ ಈ ವಿಶಿಷ್ಟ ಕಾರ್ಯಕ್ರಮ.

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಅವರು ಅಧಿಕಾರ ಸ್ವೀಕರಿಸಿದ ನಂತರ ಪ್ರಥಮವಾಗಿ ನಾಡಿನ ಅನ್ನದಾತ ರೈತರು ಮತ್ತು ಸಮಾಜದ ದುರ್ಬಲ ವರ್ಗಗಳ ಕಲ್ಯಾಣಕ್ಕಾಗಿ ಕೈಗೊಂಡ ಪ್ರಧಾನ **ಪಂಚ** ಕಾರ್ಯಕ್ರಮಗಳ ಪೈಕಿ ಮೊದಲನೇ ಕಾರ್ಯಕ್ರಮ **"ಮುಖ್ಯಮಂತ್ರಿ ರೈತ ವಿದ್ಯಾ ನಿಧಿ"**.

ಎಸ್.ಎಸ್.ಎಲ್.ಸಿ. (10ನೇ ತರಗತಿ) ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದ ರೈತರ ಮಕ್ಕಳು ಮುಂದಿನ ವಿದ್ಯಾಭ್ಯಾಸದ ಕನಸು ಕೈಗೂಡಲು ಪ್ರತಿವರ್ಷ ಶಿಷ್ಯವೇತನ ಒದಗಿಸುವ ನೆರವಿನ ಕಾರ್ಯಕ್ರಮವಿದು. ವಾರ್ಷಿಕ ಶಿಷ್ಯವೇತನವನ್ನು ರೈತರ ಮಕ್ಕಳ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಜಮೆ ಮಾಡಲಾಗುವುದು.

ಈ ಮಾದರಿ ಕಾರ್ಯಕ್ರಮ ಮೂಲಕ **"ಅನ್ನದಾತ ಸುಖೀಭವ"** ಎಂಬುದನ್ನು ಸಾಕಾರಗೊಳಿಸಿದೆ.

ಕಾರ್ಯಕ್ರಮದ ಉದ್ಘಾಟನೆ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ವಿದ್ಯಾರ್ಥಿಗಳ ಖಾತೆಗೆ ವಿದ್ಯಾ ನಿಧಿ ವರ್ಗಾವಣೆಗೆ ಚಾಲನೆ
ಶ್ರೀ ನರೇಂದ್ರ ಸಿಂಗ್ ತೋಮರ್
ಮಾನ್ಯ ಕೃಷಿ ಮತ್ತು ರೈತರ ಕಲ್ಯಾಣ ಸಚಿವರು
ಭಾರತ ಸರ್ಕಾರ

ವಿದ್ಯಾರ್ಥಿಗಳಿಗೆ ಸಾಂಕೇತಿಕ ಚೆಕ್ ವಿತರಣೆ
ಕುಮಾರಿ ಶೋಭಾ ಕರಂದ್ಲಾಜೆ
ಮಾನ್ಯ ಕೃಷಿ ಮತ್ತು ರೈತರ ಕಲ್ಯಾಣ
ರಾಜ್ಯ ಸಚಿವರು, ಭಾರತ ಸರ್ಕಾರ

ಪ್ರಾಸ್ತಾವಿಕ ನುಡಿ
ಶ್ರೀ ಬಿ.ಸಿ. ಪಾಟೀಲ್
ಮಾನ್ಯ ಕೃಷಿ ಸಚಿವರು
ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು
ಶಿವಾಜಿನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು

ಮುಖ್ಯ ಅತಿಥಿಗಳು

ಶ್ರೀ ಪ್ರಭು ಬಿ. ಚವ್ಹಾಣ್
ಮಾನ್ಯ ಪಶುಸಂಗೋಪನೆ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಎಸ್.ಟಿ. ಸೋಮಶೇಖರ್
ಮಾನ್ಯ ಸಹಕಾರ ಸಚಿವರು
ಕರ್ನಾಟಕ ಸರ್ಕಾರ

ಡಾ. ಕೆ.ಸಿ. ನಾರಾಯಣಗೌಡ
ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಎನ್. ಮುನಿರತ್ನ
ಮಾನ್ಯ ತೋಟಗಾರಿಕೆ, ಯೋಜನೆ ಮತ್ತು
ಸಾಂಖ್ಯಿಕ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಪಿ.ಸಿ. ಮೋಹನ್
ಮಾನ್ಯ ಲೋಕಸಭಾ ಸದಸ್ಯರು
ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ

ಕಾರ್ಯಕ್ರಮದಡಿ ಮಂಜೂರಾಗುವ ವಾರ್ಷಿಕ ಶಿಷ್ಯ ವೇತನ ಮತ್ತು ಫಲಾನುಭವಿಗಳಾಗಲು ಅರ್ಹತೆಗಳು :

ಕ್ರ.ಸಂ.	ಕೋರ್ಸ್‌ಗಳು	ವಿದ್ಯಾರ್ಥಿಗಳು	ವಿದ್ಯಾರ್ಥಿನಿಯರು
1	ಪಿ.ಯು.ಸಿ / ಐ.ಟಿ.ಐ/ ಡಿಪ್ಲೊಮಾ	ರೂ.2,500/–	ರೂ.3,000/–
2	ಬಿ.ಎ/ ಬಿ.ಎಸ್‌ಸಿ/ ಬಿ.ಕಾಂ ಇನ್ನಿತರೆ ಪದವಿ	ರೂ.5,000/–	ರೂ.5,500/–
3	ಎಲ್‌ಎಲ್.ಬಿ/ಪ್ಯಾರಾಮೆಡಿಕಲ್/ ಬಿ.ಫಾರ್ಮ್/ ನರ್ಸಿಂಗ್ ಇನ್ನಿತರೆ ವೃತ್ತಿಪರ ಕೋರ್ಸ್‌ಗಳು	ರೂ.7,500/–	ರೂ.8,000/–
4	ಎಂ.ಬಿ.ಬಿ.ಎಸ್/ಬಿ.ಇ/ಬಿ.ಟೆಕ್ ಮತ್ತು ಎಲ್ಲ ಸ್ನಾತಕೋತ್ತರ ಕೋರ್ಸ್‌ಗಳು	ರೂ.10,000/–	ರೂ.11,000/–

- ಎಸ್.ಎಸ್.ಎಲ್.ಸಿ / ಹತ್ತನೇ ತರಗತಿಯನ್ನು ಪೂರ್ಣಗೊಳಿಸಿ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆಯಲ್ಲಿ ಪಿಯುಸಿ / ಪದವಿ / ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದಿರುವ ರೈತ ಮಕ್ಕಳಿಗೆ ಶಿಷ್ಯವೇತನ.

"ಮುಖ್ಯಮಂತ್ರಿ ರೈತ ವಿದ್ಯಾ ನಿಧಿ" ವಿಶಿಷ್ಟ ಕಾರ್ಯಕ್ರಮಕ್ಕೆ ₹1000 ಕೋಟಿ ಮೀಸಲಿರಿಸಲಾಗಿದೆ.

ತಮಗೆ ಆದರದ ಸ್ವಾಗತ

ಪಿ. ರವಿಕುಮಾರ್, ಭಾ.ಆ.ಸೇ.
ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ

ವಂದಿತಾ ಶರ್ಮ, ಭಾ.ಆ.ಸೇ.
ಅಪರ ಮುಖ್ಯ ಕಾರ್ಯದರ್ಶಿಗಳು
ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ

ಡಾ. ರಾಜ್‌ಕುಮಾರ್ ಖತ್ರಿ, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಕೃಷಿ ಇಲಾಖೆ

ಬ್ರಿಜೇಶ್ ಕುಮಾರ್ ದೀಕ್ಷಿತ್, ಭಾ.ಅ.ಸೇ.
ಕೃಷಿ ಆಯುಕ್ತರು

ಬಿ.ವೈ. ಶ್ರೀನಿವಾಸ್
ಕೃಷಿ ನಿರ್ದೇಶಕರು

ಈ ಕಾರ್ಯಕ್ರಮದ ನೇರಪ್ರಸಾರವನ್ನು **"ಯೂಟ್ಯೂಬ್"** ಮತ್ತು **"ಫೇಸ್‌ಬುಕ್"** ಸಾಮಾಜಿಕ ಜಾಲತಾಣಗಳಲ್ಲಿ ಮತ್ತು **"ದೂರದರ್ಶನ ಚಂದನ"** ವಾಹಿನಿಗಳಲ್ಲಿ ವೀಕ್ಷಿಸಬಹುದು.

YouTube https://youtube.com/channel/UCc_FfAZF6jmbMP2LPBcqMBA/live

https://www.facebook.com/profile.php?id=100060692883118

KSDA ಕರ್ನಾಟಕ ರಾಜ್ಯ ಕೃಷಿ ಇಲಾಖೆ

ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ | ಸ್ವಯಂಪ್ರೇರಿತವಾಗಿ ಲಸಿಕೆ ಪಡೆಯಿರಿ

ಸಾರ್ವಜನಿಕ ಆಸ್ತಿ–ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ರಾಜ್ಯ ಕೃಷಿ ಇಲಾಖೆ
ಶೇಷಾದ್ರಿ ರಸ್ತೆ, ಬೆಂಗಳೂರು–01.



ಸಂಜಯನಗರದಲ್ಲಿ ಪತ್ರಿಕಾ ವಿತರಕರನ್ನು ಸನ್ಮಾನಿಸಲಾಯಿತು (ಎಡಚಿತ್ರ), ವಿಜಯನಗರದಲ್ಲಿ ಶನಿವಾರ ಮುಂಜಾನೆ ಕೇಕ್ ಕತ್ತರಿಸಿ ಖುಷಿಪಟ್ಟ ವಿತರಕರು (ಮಧ್ಯದ ಚಿತ್ರ), ಬಸವೇಶ್ವರನಗರದ ಪತ್ರಿಕಾ ವಿತರಕರ ಸಂಭ್ರಮ (ಬಲಚಿತ್ರ)

ನಗರದ ಹಲವೆಡೆ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ; ಕೇಕ್ ಕತ್ತರಿಸಿ ಖುಷಿಪಟ್ಟ ವಿತರಕರು

ಬೆಳಕು ಮೂಡುವ ಮುನ್ನವೇ ಮೇಳೈಸಿದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯನ ಹೊಂಗಿರಣಗಳು ಧರೆಗೆ ಮುತ್ತಿಕ್ಕುವ ಮುನ್ನವೇ ಮಹಾನಗರಿಯ ವಿವಿಧ ಭಾಗಗಳಲ್ಲಿ ಸಂಭ್ರಮ ಮೇಳೈಸಿತ್ತು.

ಪ್ರತಿನಿತ್ಯ ಮಳೆ, ಗಾಳಿ, ಚಳಿಯನ್ನೂ ಲೆಕ್ಕಿಸದೆ ಕೆಲಸದಲ್ಲಿ ಮಗ್ನರಾಗಿರುತ್ತಿದ್ದ ಆ ಕಾಯಕ ಜೀವಿಗಳ ಮೊಗದಲ್ಲಿ ಮಂದಹಾಸ ಅರಳಿತ್ತು. ಅವರೆಲ್ಲಾ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಳ್ಳುವ ಜೊತೆಗೆ ಸಿಹಿ ತಿನ್ನಿಸಿ ಖುಷಿಪಟ್ಟರು...

ವಿಶ್ವ ಪತ್ರಿಕಾ ವಿತರಕರ ದಿನಾಚರಣೆಯ ಕಾರಣದಿಂದ ನಗರದ ಹಲವೆಡೆ ಶನಿವಾರ ಮುಂಜಾನೆ ಕಂಡು ಬಂದ ದೃಶ್ಯಗಳಿವು.

ಹಲವು ಸವಾಲುಗಳ ನಡುವೆಯೇ ನಿತ್ಯ ಮನೆ ಮನೆಗೆ ಪತ್ರಿಕೆಗಳನ್ನು ತಲುಪಿಸುವ ಈ ಶ್ರಮಜೀವಿಗಳು ನಸುಕಿನಲ್ಲೇ ಕೇಕ್ ಕತ್ತರಿಸಿ ಸಂಭ್ರಮಿಸಿ ದರು.

ರಾಜರಾಜೇಶ್ವರಿ ನಗರದಲ್ಲಿ ಮಹಿಳಾ ಪತ್ರಿಕಾ ವಿತರಕರೂ ಕೇಕ್ ಕತ್ತರಿಸಿ ಖುಷಿಪಟ್ಟರು.

ವಿಜಯನಗರ, ಬಸವೇಶ್ವರ ನಗರ, ಇಂದಿರಾನಗರ, ಜಯನಗರ, ಹೆಬ್ಬಾಳ, ಯಲಹಂಕ, ಸಂಜಯನಗರ, ಜೆ.ಪಿ.ನಗರ, ಹನುಮಂತನಗರ, ಒಎಂ ಬಿಆರ್ ಬಡಾವಣೆ, ಎಚ್‌ಎಸ್‌ಆರ್ ಬಡಾವಣೆಗಳಲ್ಲಿ ಪತ್ರಿಕಾ ವಿತರಕರು ಮಕ್ಕಳಿಗೆ ಸಿಹಿ ಹಂಚಿದರು. ಹಲವು ವರ್ಷಗಳಿಂದ ಈ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ವಿತರಕರಿಗೆ ಮೈಸೂರು ಪೇಟ ತೊಡಿಸಿ ಗೌರವಿಸಲಾಯಿತು.

ಕೆಲವೆಡೆ ಶಾಲು ಹೊದಿಸಿ ಸನ್ಮಾನಿಸಲಾಯಿತು.

ರಾಜರಾಜೇಶ್ವರಿ ನಗರದಲ್ಲಿ ಮಹಿಳಾ ಪತ್ರಿಕಾ ವಿತರಕರು ಕೇಕ್ ಕತ್ತರಿಸಿ ಸಂಭ್ರಮಿಸಿದರು

‘ವಿತರಕರು ಪತ್ರಿಕೆಯ ಅವಿಭಾಜ್ಯ ಅಂಗ’

‘ವಿತರಕರು ಪತ್ರಿಕೆಯ ಅವಿಭಾಜ್ಯ ಅಂಗ. ಪತ್ರಿಕೆಯ ಯಶಸ್ಸಿನಲ್ಲಿ ಸಂಪಾದಕರು ಹಾಗೂ ಸಂಪಾದಕೀಯ ವಿಭಾಗದಷ್ಟೇ ಮಹತ್ವದ ಪಾತ್ರ ವಿತರಕರದ್ದಾಗಿದೆ’ ಎಂದು ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ತಿಳಿಸಿದರು.

‘ಆಹಾರ ಎಷ್ಟೇ ಸ್ವಾದಿಷ್ಟವಾಗಿರಲಿ, ಪ್ರೀತಿ ಹಾಗೂ ಕಾಳಜಿಯಿಂದ ಅದನ್ನು ಬಡಿಸದಿದ್ದರೆ ಅದು ನಾಲಿಗೆಗೆ ರುಚಿಸುವುದಿಲ್ಲ. ಹಾಗೆಯೇ ನಾವು ಎಷ್ಟೇ ಉತ್ತಮವಾದ ಪತ್ರಿಕೆ ರೂಪಿಸಿದರೂ ಕೂಡ ಅದನ್ನು ಸರಿಯಾದ ಸಮಯಕ್ಕೆ ಓದುಗರಿಗೆ ತಲುಪಿಸದಿದ್ದರೆ ಶ್ರಮ ವ್ಯರ್ಥ’ ಎಂದರು.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಶನಿವಾರ ಹಮ್ಮಿಕೊಂಡಿದ್ದ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಕಾರ್ಯಕ್ರಮದಲ್ಲಿ ಸಚಿವ ಶಿವರಾಮ್ ಹೆಬ್ಬಾರ್ ಅವರು ಪತ್ರಿಕಾ ವಿತರಕರನ್ನು ಸನ್ಮಾನಿಸಿದರು. ವಿಶ್ವವಾಣಿ ಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಇದ್ದರು. ಸಂಘದ ಪದಾಧಿಕಾರಿಗಳು ಚಿತ್ರದಲ್ಲಿದ್ದಾರೆ –ಪ್ರಜಾವಾಣಿ ಚಿತ್ರ

ಜೀವನ ಭದ್ರತೆ ಒದಗಿಸಲು ಕ್ರಮ: ಸಿ.ಎನ್. ಅಶ್ವತ್ಥನಾರಾಯಣ

ಬೆಂಗಳೂರು: ‘ಪತ್ರಿಕಾ ವಿತರಕರು ಅಪಾಯವನ್ನು ಮೈ ಮೇಲೆ ಎಳೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಜೀವನ ಭದ್ರತೆ ಒದಗಿಸಲು ಸರ್ಕಾರ ಬದ್ಧವಾಗಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಶನಿವಾರ ಹಮ್ಮಿಕೊಂಡಿದ್ದ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕೋವಿಡ್ ಸಮಯದಲ್ಲೂ ಜೀವವನ್ನು ಲೆಕ್ಕಿಸದೆ ಕೆಲಸ ಮಾಡಿದವರನ್ನು ಕಡೆಗಣಿಸುವ ಮಾತೆ ಇಲ್ಲ. ವೃತ್ತಿಪರರಿಗೆ ಸಿಗುವ ಸವಲತ್ತುಗಳು ವಿತರಕರಿಗೂ ಸಿಗಬೇಕು. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

> **ಪತ್ರಿಕಾ ವಿತರಕರನ್ನು ಮುಖ್ಯವಾಹಿನಿಗೆ ತರಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. ಅವರ ಪ್ರಮುಖ ಬೇಡಿಕೆಗಳನ್ನು ಈಡೇರಿಸುವ ಸಂಬಂಧ ಮುಖ್ಯಮಂತ್ರಿಯವರ ಜತೆ ಚರ್ಚಿಸಲಾಗುತ್ತದೆ**
>
> **–ವಿ.ಸೋಮಣ್ಣ,**
> ವಸತಿ ಸಚಿವ



ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.09 ಕೋಟಿ ▲	3.29 ಕೋಟಿ
ಸಕ್ರಿಯ ಪ್ರಕರಣ	1.89 ಕೋಟಿ ▲	4.03 ಲಕ್ಷ ▼
ಗುಣಮುಖ	19.74 ಕೋಟಿ ▲	3.21 ಕೋಟಿ ▼
ಸಾವು	45.71 ಲಕ್ಷ ▲	4.40 ಲಕ್ಷ
ದಿನದ ಮಾಹಿತಿ		
ಹೊಸ ಪ್ರಕರಣ	6.64 ಲಕ್ಷ ▼	42,559 ▲
ಗುಣಮುಖ	5.27 ಲಕ್ಷ ▼	38,004 ▲
ಸಾವು	9,902 ▼	306 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಇರಾನ್	ಬ್ರಿಟನ್
1.82 ಲಕ್ಷ ▲	27,621	41,764 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ಇರಾನ್
87.72 ▲	12.09 ▲	6.71

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.37 ಲಕ್ಷ ▼
ತಮಿಳುನಾಡು	35,000 ▲
ದೆಹಲಿ	25,082

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	64.82 ▲
ಕೇರಳ	41.81 ▲
ತಮಿಳುನಾಡು	26.21 ▲

ಪ್ರಜಾವಾಣಿ ಗ್ರಾಫಿಕ್ಸ್

ಮೂರನೇ ಅಲೆ: ಮಕ್ಕಳ ಮೇಲೆಯೇ ಹೆಚ್ಚು ಪರಿಣಾಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಮೂರನೇ ಅಲೆಯ ಸಂದರ್ಭದಲ್ಲಿ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಎರಡನೇ ಅಲೆಯ ಸಂದರ್ಭದಲ್ಲಿ ಸೋಂಕಿತರಾದ ಮಕ್ಕಳ ಸಂಖ್ಯೆಗಿಂತಲೂ ಈ ಬಾರಿ ಏಳು ಪಟ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಬೆಂಗಳೂರಿನ ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ವಿವಿಧ ಮಾದರಿ ವಿಧಾನಗಳ ಆಧಾರದ ಮೇಲೆ ತಜ್ಞರು ಈ ಬಗ್ಗೆ ವಿಶ್ಲೇಷಣೆ ನಡೆಸಿದ್ದಾರೆ.

ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಭಾರತೀಯ ಸಾರ್ವನಿಕ ಆರೋಗ್ಯ ಗಳ ತಜ್ಞರು ಈ ಅಧ್ಯಯನವನ್ನು ಕೈಗೊಂಡಿದ್ದಾರೆ. ಪ್ರಮುಖವಾಗಿ ಕರ್ನಾಟಕ ಕೇಂದ್ರೀಕೃತವಾಗಿ ಈ ಅಧ್ಯಯನ ಕೈಗೊಳ್ಳಲಾಗಿದೆ.

‘ಈ ಅಧ್ಯಯನವನ್ನು ಜನರಲ್ಲಿ ಭಯ ಮೂಡಿಸುವ ಉದ್ದೇಶದಿಂದ ಕೈಗೊಂಡಿಲ್ಲ. ಆದರೆ, ಮುಂಜಾಗ್ರತಾ ಕ್ರಮವಾಗಿ ಸಿದ್ಧತೆಗಳನ್ನು ಕೈಗೊಳ್ಳುವ ಉದ್ದೇಶದಿಂದ ಅಧ್ಯಯನ ಮಾಡಲಾಗಿದೆ. ಕೋವಿಡ್–19 ಸೋಂಕಿಗೆ ಒಳಗಾದರೂ ಬಹುತೇಕ ಮಕ್ಕಳು ಆಸ್ಪತ್ರೆಗೆ ದಾಖಲಾಗುವ ಅಗತ್ಯ ಇರುವುದಿಲ್ಲ. ಸರಾಸರಿ ಆಧಾರದ ಮೇಲೆ ಏಳು ಪಟ್ಟು ಹೆಚ್ಚಬಹುದು ಎಂದು ಅಂದಾಜಿಸಲಾಗಿದೆ. ಆದರೆ, ಇದು ಮೂರರಿಂದ ಹತ್ತು ಪಟ್ಟು ಸಹ ಹೆಚ್ಚಾಗಬಹುದು’ ಎಂದು ಸಾಂಕ್ರಾಮಿಕ ಕಾಯಿಲೆಗಳ ತಜ್ಞ ಡಾ.ಗಿರಿಧರ ಬಾಬು ವಿವರಿಸಿದ್ದಾರೆ.

ಈಗ ನಡೆಸುತ್ತಿರುವ ಲಸಿಕಾ ಅಭಿಯಾನವನ್ನು ಮತ್ತಷ್ಟು ತ್ವರಿತಗೊಳಿಸಬೇಕು ಮತ್ತು ಕೋವಿಡ್–19 ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸುವುದರಿಂದ ಮಾತ್ರ ಮೂರನೇ ಅಲೆಯನ್ನು ತಡೆಯಬಹುದು ಎಂದು ಅವರು ವಿವರಿಸಿದ್ದಾರೆ.

ಕೋವಿಡ್–19 ಮಾರ್ಗಸೂಚಿಗಳನ್ನು ಪಾಲಿಸದಿದ್ದರೆ ಮೂರನೇ ಅಲೆ ಹಬ್ಬುವುದು ಖಚಿತ. ಲಾಕ್‌ಡೌನ್ ಸಂದರ್ಭದಲ್ಲಿನ ರೀತಿಯ ನಿಯಮಗಳನ್ನು ಪಾಲಿಸಿದರೆ ಮಾತ್ರ ಸೆಪ್ಟೆಂಬರ್ ನಂತರವೂ ಹೊಸ ಅಲೆಯನ್ನು ಎದುರಿಸಬಹುದು. ಪ್ರತಿ ದಿನ ಲಸಿಕೆ ನೀಡುವುದು ಹೆಚ್ಚಿಗೆಯಾಗಿದ್ದರಿಂದ ಸಕ್ರಿಯ ಪ್ರಕರಣಗಳು ಕಡಿಮೆಯಾಗಲಿವೆ. ಇದರಿಂದ, ಆಸ್ಪತ್ರೆ, ಐಸಿಯು ಮತ್ತು ಆಮ್ಲಜನಕ ಅಗತ್ಯವೂ ಕಡಿಮೆಯಾಗಲಿದೆ ಎಂದು ಅಧ್ಯಯನದಲ್ಲಿ ಭಾಗಿಯಾಗಿರುವ ಸಂಶೋಧಕರು ವಿವರಿಸಿದ್ದಾರೆ.



ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,39,123 ಒಟ್ಟು ಪ್ರಕರಣಗಳು ▲

(12,38,834 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,382 ▼	12,15,721 ▲	16,019 ▲

ದಿನದ ಏರಿಕೆ

ಹೊಸ ಪ್ರಕರಣ	289 ▼
ಗುಣಮುಖ	618 ▲
ಸಾವು	07 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಅಸಮಂಜಸ ತೆರಿಗೆ ನೀತಿ: ಪ್ರತಿಭಟನೆ

ಬೆಂಗಳೂರು: ಆಸ್ತಿ ತೆರಿಗೆ ಪಾವತಿ ವಿಳಂಬಕ್ಕೆ ಭಾರಿ ದಂಡ ವಿಧಿಸುತ್ತಿರುವ ಮತ್ತು ಲಕ್ಷಾಂತರ ಜನರಿಗೆ ನೋಟಿಸ್ ನೀಡುತ್ತಿರುವ ಬಿಬಿಎಂಪಿ ಕ್ರಮ ಖಂಡಿಸಿ ಬೆಂಗಳೂರು ನವನಿರ್ಮಾಣ ಪಾರ್ಟಿ (ಬಿಎನ್‌ಪಿ) ಕಾರ್ಯಕರ್ತರು ಬಿಬಿಎಂಪಿ ಕೇಂದ್ರ ಕಚೇರಿ ಎದುರು ಶನಿವಾರ ಪ್ರತಿಭಟನೆ ಮಾಡಿದರು.

ಸುಮಾರು 50ಕ್ಕೂ ಹೆಚ್ಚು ಜನ ನೇರವಾಗಿ, 500ಕ್ಕೂ ಹೆಚ್ಚು ಮಂದಿ ಆನ್‌ಲೈನ್ ಮೂಲಕ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

‘ಅಸಮಂಜಸ ತೆರಿಗೆ ನೀತಿಯನ್ನು ಸರಿಪಡಿಸಬೇಕು. ಭಾರಿ ದಂಡ ವಿಧಿಸಿ ನೀಡಿರುವ ನೋಟಿಸ್‌ಗಳನ್ನು ಹಿಂಪಡೆಯಲು ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಪಕ್ಷದ ಸಂಸ್ಥಾಪಕ ಶ್ರೀಕಾಂತ್ ನರಸಿಂಹನ್, ‘ಸಮಸ್ಯೆಯ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಮನವಿ ಮಾಡಲಾಗಿದೆ. ಆದರೆ, ನಮಗೆ ಭರವಸೆ ಸಿಕ್ಕಿದೆಯೇ ವಿನಾ ಪರಿಹಾರ ದೊರೆತಿಲ್ಲ. ಬಿಬಿಎಂಪಿ ಅಧಿಕಾರಿಗಳು ಸಾರ್ವಜನಿಕರಿಗೆ ಇನ್ನೂ ನೋಟಿಸ್ ನೀಡುತ್ತಲೇ ಇದ್ದಾರೆ’ ಎಂದು ದೂರಿದರು.

‘ನೋಟಿಸ್ ಬರುತ್ತಲೇ ಇದ್ದರೆ ಸಾರ್ವಜನಿಕರಲ್ಲಿ ಉದ್ವೇಗ ಹೆಚ್ಚುತ್ತಿದೆ. ವಿನಾಕಾರಣ ನಾಗರಿಕರಿಗೆ ತೊಂದರೆ ನೀಡಲಾಗುತ್ತಿದೆ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

‘ಕಳೆದ ಐದು ವರ್ಷಗಳಲ್ಲಿ ಆಸ್ತಿ ತೆರಿಗೆ ಪಾವತಿಸದ ಕಟ್ಟಡಗಳ ಮಾಲೀಕರಿಗೆ ಬಿಬಿಎಂಪಿ ನೋಟಿಸ್ ನೀಡುತ್ತಿದೆ. ಕೆಲವರಿಗೆ ಲಕ್ಷ ರೂಪಾಯಿಯವರೆಗೆ ದಂಡ ನೀಡುವಂತೆ ಸೂಚಿಸಿ ನೋಟಿಸ್ ನೀಡಲಾಗಿದೆ. 2016ರಲ್ಲಿ ವಲಯಗಳ ಪುನರ್ ವಿಂಗಡಣೆಯ ಆಧಾರದ ಮೇಲೆ ಬಿಬಿಎಂಪಿಯು ಈ ನೋಟಿಸ್‌ಗಳನ್ನು ನೀಡುತ್ತಿದ್ದು, ವಲಯಗಳ ಪುನರ್‌ವಿಂಗಡಣೆ ಬಗ್ಗೆ ಎಷ್ಟೋ ಜನರಿಗೆ ಮಾಹಿತಿ ಇಲ್ಲ. ತಮ್ಮ ಕಟ್ಟಡ ಯಾವ ವಲಯದಲ್ಲಿ ಬರುತ್ತದೆ ಎಂಬ ಬಗ್ಗೆಯೂ ಗೊತ್ತಿಲ್ಲ. ಈ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನೂ ಮಾಡದೆ ನೋಟಿಸ್ ನೀಡಲಾಗುತ್ತಿದೆ’ ಎಂದು ದೂರಿದರು.

ಗುಂಡಿ ಮುಚ್ಚಲು ಕಾರ್ಯಪಡೆ ರಚನೆ

ಬೆಂಗಳೂರು: ನಗರದ ರಸ್ತೆಗಳಲ್ಲಿನ ಗುಂಡಿ ಮುಚ್ಚಲು ಪ್ರತಿ ವಲಯ ದಲ್ಲಿ ಆಯಾ ವಲಯದ ಮುಖ್ಯ ಎಂಜಿನಿಯರ್, ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮತ್ತು ವಾರ್ಡ್ ಎಂಜಿನಿಯರ್ ಒಳಗೊಂಡ ಕಾರ್ಯಪಡೆ ರಚಿಸಲಾಗುವುದು ಎಂದು ಬಿಬಿಎಂಪಿ ಹೇಳಿದೆ.

ಎಲ್ಲ ವಾರ್ಡ್‌ಗಳಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಿ, ಸುಗಮ ವಾಹನ ಸಂಚಾರಕ್ಕೆ ಅನುವಾಗುವಂತೆ ಮಾಡಬೇಕು. ಪಾಲಿಕೆಯ ಡಾಂಬರು ಮಿಶ್ರಣ ತಯಾರಿಕಾ ಘಟಕಗಳಲ್ಲಿ ಡಾಂಬರು ಮಿಶ್ರಣ ಉತ್ಪಾದಿಸಿ, ರಸ್ತೆಗುಂಡಿಗಳನ್ನು ಮುಚ್ಚಲು ಗುತ್ತಿಗೆ ನೀಡಲಾಗಿದೆ ಎಂದು ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದ್ದಾರೆ.

ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಪ್ರಸಕ್ತ ವರ್ಷ ₹ 2 ಕೋಟಿ: ಹೊರಟ್ಟಿ

ಬೆಂಗಳೂರು: ‘ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯನ್ನು 2021–22ನೇ ಸಾಲಿನಲ್ಲಿ ₹ 1 ಕೋಟಿ ಬದಲು ₹ 2 ಕೋಟಿ ನೀಡಲು ಸೂಚನೆ ನೀಡಲಾಗಿದೆ. ಹೀಗಾಗಿ, ಈ ವರ್ಷ ₹ 600 ಕೋಟಿ ಬಿಡುಗಡೆ ಮಾಡಲಾಗಿದೆ. ಅಲ್ಲದೆ, 2021–19, 20, 21ನೇ ಸಾಲಿನ ಬಾಕಿ ಅನುದಾನ ಬಿಡುಗಡೆಗೂ ಸೂಚಿಸಲಾಗಿದೆ’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಶಾಸಕರ ನಿಧಿಗೆ ಸಂಬಂಧಿಸಿ ದಂತೆ ಪರಿಷತ್ ಸದಸ್ಯರ ಜೊತೆ ಶನಿವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ‘ಪ್ರತಿ ವರ್ಷ ಜೂನ್ ಅಂತ್ಯದ ಒಳಗಾಗಿ ಕ್ರಿಯಾ ಯೋಜನೆ ಅಂತಿಮಗೊಳಿಸಿ ಕಾಮಗಾರಿ ಪ್ರಗತಿಗೆ ಅನುದಾನ ಬಿಡುಗಡೆಗೆ ಒಪ್ಪಿಗೆ ಪಡೆಯಬೇಕು. ಕ್ಷೇತ್ರಾವಾರು ಬದಲು ಜಿಲ್ಲಾವಾರು ಅನುದಾನ ಬಿಡುಗಡೆಗೆ ಯೋಜನಾ ಇಲಾಖೆ ಆದೇಶ ಹೊರಡಿಸಿದೆ’ ಎಂದರು.

‘ಜಿಲ್ಲಾಧಿಕಾರಿಗಳು ಶಾಸಕರ ನಿಧಿಯಡಿ ಲಭ್ಯವಿರುವ ಅನುದಾನವನ್ನು ಪ್ರತಿ ಕ್ಷೇತ್ರಕ್ಕೆ ₹ 2 ಕೋಟಿ ಪಾವತಿಗೆ ಸೂಚಿಸಲಾಗಿದೆ. ಅನು ದಾನ ಬಿಡುಗಡೆ ವಿಷಯದಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿಸಿದರೆ ಶಾಸಕರು ನನ್ನ ಗಮನಕ್ಕೆ ತರಬಹುದು. ದೂರು ಬಂದರೆ ನಿರ್ಲಕ್ಷ್ಯ ತೋರಿಸುವ ಅಧಿಕಾರಿಗಳ ವಿರುದ್ಧ ಸಂಬಂಧಿಸಿದವರ ಗಮನಕ್ಕೆ ತರಲಾಗುವುದು’ ಎಂದರು.



ವಾರ್ಡ್ ಸಮಿತಿಗೆ ₹60 ಲಕ್ಷ ಜನಾಗ್ರಹ ಸಂಸ್ಥೆ ಸ್ವಾಗತ

ಬೆಂಗಳೂರು: ಬಿಬಿಎಂಪಿಯ 2021–22ನೇ ಸಾಲಿನ ಬಜೆಟ್‌ನಲ್ಲಿ ವಾರ್ಡ್ ಸಮಿತಿಗಳಿಗೆ ₹60 ಲಕ್ಷ ಅನುದಾನ ನಿಗದಿ ಮಾಡಿರುವುದು ಶ್ಲಾಘನಾರ್ಹ ಕ್ರಮ ಎಂದು ಜನಾಗ್ರಹ ಸಂಸ್ಥೆ ಹೇಳಿದೆ.

‘ನಾಗರಿಕರು ನಿರ್ಧರಿಸುವ ಅಭಿವೃದ್ಧಿ ಕೆಲಸಗಳಿಗಾಗಿ ಪ್ರತಿ ವಾರ್ಡ್‌ಗೆ ₹60 ಲಕ್ಷವನ್ನು ನಿಗದಿ ಮಾಡಿರುವುದು ನಗರ ಬಜೆಟ್‌ನಲ್ಲಿ ನಾಗರಿಕರ ಸಹಭಾಗಿತ್ವವನ್ನು ಉತ್ತೇಜಿಸುವ ಹೆಜ್ಜೆಯಾಗಿದೆ’ ಎಂದು ಸಂಸ್ಥೆಯ ನಾಗರಿಕ ಸಹಭಾಗಿತ್ವ ವಿಭಾಗದ ಮುಖ್ಯಸ್ಥೆ ಸಪ್ನಾ ಕರೀಂ ಹೇಳಿದ್ದಾರೆ.

‘ದೇಶದಲ್ಲಿ ವಾರ್ಡ್ ಸಮಿತಿ ಹೊಂದಿರುವ ನಗರಗಳಲ್ಲಿ ಬೆಂಗಳೂರು ಕೂಡಾ ಒಂದು. ವಾರ್ಡ್ ಸಮಿತಿಗೆ ಅನುದಾನ ಮೀಸಲಿಟ್ಟಿರುವುದು ಬಿಬಿಎಂಪಿಯು ಈ ಸಮಿತಿಗಳನ್ನು ಬಲಪಡಿಸುವತ್ತ ಹೆಜ್ಜೆ ಇಡುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ’ ಎಂದು ಸಂಸ್ಥೆಯ ಶ್ರೀನಿವಾಸ ಅಲವಿಲ್ಲಿ ಹೇಳಿದ್ದಾರೆ

ಅಭ್ಯರ್ಥಿಗಳ ಆಯ್ಕೆಗೆ ಅರ್ಜಿ ಆಹ್ವಾನ– ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನ ಪರಿಷತ್ ಸೇರಿದಂತೆ ಮುಂಬರುವ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳ ಆಯ್ಕೆಗೆ ಅರ್ಜಿ ಆಹ್ವಾನಿಸಿದ್ದು, 10 ದಿನ ಕಾಲಾವಕಾಶ ನೀಡಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು.

ಚುನಾವಣೆಗೆ ಪೂರ್ವತಯಾರಿ ಮತ್ತು ಪಕ್ಷ ಸಂಘಟನೆ ಕುರಿತು ಪಕ್ಷದ ಜಿಲ್ಲಾ ಘಟಕಗಳ ನಾಯಕರ ಜೊತೆ ಶನಿವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ‘ಈಗಾಗಲೇ ಪದವೀಧರ ಕ್ಷೇತ್ರದ ಅಭ್ಯರ್ಥಿಗೆ ಅರ್ಜಿ ಕರೆಯಲಾಗಿದೆ. ಇತರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಅಭ್ಯರ್ಥಿಗಳ ಆಯ್ಕೆಗೆ ಶೀಘ್ರದಲ್ಲೇ ಅರ್ಜಿ ಆಹ್ವಾನಿಸಲಾಗುವುದು’ ಎಂದರು.

‘ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ‘ಗಾಂಧೀಜಿ ಗ್ರಾಮ ಸ್ವರಾಜ್ಯ’ ಎಂಬ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಪಕ್ಷದ ಎಲ್ಲ ನಾಯಕರು ಅಕ್ಟೋಬರ್ ತಿಂಗಳಲ್ಲಿ ದಿನಕ್ಕೆ ಎರಡು ಗ್ರಾಮ ಪಂಚಾಯಿತಿಯಲ್ಲಿ ಪಕ್ಷದ ಸಭೆ ನಡೆಸುವಂತೆ ಸೂಚನೆ ನೀಡಲಾಗಿದೆ’ ಎಂದರು.

‘ಎನ್‌ಇಪಿ ಎಂದರೆ ನಾಗಪುರ ಶಿಕ್ಷಣ ನೀತಿ...

‘ಬಿಜೆಪಿ ಸರ್ಕಾರ ತರಾತುರಿಯಲ್ಲಿ ಜಾರಿಗೆ ತರಲು ಮುಂದಾಗಿರುವ ‘ಎನ್‌ಇಪಿ’ ಎಂದರೆ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಅಲ್ಲ, ‘ನಾಗಪುರ ಶಿಕ್ಷಣ ನೀತಿ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಸಂಸತ್ತಿನಲ್ಲಿ ಚರ್ಚೆಯಾಗದ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತರಲು ಹೊರಟಿರುವುದರ ವಿರುದ್ಧ ಪಕ್ಷ ಹೋರಾಟ ಮಾಡಲಿದೆ. ವಿಧಾನ ಮಂಡಲ ಅಧಿವೇಶನದಲ್ಲಿ ಚರ್ಚೆ ಮಾಡದೆ ಅದನ್ನು ಜಾರಿಗೊಳಿಸಲು ಅವಕಾಶ ನೀಡುವುದಿಲ್ಲ’ ಎಂದರು.

ಪ್ರತಿಭಟನೆ

ಎತ್ತರಿಸಿದ ಮಾರ್ಗಕ್ಕಾಗಿ 67 ಮರಗಳನ್ನು ಕಡಿಯಲು ಮುಂದಾಗಿರುವ ಅಧಿಕಾರಿಗಳ ಕ್ರಮವನ್ನು ಖಂಡಿಸಿ ನಮ್ಮ ಬೆಂಗಳೂರು ಫೌಂಡೇಷನ್ ಮತ್ತು ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರು ಹಾಗೂ ನಾಗರಿಕರು ಕೋರಮಂಗಲದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಸಾರ್ವಜನಿಕರ ಆಗ್ರಹ, ಕಾರಿನ ಮಾಲೀಕ–ಏಜೆನ್ಸಿ ಪ್ರತಿನಿಧಿ ನಡುವೆ ಸಂಧಾನ?

ಟೋಯಿಂಗ್ ಸಿಬ್ಬಂದಿ ನಿರ್ಲಕ್ಷ್ಯ; ‘ಕಿಯಾ’ ಕಾರು ಜಖಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೋ ಪಾರ್ಕಿಂಗ್’ ಸ್ಥಳದಲ್ಲಿ ನಿಲ್ಲಿಸಿದ್ದ ‘ಕಿಯಾ’ ಕಾರು ಟೋಯಿಂಗ್ ಮಾಡುವ ವೇಳೆ ಸಿಬ್ಬಂದಿ ನಿರ್ಲಕ್ಷ್ಯ ವಹಿಸಿರುವ ಆರೋಪ ವ್ಯಕ್ತವಾಗಿದ್ದು, ಕಾರಿನ ಮುಂಭಾಗ ಜಖಂಗೊಂಡಿದೆ. ಇದರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಬಾಣಸವಾಡಿ ಸಂಚಾರ ಠಾಣೆ ವ್ಯಾಪ್ತಿಯ ಕಮ್ಮನಹಳ್ಳಿಯಲ್ಲಿ ಇತ್ತೀಚೆಗೆ ಈ ಘಟನೆ ನಡೆದಿದೆ. ಟೋಯಿಂಗ್ ಸಿಬ್ಬಂದಿ ನಿರ್ಲಕ್ಷ್ಯದ ವಿಡಿಯೊವನ್ನು ಸಾರ್ವಜನಿಕರೊಬ್ಬರು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದಾರೆ.

‘ದುಬಾರಿ ಬೆಲೆಯ ಕಾರನ್ನು ಬೇಕಾಬಿಟ್ಟಿ ಎಳೆದಾಡಿ ಮುಂಭಾಗ ಜಖಂ ಮಾಡಿರುವ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

ಆಗಿದ್ದೇನು?: ಉತ್ತರ ಭಾರತದ ವ್ಯಕ್ತಿಯೊಬ್ಬರು ತಮ್ಮ ‘ಕಿಯಾ’ ಕಾರನ್ನು ನೋ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿದ್ದರು. ಸ್ಥಳಕ್ಕೆ ಬಂದಿದ್ದ ‘ಟೈಗರ್’ ವಾಹನ (ಕೆಎ 51 ಎಇ 8775) ಸಿಬ್ಬಂದಿ, ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ಸಮ್ಮುಖದಲ್ಲಿ ಕಾರು ಟೋಯಿಂಗ್ ಮಾಡಲು ಮುಂದಾಗಿದ್ದರು.

ಕಾರಿನ ಮುಂಭಾಗದ ಎರಡು ಚಕ್ರಗಳಿಗೆ ಕ್ರೇನ್‌ನ ಕಬ್ಬಿಣದ ರಾಡ್‌ಗಳನ್ನು ಹಾಕಿದ್ದ ಸಿಬ್ಬಂದಿ, ಕಾರು ಮೇಲೆತ್ತಲು ಮುಂದಾಗಿದ್ದರು. ಆದರೆ, ಟೋಯಿಂಗ್ ಸಾಧ್ಯವಾಗಿರಲಿಲ್ಲ. ಇದೇ ರೀತಿ ನಾಲ್ಕೈದು ಬಾರಿ ಯತ್ನಿಸಿದಾಗ ಕಾರಿನ ಬಂಪರ್ ಮುರಿಯಿತು. ಅಷ್ಟಕ್ಕೆ ಬಿಡದ ಸಿಬ್ಬಂದಿ, ಪದೇ ಪದೇ ಕಾರು ಮೇಲೆತ್ತಲು ಯತ್ನಿಸಿದ್ದರು. ಇದರಿಂದ ಕಾರಿನ ಹೆಡ್‌ಲೈಟ್‌ಗಳು ಒಡೆದವು. ಮುಂಭಾಗ ಸಂಪೂರ್ಣ ಜಖಂಗೊಂಡು, ಎಂಜಿನ್ ಭಾಗಗಳು ಹೊರಗೆ ಬಿದ್ದಿದ್ದವು. ಈ ಸ್ಥಿತಿಯಲ್ಲೂ ಸಿಬ್ಬಂದಿ, ಟೋಯಿಂಗ್ ಮುಂದುವರಿಸಿದ್ದರು.

ಟೋಯಿಂಗ್ ಸಿಬ್ಬಂದಿ ಕೆಲಸ ನೋಡಿದ್ದ ಸ್ಥಳೀಯರು, ‘ಒಳ್ಳೆಯ ಕೆಲಸ ಮಾಡುತ್ತಿದ್ದೀರಾ. ಕಾರು ಸಂಪೂರ್ಣ ಗುಜರಿ ಸೇರುವವರೆಗೂ ಬಿಡಬೇಡಿ’ ಎಂದು ಕೂಗಿ ಹೇಳಿ ಚಪ್ಪಾಳೆ ತಟ್ಟಿ ವ್ಯಂಗ್ಯವಾಡಿದರು. ಸಿಬ್ಬಂದಿ ಕೆಲಸಕ್ಕೆ ಆಕ್ರೋಶ ಸಹ ವ್ಯಕ್ತಪಡಿಸಿದರು.

ಸಂಧಾನ: ವಿಡಿಯೊ ಎಲ್ಲೆಡೆ ಹರಿದಾಡುತ್ತಿದ್ದಂತೆ ಟೋಯಿಂಗ್ ಸಿಬ್ಬಂದಿ ನಿರ್ಲಕ್ಷ್ಯಕ್ಕೆ ಆಕ್ರೋಶ ವ್ಯಕ್ತವಾಗಿತ್ತು. ‘ಕಿಯಾ’ ಕಾರಿನ ಮಾಲೀಕ ಯಾವುದೇ ದೂರು ನೀಡಲಿಲ್ಲ. ಟೋಯಿಂಗ್ ಏಜೆನ್ಸಿ ಪ್ರತಿನಿಧಿಯೇ ಕಾರಿನ ಮಾಲೀಕನ್ನು ಸಂಪರ್ಕಿಸಿ ಸಂಧಾನ ಮಾಡಿಕೊಂಡಿದ್ದಾರೆ ಎಂದು ಗೊತ್ತಾಗಿದೆ.

ನಿಯಮ ಪಾಲನೆಗೆ ಪೊಲೀಸರಿಗೆ ಗೃಹಸಚಿವ ತಾಕೀತು

'ನೋ ಪಾರ್ಕಿಂಗ್ ಪ್ರದೇಶದಲ್ಲಿ ನಿಲ್ಲಿಸುವ ವಾಹನಗಳನ್ನು ಟೋಯಿಂಗ್ ಮಾಡುವ ಸಂದರ್ಭದಲ್ಲಿ ಜಾರಿಯಲ್ಲಿರುವ ನಿಯಮಗಳನ್ನು ಪೊಲೀಸರು ಕಡ್ಡಾಯವಾಗಿ ಪಾಲಿಸಬೇಕು‘ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಪೊಲೀಸರಿಗೆ ತಾಕೀತು ಮಾಡಿದ್ದಾರೆ.

ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಮತ್ತು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ರವಿಕಾಂತೇಗೌಡ ಅವರೊಂದಿಗೆ ಶುಕ್ರವಾರ ಸಭೆ ನಡೆಸಿದ ಸಚಿವ, ವಾಹನಗಳ ಟೋಯಿಂಗ್ ವೇಳೆ ನಿಯಮ ಉಲ್ಲಂಘನೆ ಆಗದಂತೆ ತಡೆಯಬೇಕೆಂದು ಸೂಚಿಸಿದ್ದಾರೆ.

'ಟೋಯಿಂಗ್ ಮೊದಲು ಸೈರನ್ ಮೊಳಗಿಸಬೇಕು ಮತ್ತು ಧ್ವನಿವರ್ಧಕದ ಮೂಲಕ ಎಚ್ಚರಿಕೆ ನೀಡಬೇಕು. ಸ್ಥಳದಲ್ಲೇ ವಾಹನ ಮಾಲೀಕರು ಇದ್ದರೆ, ಟೋಯಿಂಗ್ ಮಾಡಬಾರದು. ನೋ ಪಾರ್ಕಿಂಗ್ ಉಲ್ಲಂಘನೆಗೆ ಸ್ಥಳದಲ್ಲೇ ಮಾಲೀಕರಿಗೆ ದಂಡ ಮಾತ್ರ ವಿಧಿಸಬೇಕು’ ಎಂದೂ ನಿರ್ದೇಶನ ನೀಡಿದ್ದಾರೆ.



ಬಾಣಸವಾಡಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಟೋಯಿಂಗ್ ವೇಳೆ ಕಿಯಾ ಕಾರು ಜಖಂಗೊಂಡಿರುವುದು

6 ವಿದ್ಯಾರ್ಥಿನಿಯರಿಗೆ ಕೊರೊನಾ ಸೋಂಕು

ಕೆಜಿಎಫ್: ನಗರದ ಆಂಡರ್‌ಸನ್ ಪೇಟೆಯಲ್ಲಿರುವ ಖಾಸಗಿ ನರ್ಸಿಂಗ್ ಕಾಲೇಜಿನಲ್ಲಿ ಶನಿವಾರ ಪುನಃ 6 ಕೋವಿಡ್ ಪ್ರಕರಣಗಳು ಪತ್ತೆಯಾಗಿದೆ. ಇದರಿಂದ ಕಾಲೇಜಿನಲ್ಲಿ ಒಟ್ಟು 71 ಕೋವಿಡ್ ಪ್ರಕರಣಗಳು ವರದಿಯಾಗಿದೆ.

ಕೇರಳದಿಂದ ಬಂದ ವಿದ್ಯಾರ್ಥಿನಿಯರ ಗಂಟಲು ದ್ರವ ಪರೀಕ್ಷೆಯನ್ನು ಆರೋಗ್ಯ ಇಲಾಖೆಯ ಸಿಬ್ಬಂದಿ ನಡೆಸಿದ್ದರು. ಪರೀಕ್ಷೆ ನಡೆಸಿದವರ ಪೈಕಿ ಆರು ವಿದ್ಯಾರ್ಥಿನಿಯರು ಸೋಂಕಿಗೆ ಒಳಗಾಗಿರುವುದು ಪತ್ತೆಯಾಗಿದೆ ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ಸುನಿಲ್ ತಿಳಿಸಿದ್ದಾರೆ.

ಕಾಲೇಜು ಆಡಳಿತ ಮಂಡಳಿಗೆ ಆರೋಗ್ಯ ಇಲಾಖೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಿದ್ದರೂ, ಇದುವರೆಗೂ ಸಮಜಾಯಿಸಿ ನೀಡಿಲ್ಲ ಎಂದು ಮೂಲಗಳು ತಿಳಿಸಿವೆ.

ಹೈದರಾಬಾದ್ ರೇಸ್

ಫಾಲ್ಕನ್ ಎಡ್ಜ್ ಗೆಲುವ ನಿರೀಕ್ಷೆ

ಡೆಕ್ಕನ್ ಕೋಲ್ಟ್ಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾಲ್ಕನ್ ಎಡ್ಜ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ

1ನೇ ರೇಸ್: ಹಾಟ್ ಸೀಟ್ 10, ಬ್ಲೂ ಲೇಬಲ್ 1, ಆರ್ಯ 4
2ನೇ ರೇಸ್: ಎನ್.ಆರ್.ಐ ಸುಗರ್ 7, ಸ್ಯಾಲಿ 10, ಚಾಲೆಂಜರ್ 4
3ನೇ ರೇಸ್: ಮುಎಸರ್ 6, ಕಲಾಷೆಲ್ ಬ್ಯಾಟಲ್ 3, ಕಾಸ್ಮಿಕ್ ರನ್ 1
4ನೇ ರೇಸ್: ಪ್ರೈವೇಟ್ ಎಂಪೈರ್ 2, ಕಿಂಗ್ ಮೇಕರ್ 5, ಒನ್ಸ್ ಮೋರ್ 7
5ನೇ ರೇಸ್: ಬ್ರಿಸ್ಬೇನ್ 4, ಸಿಯವಾಶ್ 2, ರಾಯಲ್ ಪಾಲ್ 8
6ನೇ ರೇಸ್: ಫಾಲ್ಕನ್ ಎಡ್ಜ್ 3, ಏಂಜೆಲಿಕೊ 1, ನಾಟಿ ಡ್ಯಾನ್ಸರ್ 6
7ನೇ ರೇಸ್: ಬ್ಯಾಲಿಯಸ್ 3, ಮ್ಯಾಕ್ಸ್ 7, ಫುಲ್ ವಾಲ್ಯೂಮ್ 1

ಉತ್ತಮ ಬೆಟ್: ಎನ್.ಆರ್.ಐ ಸುಗರ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
3,4,5,6,7	1,2,3,4	4,5,6,7

1ನೇ ಟ್ರಿಬಲ್	2ನೇ ಟ್ರಿಬಲ್
2,3,4	5,6,7

ಕಾಮಾಕ್ಷಿಪಾಳ್ಯ ಪೊಲೀಸರಿಂದ ಆರೋಪಿ ಬಂಧನ

ಡ್ರಗ್ಸ್ ಮಾರುತ್ತಿದ್ದ 'ಪೊಲೀಸ್ ಮಾಹಿತಿದಾರ'

ಪ್ರಜಾವಾಣಿ ವಾರ್ತೆ

ರತನ್ ಲಾಲ್

ಬೆಂಗಳೂರು: 'ನಾನೊಬ್ಬ ಪೊಲೀಸ್ ಮಾಹಿತಿದಾರ. ನಾನು ಹೇಳಿದಂತೆ ಪೊಲೀಸರು ಕೇಳುತ್ತಾರೆ' ಎಂದು ಹೇಳಿಕೊಂಡು ನಗರದೆಲ್ಲೆಡೆ ಸುತ್ತಾಡಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ರತನ್ ಲಾಲ್ (53) ಎಂಬಾತನನ್ನು ಕಾಮಾಕ್ಷಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ರಾಜರಾಜೇಶ್ವರಿನಗರದಲ್ಲಿ ವಾಸವಿದ್ದ ರತನ್ ಲಾಲ್, ಎಂಟು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಇತ್ತೀಚೆಗೆ ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ತನ್ನನ್ನು ಬಂಧಿಸಲು ಬಂದಿದ್ದಾಗ ನಾಟಕ ಮಾಡಿ, ಅವರನ್ನೇ ಅಪಹರಣಕಾರರೆಂದು ಸುಳ್ಳು ಸುದ್ದಿ ಹಬ್ಬಿಸಿದ್ದ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಡ್ರಗ್ಸ್ ಮಾರುತ್ತಿದ್ದ ಸಂಗತಿ ಬಯಲಾಯಿತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಬಳಿ ಗಾಂಜಾ, ಅಫೀಮು ಹಾಗೂ ಏರ್ ಗನ್ ಸಿಕ್ಕಿದೆ. ಆರೋಪಿ ಕೃತ್ಯದಲ್ಲಿ ಕೆಲ ಪೊಲೀಸರು ಶಾಮೀಲಾಗಿರುವ ಮಾಹಿತಿ ಇದೆ' ಎಂದು ತಿಳಿಸಿವೆ.

ಪೆಡ್ಲರ್ ಜೊತೆ ಒಡನಾಟ: 'ಹೊರ ರಾಜ್ಯದಿಂದ ಬಂದು ನಗರದಲ್ಲಿ ನೆಲೆಸಿರುವ ಡ್ರಗ್ಸ್ ಪೆಡ್ಲರ್‌ಗಳ ಜೊತೆ ಆರೋಪಿ ಒಡನಾಟ ಹೊಂದಿದ್ದ. 'ನಾನು ಪೊಲೀಸ್ ಮಾಹಿತಿದಾರ. ನಾನು ಕೇಳಿದಷ್ಟು ಡ್ರಗ್ಸ್ ಹಾಗೂ ಹಣ ಕೊಡಬೇಕು. ಇಲ್ಲದಿದ್ದರೆ, ಪೊಲೀಸರಿಗೆ ಮಾಹಿತಿ ನೀಡುತ್ತೇನೆ' ಎಂದು ಪೆಡ್ಲರ್‌ಗಳನ್ನು ಬೆದರಿಸುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತನ್ನ ಮಾತು ಕೇಳದವರ ಬಗ್ಗೆ ಆರೋಪಿ, ಪೊಲೀಸರಿಗೆ ಮಾಹಿತಿ ನೀಡುತ್ತಿದ್ದ. ಆತನ ಮಾತು ನಂಬುತ್ತಿದ್ದ ಪೊಲೀಸರು, ಡ್ರಗ್ಸ್ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸುತ್ತಿದ್ದರು. ಡ್ರಗ್ಸ್ ಸಹ ಜಪ್ತಿ ಮಾಡುತ್ತಿದ್ದರು. 'ನಾನೇ ಬಂಧಿಸುವಂತೆ ಮಾಡಿದ್ದೇನೆ' ಎಂದು ಬೇರೆ ಡ್ರಗ್ಸ್ ಪೆಡ್ಲರ್‌ಗಳಿಗೆ ಹೇಳುತ್ತಿದ್ದ ಆರೋಪಿ, ಅವರಿಂದ ಹಣ ಹಾಗೂ ಡ್ರಗ್ಸ್ ಪಡೆಯುತ್ತಿದ್ದ. ಡ್ರಗ್ಸ್ ಅನ್ನು ಗ್ರಾಹಕರಿಗೆ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದ' ಎಂದೂ ತಿಳಿಸಿವೆ.

ಆರೋಪಿ ಹಿಡಿದುಕೊಟ್ಟ ಕರೆ: 'ಡ್ರಗ್ಸ್ ಪ್ರಕರಣದ ತನಿಖೆ ನಡೆಸುತ್ತಿದ್ದ ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸಲು ಕಾಮಾಕ್ಷಿಪಾಳ್ಯಕ್ಕೆ ಇತ್ತೀಚೆಗೆ ಬಂದಿದ್ದರು. ಆರೋಪಿಗೆ ಆತ್ಮೀಯನಾಗಿದ್ದ ರತನ್‌ಲಾಲ್ ಸ್ಥಳಕ್ಕೆ ಬಂದು, ಪೊಲೀಸರನ್ನೇ ಅಪಹರಣಕಾರರೆಂದು ಸುಳ್ಳು ಸುದ್ದಿ ಹಬ್ಬಿಸಿದ್ದ' ಎಂದೂ ಮೂಲಗಳು ಹೇಳಿವೆ.

'ಆರೋಪಿ ಹಾಗೂ ಪೊಲೀಸರ ನಡುವಿನ ಗಲಾಟೆ ನೋಡಿದ್ದ ಸ್ಥಳೀಯರೊಬ್ಬರು ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು. ಸ್ಥಳಕ್ಕೆ ಹೋಗಿದ್ದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ಆರೋಪಿ ರತನ್ ಲಾಲ್‌ನನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು' ಎಂದೂ ತಿಳಿಸಿವೆ.

'ಬಿಜೆಪಿ ಶಾಸಕನ ಪತ್ನಿ ತಮ್ಮ'

'ಠಾಣೆಯಲ್ಲಿ ಕೂಗಾಡಿದ್ದ ರತನ್ ಲಾಲ್, 'ನಾನು ಬಿಜೆಪಿ ಶಾಸಕರೊಬ್ಬರ ಪತ್ನಿಯ ತಮ್ಮ. ನನ್ನನ್ನು ಠಾಣೆಯಲ್ಲಿ ಕೂರಿಸಿದ್ದಕ್ಕೆ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಪೊಲೀಸರನ್ನು ಬೆದರಿಸಿದ್ದ' ಎಂದೂ ಮೂಲಗಳು ಹೇಳಿವೆ.

ಪೌಡರ್ ಡಬ್ಬಿಯಲ್ಲಿ ಹೆರಾಯಿನ್: ಆರೋಪಿ ಬಂಧನ

ಡ್ರಗ್ಸ್ ಮಾರಾಟ ಆರೋಪದಡಿ ಸುಹೇಲ್ (34) ಎಂಬಾತನನ್ನು ಬಂಧಿಸಿರುವ ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ಪೊಲೀಸರು, ಪೌಡರ್ ಹಬ್ಬಿಯಲ್ಲಿ ಹೆರಾಯಿನ್ ಡ್ರಗ್ಸ್ ಬಚ್ಚಿಟ್ಟು ನಗರಕ್ಕೆ ತಂದು ಮಾರುತ್ತಿದ್ದನೆಂಬ ಸಂಗತಿಯನ್ನು ಪತ್ತೆ ಮಾಡಿದ್ದಾರೆ.

'ಎಚ್‌ಬಿಆರ್ ಲೇಔಟ್‌ಗೆ ಬಂದಿದ್ದ ಆರೋಪಿ ಸುಹೇಲ್, ಹೆರಾಯಿನ್ ಪೊಟ್ಟಣಗಳನ್ನು ಗ್ರಾಹಕರಿಗೆ ಮಾರಲು ಯತ್ನಿಸುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆತನನ್ನು ಬಂಧಿಸಲಾಗಿದೆ. ಇನ್ನೊಬ್ಬ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'₹ 2 ಲಕ್ಷ ಮೌಲ್ಯದ ಹೆರಾಯಿನ್ ಹಾಗೂ ಪೌಡರ್ ಡಬ್ಬಿಯನ್ನು ಜಪ್ತಿ ಮಾಡಲಾಗಿದೆ. ಆರೋಪಿ ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ತಿಳಿಸಿವೆ.

ವಿಮಾನದಲ್ಲಿ ಸಾಗಣೆ: 'ಮಣಿಪುರದ ಬಿಷ್ಣುಪುರ ಜಿಲ್ಲೆಯ ಗ್ರಾಮದಲ್ಲಿ ಆರೋಪಿ ಹೆರಾಯಿನ್ ಖರೀದಿಸುತ್ತಿದ್ದ. ಅದನ್ನೇ ಪೌಡರ್ ಡಬ್ಬಿಯಲ್ಲಿ ತುಂಬಿ, ಯಾರಿಗೂ ಅನುಮಾನ ಬಾರದಂತೆ ನಗರಕ್ಕೆ ತರುತ್ತಿದ್ದ' ಎಂದೂ ಮೂಲಗಳು ಹೇಳಿವೆ.

'ಪ್ರತಿ ಬಾರಿಯೂ ಆರೋಪಿ ವಿಮಾನದಲ್ಲಿ ನಗರಕ್ಕೆ ಬರುತ್ತಿದ್ದ. ನಗರದಲ್ಲೇ ವಸತಿಗೃಹದಲ್ಲಿ ವಾಸವಿದ್ದುಕೊಂಡು, ಚಿಕ್ಕ ಪೊಟ್ಟಣಗಳಲ್ಲಿ ಹೆರಾಯಿನ್ ತುಂಬುತ್ತಿದ್ದ. ಅದೇ ಪೊಟ್ಟಣಗಳನ್ನು ಗ್ರಾಹಕರಿಗೆ ಮಾರುತ್ತಿದ್ದ' ಎಂದೂ ತಿಳಿಸಿವೆ.

ಗಾಂಜಾ; ಆರೋಪಿಯ ₹ 1.68 ಕೋಟಿ ಆಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಗಾಂಜಾ ಮಾರಾಟ ಪ್ರಕರಣದಲ್ಲಿ ಬಂಧಿಸಲಾಗಿದ್ದ ಆರೋಪಿ ಅಂಜಯ್ ಕುಮಾರ್ ಸಿಂಗ್ (54) ಎಂಬಾತನಿಗೆ ಸೇರಿದ್ದ ₹ 1.68 ಕೋಟಿ ಮೌಲ್ಯದ ಆಸ್ತಿಯನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಎನ್‌ಡಿಪಿಎಸ್ ಕಾಯ್ದೆ ಪ್ರಕರಣದಲ್ಲಿ ಆರೋಪಿಯಿಂದ ಆಸ್ತಿ ಜಪ್ತಿ ಮಾಡಿದ ರಾಜ್ಯದ ಮೊದಲ ಪ್ರಕರಣ ಇದಾಗಿದೆ.

'ಬಿಹಾರದ ಅಂಜಯ್ ಕುಮಾರ್, 2016ರಲ್ಲಿ ಬೆಂಗಳೂರಿಗೆ ಬಂದಿದ್ದ. ಆನೇಕಲ್ ತಾಲ್ಲೂಕಿನ ಬ್ಯಾಗಡದೇವನಹಳ್ಳಿಯಲ್ಲಿ ವಾಸವಿದ್ದ. ಒಡಿಶಾ ಹಾಗೂ ಆಂಧ್ರಪ್ರದೇಶದಿಂದ ಡ್ರಗ್ಸ್ ಖರೀದಿಸಿ ತಂದು ನಗರದಲ್ಲಿ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೂರ್ಯ ಸಿಟಿ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು. ಆತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದು ಕೇಂದ್ರ ವಲಯದ ಐಜಿಪಿ ಚಂದ್ರಶೇಖರ್ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಇಲ್ಲಿ ಹೇಳಿದರು.

'ಆರೋಪಿ ಅಂಜಯ್ ಕುಮಾರ್, ತನ್ನ ಸಹೋದರನ ಪುತ್ರ ರಾಹುಲ್ ಹಾಗೂ ಕಾರು ಚಾಲಕ ಮುರಳೀಧರ್ ಎಂಬುವರನ್ನು ಬಳಸಿಕೊಂಡು ಡ್ರಗ್ಸ್ ಮಾರುತ್ತಿದ್ದ. ನಗರದ ಕೆಲ ಕಂಪನಿಗಳ ಉದ್ಯೋಗಿಗಳು, ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಾರ್ಮಿಕರು ಆರೋಪಿ ಬಳಿ ಗಾಂಜಾ ಖರೀದಿಸುತ್ತಿದ್ದರು.'

'ಡ್ರಗ್ಸ್ ದಂಧೆಯಿಂದ ಕೋಟ್ಯಂತರ ರೂಪಾಯಿ ಸಂಪಾದಿಸಿದ್ದ ಆರೋಪಿ, ಪತ್ನಿ ಶೀಲಾದೇವಿ ಹೆಸರಿನಲ್ಲಿ ಆಸ್ತಿ ಮಾಡಿದ್ದ. ಆತನ ಚರಾಸ್ತಿ ಹಾಗೂ ಸ್ಥಿರಾಸ್ತಿ ಬಗ್ಗೆ ದಾಖಲೆ ಸಮೇತ ಮಾಹಿತಿ ಸಂಗ್ರಹಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಆಸ್ತಿ ಜಪ್ತಿಗೆ ನ್ಯಾಯಾಲಯ ಅನುಮತಿ ನೀಡಿತ್ತು.'

'30x40 ಚದರ ಅಡಿ ಅಳತೆಯ ನಿವೇಶನ, 60x40 ಅಳತೆಯ ಎರಡು ನಿವೇಶನ, ಸತ್ಕೀರ್ಥಿ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿರುವ ಒಂದು ಫ್ಲ್ಯಾಟ್, ಸ್ಕಾರ್ಪಿಯೊ ಕಾರು ಹಾಗೂ ಬ್ಯಾಂಕ್ ಖಾತೆಯಲ್ಲಿದ್ದ ₹ 9.75 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದೂ ಹೇಳಿದರು.

ಪಶ್ಚಿಮ ಬಂಗಾಳ ಪೊಲೀಸರಿಂದ ಯುವಕನ ಬಂಧನ

ಕಡಬ: ಯುವತಿಯ ಫೇಸ್‌ಬುಕ್ ಖಾತೆಯನ್ನು ದುರ್ಬಳಕೆ ಮಾಡಿಕೊಂಡ ಆರೋಪದಲ್ಲಿ ಕಡಬದ ಯುವಕನನ್ನು ಪಶ್ಚಿಮ ಬಂಗಾಳದ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿರುವ ಪಶ್ಚಿಮ ಬಂಗಾಳದ ಯುವತಿಗೆ ಸಂಬಂಧಿಸಿದ ಖಾತೆಯನ್ನು ಕಡಬ ತಾಲ್ಲೂಕಿನ ನೂಜಿಬಾಳ್ತಿಲದ ಬಳ್ಳೇರಿ ನಿವಾಸಿ ಸಂಜಯ್ ಕೃಷ್ಣ ಎಂಬಾತ ದುರುಪಯೋಗ ಪಡಿಸಿಕೊಂಡ ಬಗ್ಗೆ ಯುವತಿಯು ಪಶ್ಚಿಮ ಬಂಗಾಳದಲ್ಲಿ ದೂರು ದಾಖಲಿಸಿದ್ದರು.

ಪಶ್ಚಿಮ ಬಂಗಾಳ ಪೊಲೀಸರು ಕಡಬ ಪೊಲೀಸರ ಸಹಾಯದಿಂದ ಸಂಜಯ್ ಕೃಷ್ಣನನ್ನು ಬಂಧಿಸಿ, ಪುತ್ತೂರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಆರೋಪಿಯನ್ನು ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ನೀಡಲಾಗಿದ್ದು, ಪಶ್ಚಿಮ ಬಂಗಾಳಕ್ಕೆ ಕರೆದೊಯ್ಯಲಾಗಿದೆ.

ಚಾಕುವಿನಿಂದ ಇರಿದು ಕೊಲೆ

ಬೆಂಗಳೂರು: ಶ್ರೀರಾಮಪುರ ಠಾಣೆ ವ್ಯಾಪ್ತಿಯಲ್ಲಿ ಆನಂದ್ (38) ಎಂಬುವರನ್ನು ಚಾಕುವಿನಿಂದ ಇರಿದು ಶನಿವಾರ ರಾತ್ರಿ ಕೊಲೆ ಮಾಡಲಾಗಿದೆ. ಈ ಸಂಬಂಧ ಆರೋಪಿ ಲೋಹಿತ್ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಸ್ಥಳೀಯ ನಿವಾಸಿ ಆನಂದ್, ಅರುಂಧತಿ ಉದ್ಯಾನ ಬಳಿ ರಾತ್ರಿ 7.30ರ ಸುಮಾರಿಗೆ ಹೊರಟಿದ್ದರು. ಅವರ ಜೊತೆ ಜಗಳ ತೆಗೆದಿದ್ದ ಲೋಹಿತ್, ಚಾಕುವಿನಿಂದ ತೊಡೆಗೆ ಇರಿದಿದ್ದ. ಗುಪ್ತಾಂಗದ ಬಳಿ ತೀವ್ರ ಗಾಯವಾಗಿ ರಕ್ತ ಸೋರುತ್ತಿತ್ತು. ತೀವ್ರ ರಕ್ತಸ್ರಾವದಿಂದ ಆನಂದ್ ಸ್ಥಳದಲ್ಲೇ ಅಸುನೀಗಿದ್ದಾರೆ. ಈ ಬಗ್ಗೆ ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಲವು ದಿನಗಳಿಂದ ಆನಂದ್, ತಮ್ಮ ಮನೆಗೂ ಸರಿಯಾಗಿ ಹೋಗುತ್ತಿರಲಿಲ್ಲ. ಮದ್ಯ ವ್ಯಸನಿಯಾಗಿದ್ದ ಅವರು ನಗರದ ಹಲವೆಡೆ ಸುತ್ತಾಡುತ್ತಿದ್ದರು. ಕೆಲ ದಿನಗಳ ಹಿಂದಷ್ಟೇ ಆನಂದ್ ಹಾಗೂ ಲೋಹಿತ್ ನಡುವೆ ಜಗಳ ಆಗಿತ್ತು. ಅದೇ ವೈಷಮ್ಯದಿಂದಲೇ ಆರೋಪಿ ಈ ಕೃತ್ಯ ಎಸಗಿದ್ದಾನೆ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದೂ ಮೂಲಗಳು ತಿಳಿಸಿವೆ.

ಪೊಲೀಸರಿಗೆ ಶೋಕಾಸ್ ನೋಟಿಸ್

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಎರಡು ದಿನಗಳ ಹಿಂದೆ ಜನ್ಮ ದಿನ ಆಚರಿಸಿಕೊಂಡ ಕಿತ್ತೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಮಹಾಂತೇಶ ದೊಡ್ಡಗೌಡರ ದಂಪತಿ ಮೇಲೆ ಪೊಲೀಸರು, ಪುಷ್ಪವೃಷ್ಟಿ ಮಾಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಪಟ್ಟಣದಲ್ಲಿರುವ ಅವರ ಮನೆಯಲ್ಲಿ ಶಾಸಕ ಮತ್ತು ಅವರ ಪತ್ನಿ ಮಂಜುಳಾ ಅವರನ್ನು ರಾಜ-ರಾಣಿಯಂತೆ ಕೂರಿಸಿ ಪುಷ್ಪವೃಷ್ಟಿ ಮಾಡಿರುವುದು ಎಷ್ಟು ಸರಿ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

'ವಿಡಿಯೊಗಮನಿಸಿದ್ದೇನೆ.ಆಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಬೈಲಹೊಂಗಲ ಡಿಎಸ್ಪಿ ಶಿವಾನಂದ ಕಟಗಿ, ಸಿಪಿಐ ಯು.ಎಚ್. ಸಾತೇನಹಳ್ಳಿ, ನೇಸರಗಿ ಠಾಣೆ ಪಿಎಸ್‌ಐ ವೈ.ಎಲ್. ಶೀಗಿಹಳ್ಳಿ ಹಾಗೂ ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದೆ' ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ 'ಪ್ರಜಾವಾಣಿ'ಗೆ ತಿಳಿಸಿದರು.

ಕುಟುಂಬದವರಿಗೆ ತಲಾ 20 ಸಾವಿರ ಚೆಕ್ ವಿತರಿಸಿದರು. ಕ್ಷೇತ್ರದ ಜನರಿಗೆ ಉಚಿತವಾಗಿ ಪಡಿತರ ಕಿಟ್ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನ ಮಾಡಿದರು. ಹೆಬ್ಬಾಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಾಲಾಜಿ ಮತ್ತು ಸ್ಥಳೀಯ ಮುಖಂಡರು ಇದ್ದರು

ರಾಜಸ್ಥಾನ ಪಂಚಾಯಿತಿ ಸಮಿತಿ: ಕಾಂಗ್ರೆಸ್ ಹಿಡಿತ

ಜೈಪುರ (ಪಿಟಿಐ): ರಾಜಸ್ಥಾನದ ಪಂಚಾಯಿತಿ ಸಮಿತಿ ಹಾಗೂ ಜಿಲ್ಲಾ ಪರಿಷತ್‌ಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮುನ್ನಡೆ ಸಾಧಿಸಿದೆ.

ಕಾಂಗ್ರೆಸ್ ಪಕ್ಷವು 670 ಪಂಚಾಯಿತಿ ಸಮಿತಿ ಸ್ಥಾನಗಳನ್ನು ಗೆದ್ದುಕೊಂಡಿದ್ದರೆ, ಬಿಜೆಪಿ 551 ಸ್ಥಾನಗಳನ್ನು ಗೆದ್ದುಕೊಂಡಿದೆ. ಆರು ಜಿಲ್ಲೆಗಳ ಪಂಚಾಯಿತಿ ಸಮಿತಿಗಳ ಒಟ್ಟು 1,564 ಸ್ಥಾನಗಳಿಗೆ ಮೂರು ಹಂತದಲ್ಲಿ ಚುನಾವಣೆ ನಡೆದಿತ್ತು.

200 ಜಿಲ್ಲಾ ಪರಿಷತ್ ಸ್ಥಾನಗಳ ಪೈಕಿ ಕಾಂಗ್ರೆಸ್ 93ರಲ್ಲಿ, ಬಿಜೆಪಿ 88ರಲ್ಲಿ ಜಯ ಸಾಧಿಸಿವೆ. ಎರಡು ಪಂಚಾಯಿತಿ ಸಮಿತಿಗಳು ಹಾಗೂ 9 ಜಿಲ್ಲಾ ಪರಿಷತ್ ಸ್ಥಾನಗಳ ಫಲಿತಾಂಶ ಬಾಕಿಯಿದೆ.

ಪಕ್ಷೇತರರು 290 ಪಂಚಾಯಿತಿ ಸಮಿತಿ ಹಾಗೂ ಏಳು ಜಿಲ್ಲಾ ಪರಿಷತ್ ಸ್ಥಾನಗಳನ್ನು ಗೆದ್ದುಕೊಂಡಿದ್ದಾರೆ. ಬಿಎಸ್‌ಪಿ 11 ಪಂಚಾಯಿತಿ ಸಮಿತಿ ಹಾಗೂ ಮೂರು ಜಿಲ್ಲಾ ಪರಿಷತ್ ಸ್ಥಾನಗಳಲ್ಲಿ ಮೇಲುಗೈ ಸಾಧಿಸಿದ್ದರೆ, ಆರ್‌ಎಲ್‌ಪಿಯು 40 ಪಂಚಾಯಿತಿ ಸಮಿತಿಗಳನ್ನು ತನ್ನ ತೆಕ್ಕೆಗೆ ಹಾಕಿಕೊಂಡಿದೆ.

ಪ್ರಮುಖ ಮತ್ತು ಪ್ರಧಾನ ಸ್ಥಾನಗಳಿಗೆ ಸೆ.6ರಂದು, ಉಪಪ್ರಮುಖ ಮತ್ತು ಉಪ ಪ್ರಧಾನ ಸ್ಥಾನಗಳಿಗೆ ಸೆ. 7ರಂದು ಚುನಾವಣೆ ನಿಗದಿಯಾಗಿದೆ.

ಈ ಫಲಿತಾಂಶವು ತಮ್ಮ ಪಕ್ಷಕ್ಕೆ ಹುರುಪು ತುಂಬಿದ್ದು, ಪ್ರತಿಪಕ್ಷ ಬಿಜೆಪಿಗೆ ಮುಖಭಂಗವಾಗಿದೆ ಎಂದು ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಗೋವಿಂದ ಸಿಂಗ್ ಹೇಳಿದ್ದಾರೆ. ಚುನಾವಣೆ ನಡೆದ 78 ಪಂಚಾಯಿತಿ ಸಮಿತಿಗಳಲ್ಲಿ 60ರಲ್ಲಿ ಕಾಂಗ್ರೆಸ್‌ನ ಪ್ರಧಾನರು ಆಯ್ಕೆಯಾಗಲಿದ್ದಾರೆ ಎಂದಿದ್ದಾರೆ.

ಚುನಾವಣೆಯಲ್ಲಿ ಜಯ ಗಳಿಸಿದ ಪಕ್ಷದ ಅಭ್ಯರ್ಥಿಗಳನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸತೀಶ್ ಪೂನಿಯಾ ಅಭಿನಂದಿಸಿದ್ದಾರೆ. ಚುನಾವಣೆಯಲ್ಲಿ ಕಠಿಣ ಶ್ರಮ ವಹಿಸಿದ ಕಾರ್ಯಕರ್ತರನ್ನು ಅವರು ಅಭಿನಂದಿಸಿದ್ದಾರೆ.

₹75 ಕೋಟಿ ಮೌಲ್ಯದ ಒತ್ತುವರಿ ಪ್ರದೇಶ ತೆರವು

ಬೆಂಗಳೂರು: ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಸರ್ಕಾರಿ ಜಮೀನು ಒತ್ತುವರಿ ತೆರವು ಕಾರ್ಯಾಚರಣೆಯು ಜಿಲ್ಲಾಧಿಕಾರಿ ಜೆ. ಮಂಜುನಾಥ್ ನೇತೃತ್ವದಲ್ಲಿ ಶನಿವಾರ ನಡೆಯಿತು. ಐದು ತಾಲ್ಲೂಕುಗಳಲ್ಲಿ ಒಟ್ಟು ₹75 ಕೋಟಿ ಮೌಲ್ಯದ ಆಸ್ತಿಯನ್ನು ವಶಕ್ಕೆ ಪಡೆಯಲಾಯಿತು.

ಕೆರೆ, ಕುಂಟೆ, ಗೋಮಾಳ, ಸ್ಮಶಾನ, ರಾಜಕಾಲುವೆ ಮತ್ತು ಇತರೆ ಸರ್ಕಾರಿ ಜಮೀನುಗಳನ್ನು ರಕ್ಷಿಸಲು ಕಾರ್ಯಾಚರಣೆ ನಡೆಯಿತು.

'ನಾಲ್ಕು ತಾಲ್ಲೂಕುಗಳಲ್ಲಿ ಒಟ್ಟು 20 ಕೆರೆ ಪ್ರದೇಶದಲ್ಲಿ 32 ಎಕರೆ ಒತ್ತುವರಿಯಾಗಿತ್ತು. ಬೆಂಗಳೂರು ಉತ್ತರ, ಯಲಹಂಕ ಮತ್ತು ಆನೇಕಲ್ ತಾಲ್ಲೂಕುಗಳಲ್ಲಿ ಸರ್ಕಾರಿ ಗೋಮಾಳ 9.15 ಎಕರೆ ಮತ್ತು ಬೆಂಗಳೂರು ಉತ್ತರ ಮತ್ತು ಪೂರ್ವ ತಾಲ್ಲೂಕಿನಲ್ಲಿ ಸರ್ಕಾರಿ ಗುಂಡು ತೋಪು 3 ಎಕರೆ ಸೇರಿದಂತೆ ₹20.51 ಕೋಟಿ ಮೌಲ್ಯದ ಒಟ್ಟು 13.11ಎಕರೆ ಗೋಮಾಳ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಯಿತು' ಎಂದು ಜಿಲ್ಲಾಧಿಕಾರಿ ತಿಳಿಸಿದರು.

'ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಒಟ್ಟು 10 ಎಕರೆ ವಿಸ್ತೀರ್ಣದ ಸರ್ಕಾರಿ ಕೆರೆ ಜಮೀನು, ಯಲಹಂಕ ತಾಲ್ಲೂಕಿನ ಸಿಂಗನಾಯಕನಹಳ್ಳಿ ಗ್ರಾಮದಲ್ಲಿ 2.37 ಎಕರೆ ಸರ್ಕಾರಿ ಜಮೀನು ಒತ್ತುವರಿ ತೆರವು ಮಾಡಲಾಯಿತು' ಎಂದರು.

ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ ಒಟ್ಟು 20.20 ಎಕರೆ ವಿಸ್ತೀರ್ಣದ ಸರ್ಕಾರಿ ಕೆರೆ ಜಮೀನು, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ 1.15 ಎಕರೆ, ವಿಸ್ತೀರ್ಣದ ಸರ್ಕಾರಿ ಕೆರೆ ಜಮೀನನ್ನು ವಶಪಡಿಸಿಕೊಳ್ಳಲಾಯಿತು ಎಂದು ಮಾಹಿತಿ ನೀಡಿದರು.

ಆನೇಕಲ್ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ಒಟ್ಟು 10.30 ಎಕರೆ ವಿಸ್ತೀರ್ಣದ ಸರ್ಕಾರಿ ಕೆರೆ ಜಮೀನನ್ನು ವಶಪಡಿಸಿಕೊಳ್ಳಲಾಯಿತು ಎಂದು ಮಂಜುನಾಥ್ ಹೇಳಿದರು. ಎಲ್ಲ ತಾಲ್ಲೂಕುಗಳ ತಹಶೀಲ್ದಾರ್ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಬೇಸರ

‘ಸ್ವಾರ್ಥ, ದುರಾಸೆಗೆ ಭ್ರಷ್ಟಾಚಾರ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಎನ್‌. ಸಂತೋಷ್ ಹೆಗ್ಡೆ ಹಾಗೂ ಚಂದ್ರಶೇಖರ ಕಂಬಾರ ಅವರು ಉಭಯ ಕುಶಲೋಪರಿ ವಿಚಾರಿಸಿಕೊಂಡರು. ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಕುಲಪತಿ ಸುಧೀರ್ ಕೃಷ್ಣಸ್ವಾಮಿ ಇದ್ದರು

ಬೆಂಗಳೂರು: ‘ಹಣ, ಅಧಿಕಾರದ ಆಸೆಗೆ ಸಮಾಜದಲ್ಲಿ ಭ್ರಷ್ಟಾಚಾರ ಹೆಚ್ಚುತ್ತಿದೆ. ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರಬರುವವರಿಗೆ ಭವ್ಯ ಸ್ವಾಗತ ನೀಡುವ ಪರಿಪಾಠ ಹೆಚ್ಚುತ್ತಿರುವುದು ವಿಷಾದನೀಯ. ಜನರ ಈ ಧೋರಣೆ ಬದಲಾಗಬೇಕು’ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ತಿಳಿಸಿದರು.

ನಗರದ ಬಿಎಂಎಸ್ ಕಾನೂನು ಕಾಲೇಜಿನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ವಿಆರ್‌1 ಸಮೂಹ ಸಂಸ್ಥೆಯನ್ನು ಅನಾವರಣ ಮಾಡಿ, ಮಾತನಾಡಿದರು. ‘ಅಧಿಕಾರದಲ್ಲಿರುವವರ ಸ್ವಾರ್ಥ ಮತ್ತು ದುರಾಸೆಯು ಭ್ರಷ್ಟಾಚಾರವನ್ನು ಪೋಷಿಸುತ್ತಿದೆ. ಪ್ರತಿ ಹಂತದಲ್ಲಿ ಲಂಚ ಸಾಮಾನ್ಯವಾಗಿದೆ. ಇದು ದುರದೃಷ್ಟಕರ ಸಂಗತಿ. ಜೈಲಿಗೆ ಹೋಗಿ ಜಾಮೀನು ಕೊಟ್ಟು ಬಿಡುಗಡೆಗೊಂಡವರಿಗೆ ಜೈಕಾರ ಹಾಕುವ ಜನ ನಮ್ಮಲ್ಲಿದ್ದಾರೆ. ಶಿಕ್ಷೆಯ ಭಯವಿಲ್ಲದ ಭ್ರಷ್ಟರು ಅವ್ಯಾಹತವಾಗಿ ಹಗರಣಗಳನ್ನು ಮಾಡುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಜನರ ಚಿಂತನೆಗಳಲ್ಲಿ ಬದಲಾವಣೆ ಬರಬೇಕು. ಇತ್ತೀಚಿನ ದಿನಗಳಲ್ಲಿ ದುರಾಸೆ ಹೆಚ್ಚಾಗಿದ್ದು, ಹಣ ಮತ್ತು ಅಧಿಕಾರದ ಹಿಂದೆ ಸಾಗುತ್ತಿದ್ದಾರೆ. ದುಡ್ಡಿದ್ದವರು ಅಧಿಕಾರ ಬೇಕು ಎನ್ನುತ್ತಾರೆ. ಅಧಿಕಾರಕ್ಕೆ ಬಂದ ಬಳಿಕ ಭ್ರಷ್ಟಾಚಾರ ಮಾಡುತ್ತಾರೆ. 1984ರ ಬೊಫೋರ್ಸ್ ಹಗರಣದಲ್ಲಿ ದೇಶಕ್ಕೆ ₹ 64 ಕೋಟಿ ನಷ್ಟವಾಯಿತು. 2010ರಲ್ಲಿ ನಡೆದ ಕಲ್ಲಿದ್ದಲು ಹಗರಣದ ಮೊತ್ತ ₹1,88,000 ಕೋಟಿ. ಆಡಳಿತದಲ್ಲಿರುವವರ ಸ್ವಾರ್ಥ-ದುರಾಸೆಗಳು ಇವುಗಳಿಗೆಲ್ಲಾ ಕಾರಣ’ ಎಂದು ತಿಳಿಸಿದರು.

‘ಶಾಂತಿ ಮತ್ತು ಒಗ್ಗಟ್ಟಿಗೆ ಮಾನವೀಯತೆ ಸಹಕಾರಿ. ಯಾವುದೇ ಕಾರಣಕ್ಕೂ ಮಾನವೀಯತೆಯನ್ನು ನಾವು ಮರೆಯಬಾರದು’ ಎಂದು ಕಿವಿಮಾತು ಹೇಳಿದರು.

ವೈವಿಧ್ಯದಲ್ಲಿ ಸಾಮರಸ್ಯ: ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಮಾತನಾಡಿ, ‘ದೇಶದಲ್ಲಿ 64 ಸಾವಿರ ಜಾತಿಗಳು, 1,400ಕ್ಕೂ ಅಧಿಕ ಭಾಷೆಗಳು ಹಾಗೂ 8ಕ್ಕೂ ಅಧಿಕ ಧರ್ಮಗಳು ಇವೆ. ಇಷ್ಟೆಲ್ಲ ವೈವಿಧ್ಯವನ್ನು ಬೇರೆ ದೇಶಗಳಲ್ಲಿ ನೋಡಲು ಸಾಧ್ಯವಿಲ್ಲ. ವೈವಿಧ್ಯದೊಂದಿಗೆ ನಾವು ಒಟ್ಟಾಗಿ ಸಾಗುತ್ತಿದ್ದೇವೆ. ಜಾನಪದವು ಎಲ್ಲ ಧರ್ಮಗಳಿಂತ ಮೊದಲು ಪ್ರಪಂಚದಾದ್ಯಂತ ವ್ಯಾಪಿಸಿಕೊಂಡಿರುವುದೇ ಇದಕ್ಕೆ ಪ್ರಮುಖ ಕಾರಣ. ಆದರೆ, ನಂತರ ಇಲ್ಲಿಗೆ ಬಂದ ಬ್ರಿಟಿಷರು ಇತಿಹಾಸದ ಪರಿಕಲ್ಪನೆ ನೀಡಿ, ಕಾಲದ ವರ್ಗೀಕರಣ ಮಾಡಿದರು. ಇದರಿಂದಾಗಿ ನಮ್ಮದನ್ನು ಕಳೆದುಕೊಳ್ಳುತ್ತಾ ಬಂದೆವು’ ಎಂದು ಹೇಳಿದರು.

ಗಾಯಕಿ ಮಾನಸಿ ಪ್ರಸಾದ್, ‘ಸೃಜನಾತ್ಮಕತೆ, ಸಂವಹನ ಹಾಗೂ ಸಹಯೋಗವು ಯಶಸ್ಸು ಸಾಧಿಸಲು ಅತೀ ಮುಖ್ಯ. ದೇಶ ಪ್ರಗತಿ ಹೊಂದಲು ಕೂಡ ಈ ಮೂರು ಅಂಶಗಳು ಸಹಕಾರಿ’ ಎಂದು ತಿಳಿಸಿದರು.

ವಿಆರ್‌1 ಸಮೂಹ ಸಂಸ್ಥೆಯ ಅಧ್ಯಕ್ಷ ಡಾ.ಎ. ರವೀಂದ್ರ ಮಾತನಾಡಿ, ‘ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂಭ್ರಮಾಚರಣೆಯಲ್ಲಿ ನಾವಿದ್ದೇವೆ. ಸಾಮಾಜಿಕ ಸಾಮರಸ್ಯ, ದೇಶಪ್ರೇಮ ಮತ್ತು ಉದಾರವಾದ ದೃಷ್ಟಿಕೋನವನ್ನು ಯುವಜನತೆಯಲ್ಲಿ ಬೆಳೆಸಬೇಕಿದೆ. ಈ ನಿಟ್ಟಿನಲ್ಲಿ ಸಮಾನಮನಸ್ಕರು ಕಾರ್ಯೋನ್ಮುಖರಾಗಿ ಸಮೂಹ ಸಂಸ್ಥೆ ರಚಿಸಿದ್ದೇವೆ. ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಮೌಲ್ಯಗಳನ್ನು ಪೋಷಿಸುವುದು ನಮ್ಮ ಉದ್ದೇಶವಾಗಿದ್ದು, ಕಾರ್ಯಾಗಾರ ಮತ್ತು ವಿಚಾರಸಂಕಿರಣಗಳ ಮೂಲಕ ಯುವಜನತೆಯನ್ನು ತಲುಪುತ್ತೇವೆ’ ಎಂದರು.

ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ

ರೈತರಿಗೆ ಶೇ 50ರಷ್ಟು ನಿವೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗೃಹ ಮಂಡಳಿಯು ಸೂರ್ಯನಗರ ಎರಡನೇ ಹಂತದ ಬಡಾವಣೆ ನಿರ್ಮಾಣಕ್ಕಾಗಿ ಆನೇಕಲ್ ತಾಲ್ಲೂಕಿನ ಕಸಬಾ ಹೋಬಳಿಯ ಲಿಂಗಾಪುರ ಗ್ರಾಮದಲ್ಲಿ ಸ್ವಾಧೀನಪಡಿಸಿಕೊಂಡಿರುವ 110 ಎಕರೆ 18 ಗುಂಟೆ ಜಮೀನಿನ ಮಾಲೀಕರಿಗೆ ಅಭಿವೃದ್ಧಿಪಡಿಸಿದ ನಿವೇಶನಗಳಲ್ಲಿ ಅರ್ಧದಷ್ಟನ್ನು ಪರಿಹಾರ ರೂಪದಲ್ಲಿ ನೀಡಲು ಶನಿವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ.

‘ಹಲವು ವರ್ಷಗಳಿಂದ ಭೂಸ್ವಾಧೀನ ಪ್ರಕ್ರಿಯೆ ಕಗ್ಗಂಟಾಗಿತ್ತು. ಪರಿಹಾರ ವಿತರಣೆಗೆ ಸಂಬಂಧಿಸಿದಂತೆ ರೈತರು ಮತ್ತು ಗೃಹ ಮಂಡಳಿ ನಡುವೆ ಸಹಮತ ಮೂಡಿರಲಿಲ್ಲ. ಈಗ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ರೈತರು ಮತ್ತು ಗೃಹ ಮಂಡಳಿಗೆ ನಡುವೆ ಶೇಕಡ 50ರ ಅನುಪಾತದಲ್ಲಿ ಹಂಚಿಕೆ ಮಾಡುವ ಪ್ರಸ್ತಾವಕ್ಕೆ ಸಂಪುಟ ಸಭೆ ಒಪ್ಪಿಗೆ ನೀಡಿದೆ’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಕೊಪ್ಪ ಗ್ರಾಮದಲ್ಲಿ ಆಶ್ರಯ ಯೋಜನೆಗಾಗಿ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಹಂಚಿಕೆ ಮಾಡಿದ್ದ 2 ಎಕರೆ 10 ಗುಂಟೆ ಜಮೀನನ್ನು ಅರಣ್ಯ ಇಲಾಖೆ ತೆರವುಗೊಳಿಸಿತ್ತು. ಆ ಜಮೀನನ್ನು ವಸತಿ ಯೋಜನೆಗೆ ಪುನಃ ಹಂಚಿಕೆ ಮಾಡಿ, ಅರಣ್ಯ ಇಲಾಖೆಗೆ ಪರ್ಯಾಯ ಜಮೀನು ನೀಡಲು ನಿರ್ಧರಿಸಲಾಗಿದೆ ಎಂದರು.

ಆದೇಶ ರದ್ದು: ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಸಂಸ್ಥೆಯ ಕಾರ್ಯಾಚರಣೆಗೆ ಪೂರಕವಾಗಿ ‘ರಾಜೀವ್ ಗಾಂಧಿ ಏರೋ ಸ್ಪೋರ್ಟ್ಸ್ ಸೊಸೈಟಿ’ ಸ್ಥಾಪಿಸಲು 2018ರಲ್ಲಿ ಹೊರಡಿಸಿದ್ದ ಆದೇಶವನ್ನು ಹಿಂಪಡೆಯಲು ತೀರ್ಮಾನಿಸಲಾಯಿತು. ಸರ್ಕಾರಿ– ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ ಅನುಷ್ಠಾನಕ್ಕೆ ನಿರ್ಧರಿಸಲಾಯಿತು ಎಂದು ತಿಳಿಸಿದರು.

‘ಕುಟುಂಬ ಸಂಘಟನೆ ಬದಲು ಪಕ್ಷ ಸಂಘಟನೆ ಮಾಡಲಿ’

ಪ್ರಜಾವಾಣಿ ವಾರ್ತೆ

ಯತ್ನಾಳ್

ಹಾವೇರಿ: ‘ಪಕ್ಷ ಸಂಘಟನೆಗೆ ಬಿ.ವೈ. ವಿಜಯೇಂದ್ರ ರಾಜ್ಯ ಪ್ರವಾಸ ಮಾಡಲಿ. ಆದರೆ, ಅವರ ಪ್ರಾಬಲ್ಯ ಹೆಚ್ಚಿಸಿಕೊಳ್ಳೋಕೆ ಪ್ರವಾಸ ಮಾಡೋದು ಬೇಡ. ಕುಟುಂಬ ಸಂಘಟನೆ ಬದಲು ಪಕ್ಷ ಸಂಘಟನೆಯೇ ಧ್ಯೇಯವಾಗಿರಲಿ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಸಮಾಧಾನ ಹೊರಹಾಕಿದರು.

ಹಾನಗಲ್‌ನಲ್ಲಿ ಶನಿವಾರ ಏರ್ಪಡಿಸಿದ್ದ ಪಂಚಮಸಾಲಿ ಸಮಾಜದ ‘ಪ್ರತಿಜ್ಞಾ ಪಂಚಾಯತ್’ ಕಾರ್ಯಕ್ರಮದಲ್ಲಿ ಭಾಗವಹಿಸುವ ಮುನ್ನ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

‘ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಯನ್ನು ಸ್ವಾಗತಿಸುತ್ತೇನೆ. ಪಕ್ಷದ ತೀರ್ಮಾನಕ್ಕೆ ನಾವು ಬದ್ಧ. ಯಾರೇ ಮುಖ್ಯಮಂತ್ರಿ ಇದ್ದರೂ ಅವರ ನೇತೃತ್ವದಲ್ಲಿ ಚುನಾವಣೆಗೆ ಹೋಗೋದು ಸಹಜ’ ಎಂದು ಬೊಮ್ಮಾಯಿ ನೇತೃತ್ವದ ಚುನಾವಣೆಗೆ ಸಹಮತ ವ್ಯಕ್ತಪಡಿಸಿದರು.

ಕೊಲೆ ಆರೋಪ ಎದುರಿಸುತ್ತಿರುವ ವಿನಯ ಕುಲಕರ್ಣಿ ಪಂಚಮಸಾಲಿ ಹೋರಾಟದಲ್ಲಿ ಭಾಗವಹಿಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ವಿನಯ ಕುಲಕರ್ಣಿ ಮೇಲಿನ ಆರೋಪ ಸಾಬೀತಾಗುವವರೆಗೆ ಅವರು ಅಪರಾಧಿಯಲ್ಲ. ಸಮುದಾಯದ ಸಲುವಾಗಿ ಬಂದಿದ್ದಾರೆ. ಜೈಲಲ್ಲಿ ಇದ್ದವರೇ ಮುಖ್ಯಮಂತ್ರಿ ಆಗಿದ್ರಲ್ಲಾ’ ಎಂದು ಪ್ರಶ್ನಿಸುವ ಮೂಲಕ ಬಿ.ಎಸ್.ಯಡಿಯೂರಪ್ಪ ವಿರುದ್ಧ ವಾಗ್ದಾಳಿ ಮಾಡಿದರು.

ಕೂಡಲಸಂಗಮದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮಾತನಾಡಿ, ‘ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವುದಾಗಿ ಸೆಪ್ಟೆಂಬರ್‌ವರೆಗೆ ನಮಗೆ ನೀಡಿದ ಕಾಲಾವಕಾಶ ಮುಗಿಯುತ್ತಿದೆ. ಸಿಎಂ ಜತೆ ಮಾತುಕತೆ ಮಾಡಲಾಗಿದೆ. ಅಕ್ಟೋಬರ್ 1ರ ನಂತರ ಸರ್ಕಾರದ ಭರವಸೆ ಈಡೇರುವ ನಿರೀಕ್ಷೆಯಿದೆ. ವಿಳಂಬವಾದರೆ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಕೂರುತ್ತೇವೆ ಎಂದು ಎಚ್ಚರಿಕೆ ನೀಡಿದರು.

‘ನಾಥ ಪಂಥಕ್ಕೆ ಅಡಿಪಾಯ ಹಾಕಿದವರು ಗೋರಕ್ಷನಾಥ’

ಪ್ರಜಾವಾಣಿ ವಾರ್ತೆ



ನಿರ್ಮಲಾನಂದನಾಥ ಸ್ವಾಮೀಜಿ ಅವರು ಬಾಲಗಂಗಾಧರನಾಥ ಸ್ವಾಮೀಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಎಚ್‌.ಎಸ್‌.ಶಿವಪ್ರಕಾಶ್, ಟಿ.ಎಸ್‌.ವಾಸುದೇವಮೂರ್ತಿ ಹಾಗೂ ವಿಜಯನಗರ ಶಾಖಾಮಠದ ಸೌಮ್ಯನಾಥ ಸ್ವಾಮೀಜಿ ಇದ್ದರು.

ಬೆಂಗಳೂರು: ‘ಗೋರಕ್ಷನಾಥರು ನಾಥ ಪಂಥಕ್ಕೆ ಅಡಿಪಾಯ ಹಾಕಿದ ಮೂಲ ಪುರುಷ. ಅವರು ಎರಡನೇ ಶತಮಾನಕ್ಕೆ ಸೇರಿದವರು’ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ಆದಿಚುಂಚನಗಿರಿ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪ್ರತಿಷ್ಠಾನವು ವಿಜಯನಗರದಲ್ಲಿರುವ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ‘ನಾಥ ಪರಂಪರೆಯ ದರ್ಶನ–ಸ್ವರೂಪ’ ಕುರಿತ ವಿಚಾರ ಸಂಕಿರಣದಲ್ಲಿ ಶನಿವಾರ ಮಾತನಾಡಿದರು.

‘ಚಾಮರಸನ ಪ್ರಭುಲಿಂಗ ಲೀಲೆಯಲ್ಲಿ ಅಲ್ಲಮಪ್ರಭು, ಗೋರಕ್ಷನಾಥರನ್ನು ಸೋಲಿಸಿದ ಉಲ್ಲೇಖವಿದೆ. ಅವರಿಗೂ ನಾಥ ಪಂಥದ ಮೂಲ ಪುರುಷರಾಗಿರುವ ಗೋರಕ್ಷನಾಥರಿಗೂ ಯಾವ ಸಂಬಂಧವೂ ಇಲ್ಲ. ನಾಥ ಪರಂಪರೆಯ ಗ್ರಂಥಗಳು ಸಂಸ್ಕೃತ ಸೇರಿದಂತೆ ಇತರೆ ಭಾಷೆಗಳಲ್ಲಿವೆ. ಅವುಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಕೆಲಸವಾಗುತ್ತಿದೆ’ ಎಂದರು.

ಕವಿ ಎಚ್‌.ಎಸ್‌.ಶಿವಪ್ರಕಾಶ್ ‘ಬಹುಸಂಖ್ಯಾತ ನಾಥ ಪರಂಪರೆಯ ಬಗ್ಗೆ ಅಧ್ಯಯನಗಳು ನಡೆಯಬೇಕು. ನಾಥ ಪರಂಪರೆಯಲ್ಲಿ ಶಿವನೆಂದರೆ ನಮ್ಮೊಳಗೆ ಅಡಗಿರುವ ತತ್ವ ಅರಿಯುವುದು. ಪಂಚಭೂತದಿಂದ ಕೂಡಿರುವ ಶರೀರದಿಂದ ಆಧ್ಯಾತ್ಮ ಸತ್ಯ ತಿಳಿಯುವುದಾಗಿದೆ’ ಎಂದು ತಿಳಿಸಿದರು.

ಲೇಖಕ ಡಾ.ಟಿ.ಎಸ್. ವಾಸುದೇವಮೂರ್ತಿ ‘ಶೈವ, ಬೌದ್ಧ ಧರ್ಮಗಳು ನಾಥ ಪಂಥದ ಮೇಲೆ ಪ್ರಭಾವ ಬೀರಿವೆಯೋ ಅಥವಾ ನಾಥ ಪರಂಪರೆಯೇ ಶೈವ-ಬೌದ್ಧ ಧರ್ಮಗಳ ಮೇಲೆ ಪ್ರಭಾವಿಸಿದೆಯೋ ಎಂಬುದನ್ನು ಗುರುತಿಸುವುದು ಕಷ್ಟ. ಆಧ್ಯಾತ್ಮಿಕವಾಗಿ ಭಾರತವನ್ನು ಒಗ್ಗೂಡಿಸಿರುವುದು ನಾಥ ಪರಂಪರೆ. ಇದು ಯಾವುದೇ ಜಾತಿಗೆ ಸೀಮಿತವಾಗಿಲ್ಲ’ ಎಂದರು.

ಪ್ರೊ.ಚಂದ್ರಶೇಖರಯ್ಯ ‘ನಾಥ ಪೀಠದ ಶಕ್ತಿಕೇಂದ್ರ ಆದಿಚುಂಚನಗಿರಿ. ಬದುಕಿನ ಆಧ್ಯಾತ್ಮಿಕತೆಯನ್ನು ತಿಳಿಸಿಕೊಡುವ ಬಹಳ ದೊಡ್ಡ ಪರಂಪರೆ ನಾಥ ಪರಂಪರೆ’ ಎಂದು ಹೇಳಿದರು.

ಸಚಿವರ ಅಳಿಯನಿಂದ ವಾಲ್ಮೀಕಿ ಸಮಾಜದ ಕ್ಷಮೆಯಾಚನೆ

ಹೊಸಪೇಟೆ (ವಿಜಯನಗರ): ಶಾಸಕ ರಮೇಶ ಜಾರಕಿಹೊಳಿ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಪೋಸ್ಟ್‌ ಮಾಡಿದ ಆರೋಪ ಎದುರಿಸುತ್ತಿರುವ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರ ಸೋದರ ಅಳಿಯ, ಬಿಜೆಪಿ ಯುವ ಮುಖಂಡ ಸಂದೀಪ್ ಸಿಂಗ್, ಶನಿವಾರ ವಾಲ್ಮೀಕಿ ನಾಯಕ ಸಮಾಜದ ಕ್ಷಮೆಯಾಚಿಸಿದ್ದಾರೆ.

ಡಿವೈಎಸ್ಪಿ ವಿಶ್ವನಾಥ್ ರಾವ್ ಕುಲಕರ್ಣಿ ಅವರ ಮಧ್ಯಸ್ಥಿಕೆಯಲ್ಲಿ ನಗರದಲ್ಲಿ ನಡೆದ ಸಭೆಯಲ್ಲಿ ಏಳು ಕೇರಿಯ ವಾಲ್ಮೀಕಿ ನಾಯಕ ಸಮಾಜದ 50ಕ್ಕೂ ಹೆಚ್ಚು ಮುಖಂಡರು ಹಾಗೂ ಸಂದೀಪ್ ಸಿಂಗ್ ಪಾಲ್ಗೊಂಡಿದ್ದರು.

‘ವಾಲ್ಮೀಕಿ ಸಮಾಜದಿಂದಲೇ ನಿಮ್ಮ ಮಾವ ಆನಂದ್ ಸಿಂಗ್ ಇಷ್ಟು ಎತ್ತರಕ್ಕೆ ಬೆಳೆದಿದ್ದಾರೆ. ನಾಲ್ಕು ಸಲ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಈ ಸಮಾಜ ನಿಮಗೇನು ಅನ್ಯಾಯ ಮಾಡಿದೆ’ ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಉಪಾಧ್ಯಕ್ಷ ನಾಣಿಕೇರಿ ತಿಮ್ಮಯ್ಯ ಸೇರಿದಂತೆ ಸಮಾಜದ ಮುಖಂಡರು ಪ್ರಶ್ನಿಸಿದ್ದಾರೆ. ಅದಕ್ಕೆ ಸಂದೀಪ್ ಸಿಂಗ್, ‘ನನ್ನಿಂದ ತಪ್ಪಾಗಿದೆ. ಭವಿಷ್ಯದಲ್ಲಿ ಈ ರೀತಿ ಮಾಡಲಾರೆ. ನನ್ನನ್ನು ಸಮಾಜದವರು ಕ್ಷಮಿಸಬೇಕು’ ಎಂದು ಸಭೆಯಲ್ಲಿ ಹೇಳಿದರು ಎಂಬ ಸಂಗತಿಯನ್ನು ವಿಶ್ವನಾಥ್ ರಾವ್ ಕುಲಕರ್ಣಿ, ನಾಣಿಕೆರೆ ತಿಮ್ಮಯ್ಯ ‘ಪ್ರಜಾವಾಣಿ’ಗೆ ಖಚಿತಪಡಿಸಿದ್ದಾರೆ. ಈ ಕುರಿತು ಸಂದೀಪ್ ಸಿಂಗ್ ಅವರನ್ನು ಸಂಪರ್ಕಿಸಿದಾಗ ಕರೆ ಸ್ವೀಕರಿಸಲಿಲ್ಲ.

ಸಂದೀಪ್ ಸಿಂಗ್

ರಮೇಶ ಜಾರಕಿಹೊಳಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ ಆರೋಪ ಎದುರಿಸುತ್ತಿರುವ ಸಂದೀಪ್ ಸಿಂಗ್ ವಿರುದ್ಧ ಸೆ.1ರಂದು ವಾಲ್ಮೀಕಿ ನಾಯಕ ಸಮಾಜದವರು ಸಭೆ ಸೇರಿ, ಕ್ಷಮೆಯಾಚನೆಗೆ ಎರಡು ದಿನಗಳ ಗಡುವು ನೀಡಿದ್ದರು.

ಜೂಜಾಟ; ಕ್ಲಬ್‌ಗಳ ಮೇಲೆ ದಾಳಿ

ಬೆಂಗಳೂರು: ಅಕ್ರಮವಾಗಿ ಜೂಜು ಆಡುತ್ತಿದ್ದ ಕ್ಲಬ್‌ಗಳ ಮೇಲೆ ಸಿಸಿಬಿ ಪೊಲೀಸರು ಶನಿವಾರ ಸಂಜೆ ದಾಳಿ ಮಾಡಿದ್ದು, 104 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ. ಅವರಿಂದ ₹ 4 ಲಕ್ಷ ನಗದು ಜಪ್ತಿ ಮಾಡಿದ್ದಾರೆ.

‘ಸದಸ್ಯರಲ್ಲದ ವ್ಯಕ್ತಿಗಳು ಕ್ಲಬ್‌ಗಳಿಗೆ ಬಂದು ಜೂಜು ಆಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ವಿಶೇಷ ತಂಡಗಳನ್ನು ರಚಿಸಿ ಸಂಪಿಗೆಹಳ್ಳಿಯ ಕಿಂಗ್ಸ್ ವಿನ್ನರ್ಸ್, ಹಲಸೂರಿನ ಸ್ಟಾರ್ ಲೈನ್ಸ್, ಬಾಣಸವಾಡಿಯ ಗೌರಿ ಸ್ಪೋರ್ಟ್ಸ್ ಆ್ಯಂಡ್ ರಿಕ್ರಿಯೆಷನ್ಸ್ ಅಸೋಸಿಯೇಷನ್, ಇಂದಿರಾನಗರದ ಕ್ಯಾಬ್ರಿಡ್ಜ್ ರಿಕ್ರಿಯೆಷನ್ಸ್ ಕ್ಲಬ್ ಮೇಲೆ ದಾಳಿ ಮಾಡಲಾಯಿತು’ ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

ಚಿತ್ರಾವಳಿ

ಜಯನಗರದ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ಜರ್ಮನ್ ತಂತ್ರಜ್ಞಾನದ ಟ್ರ್ಯಾಕ್ ನಿರ್ಮಾಣಕ್ಕೆ ಶಾಸಕಿ ಸೌಮ್ಯಾ ರೆಡ್ಡಿ ಗುದ್ದಲಿ ಪೂಜೆ ನೆರವೇರಿಸಿದರು. ಕಾಂಗ್ರೆಸ್ ಮುಖಂಡ ಎನ್‌. ನಾಗರಾಜು ಮತ್ತು ಸ್ಥಳೀಯ ಮುಖಂಡರು ಇದ್ದರು

ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಅವರು ಕಾಂಗ್ರೆಸ್ ಪಕ್ಷದ ವತಿಯಿಂದ ಕತ್ರಿಗುಪ್ಪೆಯಲ್ಲಿನ ಬಿ.ಟಿ.ಎಲ್‌. ಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ಕೋವಿಡ್ ಉಚಿತ ಲಸಿಕಾ ಅಭಿಯಾನದಲ್ಲಿ ನಾಗರಿಕರು ಲಸಿಕೆ ಪಡೆದುಕೊಂಡರು. ಯು.ಬಿ. ವೆಂಕಟೇಶ್ ಹಾಗೂ ಸ್ಥಳೀಯ ಮುಖಂಡರು ಇದ್ದರು

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಕ್ಲಬ್ ಹೌಸ್ ಬೆಂಗ್ಳೂ ಹಾಡು- ಪಾಡು ಇಂದು
ನಾದ- ರಾಗ- ಭಾವದ ಒಂದು ಬೆಳಗು
ಡಾ.ಜಿ.ಕೃಷ್ಣಪ್ಪ, ಬೇಂದ್ರೆ ಕಾವ್ಯ ಪರಿಚಾರಕ., ಪ್ರಹ್ಲಾದ ಬಿ ಮಹಿಷಿ, ಐಎಎಸ್ ನಿವೃತ್ತ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರಕಾರ., ಬಸವಲಿಂಗಯ್ಯ ಎಸ್. ಹಿರೇಮಠ, ಜಾನಪದ ಕಲಾವಿದ., ಎಂ.ಡಿ.ಪಲ್ಲವಿ, ಗಾಯಕಿ., ಶಮಿತಾ ಮಲ್ನಾಡ್, ಗಾಯಕಿ., ಮತ್ತು ನೀವು..
ಪ್ರಜಾವಾಣಿ ಆಲದಮರ
10.30 ರಿಂದ 12.30

ಪಾಡ್‌ಕಾಸ್ಟ್: ದಿನದ ವಿಶೇಷ: ಏಕರೂಪದ ಮರಳು ನೀತಿ ಅಗತ್ಯವೇ? ಪ್ರತೀ ದಿನ: ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ ಬುಲಿಟಿನ್, ಸಂಪಾದಕೀಯ, ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ

10 ಸಾವಿರ ಕೃಷಿ ಉತ್ಪಾದಕರ ಸಂಘ ಸ್ಥಾಪನೆ: ಶೋಭಾ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: 'ಕೃಷಿ ಉತ್ಪಾದನೆ ಪ್ರಮಾಣ ಹೆಚ್ಚಿಸಲು ಹಾಗೂ ಆರ್ಥಿಕವಾಗಿ ಹಿಂದುಳಿದ ರೈತರಿಗೆ ನೆರವು ನೀಡಲು ದೇಶದಾದ್ಯಂತ 10 ಸಾವಿರ ಕೃಷಿ ಉತ್ಪಾದಕರ ಸಂಘಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ' ಎಂದು ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಕರ್ನಾಟಕದಲ್ಲಿ 750 ಸಂಘಗಳನ್ನು ಸ್ಥಾಪಿಸುವ ಮುಖ್ಯಮಂತ್ರಿ ಅವರ ಘೋಷಣೆ ಶ್ಲಾಘನೀಯ. ರೈತರೇ ರಚಿಸಿಕೊಳ್ಳುವ ಸಂಘಗಳಿಗೆ ಕೇಂದ್ರ ಸರ್ಕಾರ ಹಣಕಾಸಿನ ನೆರವು ನೀಡಲಿದೆ. ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲಿದೆ. ಅವರ ಆದಾಯ ದ್ವಿಗುಣಗೊಳ್ಳಲಿದೆ' ಎಂದರು.

'ಕೇಂದ್ರದಿಂದ ಈ ಮೊದಲು ಕೃಷಿ ಇಲಾಖೆಗೆ ₹ 23 ಸಾವಿರ ಕೋಟಿ ನೀಡಲಾಗುತ್ತಿತ್ತು. ರೈತರ ನೆರವಿಗೆ ಬರಲು ಪ್ರಧಾನಿ ಮೋದಿ ಅವರು ₹ 1.23 ಲಕ್ಷ ಕೋಟಿ ಹಣವನ್ನು ಕೃಷಿಗೆ ಹಾಗೂ ₹ 8,500 ಕೋಟಿಯನ್ನು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಗೆ (ಐಸಿಎಆರ್) ನಿಗದಿಪಡಿಸಿದ್ದಾರೆ' ಎಂದು ತಿಳಿಸಿದರು.

ಕ್ಲಸ್ಟರ್ ಮಾರುಕಟ್ಟೆ: ಕಾಫಿ, ಮೆಣಸು, ಕೆಂಪು ಈರುಳ್ಳಿಗೆ ಇರುವಂತೆ ಇತರೆ ಕೃಷಿ ಉತ್ಪನ್ನಗಳಿಗೂ ಕ್ಲಸ್ಟರ್ ಆಧಾರಿತ ಮಾರುಕಟ್ಟೆಯನ್ನು ಸೃಷ್ಟಿಸುವ ಕುರಿತು ಚರ್ಚಿಸಲು ಇದೇ 22ರಂದು ಬೆಂಗಳೂರಿನಲ್ಲಿ ರಫ್ತುದಾರರ ಸಭೆ ಕರೆಯಲಾಗಿದೆ' ಎಂದರು.

'ಜಿಡಿಪಿಯಲ್ಲಿ ಒಟ್ಟಾರೆ ಕೃಷಿ ಪಾಲು ಸದ್ಯ ಶೇ 20 ಇದ್ದು, ಮೂರ್ನಾಲ್ಕು ವರ್ಷಗಳಲ್ಲಿ ಶೇ 25ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ತೊಗರಿಗೆ ಬೆಂಬಲ ಬೆಲೆ ಹೆಚ್ಚಿಸುವ ಪ್ರಸ್ತಾವ ಬೆಲೆ ಆಯೋಗದ ಮುಂದಿದೆ' ಎಂದರು.

ಸಿದ್ದರಾಮಯ್ಯ ಬ್ರಾಹ್ಮಣ್ಯ ಬೇರೂರಿಸುವ ನಾಯಕ– ನಟ ಚೇತನ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಸಿದ್ದರಾಮಯ್ಯ ಬ್ರಾಹ್ಮಣ್ಯವನ್ನು ಹೆಚ್ಚು ಆಳವಾಗಿ ಬೇರೂರಿಸುವ ಜಾತಿವಾದಿ ನಾಯಕ' ಎಂದು ಚಿತ್ರನಟ ಚೇತನ್ ಅಹಿಂಸಾ, ಟ್ವಿಟರ್‌ನಲ್ಲಿ ಟೀಕಾ ಪ್ರಹಾರ ನಡೆಸಿದ್ದಾರೆ.

ಶನಿವಾರ ಟ್ವೀಟ್ ಮಾಡಿರುವ ಚೇತನ್ ಅದನ್ನು ತಮ್ಮ ಫೇಸ್‌ಬುಕ್ ಖಾತೆಯಲ್ಲೂ ಬರೆದುಕೊಂಡಿದ್ದಾರೆ. 'ಸಿದ್ದರಾಮಯ್ಯ ಕರ್ನಾಟಕ ಮತ್ತು ಕಾಂಗ್ರೆಸ್‌ನ ಪ್ರಬಲ ನಾಯಕ. ಆದರೆ, ಬ್ರಾಹ್ಮಣ್ಯವನ್ನು ಆಳವಾಗಿ ಬೇರೂರಿಸಿ ಕೊಂಡಿರುವ ಜಾತಿವಾದಿ ನಾಯಕ' ಎಂದು ಹೇಳಿದ್ದಾರೆ.

'ನಿಜವಾದ ಬದಲಾವಣೆಗೆ ಕರ್ನಾಟಕ ಮತ್ತು ಭಾರತಕ್ಕೆ ಜಾತಿ ವಿರೋಧಿ ನಾಯಕತ್ವ ಬೇಕಾಗಿದೆ. ಸಿದ್ದರಾಮಯ್ಯನವರ ಸೇವೆ ಅವರು ಹುಟ್ಟಿದ ಜಾತಿಗೆ ಮಾತ್ರ ಸೀಮಿತವಾಗಿದ್ದು, ಇತರ ಬಹುಜನರಿಂದ ಸಿಗುವ ಮತಗಳಿಗಾಗಿ ಮಾತ್ರ ಬಣ್ಣದ ಮಾತನಾಡುತ್ತಾರೆ' ಎಂದು ಟೀಕಿಸಿದ್ದಾರೆ.

ಚೇತನ್ ಅವರ ಟ್ವೀಟ್ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಭಾರಿ ಚರ್ಚೆ ನಡೆಯುತ್ತಿದೆ.

ಹಲವರು ಚೇತನ್ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಚೇತನ್ ಬಣ್ಣ ಈಗ ಬಯಲಾಯಿತು ಎಂದು ಕೆಲವರು ವ್ಯಂಗ್ಯವಾಡಿದ್ದರೆ, ಇನ್ನೂ ಕೆಲವರು ಅವರ ಹೇಳಿಕೆಗೆ ಸಹಮತ ಸೂಚಿಸಿದ್ದಾರೆ.

ಕೋವಿಡ್: ಸಾವಿರದೊಳಗೆ ಹೊಸ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಶನಿವಾರ 983 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಐದು ದಿನಗಳಲ್ಲಿ ವರದಿಯಾದ ಕನಿಷ್ಠ ಪ್ರಕರಣಗಳು ಇವಾಗಿವೆ. ಕಳೆದ ಸೋಮವಾರ 973 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿತ್ತು.

ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.54 ಲಕ್ಷಕ್ಕೆ ಏರಿಕೆ ಕಂಡಿದೆ. ಒಂದು ದಿನದಲ್ಲಿ 1.59 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.61ರಷ್ಟಿದೆ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಎರಡಂಕಿಯಲ್ಲಿವೆ. ಗದಗ, ರಾಯಚೂರು, ರಾಮನಗರ, ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿ ಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 162 ಹಾಗೂ ಮೈಸೂರಿನಲ್ಲಿ 89 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 289 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 21ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 7, ದಕ್ಷಿಣ ಕನ್ನಡದಲ್ಲಿ 5, ಹಾಸನ ಹಾಗೂ ಮೈಸೂರಿನಲ್ಲಿ ತಲಾ ಇಬ್ಬರು, ಉಡುಪಿ ಸೇರಿದಂತೆ 5 ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮೃತರ ಸಂಖ್ಯೆ 37,401ಕ್ಕೆ ತಲುಪಿದೆ. ಸೋಂಕಿತರಲ್ಲಿ 1,620 ಮಂದಿ ಚೇತರಿಸಿಕೊಂಡಿದ್ದಾರೆ.

'ಜನ ಎಲ್ಲವನ್ನೂ ಗಮನಿಸುತ್ತಿದ್ದಾರೆ'

ದಾವಣಗೆರೆ: 'ವೀರಶೈವ ಬೇರೆ, ಲಿಂಗಾಯತ ಬೇರೆ ಎಂದು ಹೇಳುತ್ತಿದ್ದವರು ಕಾಂಗ್ರೆಸ್ ಸೋತು ಸುಣ್ಣವಾದ ಮೇಲೆ ಎರಡೂ ಒಂದೇ ಎಂದು ಹೇಳಿಕೊಂಡು ಬರುತ್ತಿದ್ದಾರೆ' ಎಂದು ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಟೀಕಿಸಿದ್ದಾರೆ.

ಶನಿವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುತ್ತೇವೆ ಎಂದು ಎಂ.ಬಿ.ಪಾಟೀಲ ಹೇಳಿದ್ದಾರೆ. ಅದು ಸರಿ. ಬೇರೆ ಮಾಡಲು ಹೊರಟವರು ಒಂದೇ ಎನ್ನುತ್ತಿರುವುದು ಒಳ್ಳೆಯ ಬೆಳವಣಿಗೆ. ಜನರು ದಡ್ಡರಲ್ಲ. ಎಲ್ಲವನ್ನೂ ನೋಡುತ್ತಿದ್ದಾರೆ. ನಾವೂ ಎಲ್ಲರನ್ನು ಜತೆಗೆ ಕರೆದುಕೊಂಡು ಹೋಗುತ್ತೇವೆ' ಎಂದರು.

ಲಭ್ಯತೆ ಆಧರಿಸಿ ತಮಿಳುನಾಡಿಗೆ ನೀರು: ಕಾರಜೋಳ

ಹುಬ್ಬಳ್ಳಿ: 'ಕಾವೇರಿ ನದಿಯಿಂದ ತಮಿಳುನಾಡಿಗೆ ಬಿಡಬೇಕಾದ ನೀರಿನ ಪ್ರಮಾಣದಲ್ಲಿ ಪ್ರಸ್ತುತ ವರ್ಷ 27.987 ಟಿಎಂಸಿ ಅಡಿ ನೀರು ಕಡಿಮೆಯಾಗಿದೆ. ಜಲಾಶಯಗಳಲ್ಲಿನ ನೀರು ಎಷ್ಟಿದೆ ಎಂಬುದನ್ನು ಆಧರಿಸಿ ನೀರು ಹರಿಸಲಾಗುವುದು' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕುಡಿಯುವ ನೀರಿಗಾಗಿ ಮೇಕೆದಾಟು ಯೋಜನೆ ಅನುಷ್ಠಾನ ಮಾಡುತ್ತಿದ್ದೇವೆಯೇ ಹೊರತು ಕೃಷಿ ಉದ್ದೇಶಕ್ಕಾಗಿ ಅಲ್ಲ. ತಮಿಳುನಾಡು ಈ ಯೋಜನೆಗೆ ವಿನಾ ಕಾರಣ ಅಡ್ಡಿಪಡಿಸುತ್ತಿದೆ' ಎಂದು ಆರೋಪಿಸಿದರು.

'ಮೇಕೆದಾಟು ಯೋಜನೆಗೆ ನಮ್ಮ ರಾಜ್ಯದ ಪಾಲು ಮಾತ್ರ ಬಳಸಿಕೊಳ್ಳುತ್ತಿದ್ದೇವೆ. ಈ ಕುರಿತು ಎರಡೂ ರಾಜ್ಯಗಳು ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ಹಾಕಿವೆ. ನಮ್ಮ ಕಾನೂನು ತಜ್ಞರ ತಂಡ ವಾದ ಮಂಡಿಸಿ, ಶೀಘ್ರ ಸಮಸ್ಯೆ ಇತ್ಯರ್ಥ ಪಡಿಸಿಕೊಳ್ಳಲಿದೆ' ಎಂದು ಹೇಳಿದರು.

ಪಟ್ಟಣ ಪಂಚಾಯತ ಐನಾಪೂರ
ತಾ::ಕಾಗವಾಡ (STD 08339 254314) ಜಿ::ಬೆಳಗಾವಿ
Website:www.ainapurtown.mrc.gov.in E-Mail:itstaff_ulb_ainapur@yahoo.com
ಕ್ರಮ ಸಂಖ್ಯೆ:ಪಂಪ:ಕಾಮಗಾರಿ:ಘವನಿ:ಟೆಂಡರ:2021–22 ದಿನಾಂಕ:31–08–2021

॥ಟೆಂಡರ ಪ್ರಕಟಣೆ॥
॥ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ॥
(ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)

ಐನಾಪೂರ ಪಟ್ಟಣ ಪಂಚಾಯ ವ್ಯಾಪ್ತಿಯಲ್ಲಿ ಸನ್ 2021–22ನೇ ಸಾಲಿಗಾಗಿ ಘನತ್ಯಾಜ್ಯ ವಸ್ತು ನಿರ್ವಹಣೆ ಕುರಿತು ಮಾನವ ಸಂಪನ್ಮೂಲ ಪಡೆಯುವುದು ಅತೀ ಅವಶ್ಯಕತೆ ಇರುವುದರಿಂದ ಪಟ್ಟಣ ಪಂಚಾಯತ ಸಾಮಾನ್ಯ ನಿಧಿಯಲ್ಲಿ ಈ ಕೆಳಗೆ ವಿವರಿಸಿದ ಮಾನವ ಸಂಪನ್ಮೂಲ ಪೂರೈಕೆದಾರರು ಕೆಸಿ–8ರ ಪ್ರಕಾರ ಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ ಟೆಂಡರ ಸಲ್ಲಿಸಬಹುದು. ವಿವರ ಈ ಕೆಳಗಿನಂತಿದೆ.
ವಿಶೇಷ ಸೂಚನೆ: ಐನಾಪೂರ ಪಟ್ಟಣ ಪಂಚಾಯತಕ್ಕೆ ಅವಶ್ಯಕತೆ ಅನುಗುಣವಾಗಿ ಹೊರಗುತ್ತಿಗೆ ಕಾರ್ಮಿಕರನ್ನು ಪೂರೈಸಲು ಆದೇಶಿಸಿದಂತೆ ಮಾತ್ರ ಮಾನವ ಸಂಪನ್ಮೂಲ ಪೂರೈಸತಕ್ಕದ್ದು.
ಪ್ಯಾ ನಂ:1:ಕಾಮಗಾರಿ ಇಂಡೆಂಟ್ ನಂ.:TP:ANP:SWM:OSL:2021-22, ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):63.12,ಇ.ಎಂ.ಡಿ ಮೊತ್ತ (ರೂ.ಗಳಲ್ಲಿ): 126240.
ಟೆಂಡರ ಫಾರ್ಮ ವೆಬ್ ಸೈಟನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ:01–09–2021,ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ:13–09–2021 ಸಾಯಂಕಾಲ: 4:00 ಘಂಟೆವರೆಗೆ,ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 14–09–2021 ರ ಸಾಯಂಕಾಲ: 5:00 ಘಂಟೆಯ ನಂತರ, ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ:15–09–2021 ರ ಬೆಳಿಗ್ಗೆ 11:00 ಘಂಟೆಯ ನಂತರ,ಹೆಚ್ಚಿನ ಮಾಹಿತಿಗಾಗಿ Website:www.ainapurtown.mrc.gov.in & www.eproc.karnataka.gov.in ವೆಬ್‌ಸೈಟನಲ್ಲಿ ನೋಡಬಹುದು
ಸಹಿ/–ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ, ಐನಾಪೂರ
ಸಹಿ/–ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯತ ಐನಾಪೂರ
ಹಾಗೂ ತಹಶೀಲ್ದಾರರು ಕಾಗವಾಡ
DIPR/BGM/RO-NO-714/MCA/2021-22

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಾಗಿ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಪ್ರಧಾನ ಅಭಿಯಂತರರ ಕಛೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು – 560 009.

ಕಾಮಗಾರಿಯ ವಿವರ	ಟೆಂಡರ್ ಮೊತ್ತ ಇಎಂಡಿ
ಐಎಫ್‌ಟಿ ಸಂ: ಬೆಂಜಮಂ/ಪ್ರಅ/ಅಮುಅ(ಪ)–1/ತಾಂಸ/1961/2021–22	ದಿನಾಂಕ : 02.09.2021
800 ಮಿ ಮೀ –2200 ಮಿ.ಮೀ. ಶ್ರೇಣಿಯ ನೀರು ಹಂಚಿಕೆ ಕೊಳವೆ ಮಾರ್ಗಗಳು, ಫೀಡರ್ ಮೇನ್, ಇನ್‌ಲೆಟ್‌ಗಳಿಗೆ ಇನ್‌ಸರ್ಷನ್ ಮಾದರಿಯ ಮಲ್ಟಿ ಟ್ರಾಕ್(ಎರಡು ಮಾರ್ಗ) ಅಲ್ಟ್ರಾಸಾನಿಕ್ ಬಲ್ಕ್ ಫ್ಲೋ ಮೀಟರ್ ಅನ್ನು ಒದಗಿಸಿ, ಅಳವಡಿಸಿ, ಕಾರ್ಯಾಚರಣೆಗೊಳಿಸುವ ಕಾಮಗಾರಿ	ರೂ. 343.10 ಲಕ್ಷಗಳು ರೂ. 5.15 ಲಕ್ಷಗಳು

ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **04.10.2021 ಸಂಜೆ 5.30 ಗಂಟೆಯವರೆಗೆ.** ಟೆಂಡರ್ ತೆರೆಯುವ ದಿನಾಂಕ : **05.10.2021ರ ಸಂಜೆ 3.00 ಗಂಟೆಗೆ.**
ಸಹಿ/–
ಪ್ರಧಾನ ಅಭಿಯಂತರರು

ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.

ಕಾಮಗಾರಿಯ ವಿವರ	ಟೆಂಡರ್ ಮೊತ್ತ ಇಎಂಡಿ
ಐಎಫ್‌ಟಿ ಸಂ: ಬೆಂಜಮಂ/ಮುಅ(ತ್ಯಾನೀನಿ)/ಅಮುಅ(ತ್ಯಾನೀನಿ)–2/ತಾಂಸ–2/881/2021–22	ದಿನಾಂಕ : 03.09.2021
ಕಾಡಬೀಸನಹಳ್ಳಿ ಎಸ್.ಟಿ.ಪಿ.ಯಲ್ಲಿರುವ ಟ್ರಂಕ್ ಸೀವರ್‌ಗೆ ಸಂಪರ್ಕಿಸಲು ಹಳೆ ಏರ್‌ಪೋರ್ಟ್ ರಸ್ತೆಯಲ್ಲಿನ ಯಮಲೂರು ಸಿಗ್ನಲ್‌ನಿಂದ 1000 ಮಿ.ಮೀ. ವ್ಯಾಸದ ಆರ್.ಸಿ.ಸಿ ಎನ್‌ಪಿ–3 ದರ್ಜೆಯ ಒಳಚರಂಡಿ ಕೊಳವೆ ಮಾರ್ಗವನ್ನು ಒದಗಿಸಿ ಅಳವಡಿಸುವ ಕಾಮಗಾರಿ.	ರೂ. 366.00 ಲಕ್ಷಗಳು ರೂ. 5.49 ಲಕ್ಷಗಳು
ಐಎಫ್‌ಟಿ ಸಂ: ಬೆಂಜಮಂ/ಮುಅ(ತ್ಯಾನೀನಿ)/ಅಮುಅ(ತ್ಯಾನೀನಿ)–2/ತಾಂಸ–2/877/2021–22	ದಿನಾಂಕ : 02.09.2021
ಯಶವಂತಪುರ ವ್ಯಾಪ್ತಿಯ ತುಮಕೂರು ರಸ್ತೆಯ ಹತ್ತಿರ ಯಶವಂತಪುರ ಕೈಗಾರಿಕಾ ಉಪನಗರದ ಎಂಇಐ ರಸ್ತೆಯಲ್ಲಿ 900 ಮಿ.ಮೀ. ವ್ಯಾಸದ ಆರ್‌ಸಿಸಿ ಎನ್‌ಪಿ–3 ದರ್ಜೆಯ ಕೊಳವೆ ಮಾರ್ಗವನ್ನು ಒದಗಿಸಿ ಅಳವಡಿಸುವ ಕಾಮಗಾರಿ.	ರೂ. 376.00 ಲಕ್ಷಗಳು ರೂ. 5.64 ಲಕ್ಷಗಳು

ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **05.10.2021ರ ಸಂಜೆ 5.30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **08.10.2021ರ ಸಂಜೆ 4.00 ಗಂಟೆಗೆ.**
ಸಹಿ/–
ಮುಖ್ಯ ಅಭಿಯಂತರರು (ತ್ಯಾನೀನಿ)

ಟೆಂಡರ್ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದಕ್ಕೆ ಸಂಬಂಧಿಸಿದ ವಿವರಗಳನ್ನು https://eproc.karnataka.gov.in ಗೆ ಭೇಟಿ ನೀಡುವ ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.
ವಾಸಾಸಂಇ/ಬೆಂನ./ಜಿಎ/1423/2021–22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
KARNATAKA THANDA
#19/4, 2ನೇ ಮಹಡಿ, ಸೈರ್‌ಬಾಗ್ ಬಿಲ್ಡಿಂಗ್, ಕನ್ನಿಂಗ್ ಹ್ಯಾಂ ರೋಡ್, ಬೆಂಗಳೂರು–560052,
ಕಛೇರಿ ದೂರವಾಣಿ:080–22285561,62,63,65
E-mail:ktdclit@gmail.com, Website: www.banjarathanda.kar.nic.in

ಅರ್ಜಿ ಸಲ್ಲಿಸಲು ದಿನಾಂಕ ವಿಸ್ತರಣೆ
2021–22ನೇ ಸಾಲಿನ ವಿವಿಧ ಯೋಜನೆಗಳಿಗೆ ಪರಿಶಿಷ್ಟ ಜಾತಿಯ ಬಂಜಾರ /ಲಂಬಾಣಿ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನ
ಅರ್ಜಿ ಸಲ್ಲಿಸಲು ನಿಗಧಿಪಡಿಸಲಾಗಿದ್ದ ಕೊನೆಯ ದಿನಾಂಕ 05.09.2021 ನ್ನು ದಿನಾಂಕ 15.9.2021ರವರೆಗೆ ವಿಸ್ತರಿಸಲಾಗಿದೆ.

1. ಸ್ವಯಂ ಉದ್ಯೋಗ ಯೋಜನೆ: ನೇರಸಾಲ ಯೋಜನೆ,
2. ಉದ್ಯಮಶೀಲತಾ ಅಭಿವೃದ್ಧಿ ಯೋಜನೆ: (ಐ.ಎಸ್.ಬಿ)
3. ಪ್ರೇರಣಾ (ಮೈಕ್ರೋ ಕ್ರೆಡಿಟ್ ಫೈನಾನ್ಸ್)ಯೋಜನೆ
4. ಗಂಗಾ ಕಲ್ಯಾಣ ಯೋಜನೆ
5. ಭೂ – ಒಡೆತನ ಯೋಜನೆ:

ಫಲಾಪೇಕ್ಷಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಮತ್ತು ದಾಖಲೆಗಳನ್ನು ನಿಗಮದ ವೆಬ್‌ಸೈಟ್ www.banjarathanda.kar.nic.in ಮೂಲಕ ಸಲ್ಲಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಯಲ್ಲಿನ ನಿಗಮದ ಜಿಲ್ಲಾ ವ್ಯವಸ್ಥಾಪಕರುಗಳು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/–
(ಯು. ಚಂದ್ರಾನಾಯಕ್)
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಬೆಂ.ನ./ಜಿಎ/1420/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿ ಮೈಸೂರು ಜಿಲ್ಲೆ, ಮೈಸೂರು
ನಂ.5/1, ವಿನೋಬ ರಸ್ತೆ, ಪ್ರೀಮಿಯರ್ ಸ್ಟುಡಿಯೋ ಎದುರು, ಮಾನಸಗಂಗೋತ್ರಿ ಮೈಸೂರು–570006.
ಸಂಖ್ಯೆ:ಜಿಕೌಕಮೈ/ಹೊ.ಗು.ವ/ಸಿ.ಆರ್–9ಬಿ/2021/22/187 ದಿನಾಂಕ: 03.09.2021
ಟೆಂಡರ್ ಅಧಿಸೂಚನೆ
ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿ, ಮೈಸೂರು ಈ ಕಚೇರಿಯ ಕಾರ್ಯಗಳಿಗೆ ಹವಾನಿಯಂತ್ರಿತ ಒಂದು (01) ಚಾಲಕ ಸಹಿತ ವಾಹನ (ಕಾರು)ವನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದಲ್ಲಿ ಪೂರೈಕೆ ಮಾಡಲು ಇಚ್ಛೆಯುಳ್ಳ ಏಜೆನ್ಸಿಯವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ರೂ.100–00 ಗಳನ್ನು ಪಾವತಿಸಿ ಕಚೇರಿಯಿಂದ ಟೆಂಡರ್ ನಮೂನೆಯನ್ನು ಪಡೆದುಕೊಂಡು, ಭರ್ತಿ ಮಾಡಿದ ಟೆಂಡರ್ ನಮೂನೆಗಳನ್ನು ಅವಶ್ಯ ದಾಖಲಾತಿಗಳೊಂದಿಗೆ ಸೀಲ್ ಮಾಡಿದ ಲಕೋಟೆಗಳಲ್ಲಿ **ದಿನಾಂಕ: 22.09.2021ರಂದು ಸಂಜೆ 4.00 ಗಂಟೆಯೊಳಗೆ** ಸಲ್ಲಿಸಲು ತಿಳಿಸಲಾಗಿದೆ. ಟೆಂಡರ್‌ದಾರರು ಸಲ್ಲಿಸಿರುವ ತಾಂತ್ರಿಕ ಬಿಡ್‌ಗಳನ್ನು **ದಿನಾಂಕ 23.09.2021 ರಂದು ಪೂರ್ವಾಹ್ನ 11.00 ಗಂಟೆಗೆ** ಪರಿಶೀಲಿಸಲಾಗುವುದು. ಹೆಚ್ಚಿನ ವಿವರಗಳನ್ನು ಕಚೇರಿಯಿಂದ ಪಡೆಯಲು ತಿಳಿಸಲಾಗಿದೆ. **(ದೂರವಾಣಿ ಸಂಖ್ಯೆ: 0821–2970815).**
ಸಹಿ/– ಸಹಾಯಕ ನಿರ್ದೇಶಕರು
ಜಿಲ್ಲಾ ಕೌಶಲಾಭಿವೃದ್ಧಿ ಕಚೇರಿ, ಮೈಸೂರು
DIPR/MYS/KAVITA/471/2021-22

(ಕರ್ನಾಟಕ ಸರ್ಕಾರ)
ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ, ಕಾವೇರಿ ಜಲಾನಯನ ಯೋಜನೆಗಳು. ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾಡಾ ನಂ.1 ವಿಭಾಗ, ತುಮಕೂರು
ಟೆಂಡರ್ ಪ್ರಕಟಣೆ ಸಂಖ್ಯೆ: 02/2021–22
ದಿನಾಂಕ: 03.09.2021
(K/W-1) (Through e-procurement Only) ಹಾಸನ ಜಿಲ್ಲೆ ವ್ಯಾಪ್ತಿಯ ಯಗಚಿ ಯೋಜನೆಯ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಆಲೂರು ಮತ್ತು ಬೇಲೂರು ತಾಲ್ಲೂಕುಗಳ ಆಯಕಟ್ಟು ರಸ್ತೆ ನಿರ್ಮಾಣ ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ರೂ.5.93 ಲಕ್ಷದಿಂದ ರೂ.12.16 ಲಕ್ಷಗಳ ವರೆಗೆ ಒಟ್ಟು 5 ಕಾಮಗಾರಿಗಳನ್ನು ಕೈಗೊಳ್ಳಲು eportal ಮೂಲಕ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್‌ನಲ್ಲಿ http://eproc.karnataka.gov.in ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ:06.09.2021 ರಿಂದ 15.09.2021 ರವರೆಗೆ ಸಂಜೆ 4.00 ಗಂಟೆವರೆಗೆ 2.ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ:15.09.2021 ಸಂಜೆ 4.00 ಗಂಟೆವರೆಗೆ 3.ಭರ್ತಿ ಮಾಡಿದ ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ತೆರೆಯುವ ದಿನಾಂಕ:16.09.2021 ಸಂಜೆ 5.00 ಗಂಟೆಯ ನಂತರ ಭರ್ತಿ ಮಾಡಿದ ಟೆಂಡರ್ ಅನ್ನು ತೆರೆಯುವ ದಿನಾಂಕವು ಸಾರ್ವತ್ರಿಕ ರಜಾದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು. ನಿಬಂಧನೆಗಳು ಹಾಗೂ ಹೆಚ್ಚಿನ ವಿವರಗಳಿಗೆ, ಕಛೇರಿ ವೇಳೆಯಲ್ಲಿ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾಡಾ ನಂ.1 ವಿಭಾಗ, ತುಮಕೂರು ರವರನ್ನು ಸಂಪರ್ಕಿಸುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಕಾಡಾ ನಂ.1 ವಿಭಾಗ, ಕಾ.ಜ.ಯೋ. ತುಮಕೂರು
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/371/2020–21

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಐ.ಎಫ್.ಟಿ ಸಂಖ್ಯೆ 07/2021–22 ದಿನಾಂಕ 02–09–2021
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಹುಣಸೂರು ವಿಭಾಗ ವ್ಯಾಪ್ತಿಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಯಾಗಿರುವ ಒಟ್ಟು 04 ರಸ್ತೆ ಮತ್ತು ಕಟ್ಟಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿನ "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೊಂದಾಯಿತ ಸಮುಚಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಟೆಂಡರ್ ದಾಖಲಾತಿಗಳನ್ನು ಕ್ರ.ಸಂ 01 ರಿಂದ 3 ರ ಕಾಮಗಾರಿಗಳಿಗೆ ದಿ: 03.09.2021 ರಿಂದ ಮತ್ತು ಕ್ರ.ಸಂ 04 ರ ಕಾಮಗಾರಿಗೆ ದಿ: 07.09.2021 ರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಕಾಮಗಾರಿಗಳ ಪೈಕಿ ಟೆಂಡರಿಗಿಟ್ಟ ಮೊತ್ತ ರೂ.222.63 ಲಕ್ಷ ಗರಿಷ್ಟ ಹಾಗೂ ರೂ.75.83 ಲಕ್ಷ ಕನಿಷ್ಟ. ಇ.ಎಂ.ಡಿ. ರೂ.3.33 ಲಕ್ಷಗಳು ಗರಿಷ್ಟ ಹಾಗೂ ರೂ.1.78 ಲಕ್ಷಗಳು, ಕನಿಷ್ಟ. ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ ಕ್ರ.ಸಂ 01 ರಿಂದ 03ರ ಕಾಮಗರಿಗಳಿಗೆ ದಿ: 13.09.2021 ಮತ್ತು ಕ್ರ.ಸಂ 04 ರ ಕಾಮಗಾರಿಗೆ ದಿ: 16.09.2021 (16.00 ಗಂಟೆಯವರೆಗೆ) ಎಂದು ನಿಗಧಿಪಡಿಸಲಾಗಿದೆ. ಗುತ್ತಿಗೆ ಕಾಲಾವಧಿ ಗರಿಷ್ಟ 5–ತಿಂಗಳು ಮತ್ತು ಕನಿಷ್ಟ 3–ತಿಂಗಳು ಆಗಿರುತ್ತದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ವಿಶೇಷ ವಿಭಾಗ, ಹುಣಸೂರು
DIPR/DDMYS/MCA/465/2021-22

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಮೈಸೂರು ಗ್ರಾಮಾಂತರ ವಿಭಾಗ, ಮೈಸೂರು
ಸಂ.ಕರಾಸಾ/ಮೈಗ್ರಾವಿ.ಸಿ.ನೇ/98/2021–22 ದಿನಾಂಕ: 25–08–2021
ಪತ್ರಿಕಾ ಪ್ರಕಟಣೆ
ದಿ॥ ಬಿ.ಬಿ.ನಾರಾಯಣ, ಮಾಜಿ ನಿರ್ವಾಹಕ ಬಿ.ಸಂ. 71, ಹುಣಸೂರು ಘಟಕ, ಇವರ ಪತ್ನಿ ಶ್ರೀಮತಿ ಭಾಗ್ಯ ಆದ ನೀವು ಅನುಕಂಪದ ಆಧಾರದ ಮೇಲೆ ನೌಕರಿ ನೀಡಬೇಕೆಂದು ಕೋರಿ ದಿನಾಂಕ: 14–09–2018 ರಂದು ಮನವಿಯನ್ನು ಸಲ್ಲಿಸಿರುತ್ತೀರಿ. ಈ ಸಂಬಂಧ ವಿಭಾಗೀಯ ಭದ್ರತಾ ನಿರೀಕ್ಷಕರು ತನಿಖೆ ನಡೆಸಿ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯೊಂದಿಗೆ ನೌಕರಿ ಸಂಬಂಧ ನಿಮ್ಮಿಂದ ಪಡೆದು ಸಲ್ಲಿಸಿರುವ ದಾಖಲಾತಿ (ಜೆರಾಕ್ಸ್ ಪ್ರತಿ)ಗಳಾದ ಶಾಲಾ ವರ್ಗಾವಣೆ ಪತ್ರ, ಆಧಾರ ಕಾರ್ಡ್ & ಮೃತಾವಲಂಬಿತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರಗಳನ್ನು ಪರಿಶೀಲಿಸಲಾಗಿ, ನಿಮ್ಮ ಶಾಲಾ ವರ್ಗಾವಣೆ ಪತ್ರದಂತೆ ನಿಮ್ಮ ಹುಟ್ಟಿದ ದಿನಾಂಕ: 17–09–1973 ಗಳಾಗಿದ್ದು, ನೀವು ಅನುಕಂಪದ ಆಧಾರದ ನೌಕರಿಯನ್ನು ಕೋರಿ ಮನವಿ ಸಲ್ಲಿಸಿರುವ ದಿನಾಂಕಕ್ಕೆ ವಯಸ್ಸು 45 ವರ್ಷಗಳಾಗಿರುತ್ತದೆ.
ಕ.ರಾ.ರ.ಸಾ.ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ–2018ರ ಸುತ್ತೋಲೆಯಲ್ಲಿ ಅನುಕಂಪದ ಆಧಾರದ ನೇಮಕಾತಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿಗಳು 1982ರಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಗೆ 5 ವರ್ಷಗಳ ವಿನಾಯಿತಿಯನ್ನು ನೀಡಲಾಗಿದೆ. ಸದರಿ ವಯೋಮಿತಿಯನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ಇದ್ದಂತೆ ಪರಿಗಣಿಸುವುದು ಎಂಬ ನಿರ್ದೇಶನವಿದ್ದು, ನೀವು ಅನುಕಂಪದ ಆಧಾರದ ಮೇರೆಗೆ ನೌಕರಿಯನ್ನು ಕೋರಿ ಸಲ್ಲಿಸಿರುವ ದಿನಾಂಕಕ್ಕೆ ನಿಮ್ಮ ವಯಸ್ಸು 45 ವರ್ಷಗಳಾಗಿರುವುದರಿಂದ, ಕ.ರಾ.ರ.ಸಾ. ಸಂಸ್ಥೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನೀತಿ–2018ರ ಸುತ್ತೋಲೆಯನ್ವಯ ನೀವು ಅನುಕಂಪದ ಆಧಾರದ ನೌಕರಿ ಪಡೆಯಲು ಅರ್ಹರಾಗಿರುವುದಿಲ್ಲ ಎಂದು ತಿಳಿಸಿ ಹಿಂಬರಹವನ್ನು ನೀವು ಕಛೇರಿಗೆ ನೀಡಿದ ವಿಳಾಸಕ್ಕೆ ವಿಭಾಗದ ಭದ್ರತಾ ಸಿಬ್ಬಂದಿ ಜಾರಿಮಾಡಲು ಕಳುಹಿಸಲಾಗಿದ್ದು, ಸದರಿ ವಿಳಾಸದಲ್ಲಿ ನೀವು ಲಭ್ಯವಿಲ್ಲದ ಕಾರಣ ಹಾಗೂ ನಿಮ್ಮ ಪ್ರಸ್ತುತ ವಿಳಾಸದ ಬಗ್ಗೆ ಮಾಹಿತಿ ಇಲ್ಲದ ಕಾರಣ ಈ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿದೆ.
ಅನುಕಂಪದ ಆಧಾರದ ಮೇಲಿನ ಪರಿಶೀಲಿಸಲಾಗುತ್ತಿದ್ದು, ನಿಯಮಾವಳಿ ಅನುಸಾರ ಹಕ್ಕು ಎಂದು ಪರಿಗಣಿಸಲು ಅವಕಾಶ ಇರುವುದಿಲ್ಲ.

ಅರ್ಜಿದಾರರು	ಮೃತ ನೌಕರರ ವಿವರ	ವಿಳಾಸ
ಶ್ರೀಮತಿ ಭಾಗ್ಯ	ದಿ॥ ಬಿ.ಬಿ.ನಾರಾಯಣ, ಮಾಜಿ ನಿರ್ವಾಹಕ, ಬಿ.ಸಂ.71 ಹುಣಸೂರು ಘಟಕ, ಮೈಸೂರು ಗ್ರಾಮಾಂತರ ವಿಭಾಗ.	ಗೊರಹಳ್ಳಿ ಅಂಚೆ, ದೇವಿನಗರ ಗ್ರಾಮ, ಬೆಟ್ಟದಪುರ ಹೋಬಳಿ, ಪಿರಿಯಾಪಟ್ಟಣ ತಾ॥ ಮೈಸೂರು ಜಿಲ್ಲೆ.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ಮೈಸೂರು ಗ್ರಾಮಾಂತರ ವಿಭಾಗ.
ವಾ.ಸಾ.ಸಂ.ಇ/ಬೆಂ.ನಗರ/1415/ಆಕಾರ್/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಛೇರಿ, ವಿಜಯಪುರ. ದೂರವಾಣಿ ಸಂ: 08352–796060,
ಇ–ಮೇಲ್:ddwobijapur321@gmail.com
ಸಂಖ್ಯೆ: ಜಿವಿಹಿನಾಸಇ/ವಿಜ/ಸಾಸಟೆಪ್ರ/2021–2/470 ದಿನಾಂಕ:01.09.2021
ಇ–ಟೆಂಡರ್ ಪ್ರಕಟಣೆ
ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ವಿಜಯಪುರ ರವರು ಜಿಲ್ಲೆಯ ವಿಕಲಚೇತನರಿಗೆ ಇಲಾಖಾ ಅನುದಾನದಡಿ ಸಾಧನ ಸಲಕರಣೆ ಯೋಜನೆಯಡಿ ಉಚಿತವಾಗಿ ವಿತರಿಸಲು ಸಾಧನ ಸಲಕರಣೆಗಳಾದ ಸಾದಾ ಟ್ರೈಸಿಕಲ್ಸ್, ಗಾಲಿಕುರ್ಚಿ(ವಯಸ್ಕರು ಮತ್ತು ಚಿಕ್ಕ ಮಕ್ಕಳಿಗೆ), ಡಿಜಿಟಲ್ ಶ್ರವಣಸಾಧನ, ಟಾಕಿಂಗ್ ಬ್ರೈಲ್‌ವಾಚ್, ವಾಕರ್, ಕ್ರಚರ್ಸ್, ಎಲ್ಬೋ ಕ್ರಚರ್ಸ್, ಎಲೆಕ್ಟ್ರಿಕಲ್ ವೈಟ್‌ಕೇನ್ಸ್ ಎಕ್ಸಿಲರಿ ಕ್ರಚರ್ಸ್(ಬಗಲು ಬಡಿಗೆ) ಕೊಮೋಡ್ ಪಾಟ್, ಸಿಪಿ ಚೇರ್, ವಾಟರ್ ಪ್ರೂಫ್ ಬೆಡ್, ಎಮ್.ಆರ್.ಕಿಟ್ ಪೂರೈಸಲು ಸಂಬಂಧಿಸಿದ ತಯಾರಕ/ವಿತರಕ ಸಂಸ್ಥೆಗಳಿಂದ ಇ–ಟೆಂಡರ್ ಕರೆಯಲಾಗಿದೆ.
1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 15.09.2021** ಸಂಜೆ 5.00 ಗಂಟೆಯವರೆಗೆ. 2) ಟೆಂಡರ್‌ನ ಟೆಕ್ನಿಕಲ್ ಬಿಡ್ ತೆರೆಯುವ **ದಿನಾಂಕ: 17.09.2021** ಬೆಳಿಗ್ಗೆ 11.00 ಗಂಟೆಗೆ. 3) ಟೆಂಡರ್‌ನ ಫೈನಾನ್ಸಿಯಲ್ ಬಿಡ್ ತೆರೆಯುವ **ದಿನಾಂಕ: 20.09.2021** ಬೆಳಿಗ್ಗೆ 11.00 ಗಂಟೆಗೆ. ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳ ಪೂರ್ಣ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ನ ವಿಳಾಸ https://.eproc.karnataka.gov.in ಇಲ್ಲಿ ಸಂಪರ್ಕಿಸಬಹುದು.
ಸಹಿ/– ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು,
ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳು,ವಿಜಯಪುರ
ವಾಸಾಸಂಇ/ವಿಜಯಪುರ/260/ಎಂಸಿಎ/2021–22

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:JJM TENDER:2021–22/1120
ದಿನಾಂಕ:01.09.2021.
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:19/2020–21
(ಏಕ & ದ್ವಿ–ಲಕೋಟೆ ಪದ್ಧತಿ) 2&3ನೇ ಕರೆ
(e-procurement portal)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆ ಮದ್ದೂರು ಮತ್ತು ನಾಗಮಂಗಲ ತಾಲ್ಲೂಕಿನ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ (FHTC) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ **ರೂ.80.47 ಲಕ್ಷಗಳು.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:15.09.2021 ಸಂಜೆ:5:30 ಗಂಟೆಗೆ,** ತಾಂತ್ರಿಕ & ಆರ್ಥಿಕ ಬಿಡ್ ತೆರೆಯುವ **ದಿನಾಂಕ:16.09.2021 ಸಂಜೆ 5:35 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ:22.09.2021 ಬೆಳಿಗ್ಗೆ 11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08232–222363.
ಸಹಿ/–ಕಾರ್ಯಪಾಲಕ ಇಂಜಿನಿಯರರು,
ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.
DIPR/AD-MDY/MCA/314/2021-22

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಚಪ್ಪರದಕಲ್ಲು (ಬೀರಸಂದ್ರ), ದೇವನಹಳ್ಳಿ ತಾ.
ಬೆಂಗಳೂರು ಗ್ರಾಮಾಂತರ –562110 ದೂ: 080–29787463,
email: eerdwsd.bngr1@gmail.com
ಸಂ:ಕಾಪಾಅ/ಗ್ರಾ.ಕು.ನೀ.& ನೈರ್ಮಲ್ಯ ವಿಭಾಗ/ಬೆಂ.ಗ್ರಾ/ತಾ.ಶಾ/ಟೆಂಡರ್/21–22/404 ದಿನಾಂಕ: 02.09.2021
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 07/2021–22
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರರವರು 2021–22ನೇ ಸಾಲಿನ DMF-PMKKY ಯೋಜನೆಯಡಿ ಅನುಮೋದನೆಗೊಂಡ ಬೆಂಗಳೂರು ಗ್ರಾಮಂತರ ಜಿಲ್ಲೆಯ ದೇವನಹಳ್ಳಿ ಮತ್ತು ನೆಲಮಂಗಲ ತಾಲೂಕಿನ ಜಲಸಂಗ್ರಹಣಾ ಟ್ಯಾಂಕ್ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್ ಅನ್ನು ಸ್ವ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-1 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಇ.ಎಂ.ಡಿ, Declaration ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.
(1) ಟೆಂಡರ್ ದಸ್ತಾ ವೇಜುಗಳನ್ನು ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳುವ **ದಿನಾಂಕ: 03.09.2021 ಸಂಜೆ 4.00 ಗಂಟೆಯ** ನಂತರ (2) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 18.09.2021 ಸಂಜೆ 4.00 ಗಂಟೆವರೆಗೆ** (3) ಟೆಂಡರ್ ತೆರೆಯುವ **ದಿನಾಂಕ : 20.09.2021 ಸಂಜೆ 4:05 ಗಂಟೆಯ ವರೆಗೆ.**
ಸಹಿ/–
ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ಗ್ರಾಮಾಂತರ
ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/199/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭಾ ಕಾರ್ಯಾಲಯ, ಹಿರಿಯೂರು–577598
ಫೋನ್ ನಂ. 08193–263220, ಸಹಾಯವಾಣಿ: 08193–260020,
E-mail:tmchiriyur@yahoo.in Webist: hiriyurcity.mrc.gov.in
ನಂ.ನಹಿತಾವಿ(14) ಟೆಂಡರ್ ಸಂಖ್ಯೆ:ಸಿಆರ್–20/2021–22 ದಿ: 01.09.2021
ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಸ್ವ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭೆ ವ್ಯಾಪ್ತಿಯಲ್ಲಿ 2020–21ನೇ ಸಾಲಿನ 15ನೇ ಹಣಕಾಸು ಯೋಜನೆ ಹಾಗೂ 2013–14, 2015–16 ಮತ್ತು 2017–18ನೇ ಸಾಲಿನ ನಗರಸಭೆ ಎಸ್.ಎಫ್.ಸಿ ಮುಕ್ತ ನಿಧಿ (ಉಳಿಕೆ ಅನುದಾನ)ಗಳಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಐಟಂವಾರು ಇ–ಪ್ರಕ್ಯೂರ್‌ಮೆಂಟ್ ದ್ವಿ–ಟೆಂಡರ್ ಡಾಕ್ಯೂಮೆಂಟ್ ಪದ್ಧತಿಯಲ್ಲಿ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖೆ ವೆಬ್‌ಸೈಟ್ http://eproc.karnataka.gov.in ಮೂಲಕ ಕೆಳಗೆ ನಮೂದಿಸಿರುವ ದಿನಾಂಕ ಮತ್ತು ಸಮಯದ ಒಳಗಾಗಿ ಟೆಂಡರ್‌ಗಳನ್ನು ಸಲ್ಲಿಸುವುದು. ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. 1) ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 16.09.2021 ಸಂಜೆ 5.30ರವರೆಗೆ.. (2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 18.09.2021 ಸಂಜೆ 5.30ರ ನಂತರ. (3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): E-procurementನಲ್ಲಿ ತಿಳಿಸಿರುವಂತೆ ನಿಯಮಾನುಸಾರ.
ಕಾಮಗಾರಿಗಳ ಇಂಡೆಂಟ್ ವಿವರ:– (1) ಹಿರಿಯೂರು ನಗರಸಭೆ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್‌ಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸುವುದು. DMA/2021-22/OW/WORK-INDENT- 118905/Call-2. ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ:– 30.00
(2) ಹಿರಿಯೂರು ನಗರಸಭೆಯ ಘನತ್ಯಾಜ್ಯ ವಸ್ತು ನಿರ್ವಹಣೆಯ ಘಟಕದಲ್ಲಿ ಸಿಸಿ ಕ್ಯಾಮೆರಾ ಮತ್ತು ಪರಿಕರಣಗಳನ್ನು ಅಳವಡಿಸುವುದು. DMA/2021-22/OW/WORK-INDENT- 118907/Call-2. ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ:– 20.50.
(3) ಹಿರಿಯೂರು ನಗರಸಭೆಯಲ್ಲಿ ಪ್ರಮುಖ ರಸ್ತೆ ಮತ್ತು ವೃತ್ತಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಮತ್ತು ಮತ್ತು ಪರಿಕರಣಗಳನ್ನು ಅಳವಡಿಸುವುದು. DMA/2021-22/OW/WORK-INDENT- 118811/Call-2. ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ:– 19.71
ಈ ಮೇಲ್ಕಂಡ ಕಾಮಗಾರಿಗಳಿಗೆ ಇಎಂಡಿ ಘೋಷಣಾ ಪತ್ರದ ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿ ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಅಭಿಯಂತರರನ್ನು ಸಂಪರ್ಕಿಸಬಹುದು ಅಥವಾ ನಗರಸಭೆಯ ಅಂತರ್ಜಾಲ ತಾಣ hiriyurcity.mrc.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು ನಗರಸಭೆ, ಹಿರಿಯೂರು.
ಸಹಿ/– ಪೌರಾಯುಕ್ತರು. ನಗರಸಭೆ, ಹಿರಿಯೂರು.
DIPR/CTA/MCA/418/2021-22

ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಬೆನ್ನಲ್ಲೇ ರಾಜ್ಯ ಬಿಜೆಪಿಯಲ್ಲಿ ಭುಗಿಲೆದ್ದ ಅಸಮಾಧಾನ

ಬೊಮ್ಮಾಯಿಗೇ ನಾಯಕತ್ವ: ಬಿಎಸ್‌ವೈ–ಶೆಟ್ಟರ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಯಡಿಯೂರಪ್ಪ

ಜಗದೀಶ ಶೆಟ್ಟರ್

ಬೆಂಗಳೂರು: ‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲೇ ಮುಂದಿನ ವಿಧಾನಸಭೆ ಚುನಾವಣೆ ಎದುರಿಸಲಾಗುವುದು’ ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಬಿಜೆಪಿಯಲ್ಲಿ ಅತೃಪ್ತಿಯ ಹೊಗೆ ಎಬ್ಬಿಸಿದೆ.

ದಾವಣಗೆರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅಮಿತ್ ಶಾ, ಬೊಮ್ಮಾಯಿ ಆಡಳಿತ ವೈಖರಿಗೆ ಮೆಚ್ಚುಗೆ ಸೂಚಿಸಿದ್ದಲ್ಲದೇ, ಅವರ ನೇತೃತ್ವದಲ್ಲೇ ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದರು.

ಶಾ ಮಾತಿಗೆ ಬಹಿರಂಗವಾಗಿಯೇ ಆಕ್ಷೇಪ ವ್ಯಕ್ತಪಡಿಸಿದ್ದ ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ, ಸಾಮೂಹಿಕ ನಾಯಕತ್ವದಲ್ಲೇ ಚುನಾವಣೆ ಎದುರಿಸಲಾಗುವುದು ಎಂದು ಪ್ರತಿಪಾದಿಸಿದ್ದರು. ಒಂದು ತಿಂಗಳ ಕಾರ್ಯವೈಖರಿ ನೋಡಿಕೊಂಡು ಪಾಸೋ, ಫೇಲೋ ಎಂದು ಎಂದು ಹೇಳುವುದು ಕಷ್ಟ ಎಂದು ಶಾಸಕ ಜಗದೀಶ ಶೆಟ್ಟರ್ ಹೇಳಿದ್ದರು.

ಈ ಬೆಳವಣಿಗೆಯ ಬೆನ್ನಲ್ಲೇ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರನ್ನು ಶನಿವಾರ ಭೇಟಿಯಾದ ಜಗದೀಶ ಶೆಟ್ಟರ್ ಅವರು, ಅರ್ಧತಾಸಿಗೂ ಹೆಚ್ಚು ಹೊತ್ತು ಚರ್ಚಿಸಿದರು. ಯಡಿಯೂರಪ್ಪ ಜತೆ ತುಸು ಅಂತರ ಕಾಯ್ದುಕೊಂಡೇ ಬಂದಿದ್ದ ಶೆಟ್ಟರ್, ಈಗ ದಿಢೀರ್ ಭೇಟಿಯಾಗಿರುವುದು ಬಿಜೆಪಿ ಪಾಳೆಯದಲ್ಲಿ ಚರ್ಚೆಗೂ ಕಾರಣವಾಗಿದೆ.

ಮಾತುಕತೆಯ ಹೂರಣ: ಚುನಾವಣೆಗೆ ಸುಮಾರು ಒಂದು ಮುಕ್ಕಾಲು ವರ್ಷ ಇರುವಾಗ ಅಮಿತ್ ಶಾ ಏಕೆ ಈ ರೀತಿ ಘೋಷಣೆ ಮಾಡಿದರು ಎಂಬುದು ಯಡಿಯೂರಪ್ಪ–ಶೆಟ್ಟರ್ ಮಾತುಕತೆಯ ಪ್ರಧಾನ ಕೇಂದ್ರವಾಗಿತ್ತು ಎಂದು ಮೂಲಗಳು ಹೇಳಿವೆ.

‘ಬಿಜೆಪಿ/ ಸಂಘ ಪರಿವಾರದ ಸಿದ್ಧಾಂತದ ಬಗ್ಗೆ ಆಳವಾದ ಜ್ಞಾನ ಇಲ್ಲದೇ ಹೊರಗಿನಿಂದ ಬಂದ ಬೊಮ್ಮಾಯಿಯವರಿಗೆ ಏಕಾಏಕಿ ಪರಮೋಚ್ಚ ಹುದ್ದೆ ನೀಡಿರುವುದನ್ನು ಪಕ್ಷದ ವಿವಿಧ ಹಂತಗಳ ನಾಯಕರು, ಕಾರ್ಯಕರ್ತರು ಅರಗಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಹೊರಗಿನಿಂದ ಬಂದವರಿಗೆ ಪಕ್ಷದ ಉನ್ನತ ಹುದ್ದೆ ಅಥವಾ ಆಯಕಟ್ಟಿನ ಖಾತೆ ನೀಡುವ ಬಗ್ಗೆ ಯಾರ ತಕರಾರು ಇಲ್ಲ. ಆರೆಸ್ಸೆಸ್‌ನಿಂದ ಬಂದವರು ಹಾಗೂ ಪಕ್ಷಕ್ಕಾಗಿ ಜೀವ ತೇದವರಿಗೆ ಮುಖ್ಯಮಂತ್ರಿ ಹುದ್ದೆ ನೀಡಬೇಕು ಎಂಬುದು ಸಾಮಾನ್ಯ ಅಭಿಪ್ರಾಯವಾಗಿತ್ತು. ಇಂತಹ ಅಸಮಾಧಾನಗಳು ಶಮನವಾಗಿ, ಬೊಮ್ಮಾಯಿ ಅವರನ್ನು ಎಲ್ಲರೂ ಒಪ್ಪಿಕೊಳ್ಳುವುದಕ್ಕೆ ಶುರುಮಾಡಿದ್ದರು. ಈ ಹೊತ್ತಿನಲ್ಲಿ, ಅಮಿತ್ ಶಾ ಅವರ ಹೇಳಿಕೆ ಕೆಲವರ ಸಿಟ್ಟಿಗೆ ಕಾರಣವಾಗಿದೆ. ಅಮಿತ್ ಶಾ ಏಕೆ ಹೀಗೆ ಹೇಳಿದರು. ಇದು ಸರಿಯಾದ ಕ್ರಮವಲ್ಲ’ ಎಂದು ಶೆಟ್ಟರ್ ಅವರು ಯಡಿಯೂರಪ್ಪನವರ ಬಳಿ ಚರ್ಚಿಸಿದರು ಎಂದು ಗೊತ್ತಾಗಿದೆ.

‘ಚುನಾವಣೆಗೆ ಇನ್ನೂ ಬಹಳ ಸಮಯವಿದೆ. ಈ ಹೊತ್ತಿನಲ್ಲಿ ಇಂತಹ ಘೋಷಣೆ ಮಾಡಿರುವುದು ಪಕ್ಷದ ಮೂಲ ಕಾರ್ಯಕರ್ತರ ಭರವಸೆ ಕುಂದಿಸಿ, ವಿಶ್ವಾಸವನ್ನು ಧೃತಿಗೆಡಿಸಲಿದೆ’ ಎಂದು ಯಡಿಯೂರಪ್ಪ ಹೇಳಿದರು.

‘ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಕೂರಿಸಿರುವುದು ತಪ್ಪಲ್ಲ ಎಂದು ಒಪ್ಪಿಕೊಳ್ಳೋಣ. ಮುಂದಿನ ಚುನಾವಣೆಗೂ ಅವರದ್ದೇ ನಾಯಕತ್ವ ಎನ್ನುವುದಾದರೆ ಪಕ್ಷದ ಸಿದ್ಧಾಂತ, ಹಿಂದುತ್ವದ ಪ್ರತಿಪಾದನೆ ಮಾಡಿಕೊಂಡು ಸಂಘಟನೆಯನ್ನು ಬಲಪಡಿಸಿದವರು ಸುಮ್ಮನೇ ಕೂರಬೇಕೆ?’ ಎಂದು ನನಗೆ ದೂರವಾಣಿ ಕರೆ ಮಾಡಿದ ಅನೇಕರು ಪ್ರಶ್ನಿಸುತ್ತಿದ್ದಾರೆ. ಅವರಿಗೆಲ್ಲ ಏನು ಸಮಜಾಯಿಷಿ ಕೊಡುವುದು’ ಎಂದು ಶೆಟ್ಟರ್ ಪ್ರಶ್ನಿಸಿದ್ದಾಗಿ ಮೂಲಗಳು ವಿವರಿಸಿವೆ.

‘ಈ ಹೇಳಿಕೆಗೆ ಕಾರಣವೇನು ಎಂಬುದು ಗೊತ್ತಾಗುತ್ತಿಲ್ಲ. ಹಾಗೊಂದು ವೇಳೆ ಘೋಷಣೆ ಮಾಡಲೇಬೇಕೆಂದಿದ್ದರೆ ಅಮಿತ್ ಶಾ ಅವರು ಪಕ್ಷದ ರಾಜ್ಯ ಮಟ್ಟದ ನಾಯಕರ ಜತೆ ಸಮಾಲೋಚನೆ ನಡೆಸಬಹುದಿತ್ತು. ಕಾಲ ಇನ್ನೂ ಮಿಂಚಿಲ್ಲ. ಸ್ವಲ್ಪ ಸಮಾಧಾನದಿಂದ ಎಲ್ಲವನ್ನೂ ಗಮನಿಸೋಣ’ ಎಂದು ಯಡಿಯೂರಪ್ಪ ಹೇಳಿದ್ದಾಗಿ ಗೊತ್ತಾಗಿದೆ.

‘1–5 ತರಗತಿ: ಇನ್ನೂ ತೀರ್ಮಾನಿಸಿಲ್ಲ’

ಪ್ರಜಾವಾಣಿ ವಾರ್ತೆ


ಬಸವರಾಜ ಬೊಮ್ಮಾಯಿ

ಬೆಂಗಳೂರು: ‘ಸದ್ಯ 6, 7 ಮತ್ತು 8ನೇ ತರಗತಿ ಆರಂಭಿಸಲಾಗುತ್ತಿದ್ದು, ಪರಿಸ್ಥಿತಿ ಅವಲೋಕಿಸಿ 1ರಿಂದ 5ನೇ ತರಗತಿ ಆರಂಭಿಸುವ ಬಗ್ಗೆ ನಿರ್ಧರಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು ‘1ರಿಂದ 5ರವರೆಗಿನ ತರಗತಿ ಆರಂಭಿಸುವ ಬಗ್ಗೆ ಈವರೆಗೆ ಯಾವುದೇ ಚರ್ಚೆ ಮಾಡಿಲ್ಲ’ ಎಂದರು. ‘ರ‍್ಯಾಲಿ, ಚುನಾವಣೆ, ಸಭೆ ಸಮಾರಂಭಗಳಲ್ಲಿ ಎಷ್ಟು ಜನ ಸೇರಬೇಕು ಎಂಬ ಬಗ್ಗೆ ಸದ್ಯದಲ್ಲೇ ಮಾರ್ಗಸೂಚಿ ಹೊರಡಿಸಲಾಗುವುದು’ ಎಂದೂ ಅವರು ಹೇಳಿದರು.

₹ 17.18 ಕೋಟಿ ವೆಚ್ಚಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ, ಮುದ್ರಾಂಕ ಇಲಾಖೆಗೆ ಬ್ಯಾಟರಿ ಖರೀದಿ

ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ ಟೂಲ್ ಕಿಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳ 13,061 ವಿದ್ಯಾರ್ಥಿಗಳಿಗೆ ₹ 17.18 ಕೋಟಿ ವೆಚ್ಚದಲ್ಲಿ ಅಗತ್ಯ ಸಲಕರಣೆಗಳನ್ನು ಒಳಗೊಂಡ ‘ಟೂಲ್ ಕಿಟ್’ಗಳನ್ನು ಖರೀದಿಸಿ, ವಿತರಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಶನಿವಾರ ಅಂಗೀಕಾರ ನೀಡಿದೆ.

ಈ ಕುರಿತು ವಿವರ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, ‘ಪರಿಶಿಷ್ಟ ಜಾತಿಯ ವಿಶೇಷ ಘಟಕ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ ಅನುದಾನದಲ್ಲಿ ಈ ವಿದ್ಯಾರ್ಥಿಗಳಿಗೆ ಟೂಲ್ ಕಿಟ್ ವಿತರಿಸಲಾಗುವುದು’ ಎಂದರು.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಚಿಕ್ಕಕಲ್ಯ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಗ್ರಾಮಗಳಲ್ಲಿ ₹ 101.97 ಕೋಟಿ ವೆಚ್ಚದಲ್ಲಿ ಸರ್ಕಾರಿ ತಾಂತ್ರಿಕ ತರಬೇತಿ ಕೇಂದ್ರ ಸ್ಥಾಪಿಸುವ ಪ್ರಸ್ತಾವಕ್ಕೂ ಒಪ್ಪಿಗೆ ದೊರಕಿದೆ. ನಬಾರ್ಡ್‌ನ ಆರ್‌ಐಡಿಎಫ್ ಅನುದಾನದಲ್ಲಿ ಕಾಮಗಾರಿ ನಡೆಯಲಿದೆ ಎಂದರು.

ರಾಜ್ಯ ಬೀಜ ನಿಗಮಕ್ಕೆ ಬೀಜೋತ್ಪಾದನಾ ಕೆಲಸಗಳಿಗೆ ನೀಡಿದ್ದ ನಗದು ಸಾಲ ಸೌಲಭ್ಯದ ಖಾತರಿ ಮೊತ್ತವನ್ನು ₹ 10 ಕೋಟಿಯಿಂದ ₹ 20 ಕೋಟಿಗೆ ಹೆಚ್ಚಿಸಲಾಗಿದೆ. ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಜತೆಗೆ ಬೀಜ ನಿಗಮಕ್ಕೂ ರಸಗೊಬ್ಬರದ ದಾಸ್ತಾನಿಗೆ ಅನುಮತಿ ನೀಡಿದ್ದು, ₹ 200 ಕೋಟಿ ದುಡಿಯುವ ಬಂಡವಾಳಕ್ಕೆ ಸರ್ಕಾರ ಖಾತರಿ ಒದಗಿಸಲು ನಿರ್ಧರಿಸಿದೆ ಎಂದರು.

ತುಮಕೂರು ಸಿದ್ದಗಂಗಾ ಮಠದ ಪೀಠಾಧ್ಯಕ್ಷರಾಗಿದ್ದ ಶಿವಕುಮಾರ ಸ್ವಾಮೀಜಿ ಅವರ ಹುಟ್ಟೂರು ಮಾಗಡಿ ತಾಲ್ಲೂಕಿನ ವೀರಾಪುರದಲ್ಲಿ ₹ 25 ಕೋಟಿ ವೆಚ್ಚದಲ್ಲಿ ಸಾಂಸ್ಕೃತಿಕ ಹಾಗೂ ಪಾರಂಪರಿಕ ಕೇಂದ್ರ ಸ್ಥಾಪನೆಯ ಕಾಮಗಾರಿಯನ್ನು ಗುತ್ತಿಗೆದಾರರಿಂದ ಹಿಂಪಡೆದು ರಾಜ್ಯ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮಕ್ಕೆ ವಹಿಸುವ ಪ್ರಸ್ತಾವಕ್ಕೂ ಸಭೆ ಒಪ್ಪಿಗೆ ನೀಡಿದೆ. ಮೊದಲ ಹಂತದಲ್ಲಿ ₹ 5 ಕೋಟಿ ಅನುದಾನ ಬಿಡುಗಡೆಗೆ ಒಪ್ಪಿಗೆ ದೊರಕಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ಬ್ಯಾಟರಿ, ಯುಪಿಎಸ್ ಖರೀದಿ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಚೇರಿಗಳಿಗೆ ₹12.65 ಕೋಟಿ ವೆಚ್ಚದಲ್ಲಿ ಬ್ಯಾಟರಿ ಹಾಗೂ ಯುಪಿಎಸ್ ಸಾಧನಗಳನ್ನು ಅಳವಡಿಸುವ ಪ್ರಸ್ತಾವಕ್ಕೂ ಸಂಪುಟ ಸಭೆ ಸಮ್ಮತಿಸಿದೆ ಎಂದರು.

ಸಂಪುಟ ಸಭೆಯ ಇತರ ತೀರ್ಮಾನಗಳು

- ಕೋವಿಡ್ ರೋಗಿಗಳ ಚಿಕಿತ್ಸೆಗೆ ಔಷಧಿ ಖರೀದಿಗೆ ₹ 17.72 ಕೋಟಿ ಮಂಜೂರು
- ಹೂಡಿಕೆ ಸಮಾಲೋಚಕರಾಗಿ ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಒಂದು ವರ್ಷದ ಅವಧಿಗೆ ಮುಂದುವರಿಕೆ.
- ಮೊಳಕಾಲ್ಮೂರು ಮಿನಿ ವಿಧಾನಸೌಧಕ್ಕೆ ₹ 10.97 ಕೋಟಿ ಮತ್ತು ಕುಮಟಾ ಮಿನಿ ವಿಧಾನಸೌಧಕ್ಕೆ ₹ 12.28 ಕೋಟಿ ಮಂಜೂರು
- ಭದ್ರಾ ಮೇಲ್ದಂಡೆ ಯೋಜನೆಗೆ ಸ್ವಾಧೀನಪಡಿಸಿಕೊಂಡಿರುವ ನರಸಿಂಹರಾಜಪುರ ತಾಲ್ಲೂಕಿನ 116 ಎಕರೆ ಮತ್ತು ಅಜ್ಜಂಪುರ ತಾಲ್ಲೂಕಿನ 115 ಎಕರೆ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಪರಿಹಾರ ಹೆಚ್ಚಳ.
- ಮೈಸೂರಿನ ವಿದ್ಯಾರಣ್ಯಪುರ ಡಂಪಿಂಗ್ ಸ್ಥಳದಲ್ಲಿ ಪಾರಂಪರಿಕ ತ್ಯಾಜ್ಯದ ‘ಬಯೋ ಮೈನಿಂಗ್’ಗೆ ₹ 14.38 ಕೋಟಿ.

ಗಣೇಶೋತ್ಸವಕ್ಕೆ ಅನುಮತಿ: ಸಿ.ಎಂಗೆ ಅಧಿಕಾರ

ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡುವ ವಿಷಯದಲ್ಲಿ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೇ ನೀಡುವ ನಿರ್ಣಯವನ್ನು ಶನಿವಾರ ನಡೆದ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ.

‘ಗಣೇಶೋತ್ಸವದ ಕುರಿತು ಸಂಪುಟ ಸಭೆಯಲ್ಲಿ ಚರ್ಚೆ ನಡೆಯಿತು. ಕೆಲವು ಜಿಲ್ಲೆಗಳಲ್ಲಿ ಇನ್ನೂ ವಾರಾಂತ್ಯದ ಕರ್ಫ್ಯೂ ಜಾರಿಯಲ್ಲಿದೆ. ಕೋವಿಡ್ ನಿಯಂತ್ರಣಕ್ಕೆ ತೊಂದರೆ ಆಗದಂತೆ ನಿರ್ಧಾರ ಕೈಗೊಳ್ಳಬೇಕಿದೆ. ಆದ್ದರಿಂದ ಗಣೇಶೋತ್ಸವಕ್ಕೆ ಅನುಮತಿ ನೀಡುವುದನ್ನು ಮುಖ್ಯಮಂತ್ರಿಯವರ ವಿವೇಚನೆಗೆ ಬಿಡಲು ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು’ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಮುಖ್ಯಮಂತ್ರಿಯವರು ರಾಜ್ಯ ಎಲ್ಲ ಜಿಲ್ಲಾಧಿಕಾರಿಗಳ ಜತೆ ಸಭೆ ನಡೆಸಲಿದ್ದಾರೆ. ಕೋವಿಡ್ ನಿಯಂತ್ರಣ ಸ್ಥಿತಿ ಕುರಿತು ಸಂಪೂರ್ಣ ಮಾಹಿತಿ ಪಡೆದ ಬಳಿಕ ಅಂತಿಮ ನಿರ್ಧಾರಕ್ಕೆ ಬರುತ್ತಾರೆ. ಗಣೇಶೋತ್ಸವಕ್ಕೆ ಅನುಮತಿ ನೀಡುವುದಕ್ಕೆ ಸಂಬಂಧಿಸಿದ ನಿರ್ಧಾರವನ್ನು ಎರಡು ದಿನಗಳಲ್ಲಿ ಪ್ರಕಟಿಸಲಿದ್ದಾರೆ ಎಂದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald--Prajavani Relief Trust’** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು **dept.fnc@printersmysore.co.in** ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - ***0404101200385***
IFSC code - ***CNRB0000404***
MICR Code - ***560015009***

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–
ಪ್ರಜಾವಾಣಿ ಪರಿಹಾರ ಟ್ರಸ್ಟ್,
ನಂ. 75, ಮಹಾತ್ಮಗಾಂಧಿ ರಸ್ತೆ,
ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ನೆರವು ಮರೆಯುವುದಿಲ್ಲ

ತಾಯಿಯ ಸಂಪಾದನೆಯಲ್ಲೇ ನನ್ನ, ತಮ್ಮನ ಶಿಕ್ಷಣ ಸಾಗಬೇಕು. ಇಬ್ಬರ ಶೈಕ್ಷಣಿಕ ವೆಚ್ಚಕ್ಕೆ ಹಣ ಹೊಂದಿಸುವುದು ತಾಯಿಗೆ ತುಂಬಾ ಕಷ್ಟವಾಗಿತ್ತು. ಮನೆಯ ಹಣಕಾಸು ಪರಿಸ್ಥಿತಿ ನೆನೆದು ಶಿಕ್ಷಣ ಮುಂದುವರಿಸುವುದು ಹೇಗೆಂದು ಚಿಂತೆಯಾಗಿತ್ತು. ಆಗ ‘ಪ್ರಜಾವಾಣಿ’ ಶೈಕ್ಷಣಿಕ ನೆರವು ನಿಧಿಯು ನನ್ನ ಶಿಕ್ಷಣಕ್ಕೆ ಸಹಾಯಹಸ್ತ ಚಾಚಿತು. ಪತ್ರಿಕೆ ನೀಡಿದ ಆರ್ಥಿಕ ನೆರವಿನಲ್ಲಿ ಪ್ರವೇಶ ಶುಲ್ಕ ಪಾವತಿಸಿದೆ. ಪತ್ರಿಕೆಯ ಸಾಮಾಜಿಕ ಕಾಳಜಿ ಮರೆಯುವುದಿಲ್ಲ.

ಎಂ.ಎನ್.ಸುಮನಾ, ಮಂಜಲನಗರ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ

ಪುಸ್ತಕ ಖರೀದಿಸಿದೆ

‘ಪ್ರಜಾವಾಣಿ’ ಬಳಗ ನೀಡಿದ ವಿದ್ಯಾರ್ಥಿ ವೇತನದ ಸ್ವಲ್ಪ ಹಣವನ್ನು ಪುಸ್ತಕ ಖರೀದಿಸಲು ಬಳಸಿದೆ. ಉಳಿದುದರಲ್ಲಿ ಕಾಲೇಜು ಶುಲ್ಕ ಪಾವತಿಸಿದೆ. ಈ ಮೊತ್ತ ಕಷ್ಟದ ಸಮಯದಲ್ಲಿ ಶಿಕ್ಷಣಕ್ಕೆ ನೆರವಾಯಿತು. ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದು, ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದೇನೆ.

ಶರಣ್ಯಾ ಆರ್., ಮದ್ದೂರು, ಯಳಂದೂರು ತಾಲ್ಲೂಕು, ಚಾಮರಾಜನಗರ

ಪರಿಸರಸ್ನೇಹಿ ಗಣೇಶ ಮೈಸೂರಿನ ಲಿಂಗಾಂಬುಧಿ ಪಾಳ್ಯದಲ್ಲಿರುವ ಅರಿವು ಶಾಲೆಯಲ್ಲಿ ನಡೆದ ಪರಿಸರಸ್ನೇಹಿ ಮಣ್ಣಿನ ಗಣೇಶ ಮೂರ್ತಿ ತಯಾರಿಸುವ ಕಾರ್ಯಾಗಾರದಲ್ಲಿ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡರು
ಪ್ರಜಾವಾಣಿ ಚಿತ್ರ/ ಬಿ.ಆರ್.ಸವಿತಾ

ರಾಜ್ಯದಲ್ಲಿ ಆನ್‌ಲೈನ್ ಜೂಜು ನಿಷೇಧ

ಒಂದನೇ ಪುಟದಿಂದ

ನೇರವಾಗಿ ಹಣ, ವರ್ಚ್ಯುಯಲ್ ಕರೆನ್ಸಿ, ಡಿಜಿಟಲ್ ಕರೆನ್ಸಿ, ಪಾಯಿಂಟ್ಸ್ ರೂಪದಲ್ಲಿರುವ ನಗದು ಸೇರಿದಂತೆ ಯಾವುದೇ ಸ್ವರೂಪದಲ್ಲಿ ಹಣವನ್ನು ಪಣವಾಗಿರಿಸಿ ಜೂಜಾಡುವುದರ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆಯಡಿ ಕ್ರಮ ಜರುಗಿಸಲು ಅವಕಾಶ ಕಲ್ಪಿಸಲಾಗುತ್ತದೆ ಎಂದು ತಿಳಿಸಿದರು.

ಕಂಪ್ಯೂಟರ್, ಮೊಬೈಲ್ ಅಪ್ಲಿಕೇಷನ್, ವರ್ಚ್ಯುಯಲ್ ವೇದಿಕೆ ಸೇರಿದಂತೆ ಇಂಟರ್‌ನೆಟ್ ಸೌಲಭ್ಯ ಬಳಸಿಕೊಂಡು ನಡೆಸುವ ಎಲ್ಲ ಬಗೆಯ ಜೂಜಾಟಗಳನ್ನೂ ಪೊಲೀಸ್ ಕಾಯ್ದೆಯ ವ್ಯಾಪ್ತಿಗೆ ತರಲಾಗುವುದು. ಆನ್‌ಲೈನ್ ಜೂಜಾಟಕ್ಕೆ ವೇದಿಕೆ ಕಲ್ಪಿಸುವವರು ರಾಜ್ಯದ ಒಳಗೆ ಅಥವಾ ಹೊರಗೆ ಯಾವುದೇ ಭಾಗದಲ್ಲಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳಲು ಕಾಯ್ದೆ ತಿದ್ದುಪಡಿಯಿಂದ ಅವಕಾಶವಾಗಲಿದೆ. ಇದೇ 13ರಿಂದ ನಡೆಯುವ ವಿಧಾನಮಂಡಲ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡಿಸಿ, ಅಂಗೀಕಾರ ಪಡೆಯಲಾಗುವುದು ಎಂದರು.

ಆನ್‌ಲೈನ್ ಜೂಜು ನಿಷೇಧಿಸುವಂತೆ ಕೋರಿ ದಾವಣಗೆರೆಯ ಡಿ.ಎಸ್. ಶಾರದಾ ಎಂಬುವವರು 2020ರ ನವೆಂಬರ್‌ನಲ್ಲಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಆನ್‌ಲೈನ್ ಜೂಜು ನಿಷೇಧಿಸಲು ಸಂಪುಟ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನದ ವಿವರ ಸಲ್ಲಿಸುವಂತೆ ನ್ಯಾಯಾಲಯ ಈ ಹಿಂದೆ ನಿರ್ದೇಶನ ನೀಡಿತ್ತು.

ಚಿನ್ನದ ಲೇಪ ಅಕ್ರಮ: ಅಧಿಕಾರಿ ಖುಲಾಸೆ

ಒಂದನೇ ಪುಟದಿಂದ

2011ರಿಂದ 2013ರ ಅವಧಿಯಲ್ಲಿ ನಡೆದಿದ್ದ ₹ 4.44 ಕೋಟಿ ವೆಚ್ಚದ ಕಾಮಗಾರಿಗಳಲ್ಲಿ ಅವ್ಯವಹಾರ ನಡೆಸಿದ್ದ ಆರೋಪ ಸುಬ್ರಹ್ಮಣ್ಯ ಮೇಲಿತ್ತು. 2016ರಲ್ಲಿ ಚಿತ್ರೀಕರಣಕ್ಕೆ ಅನುಮತಿ ನೀಡಿರುವ ಕುರಿತೂ ತನಿಖೆ ನಡೆಸಲಾಗಿತ್ತು. ಎರಡೂ ಪ್ರಕರಣಗಳಲ್ಲಿ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸದಿರಲು ತೀರ್ಮಾನಿಸಲಾಗಿದೆ.

‘ಚಿನ್ನದ ಲೇಪನ ಮತ್ತು ಇತರ ಕಾಮಗಾರಿಗಳಲ್ಲಿ ಅಧಿಕಾರಿ ತಪ್ಪು ಮಾಡಿಲ್ಲ ಎಂಬುದು ಮನವರಿಕೆಯಾಗಿದೆ. ಚಿತ್ರೀಕರಣಕ್ಕೆ ಅನುಮತಿ ಇತ್ತು ಎಂಬುದೂ ಸ್ಪಷ್ಟವಾಗಿದೆ. ಆದ್ದರಿಂದ ಲೋಕಾಯುಕ್ತರ ಶಿಫಾರಸು ತಿರಸ್ಕರಿಸುವ ತೀರ್ಮಾನ ಕೈಗೊಳ್ಳಲಾಗಿದೆ’ ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಜಿ.ಪಂ., ತಾ.ಪಂ. ಕ್ಷೇತ್ರ ಪುನರ್ ವಿಂಗಡಣೆಗೆ ಪ್ರತ್ಯೇಕ ಆಯೋಗ

ಒಂದನೇ ಪುಟದಿಂದ

ಸಂಪುಟ ಸಭೆಯ ಬಳಿಕ ವಿವರ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ, ‘ಪಂಚಾಯತ್ ರಾಜ್ ಸ್ಥಳೀಯ ಸಂಸ್ಥೆಗಳ ಕ್ಷೇತ್ರ ಪುನರ್‌ವಿಂಗಡಣೆಗೆ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಪ್ರತ್ಯೇಕ ಆಯೋಗ ರಚಿಸಲಾಗುವುದು. ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಆಯೋಗದ ಸದಸ್ಯರಾಗಿ ಮತ್ತು ಆಯುಕ್ತರು ಸದಸ್ಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಾರೆ’ ಎಂದರು.

ರಾಜ್ಯ ಚುನಾವಣಾ ಆಯೋಗದ ಮೂಲಕ ಸ್ಥಳೀಯ ಸಂಸ್ಥೆಗಳ ಕ್ಷೇತ್ರ ಪುನರ್‌ವಿಂಗಡಣೆ ನಡೆಯುತ್ತಿದೆ. ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಹೀಗಾಗಿ, ಪ್ರತ್ಯೇಕ ಆಯೋಗ ರಚನೆ ಅಗತ್ಯ. ಜಿಲ್ಲಾಧಿಕಾರಿ ಮತ್ತು ಆಯೋಗದ ಹಂತದಲ್ಲಿ ಆಕ್ಷೇಪಣೆಗಳನ್ನು ಸ್ವೀಕರಿಸಿ, ವಿಲೇವಾರಿ ಮಾಡಿದ ಬಳಿಕವೇ ಕ್ಷೇತ್ರ ಪುನರ್‌ವಿಂಗಡಣೆಯ ಆದೇಶ ಪ್ರಕಟಿಸಬೇಕು ಎಂಬ ಅಂಶವನ್ನು ಕಾಯ್ದೆ ತಿದ್ದುಪಡಿಯಲ್ಲಿ ಸೇರಿಸಲಾಗುವುದು. ಮೀಸಲಾತಿ ನಿಗದಿಗೂ ಇದೇ ಮಾದರಿ ಅಳವಡಿಸಲಾಗುವುದು ಎಂದು ಹೇಳಿದರು.

ಈಗ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆ ಪ್ರಶ್ನಿಸಿರುವ 2,000ಕ್ಕೂ ಹೆಚ್ಚು ಅರ್ಜಿಗಳು ಹೈಕೋರ್ಟ್‌ನಲ್ಲಿ ವಿಚಾರಣೆಯಲ್ಲಿವೆ. ಅಲ್ಲಿಯೂ ಕಾನೂನು ತೊಡಕಿನ ಪ್ರಶ್ನೆಯ ಕುರಿತು ಪ್ರಸ್ತಾಪವಾಗಿದೆ. ಪ್ರತ್ಯೇಕ ಆಯೋಗ ರಚಿಸುವ ಪ್ರಸ್ತಾವದ ಕುರಿತು ಹೈಕೋರ್ಟ್‌ಗೆ ಮಾಹಿತಿ ನೀಡಲಾಗುವುದು ಎಂದು ಸಚಿವರು ತಿಳಿಸಿದರು.

ಪ್ರತ್ಯೇಕ ಆಯೋಗ ರಚನೆ ಕುರಿತು ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಪುನರ್‌ವಿಂಗಡಣೆಯನ್ನು ಹೊಸದಾಗಿ ನಡೆಸಲು ಅವಕಾಶ ಕೋರಲು ಸಿದ್ಧತೆ ನಡೆಸಿದೆ. ನ್ಯಾಯಾಲಯ ಒಪ್ಪಿಗೆ ನೀಡಿದರೆ ಚುನಾವಣೆ ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಮೀಸಲಾತಿ ನಿಗದಿ ಅಧಿಕಾರವೂ ವಾಪಸ್: ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಮೀಸಲಾತಿ ನಿಗದಿ ಅಧಿಕಾರ 2003ರಿಂದಲೂ ರಾಜ್ಯ ಚುನಾವಣಾ ಆಯೋಗದ ಬಳಿ ಇದೆ. ಅದನ್ನು ರಾಜ್ಯ ಸರ್ಕಾರಕ್ಕೆ ವಾಪಸ್ ಪಡೆಯುವುದಕ್ಕೆ ಪೂರಕವಾಗಿ ತಿದ್ದುಪಡಿ ತರುವ ಪ್ರಸ್ತಾವಕ್ಕೂ ಸಂಪುಟ ಒಪ್ಪಿಗೆ ನೀಡಿದೆ.

ಭೂ ಮಂಜೂರಾತಿ: ಆದಾಯ ಮಿತಿ ₹ 1.20 ಲಕ್ಷಕ್ಕೆ ಹೆಚ್ಚಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭೂ ಕಂದಾಯ ಕಾಯ್ದೆ 1964ರ 94-ಸಿ ಅಡಿಯಲ್ಲಿ ಭೂ ಮಂಜೂರಾತಿಗೆ ಫಲಾನುಭವಿಗಳ ಅರ್ಹತೆ ನಿಗದಿಪಡಿಸಲು ವಾರ್ಷಿಕ ಆದಾಯ ಮಿತಿ ₹ 1.20 ಲಕ್ಷಕ್ಕೆ ಹೆಚ್ಚಿಸಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕಂದಾಯ ಸಚಿವ ಆರ್. ಅಶೋಕ ಅವರಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಪತ್ರ ಬರೆದಿದ್ದಾರೆ.

‘ಈ ಕಾಯ್ದೆ ಅನ್ವಯ, ಭೂ ಮಂಜೂರಾತಿಗೆ ವಾರ್ಷಿಕ ಗರಿಷ್ಠ ಆದಾಯದ ಮಿತಿ ₹ 30 ಸಾವಿರ ನಿಗದಿಪಡಿಸಲಾಗಿದೆ. ಈ ಮಿತಿ ಹೆಚ್ಚಿಸಲು ಅನುಕೂಲ ಆಗುವಂತೆ ಕಾಯ್ದೆಗೆ ತಿದ್ದುಪಡಿ ತರಬೇಕು’ ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

‘ಬಿಪಿಎಲ್ ರೇಷನ್ ಕಾರ್ಡ್ ಪಡೆಯಲು ವಾರ್ಷಿಕ ಆದಾಯ ಮಿತಿ ₹ 1.20 ಲಕ್ಷ ಎಂದು ಸರ್ಕಾರ ನಿಗದಿಪಡಿಸಿದೆ. ಹೀಗಾಗಿ, ಭೂ ಮಂಜೂರಾತಿಗೂ ಅಷ್ಟೇ ಮಿತಿ ನಿಗದಿಪಡಿಸಬೇಕು’ ಎಂದು ಮುಖ್ಯಮಂತ್ರಿ ಮತ್ತು ಕಂದಾಯ ಸಚಿವರಿಗೆ ಅವರು ಮನವಿ ಮಾಡಿದ್ದಾರೆ.

ಲಸಿಕೆಗೆ ಕಾರ್ಮಿಕ ನಿಧಿಯ ₹700 ಕೋಟಿ?

ಒಂದನೇ ಪುಟದಿಂದ

30 ಲಕ್ಷ ನೋಂದಾಯಿತ ಕಾರ್ಮಿಕರು ಸೇರಿ ರಾಜ್ಯದಲ್ಲಿ ಒಟ್ಟು 50 ಲಕ್ಷದಷ್ಟು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿದ್ದಾರೆ. ಎಲ್ಲರಿಗೂ ಕೆಲಸದ ಸ್ಥಳ, ನಿಗದಿತ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ನೀಡಲು ವಿಶೇಷ ಅಭಿಯಾನ ಆಯೋಜಿಸಲು ಯೋಜನೆ ರೂಪಿಸಿದೆ. ಮಂಡಳಿಯಲ್ಲಿ ನೋಂದಣಿ ಆಗದಿದ್ದರೂ ವಲಸೆ ಕಾರ್ಮಿಕರು ಸೇರಿ ಎಲ್ಲರಿಗೂ ಕೆಲಸದ ಸ್ಥಳದಲ್ಲೇ ಲಸಿಕೆ ನೀಡಲು ಕಾರ್ಯಾದೇಶದಲ್ಲಿ ಸೂಚಿಸಲಾಗಿದೆ.

ಈ ಕಾರ್ಯಕ್ಕೆ ಕಾರ್ಮಿಕ ನಿಧಿಯಲ್ಲಿನ ಹಣವನ್ನು ಬಳಸಿಕೊಳ್ಳಲು ಸರ್ಕಾರದಿಂದ ಅನುಮತಿಯನ್ನೂ ಪಡೆಯಲಾಗಿದೆ. ಬೆಂಗಳೂರಿನಲ್ಲಿ ಮೊದಲ ಹಂತದಲ್ಲಿ 2 ಲಕ್ಷ ಡೋಸ್ ಲಸಿಕೆ ಕೊಡಿಸಲು ₹15.60 ಕೋಟಿ ನಿಗದಿ ಮಾಡಿ ಕಾರ್ಯಾದೇಶ ಹೊರಡಿಸಲಾಗಿದೆ.

ಇದರ ಭಾಗವಾಗಿ ಖಾಸಗಿ ಸಹಭಾಗಿತ್ವದಲ್ಲಿ ಸೆ.2ರಂದು ಲಸಿಕಾ ಅಭಿಯಾನ ಆರಂಭಿಸಲಾಗಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಹಂತದ ರನ್ ವೇ ನಿರ್ಮಾಣ ಕಾಮಗಾರಿ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಲಸಿಕೆ ನೀಡಲಾಗಿದೆ. ಇದಕ್ಕೆ ಕಾರ್ಮಿಕ ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

‘ರಾಜ್ಯದಲ್ಲಿನ ಎಲ್ಲ ಕಾರ್ಮಿಕರಿಗೆ ಎರಡು ಡೋಸ್ ಲಸಿಕೆ ನೀಡಲು ಕನಿಷ್ಠ ₹700 ಕೋಟಿ ವೆಚ್ಚವಾಗಲಿದೆ. ಖಾಸಗಿ ಆಸ್ಪತ್ರೆಗಳ ಸಹಭಾಗಿತ್ವದಲ್ಲಿ ಕಾರ್ಮಿಕರ ನಿಧಿ ದೋಚಲು ಸರ್ಕಾರ ಮುಂದಾಗಿದೆ’ ಎಂದು ಕಾರ್ಮಿಕ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಎಲ್ಲರಿಗೂ ಖಚಿತ ಮತ್ತು ಉಚಿತ ಲಸಿಕೆ ನೀಡಲಾಗುವುದು ಎಂದು ಸರ್ಕಾರ ಹೇಳುತ್ತಿದೆ. ಆದರೆ, ನಿರ್ಮಾಣ ಕಾರ್ಮಿಕರಿಗೆ ಖಾಸಗಿ ಆಸ್ಪತ್ರೆಗಳ ಮೂಲಕ ಹಣ ಕೊಟ್ಟು ಲಸಿಕೆ ಕೊಡಿಸುವುದು ಎಷ್ಟು ಸರಿ’ ಎಂದು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್ ಪ್ರಶ್ನಿಸಿದರು.

‘ಕಾರ್ಮಿಕರಿಗೆ ಲಸಿಕೆ ಹಾಕಿಸಲು ನಮ್ಮ ವಿರೋಧ ಇಲ್ಲ. ಸರ್ಕಾರಿ ಆಸ್ಪತ್ರೆಗಳ ಮೂಲಕ ಅಭಿಯಾನ ನಡೆಸಬೇಕು. ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಬೇಕಾದ ಕಾರ್ಮಿಕ ನಿಧಿಯನ್ನು ಲಸಿಕೆಗೆ ವಿನಿಯೋಗಿಸಬಾರದು’ ಎಂದು ಒತ್ತಾಯಿಸಿದರು.

‘ಬೇರೆಲ್ಲಾ ವರ್ಗದ ನೌಕರರಿಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಸಿಕೆ ನೀಡಲಾಯಿತು. ಕಟ್ಟಡ ಕಾರ್ಮಿಕರಿಗೆ ಮಾತ್ರ ಅವರ ನಿಧಿಯ ಹಣ ಕೊಡಿ ಎಂದು ಕೇಳುವುದು ಯಾವ ನ್ಯಾಯ’ ಎಂದು ಪ್ರಶ್ನಿಸಿದರು.

> **ಖಾಸಗಿ ಆಸ್ಪತ್ರೆಗಳ ಮೂಲಕ ಕಾರ್ಮಿಕರಿಗೆ ಲಸಿಕೆ ಕೊಡಿಸಲು ಮುಖ್ಯ ಕಾರ್ಯದರ್ಶಿ ಅವರಿಂದ ನಿರ್ದೇಶನ ಬಂದಿತ್ತು. ಈಗ ಸರ್ಕಾರದಿಂದಲೇ ಉಚಿತವಾಗಿ ಕೊಡುವುದಾಗಿ ತಿಳಿಸಿದ್ದಾರೆ**
>
> **ಅಕ್ರಂ ಪಾಷಾ,** ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

> **ಕಾರ್ಮಿಕರಿಗೆ ಲಸಿಕೆ ನೀಡಲು ಖಾಸಗಿ ಆಸ್ಪತ್ರೆಗಳಿಗೆ ಕಾರ್ಮಿಕ ಇಲಾಖೆ ಕಾರ್ಯಾದೇಶ ನೀಡಿದೆ. ಈಗ ಬೇರೆ ಮಾಹಿತಿ ಸಿಗುತ್ತಿದೆ. ಇಲಾಖೆ ಯಾವ ರೀತಿ ಮುಂದುವರಿಯಲಿದೆ ಎಂದು ಕಾಯುತ್ತಿದ್ದೇವೆ**
>
> **ಎಚ್.ಎಂ.ಪ್ರಸನ್ನ,** ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಅಸೋಸಿಯೇಷನ್(ಫನಾ) ಅಧ್ಯಕ್ಷ

ಕೊಲ್ಲೂರು ಮೂಕಾಂಬಿಕೆ ದರ್ಶನಕ್ಕೆ ಆಧಾರ್ ಕಾರ್ಡ್ ಕಡ್ಡಾಯ

ಕುಂದಾಪುರ: ‘ಉಡುಪಿ ಜಿಲ್ಲೆಯ ಕೊಲ್ಲೂರು ಮೂಕಾಂಬಿಕೆ ದರ್ಶನಕ್ಕೆ ಬರುವ ಭಕ್ತರಿಗೆ ಇನ್ನು ಮುಂದೆ ಆಧಾರ್ ಕಾರ್ಡ್ ಕಡ್ಡಾಯ’ ಎಂದು ದೇವಸ್ಥಾನದ ಕಾರ್ಯ ನಿರ್ವಹಣಾಧಿಕಾರಿ ಎಸ್.ಪಿ.ಬಿ ಮಹೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋವಿಡ್-19 ನಿಯಂತ್ರಣಕ್ಕಾಗಿ, ಜಿಲ್ಲಾಧಿಕಾರಿ ಆದೇಶದಂತೆ, ಸೆ. 4ರಿಂದ ಆರಂಭಿಸಿ, ಮುಂದಿನ ಆದೇಶದವರೆಗೆ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಈ ನಿಯಮ ಅನ್ವಯವಾಗಲಿದೆ. ದೇವಾಲಯದ ಪ್ರವೇಶ ದ್ವಾರದಲ್ಲಿ ಭಕ್ತಾದಿಗಳ ಆಧಾರ್ ಕಾರ್ಡ್ ಪರಿಶೀಲಿಸಿ ಹೆಸರು, ಊರು, ದೂರವಾಣಿ ಸಂಖ್ಯೆ ದಾಖಲಿಸಲಾಗುತ್ತದೆ.

‘ಬೈಕ್, ಟಿವಿ ಕಾರಣಕ್ಕೆ ಬಿಪಿಎಲ್ ರದ್ದಾಗಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗ ಊರು: ‘ಬೈಕ್, ಟಿ.ವಿ, ಫ್ರಿಡ್ಜ್ ಹೊಂದಿರುವರೆಂಬ ಕಾರಣಕ್ಕೇ ಅಂತ್ಯೋದಯ ಅನ್ನ ಯೋಜನೆ (ಎಎವೈ) ಮತ್ತು ಬಿಪಿಎಲ್ (ಆದ್ಯತಾ) ಪಡಿತರ ಚೀಟಿ ರದ್ದುಪಡಿಸಿಲ್ಲ’ ಎಂದು ಆಹಾರ ಇಲಾಖೆ ಆಯುಕ್ತರಾದ ಶಮ್ಲಾ ಇಕ್ಬಾಲ್ ಸ್ಪಷ್ಟಪಡಿಸಿದ್ದಾರೆ.

ಬೈಕ್, ಟಿವಿ, ಫ್ರಿಡ್ಜ್ ಹೊಂದಿರುವ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿ ಹೊಂದಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳಲ್ಲಿ ಅವಕಾಶವಿದೆ’. ಇದೇ ಕಾರಣಕ್ಕೇ ಬಿಪಿಎಲ್ ಪಡಿತರ ಚೀಟಿ ರದ್ದುಪಡಿಸಲು ಯಾವುದೇ ನಿರ್ದೇಶನವನ್ನು ಸರ್ಕಾರ ನೀಡಿಲ್ಲ’ ಎಂದು ತಿಳಿಸಿದ್ದಾರೆ.

‘ನಿಗದಿತ ಮಾನದಂಡಗಳಿಗೆ ವಿರುದ್ಧವಾಗಿ ಎಎವೈ ಅಥವಾ ಬಿಪಿಎಲ್ ಪಡಿತರ ಚೀಟಿ ಪಡೆದಿದ್ದಲ್ಲಿ ಅನರ್ಹವೆಂದು ಗುರುತಿಸಲಾಗುತ್ತಿದೆ. ಅಂಥ ಪಡಿತರ ಚೀಟಿಗಳನ್ನು ಹಿಂದಿರುಗಿಸಲು ಸೂಚಿಸಲಾಗಿದೆ.

ಅನರ್ಹ ಪಡಿತರ ಚೀಟಿ

ವಿಷಯ	ಸಂಖ್ಯೆ
ಅನರ್ಹ ಕಾರ್ಡ್‌ಗಳು	3,55,516
ಎಎವೈ ಅನರ್ಹ ಕಾರ್ಡ್‌ಗಳು	27,527
ಎಪಿಎಲ್‌ಗೆ ಪರಿವರ್ತಿಸಿದ ಎಎವೈ ಕಾರ್ಡ್	7,413
ಅನರ್ಹ ಬಿಪಿಎಲ್ ಕಾರ್ಡ್	3,28,178
ಎಪಿಎಲ್‌ಗೆ ಪರಿವರ್ತಿಸಿದ ಬಿಪಿಎಲ್ ಕಾರ್ಡ್	1,09,790

ಅಲ್ಲದೆ, ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಮಾಡಿ ಎಪಿಎಲ್ (ಆದ್ಯತೇತರ) ಪಡಿತರ ಚೀಟಿಗಳಾಗಿ ಪರಿವರ್ತಿಸಲಾಗುತ್ತಿದೆ’ ಎಂದಿದ್ದಾರೆ.

‘ಮೂರು ಹೆಕ್ಟೇರ್‌ಗಿಂತ ಹೆಚ್ಚು ಜಮೀನು ಹೊಂದಿರುವ ಮತ್ತು ವಾರ್ಷಿಕ ಆದಾಯ ₹ 1.20 ಲಕ್ಷಕ್ಕಿಂತ ಹೆಚ್ಚು ಇರುವ ಕುಟುಂಬಗಳ ಪ್ರಸ್ತುತ ಸ್ಥಿತಿಗತಿ ಪರಿಶೀಲಿಸಿ ಬಿಪಿಎಲ್ ಅರ್ಹತೆ ನಿರ್ಧರಿಸಬೇಕು. ಅನರ್ಹರಾಗಿದ್ದರೆ ಎಪಿಎಲ್‌ಗೆ ಪರಿವರ್ತಿಸುವ ಬಗ್ಗೆ ವರದಿ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದರು.

‘ಆದಾಯ ತೆರಿಗೆ ಇಲಾಖೆ ಮತ್ತು ವಾರ್ಷಿಕ ವರಮಾನ ಹಾಗೂ ಇತರ ಕಾರಣಗಳಿಗಾಗಿ ಎಪಿಎಲ್ ಪಡಿತರ ಚೀಟಿಯಾಗಿ ಪರಿವರ್ತಿಸಿದ ಕೆಲವು ಕುಟುಂಬಗಳು ಸಲ್ಲಿಸುವ ಮನವಿಯನ್ನು ಮರು ಪರಿಶೀಲಿಸಿ, ಅರ್ಹತೆ ಇದ್ದರೆ ಮತ್ತೆ ಬಿಪಿಎಲ್ ಕುಟುಂಬಗಳಾಗಿ ಮುಂದುವರಿಸಲು ಕಾಲಕಾಲಕ್ಕೆ ಸೂಚನೆ ನೀಡಲಾಗುತ್ತಿದೆ. ಅರ್ಹ ಕುಟುಂಬಗಳ ಎಎವೈ ಮತ್ತು ಬಿಪಿಎಲ್ ಪಡಿತರ ಚೀಟಿಗಳನ್ನು ಆಧಾರರಹಿತವಾಗಿ ರದ್ದುಪಡಿಸಿದ್ದರೆ, ಎಪಿಎಲ್‌ಗೆ ಪರಿವರ್ತಿಸಿದರೆ, ಅಂಥವರು ತಹಶೀಲ್ದಾರ್, ಜಿಲ್ಲಾಧಿಕಾರಿ ಅಥವಾ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದು’ ಎಂದಿದ್ದಾರೆ. ರಾಜ್ಯದಲ್ಲಿ ಈವರೆಗೆ 27,527 ಎಎವೈ ಸೇರಿ ಒಟ್ಟು 3,55,516 ಅನರ್ಹ ಕಾರ್ಡ್‌ಗಳನ್ನು ಪತ್ತೆ ಹಚ್ಚಲಾಗಿದೆ. ಅದರಲ್ಲಿ ಸರ್ಕಾರಿ ನೌಕರರು ಪಡೆದ ಕಾರ್ಡ್‌ಗಳು 2,127. ಈ ಪೈಕಿ, 1,17,203 ಕಾರ್ಡ್‌ಗಳನ್ನು ಎಪಿಎಲ್‌ಗೆ ಪರಿವರ್ತಿಸಲಾಗಿದೆ.

ವಿಜಯಪುರ, ಕರಾವಳಿಯಲ್ಲಿ ಉತ್ತಮ ಮಳೆ

ಹುಬ್ಬಳ್ಳಿ: ಬಾಗಲಕೋಟೆ, ವಿಜಯಪುರ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಶನಿವಾರ ಮಳೆಯಾಗಿದೆ.

ವಿಜಯಪುರ, ಮುದ್ದೇಬಿಹಾಳ ಪಟ್ಟಣ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗಿದೆ. ಬಾಗಲಕೋಟೆ ಜಿಲ್ಲೆ ಕಲಾದಗಿಯಲ್ಲಿ ಉತ್ತಮ ಮಳೆ ಸುರಿಯಿತು. ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಶುಕ್ರವಾರ ರಾತ್ರಿಯಿಂದ ಶನಿವಾರ ಮಧ್ಯಾಹ್ನದವರೆಗೆ ಮಳೆಯಾಗಿದೆ.

ಮಂಗಳೂರು ವರದಿ: ಕರಾವಳಿ ಜಿಲ್ಲೆಗಳಲ್ಲಿ ಉತ್ತಮ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆಯಿಂದಾಗಿ ಒಂದು ಮನೆ ಭಾಗಶಃ, ಇನ್ನೊಂದು ಮನೆ ಪೂರ್ಣ ಹಾನಿಯಾಗಿದೆ.

ಉಡುಪಿ ಜಿಲ್ಲೆಯಲ್ಲಿ ಮಳೆ ಬಿರುಸುಗೊಂಡಿದೆ. ಹೆಬ್ರಿಯಲ್ಲಿ 19.7 ಸೆಂ.ಮೀ ಮಳೆ ಬಿದ್ದಿದೆ. ಸೆ.9ರವರೆಗೆ ಭಾರಿ ಮಳೆಯಾಗುವ ಸಾಧ್ಯತೆಗಳಿವೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೊಡಗು ಜಿಲ್ಲೆಯ ವಿವಿಧೆಡೆ ಶುಕ್ರವಾರ ರಾತ್ರಿ ಹಾಗೂ ಶನಿವಾರ ಬಿರುಸಿನ ಮಳೆಯಾಗಿದೆ. ನಾಪೋಕ್ಲು, ಮಡಿಕೇರಿ, ತಲಕಾವೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ಜೋರು ಮಳೆಯಾಗಿದೆ. ಬೀದರ್ ಜಿಲ್ಲೆಯ ಬೀದರ್, ಬಸವಕಲ್ಯಾಣ ಹಾಗೂ ಭಾಲ್ಕಿ ತಾಲ್ಲೂಕಿನಲ್ಲಿ ಸಾಧಾರಣ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	116.40	9,525	9,669
ಹಾರಂಗಿ	2,859	2,857.76	2,250	3,350
ಕಬಿನಿ	2,284	2,279.31	3,660	5,000
ಹೇಮಾವತಿ	2,922	2,915.86	2,715	5,272
ಲಿಂಗನಮಕ್ಕಿ	1,819	1,812.80	6,544	-
ಸೂಪಾ (ಮೀ)	564	554.76	3,411	2,551
ಮಾಣಿ	594.36	586.24	1,978	-
ತುಂಗಭದ್ರಾ	1,633	1,632.97	14,503	10,402
ಮಲಪ್ರಭಾ	2,079.50	2,078.70	1,348	1,394
ಘಟಪ್ರಭಾ	2,175	2,175	386	386
ಭದ್ರಾ	186	185.40	3,450	3,751
ಆಲಮಟ್ಟಿ (ಮೀ)	519.6	519.60	3,117	3,117
ನಾರಾಯಣಪುರ (ಮೀ)	492.25	491.87	994	5,600

* ನೆಲಮಟ್ಟದಿಂದ

250 ಜನರ ಸ್ಥಳಾಂತರ

ಯಾದಗಿರಿ: ವಡಗೇರಾ ತಾಲ್ಲೂಕಿನ ನಾಯ್ಕಲ್ ಗ್ರಾಮದಲ್ಲಿ ಶನಿವಾರ ಸುರಿದ ಮಳೆಗೆ ಸಣ್ಣ ಕೆರೆ ಭರ್ತಿಯಾಗಿ ‘ದಲಿತ ಕೇರಿ’ಯ 60ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ. 250ಕ್ಕೂ ಅಧಿಕ ಜನ ನಿರಾಶ್ರಿತರಾಗಿದ್ದು, ಅವರನ್ನು ಸ್ಥಳಾಂತರಿಸಲಾಗಿದೆ. ದವಸ–ಧಾನ್ಯ, ಬಟ್ಟೆ ನೀರು ಪಾಲಾಗಿವೆ. ನಿರಾಶ್ರಿತರಿಗೆ ಅಂಬೇಡ್ಕರ್ ನಗರದ ಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ.

ಅಫ್ಗಾನಿಸ್ತಾನದಲ್ಲಿ ವಿಶಾಲ ತಳಹದಿಯ ಸರ್ಕಾರ ರಚಿಸುವ ಉದ್ದೇಶ: ಹೊಸ ಸರ್ಕಾರ ಒಂದು ವಾರ ವಿಳಂಬ

ಸರ್ಕಾರ ರಚನೆ ಮುಂದೂಡಿದ ತಾಲಿಬಾನ್

ತಾಲಿಬಾನ್ ಆಡಳಿತದಲ್ಲಿ ಪ್ರಾತಿನಿಧ್ಯಕ್ಕೆ ಬೇಡಿಕೆಯಿಟ್ಟಿರುವ ಮಹಿಳೆಯರು, ಶನಿವಾರ ಕಾಬೂಲ್‌ನಲ್ಲಿ ಒಗ್ಗಟ್ಟು ಪ್ರದರ್ಶಿಸಿದರು ಎಪಿ ಚಿತ್ರ

ಕಾಬೂಲ್, ಪೆಶಾವರ (ಪಿಟಿಐ/ ರಾಯಿಟರ್ಸ್/ಎಎಫ್‌ಪಿ): ಅಫ್ಗಾನಿಸ್ತಾನದಲ್ಲಿ ಹೊಸ ಸರ್ಕಾರ ರಚನೆಯನ್ನು ತಾಲಿಬಾನ್ ಮುಂದಿನ ವಾರಕ್ಕೆ ಮುಂದೂಡಿದೆ.

ತಾಲಿಬಾನ್ ವಕ್ತಾರ ಜಬೀವುಲ್ಲಾ ಮುಜಾಹಿದ್, ಶನಿವಾರ ಈ ಮಾಹಿತಿ ನೀಡಿದ್ದಾರೆ. ಅಂತರರಾಷ್ಟ್ರೀಯ ಸಮುದಾಯವೂ ಒಪ್ಪುವಂತಹ, ಎಲ್ಲರನ್ನೂ ಒಳಗೊಂಡ ವಿಸ್ತೃತ ನೆಲೆಗಟ್ಟಿನ ಸರ್ಕಾರ ರಚನೆಗೆ ತಾಲಿಬಾನ್ ಕಸರತ್ತು ನಡೆಸುತ್ತಿದೆ.

ಸಂಘಟನೆಯ ಸಹಸ್ಥಾಪಕ ಮುಲ್ಲಾ ಅಬ್ದುಲ್ ಘನಿ ಬರದರ್ ಮುಂದಾಳತ್ವದಲ್ಲಿ ಹೊಸ ಸರ್ಕಾರವನ್ನು ಶನಿವಾರ ಘೋಷಿಸುವ ನಿರೀಕ್ಷೆಯಿತ್ತು. ಆಗಸ್ಟ್ 15ರಂದು ಕಾಬೂಲ್ ಅನ್ನು ವಶಪಡಿಸಿಕೊಂಡ ಬಳಿಕ, ತಾಲಿಬಾನ್ ಸರ್ಕಾರ ರಚನೆ ಘೋಷಣೆ ಮುಂದೂಡುತ್ತಿರುವುದು ಇದು ಎರಡನೇ ಬಾರಿ.

ವಿಶಾಲ ತಳಹದಿಯ ಸರ್ಕಾರ ರಚಿಸುವ ತಾಲಿಬಾನ್‌ನ ಉದ್ದೇಶದಿಂದ ಸರ್ಕಾರ ರಚನೆ ವಿಳಂಬವಾಗಿದೆ ಎಂದು ಸರ್ಕಾರ ರಚನೆ ಕುರಿತು ವಿವಿಧ ಗುಂಪುಗಳೊಂದಿಗೆ ಮಾತುಕತೆ ನಡೆಸಲು ತಾಲಿಬಾನ್ ರಚಿಸಿದ್ದ ಸಮಿತಿಯ ಸದಸ್ಯ ಖಲೀಲ್ ಹಕ್ಕಾನಿ ಹೇಳಿದ್ದಾನೆ.

‘ತಾಲಿಬಾನಿಯರು ತಮ್ಮದೇ ಆದ ಸರ್ಕಾರವನ್ನು ರಚಿಸಲು ಅಡ್ಡಿಯಿಲ್ಲ. ಆದರೆ, ಅವರು ಈಗ ಎಲ್ಲ ಪಕ್ಷಗಳು, ಗುಂಪುಗಳು ಮತ್ತು ಸಮಾಜದ ವಿಭಾಗಗಳಿಗೆ ಸರಿಯಾದ ಪ್ರಾತಿನಿಧ್ಯ ಹೊಂದಿರುವ ಆಡಳಿತ ನೀಡಲು ಗಮನ ಕೇಂದ್ರೀಕರಿಸಿದ್ದಾರೆ’ ಎಂದು ಹೇಳಿದ್ದಾನೆ.

ಅಫ್ಗಾನಿಸ್ತಾನದ ಮಾಜಿ ಪ್ರಧಾನಿ ಮತ್ತು ಜಾಮಿಯತ್ ಎ ಇಸ್ಲಾಮೀ ಅಫ್ಗಾನಿಸ್ತಾನದ ಮುಖ್ಯಸ್ಥ ಗುಲ್ಬುದ್ದೀನ್ ಹೆಕ್ಮತ್ಯಾರ್ ಮತ್ತು ಅಫ್ಗಾನಿಸ್ತಾನದ ಮಾಜಿ ಅಧ್ಯಕ್ಷ ಅಶ್ರಫ್ ಘನಿಯ ಸಹೋದರ, ತಾಲಿಬಾನ್‌ಗೆ ತಮ್ಮ ಬೆಂಬಲ ಘೋಷಿಸಿದ್ದಾರೆ. ಇವರಿಗೆ ಸರ್ಕಾರದಲ್ಲಿ ಪ್ರಾತಿನಿಧ್ಯ ನೀಡಲಾಗುವುದು ಎಂದು ತಿಳಿದುಬಂದಿದೆ.

ಪಾಕ್ ಮೇಲೆ ಒತ್ತಡ: ಭಯೋತ್ಪಾದಕ ಸಂಘಟನೆಗಳ ವಿರುದ್ಧ ಹೋರಾಡುವಂತೆ ಪಾಕಿಸ್ತಾನದ ಮೇಲೆ ಅಮೆರಿಕ ಒತ್ತಡ ಹೇರಿದೆ.

ಅಫ್ಗಾನಿಸ್ತಾನವು ತಾಲಿಬಾನ್‌ನ ವಶವಾದ ಬಳಿಕ ಪಾಕ್ ಮೇಲಿನ ಒತ್ತಡವನ್ನು ಅಮೆರಿಕ ಬಿಗಿಗೊಳಿಸಿದೆ ಎಂದು ಸೋರಿಕೆಯಾಗಿರುವ ಅಧಿಕೃತ ದಾಖಲೆಗಳಲ್ಲಿ ಉಲ್ಲೇಖಿಸಲಾಗಿದೆ.

ಈ ಮಧ್ಯೆ, ಅಫ್ಗನ್ ನಾಗರಿಕರಿಗೆ ಮಾನವೀಯ ನೆಲೆಯಲ್ಲಿ ಸಹಾಯ ಮಾಡಲು ಸೆ.13ರಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟನಿಯೊ ಗುಟೆರಸ್ ಅವರು ಸಭೆ ಕರೆದಿದ್ದಾರೆ. ಸಹಾಯನಿಧಿ ಹೆಚ್ಚಿಸುವ ಸಂಬಂಧ ಚರ್ಚೆ ನಡೆಯಲಿದೆ.

ಅಮೆರಿಕ: ಅಫ್ಗನ್ ವಲಸಿಗರಿಗೆ ಆಶ್ರಯ

ವಾಷಿಂಗ್ಟನ್ (ಎಪಿ): ಅಮೆರಿಕ್ಕೆ ವಲಸೆ ಬರುತ್ತಿರುವ ಅಫ್ಗನ್ನರ ಸಂಖ್ಯೆ ಹೆಚ್ಚಾದಂತೆ, ವಲಸಿಗರಿಗೆ ನೈರ್ಮಲ್ಯ, ಆಹಾರ ಪೂರೈಕೆಯಂತಹ ಸವಾಲುಗಳು ಎದುರಾಗುತ್ತಿವೆ. ವಲಸಿಗರಿಗಾಗಿ ತನ್ನ ಸೇನಾ ನೆಲೆಗಳಲ್ಲಿ ಸಣ್ಣ ಸಣ್ಣ ನಗರಗಳನ್ನು ನಿರ್ಮಾಣ ಮಾಡಲು ಸರ್ಕಾರ ನಿರ್ಧರಿಸಿದೆ.

ವಾಯುಪಡೆಯ ನಾರ್ದರ್ನ್ ಕಮಾಂಡ್ ಮುಖ್ಯಸ್ಥ, ಜನರಲ್ ಗ್ಲೆನ್ ವ್ಯಾನ್‌ಹೆರ್ಕ್, ‘ಶುಕ್ರವಾರದವರೆಗೆ ಅಮೆರಿಕದ ಏಳು ಸೇನಾ ನೆಲೆಗಳಲ್ಲಿ 25 ಸಾವಿರಕ್ಕೂ ಹೆಚ್ಚು ಮಂದಿ ಅಫ್ಗನ್ ವಲಸಿಗರಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆ’ ಎಂದು ಹೇಳಿದ್ದಾರೆ.

‘ಭಾಷೆ, ಸಂಸ್ಕೃತಿ ಮತ್ತು ಇತರ ವಿಷಯಗಳ ಕಾರಣಕ್ಕಾಗಿ ವಲಸಿಗರಿಗೆ ನೆರವು ಒದಗಿಸುವ ಕಾರ್ಯಕ್ಕೆ ತೊಂದರೆಯಾಗುತ್ತಿದೆ’ ಎಂದೂ ಅವರು ಹೇಳಿದ್ದಾರೆ.

‘ಅಫ್ಗಾನಿಸ್ತಾನದ ವಲಸಿಗರಿಗೆ ಆಹಾರ, ವಸತಿ, ನೈರ್ಮಲ್ಯದಂತಹ ಸೌಲಭ್ಯಗಳನ್ನು ಕಲ್ಪಿಸುವುದಕ್ಕಾಗಿ ಎಂಟು ಸಣ್ಣ ನಗರಗಳನ್ನು ನಿರ್ಮಿಸಲಾಗುತ್ತಿದ್ದು, ಇದು ಸವಾಲಿನಿಂದ ಕೂಡಿದೆ’ ಎಂದರು.

‘ನಿರಾಶ್ರಿತರು ನೆಲೆಸಿರುವ ಸ್ಥಳದ ಉಸ್ತುವಾರಿಗಾಗಿ ಸೇನಾ ಅಧಿಕಾರಿಯೊಬ್ಬರನ್ನು ‘ಮೇಯರ್’ ಆಗಿ ನಿಯೋಜಿಸಲಾಗಿದೆ. ಸಂವಹನ ಹಾಗೂ ಇತರ ಪರಿಹಾರ ಕಾರ್ಯಗಳಿಗೆ ಅಫ್ಗನ್ ಮುಖಂಡರೊಬ್ಬರು ನಿಯೋಜಿತ ಮೇಯರ್‌ಗೆ ನೆರವಾಗುವರು’ ಎಂದು ಅವರು ತಿಳಿಸಿದರು.

ಪಂಜ್‌ಶಿರ್ ತಾಲಿಬಾನ್ ವಶ?

ತಾಲಿಬಾನ್‌ಗೆ ಸೆಡ್ಡು ಹೊಡೆದಿರುವ ಪಂಜ್‌ಶಿರ್ ಪ್ರಾಂತ್ಯವನ್ನು ತಾಲಿಬಾನ್ ಬಂಡುಕೋರರು ವಶಪಡಿಸಿಕೊಂಡಿದ್ದಾರೆ ಎಂಬ ಸುದ್ದಿ ಸಂಚಲನ ಸೃಷ್ಟಿಸಿತು. ನ್ಯಾಷನಲ್ ರೆಸಿಸ್ಟಂಟ್ ಫ್ರಂಟ್ ಯೋಧರನ್ನು ತಾಲಿಬಾನ್ ಬಂಡುಕೋರರು ಬಗ್ಗುಬಡಿದಿದ್ದಾರೆ ಎಂಬ ವಿಚಾರ ಸಂಭ್ರಮಕ್ಕೆ ಕಾರಣವಾಯಿತು. ಕಾಬೂಲ್‌ನಲ್ಲಿ ರಾತ್ರೋರಾತ್ರಿ ಸಂಭ್ರಮಾಚರಣೆ ನಡೆಯಿತು. ಆದರೆ ಪಂಜ್‌ಶಿರ್ ವಶವಾಗಿರುವುದನ್ನು ತಾಲಿಬಾನ್ ಅಧಿಕೃತ ಮೂಲಗಳು ಖಚಿತಪಡಿಸಿಲ್ಲ.

‘ಗಾಳಿಯಲ್ಲಿ ಗುಂಡುಹಾರಿಸುವುದನ್ನು ಸಾಧ್ಯವಾದಷ್ಟೂ ಕೈಬಿಡಿ. ನಿಮ್ಮ ಕೈಯಲ್ಲಿರುವ ಬಂದೂಕುಗಳು ಸಾರ್ವಜನಿಕರ ಆಸ್ತಿ. ಅವುಗಳನ್ನು ವ್ಯರ್ಥ ಮಾಡಲು ಯಾರಿಗೂ ಅಧಿಕಾರವಿಲ್ಲ. ನಾಗರಿಕರಿಗೆ ಬಂದೂಕುಗಳು ಹಾನಿ ಮಾಡುವ ಸಾಧ್ಯತೆಯಿದ್ದು, ಸುಮ್ಮನೆ ಅವುಗಳನ್ನು ಪ್ರಯೋಗಿಸಬೇಡಿ’ ಎಂದು ತಾಲಿಬಾನ್ ವಕ್ತಾರ ಜಬೀವುಲ್ಲಾ ಮುಜಾಹೀದ್ ಟ್ವೀಟ್ ಮಾಡಿದ್ದಾನೆ.

ತಾಲಿಬಾನ್ ಪಡೆಗಳು ಪಂಜ್‌ಶಿರ್ ಹಾಗೂ ಕಾಪಿಸಾ ಪ್ರಾಂತ್ಯಗಳ ಗಡಿಯಾದ ದರ್ಬಾಂದ್ ಅನ್ನು ಸಮೀಪಿಸಿವೆ. ಆದರೆ ಅವುಗಳನ್ನು ಹಿಮ್ಮೆಟ್ಟಿಸಲಾಗಿದೆ ಎಂದು ಎನ್‌ಆರ್‌ಎಫ್ ವಕ್ತಾರರು ಟ್ವೀಟ್ ಮಾಡಿದ್ದಾರೆ.

ಗುಂಡಿನ ದಾಳಿಯಲ್ಲಿ 17 ಸಾವು

ಪಂಜ್‌ಶಿರ್ ಪ್ರಾಂತ್ಯವನ್ನು ತಾಲಿಬಾನ್ ವಶಪಡಿಸಿಕೊಂಡಿದೆ ಎಂಬ ಖುಷಿಯಲ್ಲಿ ಕಾಬೂಲ್‌ನಲ್ಲಿ ಗುಂಡು ಹಾರಿಸಿ ಸಂಭ್ರಮಾಚರಣೆ ನಡೆದಿದೆ. ಸಂಭ್ರಮಕ್ಕಾಗಿ ಹಾರಿಸಲಾದ ಗುಂಡೇಟಿನಿಂದ ಕನಿಷ್ಠ 17 ಜನರು ಮೃತಪಟ್ಟಿದ್ದಾರೆ ಎಂದು ತಾಲಿಬಾನ್ ಮೂಲಗಳು ಹೇಳಿವೆ.

ನಂಗರ್‌ಹಾರ್ ಪ್ರಾಂತ್ಯದಲ್ಲಿ ಗುಂಡು ಹಾರಿಸುವ ಮೂಲಕ ನಡೆದ ಸಂಭ್ರಮಾಚರಣೆಯಲ್ಲಿ 14 ಜನ ಗಾಯಗೊಂಡಿದ್ದಾರೆ ಎಂದು ವಿಭಾಗೀಯ ಆಸ್ಪತ್ರೆಯ ವಕ್ತಾರ ಗುಲ್‌ಜಾಅದ್ ಸಂಗರ್ ಹೇಳಿದ್ದಾರೆ.

ಕಾಬೂಲ್‌ನಲ್ಲಿ ನಡೆದ ವೈಮಾನಿಕ ಗುಂಡಿನ ದಾಳಿಯು 17 ಜನರನ್ನು ಬಲಿ ತೆಗೆದುಕೊಂಡು, 41 ಜನರನ್ನು ಗಾಯಗೊಳಿಸಿದೆ ಎಂದು ಶಂಷಾದ್ ಸುದ್ದಿ ಸಂಸ್ಥೆ ತಿಳಿಸಿದೆ. ಟೊಲೊ ಸುದ್ದಿ ಸಂಸ್ಥೆ ಸಹ ಇದನ್ನು ಪ್ರಸಾರಮಾಡಿದೆ.

ಪಾಕ್ ಗುಪ್ತಚರ ಮುಖ್ಯಸ್ಥ ಕಾಬೂಲ್‌ಗೆ ದೌಡು

ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನ ಮುಖ್ಯಸ್ಥ ಚೀಫ್ ಲೆಫ್ಟಿನೆಂಟ್ ಜನರಲ್ ಫೈಜ್ ಹಮೀದ್ ಅವರು ಶನಿವಾರ ಕಾಬೂಲ್‌ಗೆ ದೌಡಾಯಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅವರ ಕಾಬೂಲ್ ಭೇಟಿಯ ಕಾರ್ಯಸೂಚಿ ಏನು ಎಂಬುದು ಅಧಿಕೃತವಾಗಿ ತಿಳಿಯದಿದ್ದರೂ, ಅಫ್ಗನ್ ಸೇನೆಯನ್ನು ಮರುವಿನ್ಯಾಸ ಮಾಡುವುದಕ್ಕಾಗಿ ತಾಲಿಬಾನ್‌ಗೆ ನೆರವು ನೀಡಲು ಬಂದಿದ್ದಾರೆ ಎನ್ನಲಾಗಿದೆ.

‘ಸಿವಿಸಿ ಸ್ಥಾಪನೆಯ ಉದ್ದೇಶವೇ ವಿಫಲವಾಗಿದೆ’

ಮಾಜಿ ಮಾಹಿತಿ ಆಯುಕ್ತ ಶೈಲೇಶ್ ಗಾಂಧಿ, ವಕೀಲ ಪ್ರಶಾಂತ್ ಭೂಷಣ್, ಸಾಮಾಜಿಕ ಕಾರ್ಯಕರ್ತರಾದ ಅಂಜಲಿ ಭಾರಧ್ವಾಜ್ ಪತ್ರಕ್ಕೆ ಸಹಿ ಹಾಕಿದ್ದಾರೆ .

ಸಿವಿಸಿಗೆ ಅಧ್ಯಕ್ಷ, ಆಯುಕ್ತರ ನೇಮಕ: ಪ್ರಧಾನಿಗೆ ಪತ್ರ

ನವದೆಹಲಿ: ಕೇಂದ್ರ ಸರ್ಕಾರವು ಕೇಂದ್ರ ವಿಚಕ್ಷಣಾ ಆಯೋಗದ (ಸಿವಿಸಿ) ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಅದನ್ನು ಕುಂಠಿತಗೊಳಿಸಿದೆ ಎಂದು ವಿಶ್ರಾಂತ ನ್ಯಾಯಮೂರ್ತಿಗಳು, ಸಾಮಾಜಿಕ ಕಾರ್ಯಕರ್ತರು ಅಭಿಪ್ರಾಯಪಟ್ಟಿದ್ದು, ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಸಿವಿಸಿ ಅಧ್ಯಕ್ಷರ ಸ್ಥಾನ ಈ ವರ್ಷದ ಜೂನ್‌ನಿಂದ ತೆರವಾಗಿದೆ. ಕಳೆದ ಅಕ್ಟೋಬರ್ ತಿಂಗಳಿನಲ್ಲಿ ತೆರವಾಗಿದ್ದ ಇಬ್ಬರು ಆಯುಕ್ತರ ಸ್ಥಾನವನ್ನೂ ಭರ್ತಿ ಮಾಡಿಲ್ಲ. ಸದ್ಯ, ಆಯೋಗ ಒಬ್ಬ ಆಯುಕ್ತರ ನೇತೃತ್ವದಲ್ಲಿ ಕೆಲಸ ಮಾಡುತ್ತಿದೆ. ಕಾಯ್ದೆಯಲ್ಲಿ ಅವಕಾಶ ಇಲ್ಲದಿದ್ದರೂ ಅವರನ್ನೇ ಪ್ರಭಾರ ಅಧ್ಯಕ್ಷರಾಗಿ ನೇಮಿಸಲಾಗಿದೆ ಎಂದಿದ್ದಾರೆ.

ದೆಹಲಿ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎ.ಪಿ.ಶಾ, ಪಟ್ನಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಂಜನಾ ಪ್ರಕಾಶ್, ಮಾಜಿ ಐಎಎಸ್ ಅಧಿಕಾರಿ ಸುಂದರ್ ಬುರ್ರಾ, ಮಾಜಿ ಐಪಿಎಸ್ ಅಧಿಕಾರಿ ಮೀರನ್ ಬೋರವಾಂಕರ್ ಇತರರು ಈ ಪತ್ರ ಸಹಿ ಹಾಕಿದ್ದಾರೆ. ಸಿವಿಸಿ ಅಂತಹ ಸ್ವಾಯತ್ತ ಸಂಸ್ಥೆ ಸ್ಥಾಪನೆಯ ಉದ್ದೇಶವೇ ವಿಫಲವಾಗಿದೆ. ಆಯುಕ್ತರ ಹುದ್ದೆಯನ್ನೇ ಖಾಲಿ ಉಳಿಸಿ ಅದರ ಅಧಿಕಾರವನ್ನು ಪರಿಣಾಮಕಾರಿಯಾಗಿ ಕುಂಠಿತಗೊಳಿಸಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಭವಾನಿಪುರ ಸೇರಿ 4 ಕ್ಷೇತ್ರಗಳಿಗೆ ಇದೇ 30ಕ್ಕೆ ಉಪಚುನಾವಣೆ

ನವದೆಹಲಿ (ಪಿಟಿಐ): ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸ್ಪರ್ಧಿಸಲಿರುವ ಭವಾನಿಪುರ ಕ್ಷೇತ್ರ ಸೇರಿದಂತೆ ಪಶ್ಚಿಮ ಬಂಗಾಳದ ಮೂರು ಮತ್ತು ಒಡಿಶಾದ ಒಂದು ವಿಧಾನಸಭಾ ಕ್ಷೇತ್ರಗಳಿಗೆ ಸೆ. 30ರಂದು ಉಪಚುನಾವಣೆ ಘೋಷಿಸಲಾಗಿದೆ.

ಅಕ್ಟೋಬರ್ 3ರಂದು ಮತ ಎಣಿಕೆ ನಡೆಸಲಾಗುವುದು ಎಂದು ಚುನಾವಣಾ ಆಯೋಗ ಶನಿವಾರ ಪ್ರಕಟಿಸಿದೆ. ಈ ಬಾರಿ ಕೋವಿಡ್–19ಗೆ ಸಂಬಂಧಿಸಿದಂತೆ ಕಠಿಣ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗುವುದು ಎಂದು ಆಯೋಗ ತಿಳಿಸಿದೆ.

ಪಶ್ಚಿಮ ಬಂಗಾಳದ ಶಂಷೇರ್‌ಗಂಜ್ ಹಾಗೂ ಜಾಂಗೀರಪುರ, ಒಡಿಶಾದ ಪಿಪ್ಲಿ ವಿಧಾನಸಭಾ ಕ್ಷೇತ್ರಗಳಿಗೂ ಉಪಚುನಾವಣೆ ನಡೆಯಲಿದೆ.

ಇತ್ತೀಚೆಗೆ ನಡೆದ ಚುನಾವಣೆ ವೇಳೆ, ತಮ್ಮ ಸಾಂಪ್ರದಾಯಿಕ ಕ್ಷೇತ್ರ ಭವಾನಿಪುರ ತೊರೆದು, ನಂದಿಗ್ರಾಮದಿಂದ ಸ್ಪರ್ಧಿಸಿದ್ದ ಮಮತಾ ಬ್ಯಾನರ್ಜಿ ಅವರು ಬಿಜೆಪಿಯ ಸುವೇಂದು ಅಧಿಕಾರಿ ವಿರುದ್ಧ ಪರಾಭವಗೊಂಡಿದ್ದರು.

ಟಿಎಂಸಿಗೆ ಭಾರಿ ಬಹುಮತ ಲಭಿಸಿದ ನಂತರ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ಮಮತಾ ಬ್ಯಾನರ್ಜಿ ಅವರು ಈ ಉಪಚುನಾವಣೆಯಲ್ಲಿ ಗೆದ್ದು ವಿಧಾನಸಭೆ ಪ್ರವೇಶಿಸಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದಾರೆ. ನವೆಂಬರ್ 5ರ ಒಳಗೆ ಅವರು ರಾಜ್ಯ ವಿಧಾನಸಭೆಯ ಸದಸ್ಯರಾಗಬೇಕು.

ಕೋವಿಡ್, ಪ್ರವಾಹ ಮತ್ತು ಹಬ್ಬಗಳ ಕಾರಣಕ್ಕೆ ಇತರ 31 ವಿಧಾನಸಭೆ ಕ್ಷೇತ್ರಗಳು ಮತ್ತು ಮೂರು ಲೋಕಸಭೆ ಕ್ಷೇತ್ರಗಳಲ್ಲಿ ಸದ್ಯಕ್ಕೆ ಚುನಾವಣೆ ನಡೆಸದಿರಲು ನಿರ್ಧರಿಸಲಾಗಿದೆ. ಈ ಬಗ್ಗೆ ರಾಜ್ಯಗಳಿಂದ ಸಮಗ್ರ ಮಾಹಿತಿ ಪಡೆಯಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಟಿಎಂಸಿಗೆ ಮರಳಿದ ಬಿಜೆಪಿ ಶಾಸಕ ಸೌಮೆನ್ ರಾಯ್

ಕೋಲ್ಕತ್ತ(ಪಿಟಿಐ): ಬಿಜೆಪಿ ಶಾಸಕ ಸೌಮೆನ್ ರಾಯ್ ಶನಿವಾರ ಆಡಳಿತಾರೂಢ ಟಿಎಂಸಿ ಪಕ್ಷಕ್ಕೆ ಮರಳಿದ್ದಾರೆ.

ಏಪ್ರಿಲ್-ಮೇನಲ್ಲಿ ನಡೆದ ವಿಧಾನಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ನಂತರ ಪಕ್ಷವನ್ನು ತೊರೆದು ಟಿಎಂಸಿಗೆ ಸೇರಿದವರಲ್ಲಿ ಸೌಮೆನ್ ರಾಯ್ ನಾಲ್ಕನೇ ಬಿಜೆಪಿ ಶಾಸಕರಾಗಿದ್ದಾರೆ.

‘ಎರಡು ವರ್ಷಗಳ ಹಿಂದೆ ಪಕ್ಷವನ್ನು ತೊರೆದಿದ್ದು ತಪ್ಪು. ನಾನು ಟಿಎಂಸಿಯನ್ನು ತೊರೆದಿದ್ದರೂ ನನ್ನ ಮನಸ್ಸು ಮತ್ತು ಆತ್ಮವು ಟಿಎಂಸಿಯಲ್ಲಿಯೇ ಉಳಿದಿತ್ತು. ಬಿಜೆಪಿ ಸಿದ್ಧಾಂತವನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಬಿಜೆಪಿಯ ದ್ವೇಷದ ರಾಜಕಾರಣವನ್ನು ಸಹ ನಾನು ಒಪ್ಪುವುದಿಲ್ಲ’ಎಂದು ಅವರು ಹೇಳಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಟಿಕೆಟ್ ಪಡೆದು ಕಲಿಯಗಂಜ್ ಕ್ಷೇತ್ರದಿಂದ ಸೌಮೆನ್‌ರಾಯ್ ಆಯ್ಕೆಯಾಗಿದ್ದರು.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್‌.ವಿ. ರಮಣ ಅಭಿಪ್ರಾಯ

ಕಾನೂನು ವೃತ್ತಿ: ಮಹಿಳೆಯರ ಪ್ರಾತಿನಿಧ್ಯ ಹೆಚ್ಚಲಿ

ಪ್ರಜಾವಾಣಿ ವಾರ್ತೆ

ಅಂಕಿಅಂಶ

465
25 ಹೈಕೋರ್ಟ್‌ಗಳಲ್ಲಿ ಖಾಲಿಯಿರುವ ಹುದ್ದೆಗಳು

1098
ಒಟ್ಟು ನ್ಯಾಯಾಧೀಶರ ಸಂಖ್ಯೆ

ಎಲ್ಲಾ ಹೈಕೋರ್ಟ್‌ಗಳಲ್ಲಿ ಸುಮಾರು ಶೇ 41ರಷ್ಟು ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕಠಿಣ ಸವಾಲು ನಮ್ಮೆದುರು ಇದೆ

ಎನ್‌.ವಿ. ರಮಣ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

ನವದೆಹಲಿ: ವಕೀಲಿ ವೃತ್ತಿಯು ಮಹಿಳೆಯರನ್ನು ಇನ್ನೂ ಅಷ್ಟಾಗಿ ಒಳಗೊಂಡಿಲ್ಲ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್‌.ವಿ. ರಮಣ ಅಭಿಪ್ರಾಯಪಟ್ಟಿದ್ದಾರೆ.

‘ಈಗಾಗಲೇ ಇರುವವರ ಪೈಕಿ ಹೆಚ್ಚಿನವರು ತಮ್ಮ ವೃತ್ತಿಯೊಳಗೆ ಹೋರಾಟ ನಡೆಸುತ್ತಿದ್ದಾರೆ. ಕೆಲವೇ ಕೆಲವರು ಉನ್ನತ ಸ್ಥಾನವನ್ನು ಪ್ರತಿನಿಧಿಸಿದ್ದಾರೆ. ಆದರೂ, ಅವರು ಇನ್ನೂ ಗಮನಾರ್ಹ ಸವಾಲುಗಳನ್ನು ಎದುರಿಸುತ್ತಲೇ ಇದ್ದಾರೆ’ ಎಂದಿದ್ದಾರೆ.

‘ಸ್ವಾತಂತ್ರ್ಯ ಬಂದ 75 ವರ್ಷಗಳಲ್ಲಿ ಎಲ್ಲ ಹಂತಗಳಲ್ಲೂ ಶೇ 50ರಷ್ಟು ಮಹಿಳಾ ಪ್ರಾಧಿನಿಧ್ಯ ಇರಬೇಕು ಎಂಬುದು ಎಲ್ಲರ ನಿರೀಕ್ಷೆ. ಆದರೆ, ಬಹಳ ಕಷ್ಟದಿಂದ ಸುಪ್ರೀಂ ಕೋರ್ಟ್ ಪೀಠಗಳಲ್ಲಿ ಶೇ 11ರಷ್ಟು ಮಹಿಳಾ ಪ್ರಾತಿನಿಧ್ಯವನ್ನು ಮಾತ್ರ ಸಾಧಿಸಲಾಗಿದೆ ಎಂಬುದು ವಾಸ್ತವ. ಮೀಸಲಾತಿ ನೀತಿಯ ಕಾರಣ ಕೆಲವು ರಾಜ್ಯಗಳಲ್ಲಿ ಹೆಚ್ಚಿನ ಪ್ರಾತಿನಿಧ್ಯ ಕಂಡುಬಂದಿದ್ದರೂ, ಕಾನೂನು ವೃತ್ತಿಯು ಮಹಿಳೆಯರನ್ನು ಇನ್ನಷ್ಟು ಒಳಗೊಳ್ಳಬೇಕು ಎಂಬುದಂತೂ ವಾಸ್ತವ’ ಎಂದು ಸಿಜೆಐ ಹೇಳಿದ್ದಾರೆ.

ಮೂಲಸೌಕರ್ಯ, ಆಡಳಿತಾತ್ಮಕ ಸಿಬ್ಬಂದಿ ಕೊರತೆ ಮತ್ತು ಖಾಲಿ ಇರುವ ನ್ಯಾಯಾಧೀಶರ ಹುದ್ದೆಗಳು... ಹೀಗೆ ಕಷ್ಟಕರ ಸವಾಲುಗಳನ್ನು ನ್ಯಾಯಾಂಗ ವ್ಯವಸ್ಥೆ ಎದುರಿಸುತ್ತಿದ್ದು, ಕಾಲಮಿತಿಯೊಳಗೆ ಮೂಲಸೌಕರ್ಯ ವಿಚಾರದ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ರಮಣ ಅವರು ಭರವಸೆ ನೀಡಿದರು.

‘ರಾಷ್ಟ್ರೀಯ ನ್ಯಾಯಾಂಗ ಮೂಲಸೌಕರ್ಯ ನಿಗಮ ರಚಿಸುವ ಪ್ರಸ್ತಾವನೆ ಸಿದ್ಧತೆಯ ಹಂತದಲ್ಲಿದೆ. ನಾವು ದೇಶಾದ್ಯಂತದ ವಸ್ತುಸ್ಥಿತಿ ವರದಿ ಸಂಗ್ರಹಿಸಿದ್ದೇವೆ. ಈ ಕುರಿತ ಪ್ರಸ್ತಾವನೆಯು ಕಾನೂನು ಸಚಿವರಿಗೆ ಶೀಘ್ರವೇ ರವಾನೆಯಾಗಲಿದೆ. ಸರ್ಕಾರದಿಂದ ಸಂಪೂರ್ಣ ಸಹಕಾರ ಸಿಗುವ ನಿರೀಕ್ಷೆಯಿದೆ’ ಎಂದು ಅವರು ಹೇಳಿದ್ದಾರೆ.

ಬಾರ್ ಕೌನ್ಸಿಲ್ ಆಫ್ ಇಂಡಿಯಾ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸಿಜೆಐ ಮಾತನಾಡಿದರು. ಸಚಿವ ಕಿರಣ್ ರಿಜಿಜು ಹಾಗೂ ಉನ್ನತ ನ್ಯಾಯಾಲಯಗಳ ಹಿರಿಯ ನ್ಯಾಯಾಧೀಶರು ಇದ್ದರು. ಮೂವರು ಮಹಿಳಾ ನ್ಯಾಯಮೂರ್ತಿಗಳು ಸೇರಿದಂತೆ 9 ನ್ಯಾಯಮೂರ್ತಿಗಳ ನೇಮಕಕ್ಕೆ ದಾಖಲೆಯ ಸಮಯದಲ್ಲಿ ಅನುಮೋದನೆ ನೀಡಿದ ಪ್ರಧಾನಿಗೆ ಧನ್ಯವಾದ ಹೇಳಿದರು. ಮುಂದಿನ ಒಂದು ತಿಂಗಳಲ್ಲಿ ಹೈಕೋರ್ಟ್‌ಗಳಲ್ಲಿ ಶೇ 90ರಷ್ಟು ಹುದ್ದೆಗಳನ್ನು ಭರ್ತಿ ಮಾಡುವ ಆಶಯ ವ್ಯಕ್ತಪಡಿಸಿದರು.

ತಾವು ಅಧಿಕಾರ ವಹಿಸಿಕೊಂಡ ನಂತರ ವಿವಿಧ ಹೈಕೋರ್ಟ್‌ಗಳ ನೇಮಕಕ್ಕೆ 82 ಹೆಸರುಗಳನ್ನು ಕಳುಹಿಸಲಾಗಿದೆ ಎಂದು ಸಿಜೆಐ ರಮಣ ಹೇಳಿದರು. ಒಂದು ವಾರದಲ್ಲಿ ಸುಪ್ರೀಂ ಕೋರ್ಟ್‌ಗೆ 9 ನ್ಯಾಯಮೂರ್ತಿಗಳ ಹೆಸರುಗಳನ್ನು ಅಂತಿಮಗೊಳಿಸಿದ ರೀತಿಯಲ್ಲೇ, ಹೈಕೋರ್ಟ್‌ಗಳಿಗೂ ಸರ್ಕಾರ ಶೀಘ್ರವಾಗಿ ನೇಮಕಾತಿ ಮಾಡಬೇಕು ಎಂದು ಅವರು ಆಶಿಸಿದರು.

ಕರ್ಬಿಆಂಗ್ಲಾಂಗ್ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ಮುನ್ನ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಅಸ್ಸಾಂನ ವಿವಿಧ ಗುಂಪುಗಳ ಪ್ರತಿನಿಧಿಗಳ ಜತೆ ಮಾತನಾಡಿದರು —ಪಿಟಿಐ ಚಿತ್ರ

ಅಸ್ಸಾಂ: ಬಂಡುಕೋರರ ಜತೆ ಶಾಂತಿ ಒಪ್ಪಂದಕ್ಕೆ ಸಹಿ

ನವದೆಹಲಿ: ಈಶಾನ್ಯ ರಾಜ್ಯದ ಕರ್ಬಿ-ಆಂಗ್ಲಾಂಗ್ ಪ್ರದೇಶಕ್ಕೆ ಸ್ವಾಯತ್ತತೆ ನೀಡುವುದನ್ನು ಒಳಗೊಂಡಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದೊಂದಿಗೆ ಅಸ್ಸಾಂನ ಐದು ಬಂಡುಕೋರರ ಗುಂಪುಗಳು ಶನಿವಾರ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿವೆ.

ಕೇಂದ್ರ ಗೃಹಸಚಿವ ಅಮಿತ್ ಶಾ ಸಮ್ಮುಖದಲ್ಲಿ ಸಹಿ ಹಾಕಲಾದ ಕಾರ್ಬಿ-ಆಂಗ್ಲಾಂಗ್ ಶಾಂತಿ ಒಪ್ಪಂದವು, ಅಸ್ಸಾಂನ ಪ್ರಮುಖ ಜನಾಂಗೀಯ ಸಮುದಾಯವಾದ ಕಾರ್ಬಿಯ ಬಂಡಾಯಕ್ಕೆ ಔಪಚಾರಿಕವಾಗಿ ತೆರೆ ಎಳೆದಿದೆ. ಈ ಜನಾಂಗವು ಮೂರು ದಶಕಗಳಿಂದ ಹತ್ಯೆ, ಜನಾಂಗೀಯ ಹಿಂಸೆ, ಅಪಹರಣ ಪ್ರಕರಣಗಳಿಂದ ಗುರುತಿಸಲ್ಪಟ್ಟಿತ್ತು.

ಐದು ಸಂಘಟನೆಗಳಾದ ಪೀಪಲ್ಸ್ ಡೆಮಾಕ್ರಟಿಕ್ ಕೌನ್ಸಿಲ್ ಆಫ್ ಕಾರ್ಬಿ ಲಾಂಗ್ರಿ (ಪಿಡಿಸಿಕೆ), ಕರ್ಬಿ ಲಾಂಗ್ರಿ ಉತ್ತರ ಕ್ಯಾಚಾರ್ ಹಿಲ್ಸ್ ಲಿಬರೇಶನ್ ಫ್ರಂಟ್ (ಕೆಎಲ್‌ಎನ್‌ಎಲ್‌ಎಫ್), ಕರ್ಬಿ ಪೀಪಲ್ಸ್ ಲಿಬರೇಶನ್ ಟೈಗರ್ಸ್ (ಕೆಪಿಎಲ್‌ಟಿ), ಕುಕಿ ಲಿಬರೇಶನ್ ಫ್ರಂಟ್ (ಕೆಎಲ್‌ಎಫ್) ಮತ್ತು ಯುನೈಟೆಡ್ ಪೀಪಲ್ಸ್ ಲಿಬರೇಶನ್ ಆರ್ಮಿಯ (ಯುಪಿಎಲ್‌ಎ) 1,000ಕ್ಕೂ ಹೆಚ್ಚು ಬಂಡುಕೋರರು ಕಳೆದ ಫೆಬ್ರವರಿಯಲ್ಲಿ ಅಸ್ಸಾಂ ಸರ್ಕಾರದ ಮುಂದೆ ಶರಣಾಗಿದ್ದರು.

ಕರ್ಬಿ ಆಂಗ್ಲಾಂಗ್‌ಗೆ ₹1,000 ಕೋಟಿಯ ಅಭಿವೃದ್ಧಿ ಪ್ಯಾಕೇಜ್ ನೀಡಲಾಗುವುದು ಮತ್ತು ಶಾಂತಿ ಒಪ್ಪಂದವನ್ನು ಕಾಲಮಿತಿಯಲ್ಲಿ ಜಾರಿಗೊಳಿಸಲಾಗುವುದು ಎಂದು ಗೃಹಸಚಿವ ಅಮಿತ್ ಶಾ ಹೇಳಿದರು.

ಕಾರ್ಬಿ ಜನರ ಅಸ್ಮಿತೆ, ಭಾಷೆ, ಸಂಸ್ಕೃತಿಯ ರಕ್ಷಣೆಯನ್ನು ಈ ಶಾಂತಿ ಒಪ್ಪಂದವು ಖಚಿತಪಡಿಸುತ್ತದೆ. ‘ನಾವು ಶಾಂತಿ ಒಪ್ಪಂದಗಳಿಗೆ ಸಹಿ ಹಾಕುವುದು ಮಾತ್ರವಲ್ಲ, ನಿಗದಿತ ಸಮಯದಲ್ಲಿ ಅವುಗಳನ್ನು ಜಾರಿಗೊಳಿಸುತ್ತೇವೆ’ ಎಂದರು.

ಈಶಾನ್ಯದ ಇತರ ಬಂಡುಕೋರ ಗುಂಪುಗಳಾದ ಎಎನ್‌ಡಿಎಫ್‌ಬಿ, ಎನ್‌ಎಲ್‌ಎಫ್‌ಟಿ ಮತ್ತು ಬ್ರೂ ಗುಂಪುಗಳೊಂದಿಗೆ ಇದೇ ರೀತಿಯ ಶಾಂತಿ ಒಪ್ಪಂದಗಳ ಉದಾಹರಣೆಯನ್ನು ಅವರು ನೀಡಿದರು.

ಜಾಗತಿಕ ಜನಪ್ರಿಯ ನಾಯಕರಲ್ಲಿ ಪ್ರಧಾನಿ ಮೋದಿಗೆ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಜನಪ್ರಿಯ ಜಾಗತಿಕ ನಾಯಕರ ಪಟ್ಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಅಗ್ರಸ್ಥಾನ ಪಡೆದುಕೊಂಡಿದ್ದಾರೆ.

ಜಾಗತಿಕ ನಾಯಕರ ಅನುಮೋದನೆ ರೇಟಿಂಗ್‌ನಲ್ಲಿ ಶೇಕಡ 70ರಷ್ಟು ಅಂಕಗಳನ್ನು ಪ್ರಧಾನಿ ನರೇಂದ್ರ ಮೋದಿ ಪಡೆದಿದ್ದಾರೆ. ಇದು ಉತ್ತಮ ನಾಯಕ ಎಂದು ಒಪ್ಪುವ ಜನರ ಪ್ರಮಾಣವೂ ಆಗಿದೆ. ಆಗಸ್ಟ್ 23ರಂದು ಈ ಪ್ರಮಾಣವು ಶೇಕಡ 72ರಷ್ಟಿತ್ತು.

ಅಮೆರಿಕದ ಮಾಹಿತಿ ಗುಪ್ತಚರ ಕಂಪನಿ 'ಮಾರ್ನಿಂಗ್ ಕನ್ಸಲ್ಟ್' ಈ ಬಗ್ಗೆ ವಿವರಗಳನ್ನು ಒದಗಿಸಿದೆ. ಚುನಾವಣೆಯಲ್ಲಿ ಆಯ್ಕೆಯಾದ 13 ರಾಷ್ಟ್ರಗಳ ನಾಯಕರ ‘ರಾಷ್ಟ್ರೀಯ ರೇಟಿಂಗ್ಸ್’ ಆಧಾರದ ಮೇಲೆ ಈ ರ್‍ಯಾಂಕಿಂಗ್ ನೀಡಿದೆ. ಬೇರೆ ಬೇರೆ ದೇಶಗಳಲ್ಲಿ ಮಾದರಿಗಳು ವಿಭಿನ್ನವಾಗಿವೆ ಎಂದು ಅದು ತಿಳಿಸಿದೆ.

ಮೆಕ್ಸಿಕೊ ಅಧ್ಯಕ್ಷ ಆಂಡ್ರೆಸ್ ಮ್ಯಾನ್ಯುಲ್ ಲೋಪೆಜ್ ಒಬ್ರಡಾರ್ ಅವರಿಗೆ ಶೇಕಡ 64ರಷ್ಟು ಅನುಮೋದನೆಯ ರೇಟಿಂಗ್ ದೊರೆತಿದ್ದು, ಎರಡನೇ ಸ್ಥಾನದಲ್ಲಿದ್ದಾರೆ.

ಇಟಲಿ ಪ್ರಧಾನಿ ಮ್ಯಾರಿಯೊ ದ್ರಾಘಿ ಅವರಿಗೆ ಶೇಕಡ 63 ಮತ್ತು ಜರ್ಮನ್ ಚಾನ್ಸಲರ್ ಏಂಜಲಾ ಮರ್ಕೆಲ್ ಅವರಿಗೆ ಶೇಕಡ 52ರಷ್ಟು ಅನುಮೋದನೆಯ ರೇಟಿಂಗ್ ದೊರೆತಿದೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರ್ರಿಸನ್ ಶೇಕಡ 48 ಅನುಮೋದನೆಯ ರೇಟಿಂಗ್ ಪಡೆದಿದ್ದು, ಇಬ್ಬರೂ ಐದನೇ ಸ್ಥಾನದಲ್ಲಿದ್ದಾರೆ. ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಅವರಿಗೆ ಶೇಕಡ 45 ಮತ್ತು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಶೇಕಡ 41ರಷ್ಟು ಅನುಮೋದನೆಯ ರೇಟಿಂಗ್ ಪಡೆದಿದ್ದಾರೆ.

ಬ್ರೆಜಿಲ್ ಅಧ್ಯಕ್ಷ ಜೈರ್ ಬೋಲ್ಸೊನಾರೊ ಅವರಿಗೆ ಶೇಕಡ 39, ದಕ್ಷಿಣ ಕೊರಿಯಾ ಅಧ್ಯಕ್ಷ ಮೂನ್ ಜಾ–ಇನ್ ಶೇಕಡ 38, ಸ್ಪೇನ್ ಪ್ರಧಾನಿ ಪೆಡ್ರೊ ಸಾಂಛೇಜ್ ಶೇಕಡ 35, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಶೇಕಡ 34 ಮತ್ತು ಜಪಾನ್ ಪ್ರಧಾನಿ ಯೋಶಿಹಿದೆ ಸುಗಾ ಅವರಿಗೆ ಶೇಕಡ 25 ಅನುಮೋದನೆಯ ರೇಟಿಂಗ್ ದೊರೆತಿವೆ.

ಪ್ರಕರಣದ ತನಿಖೆಗೆ ಛತ್ತೀಸಗಡ ಸರ್ಕಾರ ಆದೇಶ

7 ತಾಸಿನಲ್ಲಿ 101 ಮಹಿಳೆಯರಿಗೆ ಟ್ಯುಬೆಕ್ಟಮಿ

ರಾಯಪುರ (ಪಿಟಿಐ): ಸರ್ಗುಜ ಜಿಲ್ಲೆಯಲ್ಲಿ ಇತ್ತೀಚೆಗೆ ಸರ್ಕಾರ ಆಯೋಜಿಸಿದ್ದ ಆರೋಗ್ಯ ಶಿಬಿರದಲ್ಲಿ ಶಸ್ತ್ರಚಿಕಿತ್ಸಕರೊಬ್ಬರು ಏಳು ತಾಸುಗಳಲ್ಲಿ 101 ಮಹಿಳೆಯರಿಗೆ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ (ಟ್ಯುಬೆಕ್ಟಮಿ) ನಡೆಸಿರುವ ಪ್ರಕರಣದ ತನಿಖೆಗೆ ಛತ್ತೀಸಗಡ ಸರ್ಕಾರ ಆದೇಶಿಸಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಸರ್ಗುಜ ಜಿಲ್ಲೆಯ ಮೈನ್‌ಪಾಟ್ ಡೆವಲಪ್‌ಮೆಂಟ್ ಬ್ಲಾಕ್‌ನ ನರ್ಮದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆಗಸ್ಟ್ 27ರಂದು ಈ ಶಸ್ತ್ರಚಿಕಿತ್ಸೆಯ ಶಿಬಿರ ನಡೆದಿತ್ತು.

ಈ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಇದನ್ನು ಆಧರಿಸಿ ಸಂಬಂಧಿಸಿದವರ ವಿರುದ್ಧ ಕ್ರಮಕ್ಕೆ ಆರೋಗ್ಯ ಇಲಾಖೆ ಮುಂದಾಗಿದ್ದು, ಶಸ್ತ್ರಚಿಕಿತ್ಸಕ ತಜ್ಞ ಡಾ.ಜಿಬ್ನಸ್ ಎಕ್ಕಾ ಮತ್ತು ಬ್ಲಾಕ್ ವೈದ್ಯಕೀಯ ಅಧಿಕಾರಿ ಡಾ.ಆರ್‌.ಎಸ್‌. ಸಿಂಗ್ ಅವರಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ.

‘ಶಸ್ತ್ರಚಿಕಿತ್ಸೆಗೆ ಒಳಗಾದ ಮಹಿಳೆಯರು ಆರೋಗ್ಯವಾಗಿಯೇ ಇದ್ದಾರೆ. ಆದರೂ ಮಾರ್ಗಸೂಚಿಗಳ ಪ್ರಕಾರ, ಒಬ್ಬ ಶಸ್ತ್ರಚಿಕಿತ್ಸಕ ಒಂದು ದಿನದಲ್ಲಿ ಗರಿಷ್ಠ 30 ಶಸ್ತ್ರಚಿಕಿತ್ಸೆ ನಡೆಸಬಹುದು. ಮಾರ್ಗಸೂಚಿ ಉಲ್ಲಂಘಿಸಿರುವುದರಿಂದ ತನಿಖೆಗೆ ಆದೇಶಿಸಲಾಗಿದೆ’ ಎಂದು ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಅಲೋಕ್ ಶುಕ್ಲಾ ಹೇಳಿದರು.

‘ಈ ಶಿಬಿರಕ್ಕೆ ದೂರದ ಊರುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಬಂದಿದ್ದರು. ನಾವು ಪದೇ ಪದೇ ಪ್ರಯಾಣ ಮಾಡಲು ಸಾಧ್ಯವಿಲ್ಲವೆಂದು ಹೇಳಿದ್ದರಿಂದ ಶಸ್ತ್ರಚಿಕಿತ್ಸೆ ನಡೆಸಬೇಕಾಯಿತು’ ಎಂದು ಶಸ್ತ್ರಚಿಕಿತ್ಸಕ ತಜ್ಞ ಡಾ.ಜಿಬ್ನಸ್ ಎಕ್ಕಾ ಹೇಳಿದ್ದಾರೆ.

ಜೆಇಇ ಪರೀಕ್ಷೆ ಅಕ್ರಮ: ‘ಸುಪ್ರೀಂ’ ತನಿಖೆಗೆ ಆಗ್ರಹ

ನವದೆಹಲಿ(ಪಿಟಿಐ): ಜೆಇಇ ಮುಖ್ಯ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ ಆರೋಪದಲ್ಲಿ ಸಿಬಿಐ ಏಳು ಜನರನ್ನು ಬಂಧಿಸಿದ್ದು, ಈ ಪ್ರಕರಣದ ತನಿಖೆಯನ್ನು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ನಡೆಸಬೇಕೆಂದು ಕಾಂಗ್ರೆಸ್ ಶನಿವಾರ ಒತ್ತಾಯಿಸಿದೆ.

ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವ ಜವಾಬ್ದಾರಿ ಶಿಕ್ಷಣ ಸಚಿವಾಲಯ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಯದ್ದು. ಇದಕ್ಕೆ ಇವುಗಳನ್ನು ಏಕೆ ಹೊಣೆಯಾಗಿಸಿಲ್ಲ ಎನ್ನುವುದಕ್ಕೆ ಬಿಜೆಪಿ ಸರ್ಕಾರ ಉತ್ತರ ನೀಡಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಪಕ್ಷದ ವಿದ್ಯಾರ್ಥಿ ಘಟಕವಾದ ಎನ್‌ಎಸ್‌ಯುಐ ಕೂಡ ಈ ವಿಷಯವಾಗಿ ಸೋಮವಾರ ದೇಶದಾದ್ಯಂತ ಪ್ರತಿಭಟನೆ ನಡೆಸುವುದಾಗಿ ಘೋಷಿಸಿದೆ.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ವಕ್ತಾರ ಗೌರವ ವಲ್ಲಭ್, ದೆಹಲಿ ಕಾಂಗ್ರೆಸ್ ನಾಯಕ ಅಲ್ಕಾ ಲಂಬಾ ಮತ್ತು ಎನ್‌ಎಸ್‌ಯುಐ ರಾಷ್ಟ್ರೀಯ ಅಧ್ಯಕ್ಷ ನೀರಜ್ ಕುಂದನ್ ಅವರು, ಎನ್‌ಟಿಎ ನಡೆಸಿದ ಇತರ ಪರೀಕ್ಷೆಗಳಲ್ಲಿ ಇಂತಹ ಅಕ್ರಮಗಳು ನಡೆದಿಲ್ಲವೆಂದು ವಿದ್ಯಾರ್ಥಿಗಳು ನಂಬಿಕೆ ಇಡುವುದು ಹೇಗೆ ಎಂದು ಪ್ರಶ್ನಿಸಿದರು.

‘ದೇಶದ ಭವಿಷ್ಯಕ್ಕೆ ಸಂಬಂಧಿಸಿದ ಸಮಸ್ಯೆಯಾಗಿರುವುದರಿಂದ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ಈ ವಂಚನೆಯ ಪ್ರಕರಣದ ತನಿಖೆಗೆ ನಾವು ಒತ್ತಾಯಿಸುತ್ತೇವೆ’ ಎಂದು ವಲ್ಲಭ್ ತಿಳಿಸಿದರು.

2021ರ ಜೆಇಇ ಮುಖ್ಯ ಪರೀಕ್ಷೆಯಲ್ಲಿ ಅಕ್ರಮ ನಡೆಸಿದ ಆರೋಪದಲ್ಲಿ ನೊಯ್ಡಾದ ಖಾಸಗಿ ಸಂಸ್ಥೆಯ ಇಬ್ಬರು ನಿರ್ದೇಶಕರು ಸೇರಿ ಏಳು ಮಂದಿ ಬಂಧಿಸಲಾಗಿದೆ ಎಂದು ಸಿಬಿಐ ಹೇಳಿದೆ.

ವಿಚಾರವಾದಿ ಡಾ.ನರೇಂದ್ರ ದಾಭೋಲ್ಕರ್ ಹತ್ಯೆ ಪ್ರಕರಣ

‘ಯುಎಪಿಎ’ ಅಡಿ ವಿಚಾರಣೆಯಾಗಲಿ



ನರೇಂದ್ರ ದಾಭೋಲ್ಕರ್

ಪುಣೆ (ಪಿಟಿಐ): 2013ರಲ್ಲಿ ನಡೆದ ವಿಚಾರವಾದಿ ಡಾ.ನರೇಂದ್ರ ದಾಭೋಲ್ಕರ್ ಹತ್ಯೆ ಪ್ರಕರಣದ ಐವರು ಆರೋಪಿಗಳು ಜನರಲ್ಲಿ ಭಯ ಹುಟ್ಟಿಸುವಂತಹ ಕೃತ್ಯ ಎಸಗಿದ್ದು, ಇವರ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆಯಡಿ (ಯುಎಪಿಎ) ವಿಚಾರಣೆ ನಡೆಸಬೇಕು ಎಂದು ಸಿಬಿಐ ಪ್ರತಿಪಾದಿಸಿದೆ.

ವಿಶೇಷ ನ್ಯಾಯಾಲಯದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಎಸ್‌. ಆರ್‌. ನವಂದಾರ್ ಅವರ ಮುಂದೆ ಸಿಬಿಐ ಈ ವಾದ ಮಂಡಿಸಿದೆ.

ಈ ಪ್ರಕರಣದ ಐವರು ಆರೋಪಿಗಳಾದ ಡಾ. ವೀರೇಂದ್ರ ಸಿನ್ಹಾ ತಾವ್ಡೆ, ಶರದ್ ಕಳಸ್ಕರ್, ಸಚಿನ್ ಅಂದುರೆ, ವಕೀಲ ಸಂಜೀವ್ ಪುಣಾಲೇಕರ್ ಮತ್ತು ವಿಕ್ರಮ್ ಭಾವೆ ವಿರುದ್ಧ ಆರೋಪಪಟ್ಟಿ ದಾಖಲಿಸುವ ಕುರಿತ ವಾದ–ಪ್ರತಿವಾದ ಶುಕ್ರವಾರ ನಡೆಯಿತು.

ಸಿಬಿಐ ಪರ ವಾದ ಮಂಡಿಸಿದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಕಾಶ್ ಸೂರ್ಯವಂಶಿ, ‘ಆರೋಪಿಗಳ ವಿರುದ್ಧ ಐಪಿಸಿ ಹಾಗೂ ಯುಎಪಿಎಯ ವಿವಿಧ ಸೆಕ್ಷನ್‌ಗಳಡಿ ದೋಷಾರೋಪ ಹೊರಿಸಲಾಗಿದೆ’ ಎಂದು ನ್ಯಾಯಾಲಯಕ್ಕೆ ವಿವರಿಸಿದರು.

ಆರೋಪಿಗಳ ವಿರುದ್ಧ ಯುಎಪಿಎ ಸೆಕ್ಷನ್ 16 ಅಡಿ ದೋಷಾರೋಪ ಹೊರಿಸಿದ್ದನ್ನು ಸಮರ್ಥಿಸಿಕೊಂಡರು.

ದಾಭೋಲ್ಕರ್ ಅವರ ಹತ್ಯೆಗೈಯಲು ಶಸ್ತ್ರಾಸ್ತ್ರಗಳನ್ನು ಬಳಸಲಾಗಿದೆ. ಈ ಮೂಲಕ ಜನರಲ್ಲಿ ಭೀತಿಯನ್ನುಂಟು ಮಾಡುವ ಪ್ರಯತ್ನ ಮಾಡಲಾಗಿದೆ. ಹೀಗಾಗಿ, ಯುಎಪಿಯ ಅಡಿಯಲ್ಲಿನ ಸೆಕ್ಷನ್ 16 ಜಾರಿಗೊಳಿಸುವುದು ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಈ ಬಗ್ಗೆ ರಾಜ್ಯ ಸರ್ಕಾರದ ಅನುಮೋದನೆಯನ್ನು ಸಿಬಿಐ ಪಡೆದಿದೆ ಎಂದು ನ್ಯಾಯಾಲಯಕ್ಕೆ ಪ್ರಕಾಶ್ ಸೂರ್ಯವಂಶಿ ವಿವರಿಸಿದರು.

ಆಟೋಟ...

ಪಟಿಯಾಲದಲ್ಲಿ ಶಿಕ್ಷಕರ ದಿನಾಚರಣೆ ಪ್ರಯುಕ್ತ ಶನಿವಾರ ಶಿಕ್ಷಕರು ಆಟೋಟದಲ್ಲಿ ತೊಡಗಿದ್ದರು– ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಉದ್ಯೋಗಿಗಳಿಗೆ 5 ನಿಮಿಷದ ‘ಯೋಗ’ ವಿರಾಮ



ನವದೆಹಲಿ: ಕೇಂದ್ರ ಸರ್ಕಾರವು ತನ್ನ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ಇಲಾಖೆಗಳ ಉದ್ಯೋಗಿಗಳಿಗೆ ಕೆಲಸದ ಮಧ್ಯೆ ನಿತ್ಯವೂ ಐದು ನಿಮಿಷಗಳ ‘ಯೋಗ’ ವಿರಾಮ (ಬ್ರೇಕ್) ಅಥವಾ ‘ವೈ ಬ್ರೇಕ್’ ನೀಡುವಂತೆ ಸೂಚಿಸಿದೆ.

ಕೆಲಸದ ಸ್ಥಳದಲ್ಲಿ ಉದ್ಯೋಗಿಗಳು ದಣಿವಾರಿಸಿಕೊಂಡು ಉತ್ಸಾಹಭರಿತವಾಗಿ (ರಿಫ್ರೆಶ್) ಆಗಿ ಕೆಲಸ ಮಾಡುವ ಸಲುವಾಗಿ ಈ ವಿರಾಮ ನೀಡಬೇಕೆಂದು ಕೇಂದ್ರದ ಸಿಬ್ಬಂದಿ ಸಚಿವಾಲಯವು ತನ್ನ ಆದೇಶದಲ್ಲಿ ಸೂಚನೆ ನೀಡಿದೆ.

‘ವೈ ಬ್ರೇಕ್’ ಬಗ್ಗೆ ಕೆಲಸದ ಸ್ಥಳದಲ್ಲಿ ಉತ್ತೇಜನಕಾರಿಯಾದ ಪ್ರತಿಕ್ರಿಯೆ ದೊರೆತಿದೆ ಎಂದು ಪ್ರಾಯೋಗಿಕ ಪರೀಕ್ಷೆ ನಡೆಸಿದ್ದ ಆಯುಷ್ ಸಚಿವಾಲಯವು ತಿಳಿಸಿದೆ. ಈ ಯಶಸ್ಸಿನ ಪರಿಣಾಮವಾಗಿ ಸಚಿವಾಲಯವು ಆ್ಯಂಡ್ರಾಯ್ಡ್ ಆಧಾರಿತ ‘ವೈ ಬ್ರೇಕ್’ ಅಪ್ಲಿಕೇಷನ್ ಅನ್ನೂ ಅಭಿವೃದ್ಧಿ ಪಡಿಸಿದ್ದು, ಇದು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ.

ಜಮ್ಮು-ಕಾಶ್ಮೀರ: ಮೊಬೈಲ್, ಇಂಟರ್‌ನೆಟ್ ಸ್ಥಗಿತ

ಶ್ರೀನಗರ (ಪಿಟಿಐ): ಕಾಶ್ಮೀರದ ಪ್ರತ್ಯೇಕತಾವಾದಿ ನಾಯಕ ಸೈಯದ್ ಅಲಿ ಶಾ ಗಿಲಾನಿ ಅವರ ನಿಧನದ ನಂತರ ಸಂಭಾವ್ಯ ಅಹಿತಕರ ಘಟನೆಗಳನ್ನು ತಡೆಯುವುದಕ್ಕಾಗಿ ಜಮ್ಮು–ಕಾಶ್ಮೀರದಲ್ಲಿ ಜನರು ಗುಂಪು ಸೇರುವುದನ್ನು ನಿರ್ಬಂಧಿಸಲಾಗಿದ್ದು, ಮೊಬೈಲ್ ಫೋನ್, ಇಂಟರ್ನೆಟ್ ಸೇವೆಗಳನ್ನೂ ಸ್ಥಗಿತಗೊಳಿಸಲಾಗಿದೆ.

ಗಿಲಾನಿ ನಿಧನದ ನಂತರ ಅಂತ್ಯಕ್ರಿಯೆ ಪೂರ್ಣಗೊಳ್ಳುವವರೆಗೂ ಕಾಶ್ಮೀರದ ಹಲವು ಕಡೆಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ, ಮೊಬೈಲ್–ಇಂಟರ್ನೆಟ್ ಸೇವೆ ಸ್ಥಗಿತಗೊಳಿಸಲಾಗಿತ್ತು. ನಂತರ, ಶುಕ್ರವಾರ ರಾತ್ರಿ ಈ ಸಂವಹನ ಸೇವೆಗಳನ್ನು ಪುನರ್‌ಸ್ಥಾಪಿಸಲಾಗಿತ್ತು. ಆದರೆ, ಅಹಿತಕರ ಘಟನೆ ನಡೆಯುವ ಸಾಧ್ಯತೆ ಕುರಿತು ಗುಪ್ತಚರ ಇಲಾಖೆ ಮುನ್ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಶನಿವಾರ ಮತ್ತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂದು ‘ರೈತ ಮಹಾ ಪಂಚಾಯತ್’: ಬಿಗಿ ಭದ್ರತೆ

ಮುಜಫ್ಫರ್‌ನಗರ(ಪಿಟಿಐ): ವಿವಾದಾತ್ಮಕ ಮೂರು ಕೃಷಿ ಕಾಯ್ದೆಗಳು ಸೇರಿದಂತೆ ರೈತರಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಕುರಿತು ಚರ್ಚಿಸಲು ಭಾನುವಾರ ಇಲ್ಲಿ ಆಯೋಜಿಸಿರುವ ‘ರೈತರ ಮಹಾಪಂಚಾಯತ್’ ಹಿನ್ನೆಲೆಯಲ್ಲಿ ವ್ಯಾಪಕ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಭದ್ರತೆಗಾಗಿ ಆರು ಪ್ರಾಂತೀಯ ಸಶಸ್ತ್ರ ಪೊಲೀಸ್ ಪಡೆಗಳ (ಪಿಎಸಿ) ತಂಡಗಳು ಮತ್ತು ಎರಡು ಕ್ಷಿಪ್ರ ಕಾರ್ಯಾಚರಣೆ ಪಡೆಯ (ಆರ್‌ಎಎಫ್) ತುಕಡಿಗಳನ್ನು ನಿಯೋಜಿಸಲಾಗಿದೆ.

ಈ ಕುರಿತು ಮಾಹಿತಿ ನೀಡಿದ ಡಿಐಜಿ ಪ್ರೀತಿಂದರ್ ಸಿಂಗ್, ‘ರೈತ ಮಹಾಪಂಚಾಯತ್ ಹಿನ್ನೆಲೆಯಲ್ಲಿ ಭದ್ರತೆಗೆ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಇಡೀ ಕಾರ್ಯಕ್ರಮವನ್ನು ವಿಡಿಯೊ ಚಿತ್ರೀಕರಣ ಮಾಡಿಸಲಾಗುವುದು’ ಎಂದು ಹೇಳಿದ್ದಾರೆ.

ಉತ್ಪಾದನಾ ಘಟಕಗಳ ಸ್ಥಾಪನೆಗೆ ಗಮನ; ಆಮ್ಲಜನಕ ಸಾಂದ್ರಕಗಳ ಬಲ

ಆಮ್ಲಜನಕ ಸಂಗ್ರಹ ಸ್ವಯಂ ಉತ್ಪಾದನೆ ಕಸರತ್ತು

• ಸೂರ್ಯನಾರಾಯಣ ವಿ/ಕೆ.ಎಸ್.ಗಿರೀಶ

ಚಾಮರಾಜನಗರ/ಮೈಸೂರು: ಸಕಾಲದಲ್ಲಿ ವೈದ್ಯಕೀಯ ಆಮ್ಲಜನಕ ಪೂರೈಕೆಯಾಗದೆ 24 ಕೊರೊನಾ ಸೋಂಕಿತರು ಮೃತಪಟ್ಟು ರಾಷ್ಟ್ರದಾದ್ಯಂತ ಸುದ್ದಿಯಾಗಿದ್ದ ಗಡಿ ಜಿಲ್ಲೆ ಚಾಮರಾಜನಗರದಲ್ಲಿ, ಸದ್ಯ ಕೋವಿಡ್ ಪರಿಸ್ಥಿತಿ ನಿಯಂತ್ರಣದಲ್ಲಿದೆ.

ದುರಂತದ ನಂತರ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತವು ಸಂಭಾವ್ಯ ಮೂರನೇ ಅಲೆಯಲ್ಲಿ ಆಮ್ಲಜನಕ ಕೊರತೆಯಾಗಬಾರದು ಎಂಬ ನಿಟ್ಟಿನಲ್ಲಿ ಹಲವು ಕ್ರಮಗಳನ್ನು ಕೈಗೊಂಡಿದೆ.

ಪಾಸಿಟಿವಿ ದರ ಶೇ 1ಕ್ಕಿಂತ ಕೆಳಗಿದ್ದು, ಪ್ರತಿದಿನ ಒಂದಂಕಿಯ ಪ್ರಕರಣಗಳಷ್ಟೇ ದಾಖಲಾಗುತ್ತಿವೆ. ಐಸಿಯುನಲ್ಲಿರುವ ನಾಲ್ವರ ಪೈಕಿ ಮೂವರಿಗೆ ವೆಂಟಿಲೇಟರ್ ಅಳವಡಿಸಲಾಗಿದೆ. ಪ್ರತಿದಿನ 10 ಸಿಲಿಂಡರ್ ಆಮ್ಲಜನಕ ಬಳಕೆಯಾಗುತ್ತಿದೆ.

ಜಿಲ್ಲೆಯಲ್ಲಿ ಆಮ್ಲಜನಕ ರಿಫಿಲ್ಲಿಂಗ್ ಘಟಕ ಇಲ್ಲ. ಸಿಲಿಂಡರ್‌ಗಳಿಗೆ ಆಮ್ಲಜನಕ ತುಂಬಿಸಲು ಮೈಸೂರಿನಲ್ಲಿರುವ ಎರಡು ಖಾಸಗಿ ಸಂಸ್ಥೆಗಳನ್ನೇ ಅವಲಂಬಿಸಬೇಕು. ಅಲ್ಲಿಂದ ಸಕಾಲಕ್ಕೆ ಸಿಲಿಂಡರ್ ಪೂರೈಕೆಯಾಗದೇ ದುರಂತ ಸಂಭವಿಸಿದ್ದರಿಂದ, ರಿಫಿಲ್ಲಿಂಗ್ ಏಜೆನ್ಸಿಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಲೆಂದೇ ಆಮ್ಲಜನಕ ಉತ್ಪಾದನೆ ಹಾಗೂ ಸಂಗ್ರಹ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಸಿಎಸ್‌ಆರ್ ನಿಧಿ, ದಾನಿಗಳ ಸಹಾಯದಿಂದ ಪ್ರಮುಖ ಆಸ್ಪತ್ರೆಗಳಲ್ಲಿ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ.

ಜಿಲ್ಲಾಸ್ಪತ್ರೆಯಲ್ಲಿ ಈಗಾಗಲೇ 6,000 ಲೀಟರ್ ಸಂಗ್ರಹ ಸಾಮರ್ಥ್ಯದ ಆಮ್ಲಜನಕ ಘಟಕವಿದೆ. ಯಡಬೆಟ್ಟದಲ್ಲಿರುವ 450 ಹಾಸಿಗೆ ಆಸ್ಪತ್ರೆಯಲ್ಲಿ 20 ಸಾವಿರ ಲೀಟರ್ ಘಟಕವನ್ನು ಸ್ಥಾಪಿಸಲಾಗಿದೆ. ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಯಲ್ಲಿ 416 ಎಲ್‌ಪಿಎಂ (ಲೀಟರ್ ಪರ್ ಮಿನಿಟ್/ ಪ್ರತಿ ನಿಮಿಷದ ಉತ್ಪಾದನೆ) ಸಾಮರ್ಥ್ಯದ ಉತ್ಪಾದನಾ ಘಟಕ ಆರಂಭವಾಗಿದೆ. ಸಂತೇಮರಹಳ್ಳಿಯಲ್ಲಿ 500 ಎಲ್‌ಪಿಎಂ ಸಾಮರ್ಥ್ಯದ ಘಟಕ ಅಳವಡಿಸಲಾಗಿದೆ. ಜಿಲ್ಲಾಸ್ಪತ್ರೆಯಲ್ಲಿ 1,000 ಎಲ್‌ಪಿಎಂನ ಒಂದು ಹಾಗೂ ಯಡಬೆಟ್ಟದ ಹೊಸ ಆಸ್ಪತ್ರೆಯಲ್ಲಿ 1,000 ಎಲ್‌ಪಿಎಂನ ಎರಡು ಉತ್ಪಾದನಾ ಘಟಕಗಳ ನಿರ್ಮಾಣ ಪ್ರಗತಿಯಲ್ಲಿದೆ. ಗುಂಡ್ಲುಪೇಟೆ ಆಸ್ಪತ್ರೆಯಲ್ಲಿ 500 ಎಲ್‌ಪಿಎಂ ಸಾಮರ್ಥ್ಯದ ಘಟಕ ಸ್ಥಾಪನೆಯಾಗಲಿದೆ.

ಸಾಂದ್ರಕಗಳ ಬಲ: ‘ಜಿಲ್ಲೆಯಲ್ಲಿ 699 ಆಮ್ಲಜನಕ ಸಾಂದ್ರಕಗಳಿವೆ. 2ನೇ ಅಲೆಯ ಸಂದರ್ಭದಲ್ಲಿ ಜಿಲ್ಲಾಸ್ಪತ್ರೆಯಲ್ಲಿ 500ಕ್ಕೂ ಹೆಚ್ಚು ರೋಗಿಗಳಿಗೆ ಸಾಂದ್ರಕಗಳ ಮೂಲಕ ಚಿಕಿತ್ಸೆ ನೀಡಿದ್ದೇವೆ’ ಎಂದು ಕೋವಿಡ್ ನೋಡಲ್ ಅಧಿಕಾರಿ ಡಾ.ಎಂ. ಮಹೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಹಾಸಿಗೆ ಹೆಚ್ಚಳ: ಜಿಲ್ಲೆಯಲ್ಲಿ ಈಗ ಆಮ್ಲಜನಕ ಸಹಿತ ಹಾಸಿಗೆಗಳ ಸಂಖ್ಯೆ ದುಪ್ಪಟ್ಟಾಗಿದೆ. 252 ಆಮ್ಲಜನಕ, 93 ಐಸಿಯು ಸೇರಿದಂತೆ 345 ಆಮ್ಲಜನಕ ಹಾಸಿಗೆಗಳಿವೆ. ಹೊಸ ಆಸ್ಪತ್ರೆಯಲ್ಲಿ 586 ಹಾಸಿಗೆಗಳಿವೆ. ಹೊಸ ವೆಂಟಿಲೇಟರ್‌ಗಳೂ ಬಂದಿವೆ. ಜಿಲ್ಲಾಸ್ಪತ್ರೆಗೆ 10, ತಾಲ್ಲೂಕು ಆಸ್ಪತ್ರೆಗಳಿಗೆ ತಲಾ ಎರಡು ವೆಂಟಿಲೇಟರ್ ಪೂರೈಸಲಾಗಿದೆ. ಮಕ್ಕಳಿಗಾಗಿಯೂ 140 ಹಾಸಿಗೆ ಮೀಸಲಿಡಲಾಗಿದೆ. ಆದರೆ, ವೆಂಟಿಲೇಟರ್ ಸಹಿತ ಮಕ್ಕಳ ಹಾಸಿಗೆಗಳು ಕಡಿಮೆ ಇವೆ. ಜಿಲ್ಲಾಸ್ಪತ್ರೆಯಲ್ಲಿ ಅವುಗಳ ಸಂಖ್ಯೆ ಮೂರು ಮಾತ್ರ.

ಯಡಬೆಟ್ಟದಲ್ಲಿರುವ ಆಸ್ಪತ್ರೆಯಲ್ಲಿ ಮೂಲ ಸೌಕರ್ಯದ ಕೆಲಸ ಬಹುತೇಕ ಪೂರ್ಣಗೊಂಡಿದ್ದು, ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಅಗ್ನಿಶಾಮಕ ಇಲಾಖೆಯ ನಿರಾಕ್ಷೇಪಣಾ ಪತ್ರ ಸಿಗಬೇಕಾಗಿದೆ.

‘ಮೂರನೇ ಅಲೆ ಎದುರಿಸಲು ಸಿದ್ಧತೆ ನಡೆಸಲಾಗುತ್ತಿದೆ. ಪ್ರಕರಣಗಳು ಮಿತಿ ಮೀರಿದರೆ, ಹೊಸ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಿಕೊಳ್ಳಲಾಗುವುದು’ ಎಂದು ವೈದ್ಯಕೀಯ ಕಾಲೇಜಿನ ಡೀನ್ ಡಾ.ಎಂ. ಸಂಜೀವ್ ತಿಳಿಸಿದರು.

ಮೈಸೂರು: 14 ಘಟಕ ಸ್ಥಾಪನೆ



ಮೈಸೂರಿನ ಕೆ.ಆರ್‌ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿರುವ ಆಮ್ಲಜನಕ ಘಟಕ

ಚಾಮರಾಜನಗರಕ್ಕೆ ಆಮ್ಲಜನಕ ಪೂರೈಸುವ ಮೈಸೂರು ಜಿಲ್ಲೆಯಲ್ಲೂ ಉತ್ಪಾದನೆ ಮತ್ತು ಸಂಗ್ರಹಕ್ಕೆ ಜಿಲ್ಲಾಡಳಿತ ಗಮನ ನೀಡಿದೆ.

ಮೈಸೂರು ಜಿಲ್ಲಾಸ್ಪತ್ರೆಯಲ್ಲಿ 6,000 ಲೀ. ಹಾಗೂ ಕೆ.ಆರ್. ಆಸ್ಪತ್ರೆಯಲ್ಲಿ 13 ಸಾವಿರ ಲೀ. ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸಲಾಗಿದೆ. ಟ್ರಾಮಾ ಕೇಂದ್ರದಲ್ಲಿ 19 ಸಾವಿರ ಲೀ. ಸಾಮರ್ಥ್ಯದ ಘಟಕವು ನಿರ್ಮಾಣವಾಗುತ್ತಿದೆ. ಆಮ್ಲಜನಕ ಸಾಂದ್ರಕಗಳೂ ಲಭ್ಯವಿವೆ. ಜಿಲ್ಲೆಯಲ್ಲಿ 14 ಆಮ್ಲಜನಕ ಘಟಕಗಳನ್ನು ಸ್ಥಾಪಿಸಲಾಗಿದೆ.

‘ಆಮ್ಲಜನಕದ ಸಂಗ್ರಹ ಸಾಕಷ್ಟಿದ್ದು, ಆತಂಕಪಡುವ ಸ್ಥಿತಿ ಇಲ್ಲ’ ಎಂದು ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಪ್ರತಿಕ್ರಿಯಿಸಿದರು.

ಚಾಮರಾಜನಗರದ ಯಡಬೆಟ್ಟದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಆಸ್ಪತ್ರೆ

ಪ್ರಜಾವಾಣಿ ನೋಡಿಯೊ ವಿಡಿಯೋ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಚಾಮರಾಜನಗರದ ಯಡಬೆಟ್ಟದ ಹೊಸ ಬೋಧನಾ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿರುವ 20 ಸಾವಿರ ಲೀಟರ್ ಸಾಮರ್ಥ್ಯದ ವೈದ್ಯಕೀಯ ಆಮ್ಲಜನಕ ಘಟಕ

ಚಾಮರಾಜನಗರದ ಅಂಕಿ ಅಂಶ

835 ಲಭ್ಯ ಇರುವ ಜಂಬೊ ಸಿಲಿಂಡರ್

245 ‘ಬಿ’ ಮಾದರಿ ಸಿಲಿಂಡರ್

26 ಸಾವಿರ ಲೀಟರ್ ಎರಡು ಆಮ್ಲಜನಕ ಸಂಗ್ರಹ ಘಟಕಗಳ ಸಾಮರ್ಥ್ಯ

699 ಲಭ್ಯವಿರುವ ಆಮ್ಲಜನಕ ಸಾಂದ್ರಕ

1,239 ಆಮ್ಲಜನಕ ಸೌಲಭ್ಯ ಹೊಂದಿರುವ ಹಾಸಿಗೆ ಸಂಖ್ಯೆ

ಕಲಬುರ್ಗಿಯಲ್ಲೂ ಸುಧಾರಣೆ

ಆಮ್ಲಜನಕ ಕೊರತೆಯಿಂದ ಏಳು ಮಂದಿ ಮೃತಪಟ್ಟಿದ್ದ ಕಲಬುರ್ಗಿ ಜಿಲ್ಲೆಯಲ್ಲೂ ಜಿಲ್ಲಾಡಳಿತ ಕ್ರಮ ವಹಿಸಿದೆ.

ದುರ್ಘಟನೆ ಬಳಿಕ ಜಿಲ್ಲೆಗೆ ಆಮ್ಲಜನಕ ಟ್ಯಾಂಕರ್ ಬರುವಂತಾಯಿತು. ಸಿಮೆಂಟ್ ಕಂಪನಿಗಳಲ್ಲದೆ ವಿವಿಧ ಸಂಘ–ಸಂಸ್ಥೆಗಳು ಜಂಬೊ ಸಿಲಿಂಡರ್ ಪೂರೈಸಿವೆ.

‘ತಾಲ್ಲೂಕು ಆಸ್ಪತ್ರೆಗಳಲ್ಲಿ ಆಮ್ಲಜನಕ ಘಟಕ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆ. ಸೋಂಕಿತರಿಗೆಂದೇ 50 ಹಾಸಿಗೆ ಮೀಸಲಿಡಲು ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಲಾಗಿದೆ. ಮಕ್ಕಳಿಗಾಗಿ ಆಮ್ಲಜನಕ ಸೌಲಭ್ಯವುಳ್ಳ 350 ಹಾಸಿಗೆಗಳನ್ನು ಸಿದ್ಧಪಡಿಸಲಾಗಿದೆ’ ಎಂದು ಕಲಬುರ್ಗಿ ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ ಮಾಹಿತಿ ನೀಡಿದರು.

ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಕ್ಕಳ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಆಮ್ಲಜನಕ ಕೊರತೆ ತಲೆದೋರದಂತೆ ಎಚ್ಚರವಹಿಸಲಾಗಿದೆ

ಡಾ.ಶರಣಬಸಪ್ಪ ಗಣಜಲಖೇಡ
ಜಿಲ್ಲಾ ಆರೋಗ್ಯಾಧಿಕಾರಿ, ಕಲಬುರ್ಗಿ

ಆಮ್ಲಜನಕದ ಪೂರೈಕೆ, ದಾಸ್ತಾನಿದ್ದು, ಒಂದೇ ಬಾರಿಗೆ ಐದು ಸಾವಿರ ಸೋಂಕಿತರು ದಾಖಲಾದರೂ ಆಮ್ಲಜನಕ ಪೂರೈಸಬಹುದು

ಡಾ.ಕೆ.ಎಚ್.ಪ್ರಸಾದ್
ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ



ಮೂರನೇ ಅಲೆ ಬಂದರೆ ಆಮ್ಲಜನಕದ ಕೊರತೆಯಾಗಬಾರದೆಂದು ಜಿಲ್ಲಾಡಳಿತ ಎಲ್ಲ ಅಗತ್ಯ ಕ್ರಮ ಕೈಗೊಳ್ಳುತ್ತಿದೆ

ಡಾ. ಎಂ.ಸಿ. ರವಿ
ಜಿಲ್ಲಾ ಆರೋಗ್ಯಾಧಿಕಾರಿ, ಚಾಮರಾಜನಗರ

ಉತ್ಪಾದನೆಯಲ್ಲಿ ಸ್ವಾವಲಂಬನೆಯತ್ತ...

ಪ್ರಜಾವಾಣಿ ವಾರ್ತೆ

ಗದಗ: ಉತ್ತರ ಕರ್ನಾಟಕ ಭಾಗದ ಧಾರವಾಡ, ಗದಗ, ಬೆಳಗಾವಿ, ಹಾವೇರಿ, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ವಿಜಯನಗರ ಜಿಲ್ಲೆಗಳು ಹಾಗೂ ಕರಾವಳಿ ಭಾಗದ ಉತ್ತರಕನ್ನಡ ಜಿಲ್ಲೆಯಲ್ಲಿ ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಆಮ್ಲಜನಕ ಸಿಗದೇ ಸೋಂಕಿತರು ಮೃತಪಟ್ಟ ಒಂದೂ ಪ್ರಕರಣ ವರದಿಯಾಗಿಲ್ಲ.

ಈ ಭಾಗದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಈಗಾಗಲೇ ಆಮ್ಲಜನಕ ಉತ್ಪಾದನಾ ಘಟಕಗಳನ್ನು ನಿರ್ಮಿಸಿದ್ದು, ಆಮ್ಲಜನಕ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ರಾಜ್ಯ ಸೇರಿದಂತೆ ದೇಶದ ನಾನಾ ಭಾಗಗಳಿಗೆ ಅವಿಭಜಿತ ಬಳ್ಳಾರಿ ಜಿಲ್ಲೆಯಿಂದಲೇ ಆಮ್ಲಜನಕ ಪೂರೈಕೆಯಾಗುತ್ತದೆ. ಬಳ್ಳಾರಿ–ವಿಜಯನಗರ ಅವಳಿ ಜಿಲ್ಲೆಗಳಲ್ಲಿ ಎಂದೂ ಆಮ್ಲಜನಕದ ಕೊರತೆ ಎದುರಾಗಿಲ್ಲ. ಆದರೆ, ಎರಡನೇ ಅಲೆ ಬಂದಾಗ ಜಿಲ್ಲೆಯಲ್ಲಿ ನಿತ್ಯ ಸರಾಸರಿ ಎರಡು ಸಾವಿರಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗುತ್ತಿದ್ದವು. ಎಲ್ಲ ಆಮ್ಲಜನಕ ಸಹಿತ ಹಾಸಿಗೆಗಳು ತುಂಬಿರುತ್ತಿದ್ದವು. ತುರ್ತಾಗಿ ಆಮ್ಲಜನಕ ಹಾಸಿಗೆ ಸಿಗದೆ ಕೆಲವರು ಮೃತಪಟ್ಟಿದ್ದರೇ ಹೊರತು ಆಮ್ಲಜನಕದ ಕೊರತೆಯಿಂದಲ್ಲ. ಉತ್ತರ ಕರ್ನಾಟಕ ಭಾಗದ ಬಹುತೇಕ ಎಲ್ಲ ಜಿಲ್ಲೆಗಳಲ್ಲೂ ಇದೇ ಪರಿಸ್ಥಿತಿ ಇತ್ತು.

ಎರಡನೇ ಅಲೆಯ ಸಂದರ್ಭದಲ್ಲಿ ಈ ಭಾಗದ ಬಹುತೇಕ ಜಿಲ್ಲೆಗಳಿಗೆ ಧಾರವಾಡದಿಂದಲೇ ಆಮ್ಲಜನಕ ಪೂರೈಕೆಯಾಯಿತು. ಬಳ್ಳಾರಿಯ ತೋರಣಗಲ್‌ನಲ್ಲಿರುವ ಜಿಂದಾಲ್ ಪ್ಲಾಂಟ್‌ನಿಂದ ಇಲ್ಲಿಗೆ ಪೂರೈಕೆಯಾಗುತ್ತಿದ್ದ ದ್ರವೀಕೃತ ಆಮ್ಲಜನಕವು ಇಲ್ಲಿರುವ ಮೂರು ಮರುಪೂರಣ ಘಟಕಗಳ ಮೂಲಕ ಇತರ ಜಿಲ್ಲೆಗಳಿಗೆ ಪೂರೈಕೆಯಾಗುತ್ತಿತ್ತು. ಹೀಗಾಗಿ ಧಾರವಾಡ ಜಿಲ್ಲೆಯಲ್ಲಿ ಆಮ್ಲಜನಕದ ಕೊರತೆ ಎದುರಾಗಲಿಲ್ಲ.

ಬೆಳಗಾವಿ ಜಿಲ್ಲೆಗೆ, ದ್ರವೀಕೃತ ವೈದ್ಯಕೀಯ ಆಮ್ಲಜನಕಕ್ಕಾಗಿ ಬೇರೆ ಜಿಲ್ಲೆಗಳ ಮೇಲೆ ಅವಲಂಬನೆಯಾಗುವುದು ತಪ್ಪಿಲ್ಲ. ಸದ್ಯಕ್ಕೆ ನಿತ್ಯ 10 ಕೆ.ಎಲ್. ದ್ರವೀಕೃತ ವೈದ್ಯಕೀಯ ಆಮ್ಲಜನಕ ಬೇಕಾಗುತ್ತದೆ. ಅದಕ್ಕಾಗಿ ಹೊಸಪೇಟೆ ಹಾಗೂ ಹುಬ್ಬಳ್ಳಿಯನ್ನು ಅವಲಂಬಿಸಬೇಕಿದೆ. ಸ್ವಂತವಾಗಿ ನಿತ್ಯ 1,799 ಜಂಬೊ ಸಿಲಿಂಡರ್ ಉತ್ಪಾದಿಸಬಹುದಾದ ಸಾಮರ್ಥ್ಯವಿದೆ. ಮೂರನೇ ಅಲೆ ಬಂದಲ್ಲಿ ನಿರ್ವಹಿಸುವುದಕ್ಕೆ ಸಾಧ್ಯ ವಾಗಲಿದೆ ಎನ್ನುತ್ತಾರೆ ಅಧಿಕಾರಿಗಳು.

ಬೆಳಗಾವಿ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಉತ್ಪಾದಿಸಿ, ಸಂಗ್ರಹಿಸಿ ಪೂರೈಸುವ ಮೂರು ಘಟಕಗಳಿವೆ. ಅವುಗಳಿಂದ ನಿತ್ಯ 600 ಹಾಸಿಗೆಗಳಿಗೆ ನಿರಂತರವಾಗಿ ಆಮ್ಲಜನಕ ಪೂರೈಸಲು ವ್ಯವಸ್ಥೆಯಾಗುತ್ತದೆ. ಇದಲ್ಲದೇ, ಅಥಣಿ, ರಾಯಬಾಗ, ಚಿಕ್ಕೋಡಿ, ಬೈಲಹೊಂಗಲ ಮತ್ತು ಗೋಕಾಕ ತಾಲ್ಲೂಕು ಆಸ್ಪತ್ರೆಗಳಲ್ಲಿ ತಲಾ 50 ಹಾಸಿಗೆಗಳಿಗೆ ನಿರಂತರವಾಗಿ ವೈದ್ಯಕೀಯ ಆಮ್ಲಜನಕ ಪೂರೈಕೆ ಮಾಡಬಹುದಾದ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ಎರಡನೇ ಅಲೆ ಸಂದರ್ಭದಲ್ಲಿ ಆಮ್ಲಜನಕ ಕೊರತೆಯಾಗಿರಲಿಲ್ಲ. ಸಂಭಾವ್ಯ ಮೂರನೇ ಅಲೆ ಎದುರಿಸಲು ಜಿಲ್ಲಾಡಳಿತ ಸಜ್ಜಾಗಿದ್ದು, ವೈದ್ಯಕೀಯ ಆಮ್ಲಜನಕ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲಿದೆ

ಡಾ.ಸತೀಶ್ ಬಸರಿಗಿಡದ
ಡಿಎಚ್‌ಒ, ಗದಗ

ತಾಲ್ಲೂಕು ಕೇಂದ್ರಗಳಲ್ಲೂ ಆಮ್ಲಜನಕ ಘಟಕ ಪ್ರಾರಂಭಿಸಲಾಗಿದೆ. ಕುಂದಗೋಳದಲ್ಲಿ ಪ್ರತಿ ನಿಮಿಷಕ್ಕೆ 500 ಲೀಟರ್ ಹಾಗೂ ನವಲಗುಂದದಲ್ಲಿ 285 ಲೀಟರ್ ಸಾಮರ್ಥ್ಯದ ಘಟಕ ಸ್ಥಾಪಿಸಲಾಗಿದೆ

ಡಾ.ಯಶವಂತ ಮದಿನಕರ್
ಡಿಎಚ್‌ಒ, ಧಾರವಾಡ

ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 4,240 ಎಲ್‌ಪಿಎಂ ಸಾಮರ್ಥ್ಯದ ಆಮ್ಲಜನಕ ಉತ್ಪಾದನಾ ಘಟಕಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ

ಡಾ.ರಾಜಕುಮಾರ ಯರಗಲ್
ಡಿಎಚ್‌ಒ, ವಿಜಯಪುರ

ಕೋವಿಡ್ ಮೂರನೇ ಅಲೆ ನಿರ್ವಹಿಸಲು ಅತ್ಯಗತ್ಯವಾಗಿರುವ ಆಮ್ಲಜನಕ ಪೂರೈಕೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಅಭಾವ ಆಗದಂತೆ ನೋಡಿಕೊಳ್ಳಲು ಮುಂಜಾಗ್ರತಾ ಕ್ರಮ ವಹಿಸಲಾಗಿದೆ

ಡಾ.ಎಸ್.ವಿ. ಮುನ್ಯಾಳ
ಡಿಎಚ್‌ಒ ಬೆಳಗಾವಿ

ದಾಸ್ತಾನಿನ ಮೇಲೆ ಹೈಕೋರ್ಟ್ ನಿಗಾ

ಬೆಂಗಳೂರು: ಕೋವಿಡ್ ಮೂರನೇ ಅಲೆ ಎದುರಿಸಲು ವಾಸ್ತವವಾಗಿ ಎಷ್ಟು ಪ್ರಮಾಣದ ಆಮ್ಲಜನಕ ಅಗತ್ಯವಿದೆ ಎಂಬುದರ ಕುರಿತು ಅಂದಾಜು ಸಿದ್ಧಪಡಿಸುವಂತೆ ಈಗಾಗಲೇ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

ತುರ್ತು ಪರಿಸ್ಥಿತಿ ಎದುರಿಸಲು ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಆಮ್ಲಜನಕವನ್ನು ಹೆಚ್ಚುವರಿಯಾಗಿ ದಾಸ್ತಾನು ಮಾಡಲಾಗಿದೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಇತ್ತೀಚೆಗೆ ಹೈಕೋರ್ಟ್ ಹೇಳಿದೆ. ಖಾಸಗಿ ಆಸ್ಪತ್ರೆಗಳಲ್ಲಿ 4,709 ಟನ್ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ 147.4 ಟನ್ ಆಮ್ಲಜನಕ ಹೆಚ್ಚುವರಿಯಾಗಿ ದಾಸ್ತಾನಿದೆ ಎಂಬ ಮಾಹಿತಿಯನ್ನು ಸರ್ಕಾರ ನೀಡಿದೆ. ದಿನಕ್ಕೆ 1,200 ಟನ್ ಆಮ್ಲಜನಕ ಬೇಕಾಗಲಿದೆ ಎಂದು ತಜ್ಞರ ಸಮಿತಿ ವರದಿ ನೀಡಿರುವುದರಿಂದ, ದಾಸ್ತಾನಿರುವ ಆಮ್ಲಜನಕ ಸಾಕಾಗಲಿದೆಯೇ ಎಂದೂ ಕೋರ್ಟ್ ಪ್ರಶ್ನಿಸಿದ್ದು, ಈ ಕುರಿತು ವಿಚಾರಣೆ ಇದೇ 8ರಂದು ನಿಗದಿಯಾಗಿದೆ.

ಕೊರತೆ ನಿವಾರಣೆಗೆ ಕ್ರಮ: ಕೋವಿಡ್‌ನ ಸಂಭವನೀಯ ಮೂರನೇ ಅಲೆ ಸಂದರ್ಭದಲ್ಲಿ ಆಮ್ಲಜನಕದ ಕೊರತೆ ಉಂಟಾಗಬಾರದೆಂಬ ಕಾರಣಕ್ಕೆ ಸಮನ್ವಯದಿಂದ ಕಾರ್ಯನಿರ್ವಹಿಸಲು ಆಮ್ಲಜನಕ ಉತ್ಪಾದಕ ಕಂಪನಿಗಳ ಪ್ರತಿನಿಧಿಗಳೊಂದಿಗೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸಮಾಲೋಚನೆ ನಡೆಸಿದ್ದಾರೆ.

ಸದ್ಯ ಏಳು ಕಂಪನಿಗಳು ಪ್ರತಿದಿನ 812 ಟನ್‌ಗಳಷ್ಟನ್ನು ಆಮ್ಲಜನಕ ಉತ್ಪಾದಿಸುತ್ತಿವೆ. ಆಕ್ಸಿಜನ್ ರೀಫಿಲ್ಲಿಂಗ್ ಘಟಕಗಳು 64 ಇವೆ. ಗದಗ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಬೀದರ್, ಯಾದಗಿರಿ, ಚಾಮರಾಜನಗರ, ಕೊಡಗು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ರೀಫಿಲ್ಲಿಂಗ್ ಘಟಕಗಳು ಇಲ್ಲ. ಮುಂದಿನ ದಿನಗಳಲ್ಲಿ ಎಲ್ಲ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಆಮ್ಲಜನಕ ಘಟಕಗಳನ್ನು ನಿರ್ಮಿಸಲು ಈಗಾಗಲೇ ಯೋಜನೆ ಸಿದ್ಧವಾಗಿದೆ. ಹೊಸ ಘಟಕಗಳ ಸ್ಥಾಪನೆ, ಟೆಂಡರ್ ಕರೆಯುವುದು, ಜಂಬೊ ಸಿಲಿಂಡರ್ ಖರೀದಿ, ಹೆಚ್ಚುವರಿ ದಾಸ್ತಾನು ಕೇಂದ್ರ, ಸರಬರಾಜು ವ್ಯವಸ್ಥೆ ಸಹಿತ ಅಗತ್ಯವಿರುವ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಗ್ಯ ಇಲಾಖೆಯ ಮೂಲಗಳು ತಿಳಿಸಿವೆ.

ವಿಶೇಷ ಪ್ರೋತ್ಸಾಹ: ಆಮ್ಲಜನಕ ಉತ್ಪಾದನಾ ಘಟಕ ಆರಂಭಿಸುವವರಿಗೆ ವಿಶೇಷ ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರ ಮುಂದಾಗಿದೆ. ಘಟಕ ಸ್ಥಾಪನೆ ಮಾಡುವವರಿಗೆ ಶೇ 25ರಷ್ಟು ಬಂಡವಾಳ ಸಬ್ಸಿಡಿ, ವಿದ್ಯುತ್ ಶುಲ್ಕದಿಂದ ಮೂರು ವರ್ಷಗಳವರೆಗೆ ಪೂರ್ಣ ವಿನಾಯಿತಿ, ಮುದ್ರಾಂಕ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಲೂ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅಪಾಯ ಎದುರಿಸಲು ಸಿದ್ಧತೆ

ಬೆಂಗಳೂರು: ರಾಮನಗರ ಜಿಲ್ಲೆಯ ವಿವಿಧ ಆಸ್ಪತ್ರೆಗಳಲ್ಲಿ ಪ್ರಸ್ತುತ 370 ಆಮ್ಲಜನಕಸಹಿತ ಹಾಸಿಗೆಗಳ ವ್ಯವಸ್ಥೆಯಿದೆ. 47 ವೆಂಟಿಲೇಟರ್‌ಗಳು ಕಾರ್ಯ ನಿರ್ವಹಿಸುತ್ತಿವೆ.

ತುಮಕೂರು ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಆಮ್ಲಜನಕ ಉತ್ಪಾದಿಸುವ ಒಂದು ಸಾವಿರ ಎಲ್‌ಪಿಎಂ ಸಾಮರ್ಥ್ಯದ ಎರಡು ಘಟಕಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಕೋಲಾರ ಜಿಲ್ಲೆಯ ಪ್ರತಿ ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯಕೀಯ ಆಮ್ಲಜನಕ ಉತ್ಪಾದನಾ ಘಟಕ ಸ್ಥಾಪಿಸಲಾಗಿದೆ. ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆ, ಶ್ರೀನಿವಾಸಪುರ, ಬಂಗಾರಪೇಟೆ ಹಾಗೂ ಮಾಲೂರು ತಾಲ್ಲೂಕು ಆಸ್ಪತ್ರೆಯಲ್ಲಿ ತಲಾ 2 ವೈದ್ಯಕೀಯ ಆಮ್ಲಜನಕ ಉತ್ಪಾದನಾ ಘಟಕಗಳನ್ನು ಆರಂಭಿಸಲಾಗಿದೆ.

ಇಸ್ರೇಲ್ ತಂತ್ರಜ್ಞಾನ ಘಟಕ ಕಾರ್ಯಾರಂಭ: ಕೋವಿಡ್ ವಿಷಮ ಪರಿಸ್ಥಿತಿ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಿಂದ ಜಿಲ್ಲೆಯ ಕೆಜಿಎಫ್ ಸಾರ್ವಜನಿಕ ಆಸ್ಪತ್ರೆಗೆ ಮಂಜೂರಾಗಿದ್ದ ಇಸ್ರೇಲ್ ತಂತ್ರಜ್ಞಾನ ಆಧಾರಿತ ವೈದ್ಯಕೀಯ ಆಮ್ಲಜನಕ ಉತ್ಪಾದನಾ ಘಟಕ ಕಾರ್ಯಾರಂಭ ಮಾಡಿದೆ.

ಚಿಕ್ಕಬಳ್ಳಾಪುರದ ಹೊಸ ಜಿಲ್ಲಾ ಆಸ್ಪತ್ರೆ ಮತ್ತು ಹಳೇ ಜಿಲ್ಲಾ ಆಸ್ಪತ್ರೆಯಲ್ಲಿ ತಲಾ ಎರಡು ಸಾವಿರ ಲೀಟರ್ ದ್ರವೀಕೃತ ಆಮ್ಲಜನಕ ಸಂಗ್ರಹ ಘಟಕವಿದೆ. ತಾಲ್ಲೂಕು ಆಸ್ಪತ್ರೆಗಳಲ್ಲಿ ಜಂಬೊ ಸಿಲಿಂಡರ್‌ಗಳ ಸಂಗ್ರಹವಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಾಲ್ಕು ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲೂ ಆಮ್ಲಜನಕ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಹೊಸಕೋಟೆಯ ಎಂಜಿಎ ಆಸ್ಪತ್ರೆ, ನೆಲಮಂಗಲದ ಸಿದ್ಧಾರ್ಥ ಮೆಡಿಕಲ್ ಕಾಲೇಜು ಹಾಗೂ ದೇವನಹಳ್ಳಿಯ ಆಕಾಶ್ ಆಸ್ಪತ್ರೆಗಳು ಸ್ವಂತ ಆಮ್ಲಜನಕ ಘಟಕಗಳನ್ನು ಹೊಂದಿವೆ.

ನಿಮಿಷಕ್ಕೆ ಸಾವಿರ ಲೀಟರ್ ಪ್ರಾಣವಾಯು

ಬಾಗಲಕೋಟೆ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಪ್ರತಿ ನಿಮಿಷಕ್ಕೆ ಸಾವಿರ ಲೀಟರ್ ಆಮ್ಲಜನಕ ಉತ್ಪಾದಿಸುವ ಘಟಕ ಸಿದ್ಧಗೊಳ್ಳುತ್ತಿದೆ. ಮುಧೋಳ, ಜಮಖಂಡಿಯಲ್ಲಿ ನಿಮಿಷಕ್ಕೆ 500 ಲೀಟರ್ ಆಮ್ಲಜನಕ ತಯಾರಿಸುವ ಘಟಕಗಳು ಮಂಜೂರಾಗಿದ್ದು, ಮುಧೋಳ ಘಟಕ ಉತ್ಪಾದನೆ ಆರಂಭಿಸಿದೆ. ಬೀಳಗಿ, ಬಾದಾಮಿ ಹಾಗೂ ಹುನಗುಂದ ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನೆಗೆ ಪ್ರಸ್ತಾವ ಕಳುಹಿಸಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಅನಂತ ದೇಸಾಯಿ ಹೇಳುತ್ತಾರೆ

ಕರಾವಳಿಯನ್ನು ಕಾಡಲಿಲ್ಲ ಆಮ್ಲಜನಕ

ಮಂಗಳೂರು: ಕರಾವಳಿಯಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆ ಆಗದಂತೆ, ಜಿಲ್ಲಾ ಆಸ್ಪತ್ರೆ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲೂ ಆಮ್ಲಜನಕ ಉತ್ಪಾದನಾ ಘಟಕಗಳನ್ನು ನಿರ್ಮಿಸಲಾಗುತ್ತಿದೆ.

ರಾಜ್ಯದಲ್ಲಿ ಆಮ್ಲಜನಕದ ತೀವ್ರ ಕೊರತೆ ಎದುರಾದ ಸಂದರ್ಭದಲ್ಲೂ ಕರಾವಳಿ ಜಿಲ್ಲೆಗಳಲ್ಲಿ ಯಾವುದೇ ಸಮಸ್ಯೆ ಆಗಿರಲಿಲ್ಲ. ‘ಸಮುದ್ರ ಸೇತು–2’ ಮೂಲಕ ವಿದೇಶಗಳಿಂದ ಬಂದ ದ್ರವೀಕೃತ ಆಮ್ಲಜನಕದ ಪೈಕಿ ಅರ್ಧದಷ್ಟನ್ನು ಕರಾವಳಿ ಜಿಲ್ಲೆಗಳಿಗೆ ಮೀಸಲಿಡಲಾಗಿತ್ತು.

ಉಸಿರಾಡಲಿ ಆಮ್ಲಜನಕ ಘಟಕ

ಒಂದನೇ ಪುಟದಿಂದ

ಆಮ್ಲಜನಕ, ವೆಂಟಿಲೇಟರ್ ಲಭ್ಯವಿದ್ದರೂ ರೋಗಿಗಳ ಪ್ರಾಣ ಉಳಿಸಲು ಸಾಧ್ಯವಾಗದ ಅಸಹಾಯಕತೆಯು ಎರಡನೇ ಅಲೆಯಲ್ಲಿ ವೈದ್ಯರನ್ನು ಕಾಡಿದೆ. ಯಂತ್ರ, ಸಲಕರಣೆಗಳನ್ನು ಜೋಡಿಸಿದಾಕ್ಷಣ ರೋಗಿಗೆ ಪ್ರಾಣವಾಯು ಸಿಕ್ಕೇಬಿಡುತ್ತದೆ ಎಂಬ ನಂಬಿಕೆ ಸರ್ಕಾರಕ್ಕೆ ಇದ್ದಂತೆ ಕಾಣುತ್ತದೆ. ಪಿಎಂ–ಕೇರ್ ನಿಧಿಯಲ್ಲಿ ತಾಲ್ಲೂಕು ಆಸ್ಪತ್ರೆಗಳಿಗೆ ಒದಗಿಸಿದ ವೆಂಟಿಲೇಟರ್‌ಗಳು ಬಹುತೇಕ ಬಳಕೆಯಾಗಿಲ್ಲ. ಆಮ್ಲಜನಕ ಉತ್ಪಾದನಾ ಘಟಕಗಳ ಸ್ಥಿತಿ ಹೀಗಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಆರೋಗ್ಯ ಇಲಾಖೆಯ ಮೇಲಿದೆ.



‘ಆಮ್ಲಜನಕ ಉತ್ಪಾದನೆ, ಘಟಕದ ನಿರ್ವಹಣೆ, ಪೂರೈಕೆಗೆ ಸಂಬಂಧಿಸಿದಂತೆ ತರಬೇತಿ ಪಡೆಯಲಾಗುತ್ತಿದೆ. ರೋಗಿಯ ಸ್ಥಿತಿ ನೋಡಿಕೊಂಡು ಪ್ರಾಣವಾಯು ನೀಡುವ ನಿರ್ಧಾರ ಕೈಗೊಳ್ಳುವ ಜ್ಞಾನ ಸಿಕ್ಕಿದೆ. ತಜ್ಞ ವೈದ್ಯರಂತೆ ಅಥವಾ ಇಡೀ ವ್ಯವಸ್ಥೆಯನ್ನು ನಿರ್ವಹಿಸುವ ತಂತ್ರಜ್ಞರಷ್ಟು ಸಮರ್ಪಕ ಸೇವೆ ಒದಗಿಸಲು ಸಾಧ್ಯವಿಲ್ಲ. ಸಮಸ್ಯೆಯನ್ನು ಸಮರ್ಥವಾಗಿ ಎದುರಿಸುವ ಧೈರ್ಯ ಬರುತ್ತಿಲ್ಲ’ ಎಂಬುದು ಚಿತ್ರದುರ್ಗದ ವೈದ್ಯರೊಬ್ಬರ ಅನುಭವ.

ಕೇಂದ್ರ ಸರ್ಕಾರಕ್ಕೆ ಮೊರೆ: ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ಉತ್ತುಂಗದಲ್ಲಿದ್ದಾಗ ನಿತ್ಯ 1,200 ಟನ್ ಆಮ್ಲಜನಕದ ಅಗತ್ಯವಿತ್ತು. ಕರ್ನಾಟಕದಲ್ಲಿ ಆ ಸಂದರ್ಭದಲ್ಲಿ 812 ಟನ್ ಮಾತ್ರ ಉತ್ಪಾದನೆ ಆಗುತ್ತಿತ್ತು. ಅಲ್ಲದೇ, ಅಷ್ಟನ್ನೂ ಉಪಯೋಗ ಮಾಡಿಕೊಳ್ಳುವ ಸ್ವಾತಂತ್ರ್ಯ ರಾಜ್ಯಕ್ಕೆ ಇರಲಿಲ್ಲ. ಕರ್ನಾಟಕದಲ್ಲಿ ಉತ್ಪಾದನೆಯಾಗುವ ಆಮ್ಲಜನಕದ ಸಂಪೂರ್ಣ ಬಳಕೆಗೆ ಅನುಮತಿ ನೀಡುವಂತೆ ಕೇಂದ್ರಕ್ಕೆ ಕೋರಿಕೆ ಸಲ್ಲಿಸಲಾಗಿದೆ. ಸದ್ಯ ಸುಮಾರು 200 ಟನ್ ಆಮ್ಲಜನಕಕ್ಕೆ ಬೇಡಿಕೆ ಇದೆ.

‘ಮೂರನೇ ಅಲೆಯ ಸಂದರ್ಭದಲ್ಲಿ ಆಮ್ಲಜನಕದ ಸಮಸ್ಯೆ ಎದುರಾಗುವ ಸಾಧ್ಯತೆ ಕಡಿಮೆ ಎನ್ನಲಾಗುತ್ತಿದೆ. ಆದರೂ, ಸರ್ಕಾರ ಸಿದ್ಧತೆ ಮಾಡಿಕೊಳ್ಳುವುದು ಉತ್ತಮ. ಸರ್ಕಾರಿ ಆರೋಗ್ಯ ವ್ಯವಸ್ಥೆ ಎಷ್ಟು ದುರ್ಬಲವಾಗಿದೆ ಎಂಬುದನ್ನು ಕೋವಿಡ್ ತೋರಿಸಿಕೊಟ್ಟಿದೆ. ಆರೋಗ್ಯ ವ್ಯವಸ್ಥೆಯ ಸುಧಾರಣೆಗೆ ಇದು ಸೂಕ್ತ ಸಮಯ. ಮೂಲಸೌಲಭ್ಯಗಳ ಜೊತೆಗೆ ಅನುಭವಿ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕು’ ಎನ್ನುತ್ತಾರೆ ವೈದ್ಯ ಡಾ.ಎಚ್.ವಿ. ವಾಸು.

ಆಮ್ಲಜನಕಕ್ಕೆ ಪ್ಲಂಬರ್ ಪೈಪ್‌ಲೈನ್!

ವೈದ್ಯಕೀಯ ಆಮ್ಲಜನಕವನ್ನು ರೋಗಿಗೆ ಪೂರೈಸುವ ಕೊಳವೆ ಮಾರ್ಗದ ವ್ಯವಸ್ಥೆಯನ್ನು ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಪ್ಲಂಬರ್ ನಿರ್ಮಿಸಿ ಎಡವಟ್ಟು ಮಾಡಿದ್ದರು. ಎರಡನೇ ಅಲೆಯ ಸಂದರ್ಭದಲ್ಲಿ ಇದು ಬಹುತೇಕ ರೋಗಿಗಳ ಜೀವಕ್ಕೆ ಕುತ್ತು ತರಬಹುದು ಎಂಬುದು ಗೊತ್ತಾದ ಬಳಿಕ ಸರಿಪಡಿಸಲಾಗಿತ್ತು.

‘ಆಮ್ಲಜನಕ ಪೂರೈಕೆಗೆ ರೂಪಿಸುವ ಕೊಳವೆ ಮಾರ್ಗದ ವ್ಯವಸ್ಥೆ ಅವೈಜ್ಞಾನಿಕವಾಗಿತ್ತು. ನಿರಂತರ ಹಾಗೂ ನಿಗದಿತ ಪ್ರಮಾಣದಲ್ಲಿ ಪ್ರಾಣವಾಯು ಪೂರೈಕೆ ಆಗುತ್ತಿರಲಿಲ್ಲ. ಟ್ಯಾಂಕರ್‌ನಿಂದ ಐಸಿಯುಗೆ ಸಂಪರ್ಕ ಕಲ್ಪಿಸಿದ ಪೈಪ್‌ಲೈನ್ ನಿರ್ಮಾಣಕ್ಕೆ ತಂತ್ರಜ್ಞರ ನೆರವು ಸಿಕ್ಕಿರಲಿಲ್ಲ. ಇದು ರೋಗಿಗಳ ಪ್ರಾಣಕ್ಕೆ ಎರವಾಯಿತು’ ಎಂಬುದು ಹಾವೇರಿ ಜಿಲ್ಲೆಯ ವೈದ್ಯರೊಬ್ಬರ ಹೇಳಿಕೆ.

ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಯಲ್ಲಿ 50 ಹಾಸಿಗೆಗೆ ಆಮ್ಲಜನಕ ಸೌಲಭ್ಯ ಕಲ್ಪಿಸಲಾಗಿದೆ. ನೂರು ಹಾಸಿಗೆಗೆ ಆಮ್ಲಜನಕ ಸೌಲಭ್ಯ ವಿಸ್ತರಿಸಲು ರೂಪುರೇಷೆ ಸಿದ್ಧವಾಗಿದೆ. ಇದಕ್ಕೆ ಹೆಚ್ಚುವರಿ ಪೈಪ್‌ಲೈನ್ ಅಳವಡಿಕೆ ಕಾರ್ಯ ಕೈಗೆತ್ತಿಕೊಳ್ಳಲಾಗುತ್ತಿದೆ. ಇದು ವೈಜ್ಞಾನಿಕವಾಗಿದ್ದರಷ್ಟೇ ರೋಗಿಗೆ ಪ್ರಾಣವಾಯು ಸಿಗುತ್ತದೆ; ಜೀವವೂ ಉಳಿಯುತ್ತದೆ.

ಪೂರಕ ಮಾಹಿತಿ: ಕೆ.ಜೆ. ಮರಿಯಪ್ಪ, ಜೆ.ಆರ್. ಗಿರೀಶ್, ಆರ್.ಜಿತೇಂದ್ರ, ಪ್ರಶಾಂತ್ ಕುರ್ಕೆ, ನಟರಾಜ ನಾಗಸಂದ್ರ, ಚಿದಂಬರಪ್ರಸಾದ್

ದಿನ ಭವಿಷ್ಯ

ಭಾನುವಾರ ಸೆಪ್ಟೆಂಬರ್ 5, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ತ್ರಯೋದಶೀ ಗಂ. 1-03 (ಬೆ. 6-40) ಭಾನುವಾರ ನಿತ್ಯ ನಕ್ಷತ್ರ ಆಶ್ಲೇಷಾ ಗಂ. 29-3 (ಸಾ. 5-52) ಪರಿಘ ನಾಮ ಯೋಗ ಗಂ. 7-22 ವಣಿಜ ಕರಣ ಗಂ. 1-3 ವಿಷ ಶೇಷ ಗಂ.3-35 ವಿಷ ಗಂ. 59-49 ಅಮೃತ ಗಂ. 24-0 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-12 ಸೂರ್ಯಾಸ್ತ: 6-24 ಅದೃಷ್ಟ ಸಂಖ್ಯೆ 1 8

ಮೇಷ: ಕಾರ್ಯಕ್ಷೇತ್ರದಲ್ಲಿನ ಸನ್ನಿವೇಶಗಳನ್ನು ನಿಮ್ಮ ಅನುಕೂಲಕ್ಕೆ ಬದಲಾಯಿಸಿಕೊಳ್ಳುವಿರಿ. ಉದಾರ ಮನೋಭಾವದಿಂದ ಸಹಾಯ ಮಾಡಲಿದ್ದೀರಿ. ಸ್ತ್ರೀಯರಿಗೆ ಮನೋಭಿಲಾಷೆ ಈಡೇರಲಿದೆ.

ವೃಷಭ: ವ್ಯವಹಾರಗಳಲ್ಲಿ ಉತ್ತಮ ಲಾಭ. ಮುಂದಿನ ಕಾರ್ಯಯೋಜನೆಗಳ ವಿಚಾರವಾಗಿ ಚಿಂತನೆ ನಡೆಸಲಿದ್ದೀರಿ. ಶುಭ ಕಾರ್ಯ ನಡೆಸಲು ತಯಾರಿ ಮಾಡಲಿದ್ದೀರಿ. ಮನೆ ಮಂದಿಯೊಂದಿಗೆ ಹಬ್ಬದ ವಾತಾವರಣ.

ಮಿಥುನ: ಅನಾವಶ್ಯಕ ಮಾತುಗಳಿಂದಾಗಿ ಉದ್ವೇಗಕ್ಕೊಳಗಾಗುವ ಸಾಧ್ಯತೆ ಇರುವುದರಿಂದ ಅಳೆದು ತೂಗಿ ಮಾತನಾಡುವುದು ಉತ್ತಮ. ವಿಪರೀತ ಖರ್ಚು ಭರಿಸ ಬೇಕಾದ ಅನಿವಾರ್ಯತೆ ಇದ್ದರೂ, ಅನುಕೂಲತೆ ಕೂಡಿಬರಲಿದೆ.

ಕರ್ಕಾಟಕ: ಕಾರ್ಯ ನಿಮಿತ್ತ ಕೈಗೊಂಡ ದೂರದ ಪ್ರಯಾಣದಿಂದಾಗಿ ಅಧಿಕ ಆದಾಯವನ್ನು ಗಳಿಸಲಿದ್ದೀರಿ. ವೆಚ್ಚದ ಮೇಲೆ ಹಿಡಿತದಿಂದಾಗಿ ಉಳಿತಾಯ ಸಾಧಿಸಲಿದ್ದೀರಿ. ವಿದ್ಯಾರ್ಥಿಗಳಿಗೆ ಬಿಡುವಿನ ದಿನ.

ಸಿಂಹ: ಕಚೇರಿಯಲ್ಲಿ ಕೆಲಸ ನಿರ್ವಹಿಸುವವರಿಗೆ ಸ್ಥಾನ ಭದ್ರತೆ ದೊರಕಲಿದೆ. ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿ ನಿರಾಳರಾಗುವಿರಿ. ವೈದ್ಯಕೀಯ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಬಡ್ತಿ.

ಕನ್ಯಾ: ಅಪೂರ್ವ ವಸ್ತುಗಳನ್ನು ಸಂಗ್ರಹಿಸುವ ಸಾಧ್ಯತೆ. ಮನೆಯ ಅಲಂಕಾರಕ್ಕಾಗಿ ವೆಚ್ಚ. ವಾಹನಗಳ ವ್ಯವಹಾರದಲ್ಲಿ ಉತ್ತಮ ಲಾಭ. ಕೈಗೆತ್ತಿಕೊಂಡ ಕಾರ್ಯಗಳಲ್ಲಿ ಯಶಸ್ಸನ್ನು ನಿಮ್ಮದಾಗಿಸಿಕೊಳ್ಳುವಿರಿ.

ತುಲಾ: ಕ್ರೀಡಾಪಟುಗಳು, ಸಾಹಸ ಕ್ರೀಡೆಗಳಲ್ಲಿ ಭಾಗವಹಿಸುವವರಿಗೆ ಸಾಮರ್ಥ್ಯ ಪ್ರದರ್ಶಿಸುವ ಪೈಪೋಟಿಯ ದಿನ. ಮನೆಯ ವ್ಯವಹಾರಗಳಲ್ಲಿ ತೊಂದರೆಗಳು ದೂರ.

ವೃಶ್ಚಿಕ: ಸಮಯವನ್ನು ವ್ಯರ್ಥ ಮಾಡದೇ ಕೆಲಸ ಕಾರ್ಯಗಳನ್ನು ನಿರ್ವಹಿಸಿ ಉತ್ತಮ ಫಲ ಪಡೆಯಲಿದ್ದೀರಿ. ರೇಷ್ಮೆ ಬೆಳೆಗಾರರು ಹಾಗೂ ಉದ್ಯಮದಲ್ಲಿ ತೊಡಗಿರುವವರಿಗೆ ಬಿಡುವಿಲ್ಲದ ದಿನ.

ಧನು: ಹೊಸ ಹೊಸ ವ್ಯವಹಾರವನ್ನು ಪ್ರಾರಂಭಿಸುವ ಸಲುವಾಗಿ ಚಿಂತನೆ. ಮಕ್ಕಳಿಗೆ ಓದಿನಲ್ಲಿ ಆಸಕ್ತಿಯನ್ನು ಪೋಷಿಸುವ ಸಲುವಾಗಿ ಹೆಚ್ಚಿನ ವ್ಯಯ ಮಾಡಬೇಕಾದೀತು. ಆರೋಗ್ಯ ಉತ್ತಮ ಗೊಳ್ಳಲಿದೆ.

ಮಕರ: ಕೃಷಿ ಚಟುವಟಿಕೆಗಳು ಭರದಿಂದ ಸಾಗಲಿವೆ. ಮಕ್ಕಳ ನೆಮ್ಮದಿಗಾಗಿ ಕರಕುಶಲ ವಸ್ತುಗಳ ಖರೀದಿ. ಯುವಕರಿಗೆ ಸಂಶೋಧನಾ ಕ್ಷೇತ್ರದಲ್ಲಿ ನೌಕರಿ ಮಾಡುವ ಅವಕಾಶ ಲಭ್ಯವಾಗಲಿದೆ.

ಕುಂಭ: ಹೊಸ ವಾಹನ ಖರೀದಿ ಮಾಡಲಿದ್ದೀರಿ. ಮಕ್ಕಳೊಂದಿಗೆ ಆನಂದದಿಂದ ಕಾಲ ಕಳೆಯುವಿರಿ. ಪ್ರಯಾಣದಲ್ಲಿ ಗಣ್ಯ ವ್ಯಕ್ತಿಗಳೊಂದಿಗೆ ಸಮಾಲೋಚನೆ. ಹಿಂದಿನ ಸಂತಸದ ಸಮಯವನ್ನು ಮೆಲಕು ಹಾಕಲಿದ್ದೀರಿ.

ಮೀನ: ಹಿರಿಯರ ಮಾತಿನಂತೆ ನಡೆದಲ್ಲಿ ಹೆಚ್ಚಿನ ಸಂಪಾದನೆ ಸಾಧ್ಯವಾಗಲಿದೆ. ಪ್ರೀತಿಪಾತ್ರರೊಂದಿಗೆ ವಿಹಾರಾರ್ಥ ಕಾಲ ಕಳೆಯುವ ಸಾಧ್ಯತೆ. ಮನೆಯಲ್ಲಿ ಹಬ್ಬದ ವಾತಾವರಣ ಮೂಡಲಿದೆ. ಸ್ತ್ರೀಯರಿಗೆ ಗೌರವ ಪ್ರಾಪ್ತಿ.

ನಿಮ್ಮ ಜನ್ಮದಿನ 5-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ವ್ಯಾಪಾರ ವ್ಯವಹಾರಗಳನ್ನು ಅಭಿವೃದ್ಧಿಗೊಳಿಸಲಿದ್ದೀರಿ. ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ಆದಾಯ ತರುವ ಉದ್ಯೋಗ ದೊರಕಲಿದೆ. ಕೆಲಸ ಕಾರ್ಯಗಳಲ್ಲಿ ಅಚ್ಚುಕಟ್ಟುತನ ಪ್ರದರ್ಶಿಸಲಿದ್ದೀರಿ. ದೇಹಾಯಾಸದಿಂದಾಗಿ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ.

ಪದಬಂಧ 4710

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಅಧಿಕ ಜ್ವರದಿಂದ ಉಂಟಾಗುವ ಪರಿಣಾಮ (2)
4.ವಿವಾದವಿಲ್ಲದೇ ಜರುಗಿದ ಲಗ್ನ (3)
5.ನೆಮ್ಮದಿ ಹೀಗೆ ಬಂದಿದೆ (4)
6. ಕಾಲಸೂಚಕ ಯಂತ್ರ (4)
7.ವನದಲ್ಲಿ ತಿರುಗಿದಾಗ ಹೊಸತು ಸಿಕ್ಕಿದೆ (2)
9.ಈ ರೀತಿ ಚುಚ್ಚು (2)
13.ಮನೆಯನ್ನು ಹೀಗೂ ಹೇಳುವರು (4)
14.ಜೊತೆಯಲ್ಲಿ ವಾಸಿಸುವಿಕೆ (4)
15.ಬೇಡುವವ ಇಲ್ಲಿ ಬಂದಿದ್ದಾನೆ (3)
16.ಜಳಕವನ್ನು ಹೀಗೆನ್ನಿ (2)

ಮೇಲಿಂದ ಕೆಳಕ್ಕೆ

1. ಸೂಕ್ಷ್ಮವಾದ ಎಳೆ (4)
2.ಗತಿಸಿದ ಪತಿಯೊಡನೆಯೇ ಚಿತೆಯೇರುವುದು (5)
3.ಇದು ಮುಖ್ಯವಾದುದು (3)
5.ಈಕೆ ವಿದ್ಯಾಧಿದೇವತೆ (4)
8.ಕಾಡಿನಲ್ಲಿ ವಾಸಿಸುವಿಕೆ (4)
10.ಲೋಹದ ಹಕ್ಕಿಯಲ್ಲಿನ ಪಯಣ (5)
11.ಸಮಯಸ್ಫೂರ್ತಿಯಿಂದ ಕವನ ರಚಿಸಲ್ಪಟ್ಟ ಕವಿ (4)
12.ಭವ್ಯವಾದ ಮನೆ (3)

1	■	2		■	■	■	3	■
4			■	■	5			
	■	6				■		■
	■		■	■		■	■	■
■	■	7	8	■	9	10	■	■
■	■	■		■	■		■	11
■	12	■	13				■	
14				■	■	15		
■		■	■	■	16		■	

4709ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ

1.ಪ್ರವಾದಿ 4.ನಡುಮನೆ
6.ಪಕ್ಷಾಂತರ 8.ರಜನಿ 11.ಮರುಕ
13.ವನರಾಜ 17.ನಳಪಾಕ
18.ಆಭಾರ

ಮೇಲಿಂದ ಕೆಳಕ್ಕೆ

1.ಪ್ರಗಲ್ಭ 2.ದಿನಕರ 3.ಕಡಿತ 5.ನೆಪ
7.ರಮಣಿ 9.ನಿಯಮ 10.ಸ್ವಭಾವ
12.ಕಸ್ಮಿಕಅ 14.ನನಸು 15.ಜನ
16.ಪ್ರಸ್ತಾರ

ಸುಡೊಕು 5096

	7			2				5
3		6	5		8			
	4			7		2		
	6				5			
9		1		8			6	2
4			2			1	3	
		2	3		7		5	
7	1			5		6		3
5		3	4					1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5095 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರವಾಹ, ಭೂಕುಸಿತ: ಹೆಚ್ಚಿನ ಪರಿಹಾರ ನೀಡಲು ಶಿಫಾರಸು ಮಾಡಿ

ಎನ್‌ಡಿಆರ್‌ಎಫ್ ಮಾರ್ಗಸೂಚಿ ಪರಿಷ್ಕರಣೆ: ಬೊಮ್ಮಾಯಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಲ್ಕು ವರ್ಷದಿಂದ ಪ್ರವಾಹ, ಭೂಕುಸಿತ ಎದುರಿಸುತ್ತಿದ್ದೇವೆ. ಎನ್‌ಡಿಆರ್‌ಎಫ್ (ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ) ಪರಿಹಾರ ಮಾರ್ಗಸೂಚಿ ಬದಲಿಸಿ ರಾಜ್ಯಕ್ಕೆ ಹೆಚ್ಚುವರಿ ಪರಿಹಾರ ನೀಡಲು ಶಿಫಾರಸು ಮಾಡಬೇಕು' ಎಂದು ಪ್ರವಾಹ ಅಧ್ಯಯನಕ್ಕೆ ಬಂದ ಕೇಂದ್ರ ತಂಡಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ಮುಖ್ಯಮಂತ್ರಿ ಅವರನ್ನು ಕೇಂದ್ರ ಗೃಹ ಸಚಿವಾಲಯದ ಸುಶೀಲ್ ಪಾಲ್ ನೇತೃತ್ವದ ತಂಡ ಶನಿವಾರ ಭೇಟಿ ಮಾಡಿ ರಾಜ್ಯದಲ್ಲಿ ಅತಿವೃಷ್ಟಿ ಯಿಂದ ಉಂಟಾಗಿರುವ ಹಾನಿ ಕುರಿತು ಚರ್ಚೆ ನಡೆಸಿತು.

'ಪ್ರವಾಹ ಸಂತಸ್ತರಿಗೆ ರಕ್ಷಣೆ ಮತ್ತು ತುರ್ತು ಪರಿಹಾರವನ್ನು ಸರ್ಕಾರ ನೀಡಿದೆ. ಆದರೆ, ಜನರ ಪುನರ್ವಸತಿಗೆ ಹೆಚ್ಚಿನ ನೆರವಿನ ಅಗತ್ಯವಿದೆ. ಉತ್ತರ ಕನ್ನಡ ಜಿಲ್ಲೆಯ ಹಾನಿ ಪರಿಶೀಲಿಸಿ ₹ 100 ಕೋಟಿ ತಕ್ಷಣ ಬಿಡುಗಡೆ ಮಾಡಿದ್ದು, ಬೆಳಗಾವಿ, ಉತ್ತರ ಕನ್ನಡ ಜಿಲ್ಲೆಗಳಿಗೆ ₹ 500 ಕೋಟಿ ಒದಗಿಸಲಾಗಿದೆ' ಎಂದು ಬೊಮ್ಮಾಯಿ ಹೇಳಿದರು.

'ವಾಸ್ತವಾಂಶಗಳನ್ನು ಕೇಂದ್ರ ತಂಡದ ಮುಂದಿಡಲಾಗಿದೆ. ಈಗ ಕ್ಷಣ ಕ್ಷಣದ ಮಾಹಿತಿ ಕೇಂದ್ರಕ್ಕೂ ಲಭ್ಯವಿದೆ. ನಾಲ್ಕು ವರ್ಷಗಳಿಂದ ಜನರು ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಪ್ರತಿವರ್ಷ ಕುಟುಂಬಗಳ ಸ್ಥಳಾಂತರ, ಮನೆ ಕಳೆದುಕೊಳ್ಳುವ ಪರಿಸ್ಥಿತಿ ಹೃದಯ ವಿದ್ರಾವಕವಾಗಿದೆ' ಎಂದು ಹೇಳಿದರು.

'15 ವರ್ಷಗಳಲ್ಲಿ ರಸ್ತೆ, ವಿದ್ಯುತ್ ಮತ್ತಿತರ ಸಾರ್ವಜನಿಕ ಸೌಲಭ್ಯಗಳಿಗೆ ಭಾರಿ ಹೂಡಿಕೆ ಮಾಡಲಾಗಿದೆ. ಅವುಗಳನ್ನು ಮರು ಸ್ಥಾಪಿಸುವುದು ಸವಾಲಿನ ಕೆಲಸ. ಪ್ರವಾಹದಿಂದ ಬೆಳೆ ನಷ್ಟವಾಗಿ ರೈತರು ತೊಂದರೆ ಅನುಭವಿಸಿದ್ದಾರೆ. ಆದ್ದರಿಂದ, ರಾಜ್ಯಕ್ಕೆ ಗರಿಷ್ಠ ಪ್ರಮಾಣದ ನೆರವು ನೀಡಬೇಕು' ಎಂದು ಮನವಿ ಮಾಡಿದರು.

ಸುಶೀಲ್ ಪಾಲ್ ಮಾತನಾಡಿ, 'ರಾಜ್ಯ ಸರ್ಕಾರ ವಸ್ತುನಿಷ್ಠ ವರದಿ ಸಲ್ಲಿಸಿದೆ' ಎಂದರು.

ಪ್ರವಾಹದಿಂದ ಆಗಿರುವ ಹಾನಿ ಕುರಿತ ವರದಿಯನ್ನು ಕೇಂದ್ರ ಅಧ್ಯಯನ ತಂಡಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಸ್ತಾಂತರಿಸಿದರು. ಕಂದಾಯ ಸಚಿವ ಆರ್. ಅಶೋಕ, ವಸತಿ ಸಚಿವ ವಿ. ಸೋಮಣ್ಣ ಇದ್ದರು

'ತುರ್ತು ಬೆಳೆ ಪರಿಹಾರ ₹ 38.65 ಕೋಟಿ'

'ರಾಜ್ಯದ 15 ಜಿಲ್ಲೆಗಳ 86 ತಾಲ್ಲೂಕುಗಳನ್ನು ಪ್ರವಾಹಪೀಡಿತ ಎಂದು ಘೋಷಿಸಿದ್ದು, ₹ 5,690 ಕೋಟಿ ನಷ್ಟ ಅಂದಾಜಿಸಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಸುಮಾರು ₹ 765.84 ಕೋಟಿ ನಷ್ಟ ಆಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ವಿಪತ್ತು ಪರಿಹಾರ ಘಟಕದ ಅಧಿಕಾರಿಗಳ ಜೊತೆ ಶನಿವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬೆಳೆ ಪರಿಹಾರ ನೀಡಲು 13 ಜಿಲ್ಲೆಗಳ 45,586 ಫಲಾನುಭವಿಗಳನ್ನು ಗುರುತಿಸಿದ್ದು, ₹ 38.65 ಕೋಟಿಗೆ ಅನುಮೋದನೆ ನೀಡಲಾಗಿದೆ. ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಸಂದಾಯ ಆಗಲಿದೆ' ಎಂದರು.

₹ 100 ಕೋಟಿ ಸಂಗ್ರಹಿಸಿದ ಬಾರ್ಬಿಕ್ಯು ನೇಷನ್

ನವದೆಹಲಿ (ಪಿಟಿಐ): ರೆಸ್ಟೋರೆಂಟ್‌ಗಳ ಅತಿದೊಡ್ಡ ಸಮೂಹವನ್ನು ಹೊಂದಿರುವ ಬಾರ್ಬಿಕ್ಯು ನೇಷನ್ ಹಾಸ್ಪಿಟಾಲಿಟಿ ಲಿಮಿಟೆಡ್ ಕಂಪನಿಯು ಆದ್ಯತಾ ಷೇರುಗಳನ್ನು ಮಾರಾಟ ಮಾಡುವ ಮೂಲಕ ₹ 100 ಕೋಟಿ ಸಂಗ್ರಹ ಮಾಡಿರುವುದಾಗಿ ಶನಿವಾರ ತಿಳಿಸಿದೆ.

ಮೆಸ್ಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸೇರಿದಂತೆ ಒಟ್ಟಾರೆ ಮೂರು ಹೂಡಿಕೆದಾರರಿಗೆ ಷೇರುಗಳನ್ನು ಮಾರಾಟ ಮಾಡಿರುವುದಾಗಿ ಅದು ಹೇಳಿದೆ. ₹ 5ರ ಮುಖಬೆಲೆಯ 11,77,855 ಷೇರುಗಳನ್ನು ಪ್ರತಿ ಷೇರಿಗೆ ₹ 844 ರಂತೆ ಆದ್ಯತಾ ವಿತರಣೆ ಮಾಡಲು ಶನಿವಾರ ನಡೆದ ಕಂಪನಿಯ ಷೇರುದಾರರ ಸಮಿತಿಯ ಸಭೆಯಲ್ಲಿ ಒಪ್ಪಿಗೆ ದೊರೆಯಿತು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಸಂಪತ್ತು ₹ 10 ಲಕ್ಷ ಕೋಟಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬೈ ಷೇರು ಪೇಟೆಯಲ್ಲಿ (ಬಿಎಸ್‌ಇ) ದಾಖಲೆಯ ವಹಿವಾಟು ನಡೆಯುತ್ತಿದ್ದು, ಹೂಡಿಕೆದಾರರ ಸಂಪತ್ತು ಮೌಲ್ಯವು ವಾರದ ವಹಿವಾಟಿನಲ್ಲಿ ₹ 10.48 ಲಕ್ಷ ಕೋಟಿಗಳಷ್ಟು ವೃದ್ಧಿಯಾಗಿದೆ. ಇದರಿಂದ ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯವು ₹ 254.21 ಲಕ್ಷ ಕೋಟಿಗಳಿಗೆ ತಲುಪಿದೆ.

ಷೇರುಪೇಟೆಯಲ್ಲಿ ಗೂಳಿ ಓಟ ಜೋರಾಗಿದೆ. ಬಿಎಸ್‌ಇ ಸೆನ್ಸೆಕ್ಸ್ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 58 ಸಾವಿರವನ್ನು ದಾಟಿ ವಹಿವಾಟು ನಡೆಸುತ್ತಿದೆ. ಕಳೆದ ಆಗಸ್ಟ್‌ನಲ್ಲಿ ಶೇ 9ರಷ್ಟು ಏರಿಕೆ ಕಂಡಿದ್ದು, ಸೆಪ್ಟೆಂಬರ್‌ನಲ್ಲಿಯೂ ದಾಖಲೆಯ ಓಟ ಮುಂದುವರಿಸಿದೆ. ವಾರದ ವಹಿವಾಟಿನಲ್ಲಿ ಪ್ರಮುಖ ಎಲ್ಲಾ ವಲಯಗಳು ಸಹ ಸಕಾರಾತ್ಮಕ ಹಾದಿಯಲ್ಲಿದ್ದವು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ ಸಹ 17 ಸಾವಿರದ ಗಡಿಯನ್ನು ದಾಟಿದೆ. ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 2005 ಅಂಶಗಳಷ್ಟು ಏರಿಕೆ ಕಂಡಿದ್ದರೆ, ನಿಫ್ಟಿ 618 ಅಂಶ ಹೆಚ್ಚಾಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬಂಡವಾಳ ಮಾರುಕಟ್ಟೆಯಲ್ಲಿ ಖರೀದಿಗೆ ಹೆಚ್ಚು ಗಮನ ನೀಡಿದ್ದಾರೆ. ಈ ವಾರ ₹ 4,896 ಕೋಟಿಗೂ ಹೆಚ್ಚಿನ ಮೊತ್ತವನ್ನು ಹೂಡಿಕೆ ಮಾಡಿದ್ದಾರೆ.

ಜಿಡಿಪಿ ಬೆಳವಣಿಗೆ ಉತ್ತೇಜನಕಾರಿ ಆಗಿರುವುದು, ಸೇವಾ ವಲಯದ ಸೂಚ್ಯಂಕದ ಏರಿಕೆಯು ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟಿಗೆ ಕಾರಣವಾಯಿತು ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

4-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1580)
ಸೋಯಾ ಕಚ್ಚಾ	1355 (1360)
ಪಾಮ್ ವಾರದ ಡೆಲಿವರಿ	1255 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,375 (47,250)
ಬೆಳ್ಳಿ ಕೆ.ಜಿ 65,075 (63,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	395
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46500
ಹಳತು	42500-50500
ಚಿತ್ರದುರ್ಗ	
ಆಪಿ	56629-57079
ಬೆಟ್ಟೆ	39619-40099
ಕೆಂಪುಗೋಟು	33210-33600
ರಾಶಿ	56139-56569
ಪುತ್ತೂರು	
ಹೊಸತು	32000-46500
ಸಿದ್ದಾಪುರ	
ಬಿಳಿಗೋಟು	32699-37599
ಚಾಲಿ	42699-43569
ಕೋಕ	28699-36112
ಕೆಂಪುಗೋಟು	31699-31899
ರಾಶಿ	48400-52009
ತಟ್ಟಿಬೆಟ್ಟೆ	35099-49899
ಶಿರಸಿ	
ಬೆಟ್ಟೆ	32019-49208
ಬಿಳಿಗೋಟು	31099-38809
ಚಾಲಿ	34811-43808
ರಾಶಿ	44699-52921
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	258-461
ದ್ವಿತಳಿ (ಬಿ.ವಿ)	273-533

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13000	13100	194.35 ಸೆಂಟ್ಸ್
ಎಸಿ	---	4800	5275	
ಆರ್‌ಪಿ	---	5700	6250	ಲಂಡನ್
ಆರ್‌ಸಿ	---	3500	3620	2056 ಡಾಲರ್ಸ್

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1390(1400)
ಸೂರ್ಯಕಾಂತಿ (ರಿಫೈನ್ಡ್)	₹1450(1450)
ಪಾಮೋಲಿನ್	₹1257 (1360)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹437

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಗುಂಡಣ್ಣ


ಊಟಕ್ಕಾಗಿ ನಿಮ್ಮನ್ನು ತುಂಬಾ ಕಾಯಿಸುತ್ತಿದ್ದೇವೆ, ಅದಕ್ಕಾಗಿ ಕ್ಷಮೆ ಕೋರುತ್ತೇವೆ
ಪುನರಾರಂಭಗೊಂಡಿರುವುದರಿಂದ ನಾವು ತುಂಬಾ ಬ್ಯುಸಿ ಆಗಿದ್ದೇವೆ
ಓ! ಪರವಾಗಿಲ್ಲ ಬಿಡಿ
ಆನ್‌ಲೈನ್‌ನಲ್ಲಿ ಪಿಜ್ಜಾ ಆರ್ಡರ್ ಮಾಡಿದ್ದು ನೀವೇನಾ?
ಹೌದು, ಇಲ್ಲಿ ಕೊಡಿ
© 2021 by King Features Syndicate, Inc. World Rights reserved
8-16
www.Blondie.com
YOUNG & MARSHALL

25 ವರ್ಷಗಳ ಹಿಂದೆ

ಗುರುವಾರ, 5-9-1996

- **ಮತ್ತೆ ಇರಾಕ್ ಮೇಲೆ ತ್ವರಿತ ಕ್ಷಿಪಣಿ ದಾಳಿ**

ದುಬೈ, ಸೆ. 4 (ಪಿಟಿಐ)– ಇರಾಕ್‌ನ ವಿರುದ್ಧ 'ಕಾಲಮಿತಿ ತ್ವರಿತ ಕಾರ್ಯಾಚರಣೆ' ಮುಂದುವರಿಸಿರುವ ಅಮೆರಿಕದ ಸೇನೆ ಇಂದು ಇರಾಕ್‌ನ ಮಿಲಿಟರಿ ಸೇನಾ ನೆಲೆಗಳ ಮೇಲೆ ಮತ್ತೆ 17 ಕ್ಷಿಪಣಿ ದಾಳಿ ನಡೆಸುವುದರೊಂದಿಗೆ ಕೊಲ್ಲಿ ರಾಷ್ಟ್ರದಲ್ಲಿ ಸಮರ ಚಟುವಟಿಕೆ ಬಿರುಸುಗೊಂಡಿದೆ.

ಇರಾಕ್‌ನ ಮೇಲೆ ಅಮೆರಿಕ ನಡೆಸಿದ ಕ್ಷಿಪಣಿ ದಾಳಿ ಯಶಸ್ವಿಯಾಗಿದೆ. ದಕ್ಷಿಣ ಖುರ್ದಿಷ್ ಪ್ರದೇಶದಿಂದ ಇರಾಕ್ ಸೇನೆ ಹಿಂದಕ್ಕೆ ಮರಳುತ್ತಿದೆ ಎಂದು ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಹೇಳಿಕೊಂಡಿದ್ದಾರೆ.

ಅಮೆರಿಕದ ಸೇನೆಯ ಮೊದಲ ಹಂತದ ದಾಳಿಗೆ ಐದು ಮಂದಿ ಬಲಿಯಾಗಿದ್ದಾರೆ ಎಂದು ಸರ್ಕಾರಿ ಸ್ವಾಮ್ಯದ ಇರಾಕಿ ಟೆಲಿವಿಷನ್ ವರದಿ ಮಾಡಿದೆ.

50 ವರ್ಷಗಳ ಹಿಂದೆ

ಭಾನುವಾರ, 5-9-1971

- **ರಾಷ್ಟ್ರೀಕರಣದ ಉದ್ದೇಶ ಸಫಲಗೊಳಿಸಲು ಬ್ಯಾಂಕ್ ನೌಕರರು, ಆಡಳಿತಗಳಿಗೆ ಕರೆ**

ಬೆಂಗಳೂರು, ಸೆ. 5– ಬ್ಯಾಂಕ್ ರಾಷ್ಟ್ರೀಕರಣ ಕ್ರಮ 'ಸಮಾಜದ ಕ್ರಾಂತಿಕಾರಿ ಬದಲಾವಣೆಯ ಸಾಧನವಾಗಿ' ಅದರ ಉದ್ದೇಶಗಳು ಕೈಗೂಡುವಂತಾಗಲು ನೌಕರರು, ಆಡಳಿತ ಮತ್ತು ಸಂಬಂಧಪಟ್ಟವರು ಇನ್ನು ಮುಂದೆ ಶ್ರಮಿಸಬೇಕೆಂದು ಕೇಂದ್ರದ ಅರ್ಥ ಖಾತೆಯ ರಾಜ್ಯ ಸಚಿವ ಶ್ರೀ ಕೆ.ಆರ್. ಗಣೇಶ್ ಅವರು ಇಂದು ಇಲ್ಲಿ ಕರೆ ನೀಡಿದರು.

ಬ್ಯಾಂಕ್‌ಗಳ ರಾಷ್ಟ್ರೀಕರಣವಾದ ನಂತರ ಅದರ ಗುರಿಗಳೆಲ್ಲ ಸಫಲವಾಗದಿದ್ದರೂ 'ಕಳೆದ ಎರಡು ವರ್ಷಗಳಲ್ಲಿ ಈ ಬ್ಯಾಂಕುಗಳು ಸಾಧಿಸಿರುವ ಪ್ರಗತಿಯ ಬಗ್ಗೆ ಯಾರೂ ತಲೆ ತಗ್ಗಿಸಬೇಕಾಗಿಲ್ಲ' ಎಂದು ಒತ್ತಿ ಹೇಳಿದರು.

ಪ್ರಜಾವಾಣಿ

ಎಂಥ ಚಂದ ಗುರು ಶಿಷ್ಯರ ಅನುಬಂಧ!

ಹರ ಕಾಯದಿರೆ... ಗುರು ಕಾಯುವನು! ಗುರುವಾಗಿ ಮಾರ್ಗದರ್ಶನ ನೀಡಿ ಸನ್ಮಾರ್ಗ ತೋರುವ ಶಿಕ್ಷಕರಿಗೆ ನಮ್ಮ ನಮನಗಳು. ನೀವು ವಿದ್ಯಾರ್ಥಿಗಳೊಂದಿಗೆ ಕಳೆದ ಸವಿ ನೆನಪುಗಳ ಚಿತ್ರವನ್ನು ಒಕ್ಕಣೆಯೊಂದಿಗೆ www.bit.ly/pvshikshakaradinaಕ್ಕೆ ನಾಳೆ ಸಂಜೆ 5ರೊಳಗೆ ಕಳುಹಿಸಿ, ಆಕರ್ಷಕ ಬಹುಮಾನ ಗೆಲ್ಲಿ.

ಅದೃಷ್ಟಶಾಲಿಗಳಿಗೆ GIFT VOUCHER ₹500/-

ಆಯ್ದ ಚಿತ್ರಗಳನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು

*ಷರತ್ತುಗಳು ಅನ್ವಯ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಶಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಉದ್ಯೋಗಾವಕಾಶ

Drivers

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188

General

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800- 45000/-. 9980295449, 9902839010

Marketing & Sales

WANTED DRA/NON DRA Field-Executives/Telecallers for Bangalore, Attractive Salary, PF+ESI Contact:-9113602995/ 8867052293

Security & Detectives

2 ವರ್ಷ ಅನುಭವವಿರುವ 45 ವರ್ಷದೊಳಗಿನ ಶಾಲೆಯ ಸುತ್ತಮುತ್ತ ವಾಸವಿರುವ ಸೆಕ್ಯೂರಿಟೀ ಗಾರ್ಡ್ (Security Guard) ಬೇಕಾಗಿದ್ದಾರೆ. ಸಂಬಳ 10,000 ದಿಂದ 15,000. ಊಟ ಮತ್ತು ವಸತಿ ಸೌಕರ್ಯವಿರುವುದಿಲ್ಲ. ಚಿತ್ರಕೂಟ ಶಾಲೆ, ನಾಗದೇವನಹಳ್ಳಿ, ಬೆಂಗಳೂರು.560056. ಸಂಪರ್ಕಿಸಿ: 7829647333

Teachers/ Professors

ಸುವರ್ಣಮುಖಿ ಸಂಸ್ಕೃತಿಧಾಮ ಹೈಯರ್ ಪ್ರೈಮರಿಸ್ಕೂಲ್, ವಡೇರಹಳ್ಳಿ, ಕನಕಪುರ ತಾಲ್ಲೂಕು,ರಾಮನಗರ ಜಿಲ್ಲೆ ವಸತಿ ಶಾಲೆಗೆ ಬೇಕಾಗಿದ್ದಾರೆ. SCIENCE TEACHER:PCM,BSc, BEd ಪದವೀಧರರು. HEAD MASTER ಅನುಭವಿ BEd,Degree ಫುಲ್ ಟೈಮ್‌ಗಾಗಿ ಅಗತ್ಯವಿದ್ದಲ್ಲಿ ಊಟ, ವಸತಿ ವ್ಯವಸ್ಥೆ ನೀಡಲಾಗುವುದು.ಸಂಪರ್ಕಿಸಿ: 9886128699, 9972970502

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ.ಬೆಂಗಳೂರು-56 ಸಂಪರ್ಕಿಸಿ: 9606385001, 9606523337

EDUCATION SPECIAL
We are coming out with special offer for Admission Notice, Education Success Congratulation Ads
DH DECCAN HERALD Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

WEEKEND CORNER


ಜೈ ಶ್ರೀ ರಾಮ್ ಆಶೀರ್ವಾದ

ಅಖಂಡ ಹಿಂದು ಸಂಘ
WHA ಕ್ಲಬ್
WHA ಟ್ರಸ್ಟ್

ಸಮಸ್ತ ಹಿಂದುಗಳ ಸಂಘಟಣೆ/ WHA ಟ್ರಸ್ಟ್
(ಸನಾತನಧರ್ಮವನ್ನು ಹೆಮ್ಮೆಯಿಂದ ಅನುಸರಿಸುತ್ತಿರುವ ಮತ್ತು ಪರಿಪಾಲಿಸುತ್ತಿರುವ ಭಕ್ತರು)
ಜೈ ಶ್ರೀ ರಾಮ್! ಶ್ರೀ ಗೌತಮ ಬುದ್ಧ ಶ್ರೀ ಮಹಾವೀರ ಶ್ರೀ ಗುರು ನಾನಕರಿಂದ ಡಬ್ಲ್ಯುಹೆಚ್‌ಎ ಟ್ರಸ್ಟ್ ಆಶೀರ್ವಾದ ಪಡೆದಿದೆ
ನಾನು ಒಬ್ಬ ಮಹಾರಾಜ ಮತ್ತು ಮಹಾರಾಣಿ
ಈ ಡಬ್ಲ್ಯುಹೆಚ್‌ಎ ಕ್ಲಬ್‌ನ ಪ್ರತಿಷ್ಠಿತ ವಿಐಪಿ ಎನ್ನಬಹುದಾದ ಗೌರವಾನ್ವಿತ ಹಾಗೂ ಪ್ರತಿಷ್ಠಿತ ಸದಸ್ಯನಾಗಿ ಗೌರವಾದರಗಳನ್ನು ಸ್ವೀಕರಿಸಿದ ಆ ಚಮತ್ಕಾರಿ ದಿನದಂದೇ ನಾನೊಬ್ಬ ಹೆಮ್ಮೆಯ, ಸುರಕ್ಷಿತ ಮತ್ತು ಖ್ಯಾತಿ ಪಡೆದ ಆಶೀರ್ವದಿತ ವ್ಯಕ್ತಿಯಾಗಿದ್ದೇನೆ.

ಸಕಲ ಹಿಂದೂ ಸಂಘಟಣೆಗಳು/- ಡಬ್ಲ್ಯುಎಚ್‌ಎ ಕ್ಲಬ್‌ಗಳ ವತಿಯಿಂದ, ನಮ್ಮ ಎಲ್ಲಾ ಆತ್ಮೀಯ ಸ್ನೇಹಿತರಿಗೆ ವಿನಂತಿಸುವುದು ಏನೆಂದರೆ, ರೆಸಿಡೆನ್ಶಿಯಲ್ ಸೊಸಿಯಲೈಸಿಂಗ್ ಅಸೋಸಿಯೇಶನ್ಸ್/ ಕ್ಲಬ್‌ಗಳ ನಿರ್ಮಾಣಕ್ಕಾಗಿ, ಕೃಷಿ ಭೂಮಿ ಮತ್ತು ಕೃಷಿಯೇತರ ಭೂಮಿ, ಮತ್ತು ಸೈಟ್ ಲೇಔಟ್‌ಗಳು, ದೊಡ್ಡ ವಿಲ್ಲಾ ಪ್ಲಾಟ್‌ಗಳು, ಚಾಲ್ತಿ ಹೊಟೇಲ್‌ಗಳು, ಲಾಡ್ಜಿಂಗ್‌ಗಳು, ರೆಸಾರ್ಟ್‌ಗಳು, ಕಲ್ಯಾಣ ಮಂಟಪಗಳು, ಮಾಲ್ ಕಾಂಪ್ಲೆಕ್ಸ್‌ಗಳು, ನಿರ್ಮಾಣ ಹಂತದಲ್ಲಿರುವ ಕಟ್ಟಡಗಳಾದರೂ ಸರಿ, ತಕ್ಷಣ ಮಾರಾಟಕ್ಕೆ ಅಥವಾ ಖರೀದಿಗೆ ಬೇಕಾಗಿರುತ್ತವೆ. ಬೆಂಗಳೂರು, ಮೈಸೂರು ಮತ್ತು ಇನ್ನಿತರ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ದೊಡ್ಡ ಪಟ್ಟಣಗಳಲ್ಲಿ ಹಾಗೂ ಸಂಪೂರ್ಣ ಹಿಂದೂಸ್ತಾನ್/ ಭಾರತದಾದ್ಯಂತ ಬೇಕಾಗಿರುತ್ತದೆ..
ಸಂಪರ್ಕಿಸಿ: 9606777879, www.whaclub.com

ಬೇಕಾಗಿದ್ದಾರೆ: ಸೆಕ್ಯೂರಿಟೀ ಗಾರ್ಡ್‌ಗಳು, ಪಿಯೂನ್, ಕ್ಲೀನರ್, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು. ದೂರವಾಣಿ: 08023301363

ವ್ಯಾಪಾರ

Business Offers

Finance

FDI LOANS Rs.6Cr And above@ 3-6%P.A, Against Properties, Business, Projects, Sick Units, Takeover 7200418844, marcusgroups@yahoo.com

ಶಿಕ್ಷಣ

Distance Education

GOVT. Approved Diploma In Airport Management Distance Education Contact 9880230372 7899283982

ಭವಿಷ್ಯ

Astrology

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ_ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಸಿರಿಚೈತನ್ಯ ಮಿಲ್ಲೆಟ್ ಮಿಕ್ಸ್
ಸೇವಿಸಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಿ
ಮಧುಮೇಹ ಕೊಲೆಸ್ಟ್ರಾಲ್ ಥೈರಾಡ್ ಸಮಸ್ಯೆಗಳಿಗೆ ಉತ್ತಮ ಪರಿಣಾಮ
"ಸಿರಿಚೈತನ್ಯ ಮಿಲ್ಲೆಟ್ ಮಿಕ್ಸ್ ಸೇವನೆ ದಿನವೆಲ್ಲ ಉತ್ಸಾಹ"
ರಾಜ್ಯಾದ್ಯಂತ ವಿತರಕರು ಬೇಕಾಗಿದ್ದಾರೆ. 99002 65678
ವಿತರಕರು: ಮಾರುತಿ ಟ್ರೇಡರ್ಸ್, ಬೆಂಗಳೂರು. 89701 15803
ಹೊಯ್ಸಳ ಏಜೆನ್ಸಿ, ನೆಲಮಂಗಲ. 89701 15803
ಸಾಯಿ ಫಾರ್ಮ ಏಜೆನ್ಸಿ. ಚಂದ್ರಲೇಔಟ್ 99722 20720
ನೇಹಾ ಏಜೆನ್ಸಿ. ವಿಜಯನಗರ 70196 64608
Our MILLET SOUP is available all KADAMBA HOTELS

BOOKS
Books for Nursery Schools, Educational Wall Charts in Eng & Kan. All State Maps, Children's Story, Classics, G.K. Self Help, Biography, Colouring, Drawing & Hobby, Flash Cards, Dictionaries, Fiction, Novels, Non-Fiction. Books Available in English and Kannada Languages. ATTRACTIVE DISCOUNTS FOR SCHOOLS AND BOOK SHOPS.
Vasan Publications Mastermind Books
Bengaluru - 560 053
Call : 94488 89270 / 080-4853 5855
vasanpublications@gmail.com
www.mastermindbooks.com.

★॥ಶ್ರೀಆಂಜನೇಯಸ್ವಾಮಿ॥★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್_ಕೇಸ್, ವ್ಯಾಪಾರ, ಸಂತಾನ ಇನ್ನೂ ಯಾವುದೇ ಗುಪ್ತ_ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9880977623

ವೈವಾಹಿಕ

Brides Wanted

Kannada

PROFESSIONALLY QUALIFIED Working match for Vishwakarma Boy May'82, 5'11' BCom MBA Senior Manager (Investment Bank) MNC Bengaluru from well educated family, cast no bar Aravind.r1705@gmail.com 8105778778 9880288525

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ,ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 5 ಸೆಪ್ಟೆಂಬರ್ 2021

ರೇಖಾಲಾವಣ್ಯದ ಗಣಪ 11

ಚಿಂತಾಮಣಿಯಲ್ಲಿ ಬೆಳಗಿದ ಮುಖ 12

ಪಾರ್ಸಿಗಳು ಮತ್ತು ಹದ್ದುಗಳು 13

ಮಕ್ಕಳಾಗಿ ಆಡೀದ್ವಿ, ಹಕ್ಕ್ಯಾಗಿ ಹಾಡೀದ್ವಿ...

ದುರಿತ ಕಾಲದಲ್ಲಿನ ಶಿಕ್ಷಕ ವೃತ್ತಿ ಅನುಭವಗಳು...



ಕಲೆ: ಭಾನು ಪಟ್ಟಾರ್

ಗುರು ಸಮ್ಮುಖದಲ್ಲಿ ನಡೆಯುವ ಶಿಕ್ಷಣದ ಶಕ್ತಿಯೇ ಬೇರೆ. ಆದರೆ, ಕಳೆದ ಒಂದೂವರೆ ವರ್ಷದಲ್ಲಿ ಗುರು–ಶಿಷ್ಯರ ಸಮಾಗಮವೇ ಆಗಿಲ್ಲ. ಕೋವಿಡ್ ದುರಿತ ಕಾಲದ ಶಿಕ್ಷಕರ ಅನುಭವಗಳು ಹೇಗಿದ್ದವು? ಶಿಕ್ಷಕರ ದಿನಾಚರಣೆ ನೆಪದಲ್ಲಿ ಹೀಗೊಂದು ಹೊರಳು ನೋಟ...

ಕೊರೊನಾ ಕಾಲದಲ್ಲೂ ಕಂಡ ಕಾಮನಬಿಲ್ಲು

ವೀರಣ್ಣ ಮಡಿವಾಳರ

‘ನಮ್ಮ ಚೇತನದ ಆಳವನ್ನು ದುಃಖ ಕೊರೆದಷ್ಟೂ ಸುಖವನ್ನು ಅದು ತುಂಬಿಕೊಳ್ಳಬಲ್ಲದು’ ಎನ್ನುತ್ತಾನೆ ಖಲೀಲ್ ಗಿಬ್ರಾನ್. ಕೊರೊನಾ ತಂದೊಡ್ಡಿರುವ ಸಂಕಟ ಇಡೀ ಜಗದ ಮನಸ್ಸಿನ ಆಳವನ್ನ ಇನ್ನಿಲ್ಲದಂತೆ ಕೊರೆದಿದೆ. ಮುಖ್ಯವಾಗಿ ಶಾಲೆಯಿಂದ ಮಕ್ಕಳನ್ನ ದೂರವಿಟ್ಟು, ಎಳೆಯ ಜೀವಗಳನ್ನ ಇನ್ನಿಲ್ಲದ ಇಕ್ಕಟ್ಟಿಗೆ ಸಿಕ್ಕಿಸಿದೆ. ಇನ್ನೂ ಈ ದುರ್ದಿನಗಳು ಎಷ್ಟು ಕಾಲವೋ ತಿಳಿಯದು. ಸತತ ಒಂದೂವರೆ ವರ್ಷದಿಂದ ಮಕ್ಕಳು ಶಾಲೆಯ ಮುಖ ಕಂಡಿಲ್ಲ. ಜೊತೆ ಕೂತು ನಲಿದಿಲ್ಲ, ಆಡಿಲ್ಲ, ಹಾಡಿಲ್ಲ. ಕೊರೊನಾ ಕಾಲವೇ ಇನ್ನೂ ಮುಗಿದಿಲ್ಲ.

ಕೋಟಿಗಾನಹಳ್ಳಿ ರಾಮಯ್ಯನವರು ಹೇಳುವಂತೆ, ‘ಮಾತು, ಶಬ್ದ, ನಾವು ಕಾಣುತ್ತಿರುವ ದೃಶ್ಯ ಎಲ್ಲವೂ ಇಂದು ಮಲಿನಗೊಂಡಿವೆ’. ಇಂಥ ಮಲಿನಗೊಂಡ ವಾತಾವರಣದಲ್ಲಿ ಬದಲಾವಣೆ ತರುವುದು ತುಂಬಾ ತುಂಬಾ ಕಷ್ಟದ್ದು ಮತ್ತು ಕಷ್ಟದ್ದು ಎನ್ನುವ ಕಾರಣಕ್ಕೇ ನಾವೂ ನಮ್ಮ ಶಾಲೆಯ ಬದಲಾವಣೆಯ ಬೆನ್ನು ಬಿದ್ದದ್ದು. ಕೊರೊನಾ ಕಾಲದಲ್ಲಿ ಓರಗೆಯ ಕೆಲವರು, ‘ಹೊಸ ತಲೆಮಾರಿನ ಅಗ್ರಗಣ್ಯ’ ಪಟ್ಟಕ್ಕಾಗಿ ಮೇಲಿಂದ ಮೇಲೆ ಪುಸ್ತಕಗಳನ್ನ ಬರೆದರು, ನಾವು ಶಿಕ್ಷಣ ಪ್ರೇಮಿಗಳ ಸಹಾಯದಿಂದ ಶಾಲೆಗಾಗಿ ಜಮೀನು ಖರೀದಿಸಿದೆವು, ಶಿವರಾಮ ಕಾರಂತರ ಹೆಸರಿನಲ್ಲಿ ರಾಜ್ಯದ ಮೊದಲ ಬಹುಭಾಷಾ ಪ್ರಯೋಗಾಲಯ ಕಟ್ಟಿದೆವು. ಶಾಲೆಯನ್ನ ಸಂಪೂರ್ಣವಾಗಿ ಬದಲಾಯಿಸಿದೆವು.

ನನ್ನ ಗುರುಗಳು, ನನ್ನ ಆಪ್ತರು, ಬಂಧು ಮಿತ್ರರು, ಅಷ್ಟೇ ಅಲ್ಲದೆ, ನನ್ನ ಅಣ್ಣ ಕೂಡ ಕೊರೊನಾಕ್ಕೆ ಬಲಿಯಾದರು. ಲೆಕ್ಕ ಹಾಕಿದರೆ ನನ್ನ ಹುಟ್ಟೂರಿನ ಬರೋಬ್ಬರಿ ಐವತ್ತೊಂದು ಜನ ತೀರಿಹೋದರು. ಈ ಸಂಕಟದಲ್ಲೇ ನಾನು ಶಾಲೆ, ತರಗತಿ ಕೋಣೆ, ಬಹುಭಾಷಾ ಪ್ರಯೋಗಾಲಯ ಅಂತ ಧ್ಯಾನಿಸಿದೆ.

ಬೆಂಗಳೂರಿನ ರಾಮಮೋಹನ್ ಕೆ.ಎನ್. ಎಂಬ ಶಿಕ್ಷಣ ಪ್ರೇಮಿಯೊಬ್ಬರು ಹೆಗ್ಗೋಡಿನ ಶಿಬಿರದಲ್ಲಿ ಸಿಕ್ಕವರು ನಮ್ಮ ಉತ್ಸಾಹ ಕಂಡು ಶಾಲೆಯವರೆಗೂ ಬಂದರು. ನಮ್ಮ ಅಗತ್ಯ ಮನಗಂಡರು. ಅಂದಾಜು ಹದಿನೆಂಟು ಲಕ್ಷ ರೂಪಾಯಿ ವೆಚ್ಚದಲ್ಲಿ ಬಹುಭಾಷಾ ಪ್ರಯೋಗಾಲಯ ನಿರ್ಮಿಸಿಕೊಟ್ಟರು, ಶಾಲೆಯ ಸಂಪೂರ್ಣ ಪೇಂಟಿಂಗ್ ಮಾಡಿಸಿಕೊಟ್ಟರು. ಗುರುಲಿಂಗ ಅಮ್ಮಣಗಿ ಎಂಬ ಮತ್ತೊಬ್ಬ ಸಹೃದಯಿ ಅವರ ಟ್ರಸ್ಟ್, ಅವರ ಮಡದಿ, ಮಕ್ಕಳು, ಸ್ನೇಹಿತರಿಂದ ಒಂದು ಲಕ್ಷ ರೂಪಾಯಿ ಸಂಗ್ರಹಿಸಿ ನೀಡಿದರು. ಇದರಿಂದ ಬಹುಭಾಷಾ ಪ್ರಯೋಗಾಲಯಕ್ಕೆ ಬೇಕಾದ ಫರ್ನಿಚರ್, ತರಗತಿ ಕೋಣೆಗಳ ನವೀಕರಣ ಮಾಡಿದೆವು. ವಿಮರ್ಶಕರಾದ ಟಿ.ಪಿ.ಅಶೋಕರಂಥ ಸಹೃದಯರೂ ಸಾಥ್ ನೀಡಿದರು.

ಸರ್ಕಾರದ ಜಮೀನನ್ನ ಹೇಗಾದರೂ ಸರಿ ತಮ್ಮ ಹೆಸರಿಗೆ ಮಾಡಿಕೊಳ್ಳುವ ಅನೇಕ ಉದಾಹರಣೆಗಳನ್ನು ನಾವು ಕಂಡಿದ್ದೇವೆ. ಆದರೆ ನಿಡಗುಂದಿಯ ನಮ್ಮ ಅಂಬೇಡ್ಕರ್ ನಗರ ಸರ್ಕಾರಕ್ಕೆ, ಇಲಾಖೆಗೆ ಜಮೀನು ಖರೀದಿಸಿಕೊಟ್ಟು ಒಂದು ಹೊಸ ಮೈಲುಗಲ್ಲು ಸ್ಥಾಪಿಸಿತು. ಹೌದು, ನಮ್ಮ ಶಾಲೆಗೆ ಹೊಂದಿಕೊಂಡಂತೆ ಇದ್ದ ಶಿವರಾಯಜ್ಜ ಎಂಬುವವರ ಜಮೀನನ್ನ ಊರಿನ ಎಲ್ಲ ಶಿಕ್ಷಣ ಪ್ರೇಮಿಗಳ ಸಹಾಯದಿಂದ ನಾವು ನಾಲ್ಕು ಲಕ್ಷ ರೂಪಾಯಿ ವೆಚ್ಚದಲ್ಲಿ ಖರೀದಿಸಿದೆವು. ಒಂದು ಹಂತಕ್ಕೆ ನನ್ನಿಂದ ದುಡ್ಡು ಹೊಂದಿಸುವುದು ಸಾಧ್ಯವೇ ಇಲ್ಲ ಎಂದು ಮುದುಡಿ ಕೂತಿದ್ದಾಗ ನಮ್ಮ ಶಾಸಕ ಪಿ.ರಾಜೀವ್ ಕೈಹಿಡಿದು ಭರವಸೆ ತುಂಬಿದರು. ‘ಮೇಷ್ಟ್ರೇ, ನಾನಿದ್ದೀನಿ’ ಅಂತ ಹೇಳಿ ಎರಡೂವರೆ ಲಕ್ಷ ರೂಪಾಯಿ ಶಿವರಾಯಜ್ಜನಿಗೆ ನೀಡಿದರು. ಜಮೀನು ನಮ್ಮ ಶಾಲೆಯದಾಯಿತು.

ಸದ್ಯ ನಮ್ಮ ನಿಡಗುಂದಿಯ ಅಂಬೇಡ್ಕರ್ ನಗರದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಹೊಸ ಜೀವಕಳೆಯೊಂದಿಗೆ ನಳನಳಿಸುತ್ತಿದೆ. ಅಂಬೇಡ್ಕರ್ ನಗರದ ಶಾಲೆಗೆ ಜಮೀನು, ಭಾಷಾ ಪ್ರಯೋಗಾಲಯ, ಸ್ಮಾರ್ಟ್ ಪ್ಲಸ್ ತರಗತಿ ಕೋಣೆಗಳು, ಸುರಕ್ಷತೆಗಾಗಿ ಸಿ.ಸಿ. ಟಿ.ವಿ, ಹೈಟೆಕ್ ಶೌಚಾಲಯ ಇನ್ನೂ ಏನೆಲ್ಲ ಸೌಲಭ್ಯಗಳೊಂದಿಗೆ ಮಳೆಬಿಲ್ಲಿನಂತೆ ಕಂಗೊಳಿಸುತಿದೆ. ಹೀಗೆ ಏನೆಲ್ಲ ಸಾಧ್ಯತೆಗಳನ್ನ ನಾವು ಮಕ್ಕಳಿಗಾಗಿ ಹುಡುಕುತ್ತಿದ್ದೇವೆ, ರೂಪಿಸುತ್ತಿದ್ದೇವೆ.

ಏನು ಮಾಡುವುದು, ನಮ್ಮ ನಾಡಪ್ರಭುಗಳು ಮಕ್ಕಳನ್ನು ಇನ್ನೂ ಶಾಲೆಗೆ ಬರಲು ಬಿಡುತಿಲ್ಲ. ಕೊರೊನಾಕ್ಕೂ ಕರುಣೆ ಬರುತ್ತಿಲ್ಲ.

ಶಿಕ್ಷಕ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಅಂಬೇಡ್ಕರನಗರ, ನಿಡಗುಂದಿ (ಬೆಳಗಾವಿ ಜಿಲ್ಲೆ)

ತಂತ್ರಜ್ಞಾನದೊಂದಿಗೆ ಸಾಗುವ ಸವಾಲು

ಕಾವ್ಯ ಡಿ.ಎಂ.

ಕೋವಿಡ್ ಕಾಲದ ಶಿಕ್ಷಣವು ವಿದ್ಯಾರ್ಥಿಗಳಿಗೆ ಮಾತ್ರವಲ್ಲ; ಬೋಧನೆಗೂ ಒಂದು ಹೊಸ ಆಯಾಮವನ್ನೇ ನೀಡಿದೆ. ಅನಿರೀಕ್ಷಿತವಾಗಿ ಶಾಲೆಗಳು ಮುಚ್ಚಿದ್ದರಿಂದ ಮಕ್ಕಳ ನಿರಂತರ ಮತ್ತು ವಿಸ್ತಾರವಾದ ಕಲಿಕೆಗೆ ಹಿನ್ನಡೆಯಾದಂತೆ, ಶಿಕ್ಷಕರಿಗೂ ಹೊಸ ಸನ್ನಿವೇಶಕ್ಕೆ ಹೊಂದಿಕೊಳ್ಳಬೇಕಾದ ಅನಿವಾರ್ಯ ಸೃಷ್ಟಿಸಿತು. ತರಗತಿ ಪಾಠದ ಬದಲಾಗಿ, ವಿದ್ಯಾಗಮ, ಸಂವೇದಾ ಶೈಕ್ಷಣಿಕ ಚಟುವಟಿಕೆಗಳು ಮುನ್ನೆಲೆಗೆ ಬಂದವು. ಶಾಲೆಗಳ ಬದಲಿಗೆ ಶಿಕ್ಷಕರು ಊರು, ಕೇರಿ, ಸಮುದಾಯ ಭವನಗಳಿಗೆ ತೆರಳಿ ಮಕ್ಕಳಿಗೆ ಪಾಠ ಮಾಡಬೇಕಾಯಿತು.

ಶಾಲಾ ತರಗತಿಗಳಿಗೆ ನಿರ್ದಿಷ್ಟವಾದ ಚೌಕಟ್ಟು ಇರುತ್ತದೆ. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಅದಕ್ಕೆ ಹೊಂದಿಕೊಂಡಿದ್ದರು. ಆದರೆ ಕೋವಿಡ್ ಸಮಯದಲ್ಲಿ ಗ್ರಾಮೀಣ ಭಾಗಗಳಲ್ಲಿ ನಡೆದ ವಿದ್ಯಾಗಮ ಕಾರ್ಯಕ್ರಮದಲ್ಲಿ ಮಕ್ಕಳನ್ನು ನಿಗದಿತ ಸ್ಥಳದಲ್ಲಿ ಸೇರಿಸಿ ತರಗತಿಯ ಮನೋಭೂಮಿಕೆಯನ್ನು ಕಟ್ಟಿಕೊಡುವ ಸವಾಲು ನಮಗೆ ಎದುರಾಯಿತು. ಗ್ರಾಮೀಣ ಭಾಗಗಳಿಗೆ ತೆರಳಿ ಮಾರ್ಗದರ್ಶನ ಮಾಡುವ ಶಿಕ್ಷಕರನ್ನು ಅನುಮಾನದಿಂದ ನೋಡುವ, ಅವರಿಂದ ಅಂತರ ಕಾಯ್ದುಕೊಳ್ಳುವ ಮನಃಸ್ಥಿತಿಯೂ ಜನರಲ್ಲಿ ಕಂಡುಬಂತು.

ಭೌತಿಕ ತರಗತಿಗಳು ನಡೆಯದೇ ಇದ್ದ ಸಂದರ್ಭದಲ್ಲಿ ಆರಂಭಗೊಂಡ ಆನ್‌ಲೈನ್, ಟಿ.ವಿ ತರಗತಿಗಳು ಮಕ್ಕಳ ಕಲಿಕೆಯ ಆಶಾಕಿರಣವಾಗಿ ಗೋಚರಿಸಿದವು. ಆದರೆ, ಈ ತರಗತಿಗಳು ಭೌತಿಕ ತರಗತಿಗಳಷ್ಟು ಪರಿಣಾಮಕಾರಿಯಾಗಲಿಲ್ಲ. ಮಕ್ಕಳಿಗೆ ಪಠ್ಯ ವಿಷಯವನ್ನು ವರ್ಗಾಯಿಸಲು ಮಾತ್ರ ಶಿಕ್ಷಕರಿಗೆ ಸಾಧ್ಯವಾಯಿತು. ಶಾಲಾ ಅವಧಿಯಲ್ಲಿ ಸದಾ ಕ್ರಿಯಾಶೀಲವಾಗಿ ಆಯೋಜಿಸುತ್ತಿದ್ದ ವಿಷಯಾಧಾರಿತ ಚರ್ಚೆ, ಪ್ರಾಯೋಗಿಕ ಅಭ್ಯಾಸ, ಚಟುವಟಿಕೆಗಳ ಅನ್ವಯ, ಮೌಲ್ಯಗಳ ಆಳ ಹಾಗೂ ಅರಿವಿನ ಬಗೆಗಿನ ಮೌಖಿಕ ಸಂವಾದ, ಸಾಮಾಜಿಕ, ವೈಯಕ್ತಿಕ ಮತ್ತು ಗುಣಾತ್ಮಕ ಕೌಶಲಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಗೆ ಇಲ್ಲಿ ಅವಕಾಶ ಇರಲಿಲ್ಲ.

ಕೋವಿಡ್ 2ನೇ ಅಲೆಯು ಕಲಿಕೆಯ ಪರಿಕಲ್ಪನೆಯನ್ನು ಮತ್ತಷ್ಟು ಕಿರಿದು ಮಾಡಿದೆ. ಪರೀಕ್ಷೆಯನ್ನು ಸರಳಗೊಳಿಸುವ ಇಲ್ಲವೇ ಪಠ್ಯಕ್ರಮವನ್ನು ಕಡಿತಗೊಳಿಸಿ ಬೋಧಿಸುವ ವ್ಯವಸ್ಥೆಗೆ ಶಿಕ್ಷಕರು ಹೊಂದಿಕೊಳ್ಳಬೇಕಾಯಿತು. ಆನ್‌ಲೈನ್ ಶಿಕ್ಷಣವೇ ಪ್ರವರ್ಧಮಾನಕ್ಕೆ ಬಂದು, ಇ-ಕಲಿಕೆಯ ಭಾಗವಾಗಿ ಪಠ್ಯವನ್ನು ಪರಿಗಣಿಸಲಾಯಿತು. ಶಾಲಾ ಕಾಲೇಜುಗಳಲ್ಲಿ ಮೊಬೈಲ್ ಬಳಕೆ ಅಪರಾಧ ಎನ್ನುತ್ತಿದ್ದ ತಜ್ಞರು ಹಾಗೂ ಶಿಕ್ಷಕರೇ ಲ್ಯಾಪ್‌ಟಾಪ್, ಟ್ಯಾಬ್ ಹಾಗೂ ಸ್ಮಾರ್ಟ್‌ಫೋನ್‌ಗಳು ಕಲಿಕೆಗೆ ಅತ್ಯಗತ್ಯವಾಗಿ ಬೇಕಾದ ಸಾಧನಗಳು ಎಂದು ಹೇಳಬೇಕಾಯಿತು. ಬೋಧನೆಗೆ ಅದನ್ನೇ ಬಳಸಬೇಕಾಯಿತು.

ಶಿಕ್ಷಣ ಎನ್ನುವುದು ಮಾಹಿತಿ, ಸಂವಹನ ಮತ್ತು ತಂತ್ರಜ್ಞಾನ ಆಧಾರಿತವಾಗಿ ಮಾರ್ಪಾಡಾಗಿದ್ದು ಕೋವಿಡ್ ವರ್ಷಗಳಲ್ಲಿ ಸಂಭವಿಸಿದ ದೊಡ್ಡ ಬೆಳವಣಿಗೆ. ಶಿಕ್ಷಕರು ಕೂಡ ಈಗ ಇದಕ್ಕೆ ಹೊಂದಿಕೊಳ್ಳುತ್ತಿದ್ದಾರೆ. ಆಧುನಿಕ ತಂತ್ರಜ್ಞಾನದಲ್ಲಿನ ಅವಕಾಶಗಳನ್ನು ಬಳಸಿಕೊಳ್ಳುತ್ತಲೇ ಭೌತಿಕ ತರಗತಿಗಳ ಚೌಕಟ್ಟಿಗೆ ಆನ್‌ಲೈನ್ ತರಗತಿಗಳನ್ನು ಹೊಂದಿಸಿಕೊಂಡು, ಶಾಲೆಯಷ್ಟೇ ಪರಿಣಾಮಕಾರಿಯಾಗಿ ಮಕ್ಕಳಿಗೆ ಬೋಧನೆ ಮಾಡುವ ಸವಾಲು ನನ್ನನ್ನೂ ಸೇರಿದಂತೆ ಎಲ್ಲ ಶಿಕ್ಷಕರ ಮುಂದಿದೆ. ಟೆಲಿಗ್ರಾಂ, ವ್ಯಾಟ್ಸ್‌ಆ್ಯಪ್, ಗೂಗಲ್ ಮೀಟ್, ಝೂಮ್ ಮುಂತಾದ ಆ್ಯಪ್‌ಗಳ ಮೂಲಕ ಪಾಠವನ್ನು ನವನವೀನವಾಗಿ ಬೋಧಿಸುವ ಅವಕಾಶವನ್ನು ಈ ದುರಿತಕಾಲ ನಮ್ಮ ಮುಂದೆ ತೆರೆದಿಟ್ಟಿದೆ.

ಶಿಕ್ಷಕಿ, ಸರ್ಕಾರಿ ಪ್ರೌಢಶಾಲೆ, ಇರಸನವಾಡಿ (ಚಾಮರಾಜನಗರ ಜಿಲ್ಲೆ)

ನೃತ್ಯ, ಅಭಿನಯದ ಮೂಲಕ ಕಲಿಕೆ

ವಂದನಾ ರೈ

ಪಾಠಗಳನ್ನು ಮಕ್ಕಳು ತುಂಬಾ ಉತ್ಸಾಹದಿಂದಲೂ ಕಲಿಯಬಹುದು ಅಥವಾ ಕ್ಲಾಸ್ ಮುಗಿದರೆ ಸಾಕು ಎನ್ನುವ ಭಾವನೆಯಿಂದಲೂ ಕಲಿಯಬಹುದು. ಅವರು ಹೇಗೆ ತರಗತಿಯಲ್ಲಿ ತಲ್ಲೀನರಾಗುತ್ತಾರೆ ಎಂಬುದು ಶಿಕ್ಷಕರ ಕೈಯಲ್ಲಿ ಇರುತ್ತದೆ.

ಆನ್‌ಲೈನ್ ಕ್ಲಾಸ್ ಎಂದ ಕೂಡಲೇ ಈ ಕೊರೊನಾ ಪರಿಸ್ಥಿತಿಯಲ್ಲಿ ಹೇಗಪ್ಪಾ ಕ್ಲಾಸ್ ಮಾಡುವುದು ಎಂದು ಚಿಂತೆಗೆ ಒಳಪಟ್ಟೆ. ಆಗ ನನಗೆ ಹೊಳೆದಿದ್ದು ಪಾಠದ ಜೊತೆಗೆ ನೃತ್ಯ, ಸಂಗೀತ, ಅಭಿನಯವನ್ನು ಬೆರೆಸಿ ಮಕ್ಕಳಿಗೆ ಪಾಠ ಮಾಡಬಹುದೇ ಎನ್ನುವ ಪ್ರಶ್ನೆ. ಯಾವುದಕ್ಕೂ ಪ್ರಯೋಗ ಮಾಡುವ ಅಂದುಕೊಂಡು ನಮ್ಮ ಜೇಸೀಸ್ ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕರನ್ನು ಸೇರಿಸಿ ABCD ಅಕ್ಷರಕ್ಕೆ ಸಂಬಂಧಪಟ್ಟ ಒಂದು ವಿಡಿಯೊ ಮಾಡಿದೆ. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬರಲು ಆರಂಭವಾಯಿತು. ಇದೇ ರೀತಿ ಬೇರೆ ಬೇರೆ ವಿಡಿಯೊಗಳನ್ನು ಮಾಡಿದೆವು. ‘ಇದೇ ರೀತಿಯ ವಿಡಿಯೊಗಳನ್ನು ಮಾಡಿ ನಮಗೆಲ್ಲ ಹಾಕಿ’ ಎನ್ನುವ ರಾಜ್ಯದ ಎಲ್ಲ ಪೋಷಕರ ಒತ್ತಾಯಕ್ಕೆ ಕಟ್ಟುಬೀಳದಿರಲು ಸಾಧ್ಯವಾಗಲಿಲ್ಲ.

ಮಕ್ಕಳ ಪಾಠಕ್ಕೆ ಸಂಬಂಧಪಟ್ಟಂತೆ ಅದೆಷ್ಟೋ ವಿಡಿಯೊಗಳನ್ನು ಮಾಡಿದೆ. ಅದನ್ನು ಅಷ್ಟೇ ಚೆನ್ನಾಗಿ ಎಲ್ಲಾ ಊರಿನ ಮಕ್ಕಳೂ ಕಲಿಯಲು ಆರಂಭಿಸಿದರು. ಈ ಕೆಲಸ ಫಲ ನೀಡಿತು. ಈಗಿನ ಕೊರೊನಾ ಪರಿಸ್ಥಿತಿಯಲ್ಲಿ ಮನೆಯಲ್ಲಿ ಇರುವ ಮಕ್ಕಳಿಗೆ ಈ ರೀತಿ ಕ್ರಿಯಾತ್ಮಕವಾಗಿ ವಿಡಿಯೊಗಳನ್ನು ಮಾಡಿದರೆ ಖಂಡಿತವಾಗಿಯೂ ಮಕ್ಕಳ ಮನಸ್ಸನ್ನು ಸುಲಭವಾಗಿ ಮುಟ್ಟಬಹುದು ಎಂಬುದು ಮನದಟ್ಟಾಯಿತು.

ಕೊರೊನಾ ಮುಗಿದು ಶಾಲೆ ಆರಂಭವಾಗುವ ತನಕ, ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಯಾವುದೇ ಕೊರತೆ ಆಗಬಾರದು ಎಂಬುದು ನಮ್ಮ ಉದ್ದೇಶ. ಇನ್ನಷ್ಟು ವಿಡಿಯೊಗಳು ಮಕ್ಕಳ ಮುಂದೆ ಬರಲಿವೆ. ಕೊರೊನಾದಿಂದ ನಾನು ಬೇಕಾದಷ್ಟು ಪಾಠ ಕಲಿತೆ. ನನ್ನನ್ನು ಬದಲಾಯಿಸಿಕೊಂಡೆ. ಪರಿಸ್ಥಿತಿಗೆ ತಕ್ಕಂತೆ ನಾವೆಲ್ಲರೂ ಬದಲಾಗಬೇಕು. ಹಾಗಿದ್ದಲ್ಲಿ ಮಾತ್ರ ಮಕ್ಕಳನ್ನು ಸದೃಢ ದೇಶದ ಬಲಿಷ್ಠ ಪ್ರಜೆಗಳನ್ನಾಗಿ ನಾವು ಮಾಡಬಹುದು. ಹೊಸ ಹೊಸ ವಿಭಿನ್ನ ಪ್ರಯತ್ನಗಳು ಶಿಕ್ಷಕರ ಕಡೆಯಿಂದ ಆಗಲಿ. ಕಲಿಯಲು ತುಂಬಾ ಬಾಕಿ ಇದೆ. ಹಾಗೆಯೇ ಆ ಕಲಿಕೆಯ ರೆಕ್ಕೆಗಳನ್ನು ಮೂಡಿಸಿಕೊಂಡು ನಾವು ಸಾಗಬೇಕಿದೆ ದೂರ, ದೂರ...

ಶಿಕ್ಷಕಿ, ಜೇಸೀಸ್ ಶಾಲೆ, ಕಾರ್ಕಳ (ಉಡುಪಿ ಜಿಲ್ಲೆ)

ನಮ್ಮ ಶ್ರಮ ಇನ್ನೂ ಹೆಚ್ಚಬೇಕು

ಜಗನ್ನಾಥ ಬಿಸರಳ್ಳಿ

‘**ನಿಮ್ಮ ಮಕ್ಕಳು** ನಿಮ್ಮನ್ನು ಮುಪ್ಪಿನಲ್ಲಿ ನೋಡಿಕೊಳ್ಳುತ್ತಾರೋ ಇಲ್ಲವೋ, ಆದರೆ ಈಗ ನಿಮ್ಮ ಮುಂದೆ ಕುಳಿತು ನಿಮ್ಮ ಪ್ರತಿಯೊಂದು ಮಾತನ್ನು ಆಲಿಸುತ್ತಿರುವ ಮಕ್ಕಳು (ವಿದ್ಯಾರ್ಥಿಗಳು) ಮಾತ್ರ ನಿಮ್ಮನ್ನು ಈಗಲೂ ಮುಂದೆಯೂ ಖಂಡಿತ ನೋಡಿಕೊಳ್ಳುತ್ತಾರೆ’

–ಎಂಥ ಮಾತುಗಳಿವು! ಈ ಮಾತುಗಳನ್ನು ಯಾವ ಮಹಾಶಯ ಗೀಚಿದನೋ ತಿಳಿಯದು. ಇವು ನನ್ನಂತಹ ಪ್ರತಿಯೊಬ್ಬ ಶಿಕ್ಷಕನ ಕಣ್ಣು ತೆರೆಸಿ ಹೊಣೆಯನ್ನು ಜಾಗೃತಗೊಳಿಸಬಲ್ಲವು ಎಂಬುದು ಮಾತ್ರ ಸತ್ಯ.

ಒಂದೂವರೆ ವರ್ಷದಿಂದ ನಾನು ಶಾಲೆಗೆ ನಿರಂತರವಾಗಿ ಹೋಗಲು ಆಗಲಿಲ್ಲ. ಶಾಲೆಗಳಲ್ಲಿ ಮಕ್ಕಳಿಲ್ಲದೆ, ದೇವರ ಮೂರ್ತಿ ಇಲ್ಲದ ಗುಡಿಯ ಹಾಗೆ ನಮ್ಮ ಮನಸ್ಸಿನಲ್ಲಿ ಶೂನ್ಯ ಆವರಿಸುವಂತೆ ಮಾಡಿದ್ದವು. ಕೊರೊನಾ ಮಹಾಮಾರಿ ಇಡೀ ಜಗತ್ತನ್ನು ಬಾಧಿಸಿದೆ. ಇನ್ನೂ ಬಾಧಿಸುತ್ತಲೇ ಇದೆ. ನನ್ನ ಇಪ್ಪತ್ತು ವರ್ಷಗಳ ಸೇವೆಯಲ್ಲಿ ಇಂತಹ ಮಕ್ಕಳ ಬರವನ್ನು ಯಾವತ್ತೂ ಅನುಭವಿಸಿರಲಿಲ್ಲ. ಇದೇ ಮೊದಲು ಮತ್ತು ಇದೇ ಕೊನೆಯಾಗಲಿ ಕೂಡಾ.

ಒಂದು ತಲೆಮಾರು ಕಲಿಕೆಯ ಶಾಶ್ವತ ನಷ್ಟ ಅನುಭವಿಸುವಂತಾಯಿತು. ಅದನ್ನು ಯಾರಿಂದಲೂ ಭರಿಸಲು ಸಾಧ್ಯವಿಲ್ಲ. ಹಾಗಾಗಿ ಇದರ ತೀವ್ರತೆ ಕೊಂಚ ಕಡಿಮೆಗೊಳಿಸಲು ವಿದ್ಯಾಗಮ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನಾವುಗಳೆಲ್ಲ ಮಕ್ಕಳನ್ನು ಹುಡುಕಿಕೊಂಡು ಮನೆ ಮನೆಗೆ ಭೇಟಿ ನೀಡಿ ಒಂದು ಗೊತ್ತಾದ ಸುರಕ್ಷಿತ ಸ್ಥಳದಲ್ಲಿ ಮಕ್ಕಳನ್ನು ಕೂರಿಸಿ ಪಾಠ ಹೇಳಿದೆವು. ಹೀಗೆ ಅವರ ಕಲಿಕೆಯ ನಿರಂತರತೆಯನ್ನು ಸ್ವಲ್ಪ ಮಟ್ಟಿಗಾದರೂ ಕಾಪಾಡುವ ನಿಟ್ಟಿನಲ್ಲಿ ನಮ್ಮ ನಮ್ಮ ಪ್ರಯಾಣ ಸಫಲವಾಯಿತು.

ಕೆಲವು ಮಕ್ಕಳು ಕಲಿಕೆಯಲ್ಲಿ ತೊಡಗಿದರಾದರೂ ಇನ್ನೂ ಅನೇಕ ಮಕ್ಕಳು ವಂಚಿತರಾದರು. ಆನ್‌ಲೈನ್ ತರಗತಿ ತೆಗೆದುಕೊಳ್ಳಲು ನಡೆದ ಪ್ರಯತ್ನ ದೊಡ್ಡ ಮಟ್ಟದಲ್ಲಿ ಸಫಲವಾಗಲಿಲ್ಲ. ಎಲ್ಲ ಮಕ್ಕಳಿಗೆ ಫೋನ್ ದೊರೆಯುತ್ತಿರಲಿಲ್ಲ. ಟಿ.ವಿ ಇನ್ನೂ ಅನೇಕ ಮನೆಗಳಲ್ಲಿ ಇಲ್ಲ. ಇದ್ದರೂ ಅವು ಶಾಲೆಯ ಸ್ಥಾನ ತುಂಬಲು ಸಾಧ್ಯವಾಗಲಿಲ್ಲ. ಹೀಗೆ ಮಕ್ಕಳಿಗೆ ವಿದ್ಯಾಭ್ಯಾಸವನ್ನು ವಂಚಿಸಿದ ಆ ಕೊರೊನಾಕ್ಕೆ ಒಂದು ಧಿಕ್ಕಾರವಿರಲಿ. ಈಗ ಮತ್ತೆ ನಿಧಾನವಾಗಿ ಶಾಲೆ ಶುರುವಾಗುತ್ತಿದೆ. ಮಕ್ಕಳು ಸಹ ಶಾಲೆಗೆ ಬರುತ್ತಿದ್ದಾರೆ. ಅವರಲ್ಲಿ ಕಲಿಕೆಯ ಕೊರತೆ ಎದ್ದು ಕಾಣುತ್ತಿದೆ. ಅವರು ಮೊದಲಿನಂತಾಗಲು ಸಾಕಷ್ಟು ಸಮಯ ಬೇಕು. ನಾವು ಸಹ ಮೊದಲಿಗಿಂತಲೂ ಹೆಚ್ಚು ಶ್ರಮಿಸಬೇಕು.

ಶಿಕ್ಷಕ, ಬಾಲಕಿಯರ ಸರ್ಕಾರಿ ಸಂಯುಕ್ತ ಪದವಿಪೂರ್ವ ಕಾಲೇಜು, ಕೊಪ್ಪಳ

ಹೂವಿನ ಕಣಿವೆಯಲ್ಲಿ...

ಹಸಿರು ಮುಕ್ಕಳಿಸುವ ಹಿಮಾಲಯದ ಹೂವಿನ ಕಣಿವೆ



ಎಸ್. ನಟರಾಜ ಬೂದಾಳು

ಹಿಮಾಲಯದ ಹೂವಿನ ಕಣಿವೆಗೆ ಹೋಗಿ ಬರಬೇಕೆಂಬ ಬಹುದಿನಗಳ ಆಸೆ ಈಡೇರುವ ಸಮಯ ಬಂದಿತ್ತು. 2021 ಆಗಸ್ಟ್ 7ರಂದು ನಾನು ಲತಾ ಮತ್ತು ನನ್ನ ತಮ್ಮ ದೇವರಾಜ ಬೆಂಗಳೂರಿನಿಂದ ಡೆಹ್ರಾಡೂನ್‌ಗೆ ವಿಮಾನದಲ್ಲಿ ಹೊರಡುವ ಮೂಲಕ ನಮ್ಮ ಚಾರಣಪ್ರವಾಸ ಆರಂಭವಾಯಿತು. ಮೌಂಟನ್ ಮಂಜು ಮತ್ತು ಗೆಳೆಯರು ನಡೆಸುವ ‘ಕರ್ನಾಟಕ ಹೈಕ್ಸ್’ (ಮೊಬೈಲ್: 9901996099) ಎಂಬ ಚಾರಣಸಂಸ್ಥೆ ಹೂವಿನಕಣಿವೆ ಮತ್ತು ಸುತ್ತಲಿನ ಜಾಗಗಳಿಗೆ ಚಾರಣದ ವ್ಯವಸ್ಥೆ ಮಾಡಿತ್ತು.

ನಮ್ಮ ಗುಂಪಿನ ಒಟ್ಟು ಸದಸ್ಯರ ಸಂಖ್ಯೆ ಇಪ್ಪತ್ತು. ಉತ್ಸಾಹದಿಂದ ಸದಾ ಪುಟಿಯುತ್ತಿರುವ ವಿಘ್ನೇಶ್ ಭಟ್ ನಮ್ಮ ಟ್ರೆಕ್ ಲೀಡರ್. ಯಥಾಪ್ರಕಾರ ಹೆಣ್ಣುಮಕ್ಕಳದ್ದೇ ಯಜಮಾನಿಕೆ. ನಮ್ಮ ಜೊತೆಗೆ ಸ್ಥಳೀಕ ಚಾರಣ ಪರಿಣತರಾದ ರಾಣಾ ಮತ್ತು ರಾವತ್ ಡೆಹ್ರಾಡೂನ್‌ನಲ್ಲಿ ಸೇರಿಕೊಂಡರು. ಮೊದಲ ದಿನ ಹೃಷಿಕೇಶದಲ್ಲಿ ತಂಗುವ ಏರ್ಪಾಟಾಗಿತ್ತು. ಹೃಷಿಕೇಶ ಆಶ್ರಮಗಳಿಂದ ಕಿಕ್ಕಿರಿದ ನಗರ. ಸಾಮಾನ್ಯರಿಗಿಂತ ಸನ್ಯಾಸಿಗಳೇ ಜಾಸ್ತಿ. ಅಲಕಾನಂದಾ, ಮಂದಾಕಿನಿ, ಭಾಗೀರಥಿ ನದಿಗಳನ್ನು ಒಟ್ಟಾಗಿಸಿಕೊಂಡು ಗಂಗಾನದಿಯನ್ನು ಸ್ವಾಗತಿಸುವ ಸಮತಟ್ಟು ನೆಲ.

ಮಳೆಗಾಲವಾದ್ದರಿಂದ ಹಿಮಾಲಯದ ಕೆನೆಮಣ್ಣನ್ನು ಕಡೆಯುತ್ತಾ ಧಡಗುಟ್ಟಿಕೊಂಡು ಗಂಗಾನದಿ ಹರಿಯುತ್ತದೆ. ಹರಿಯುತ್ತದೆ ಎನ್ನುವುದಕ್ಕಿಂತ ನುಗ್ಗುತ್ತದೆ ಎನ್ನುವುದೇ ಸರಿ. ನದಿಯ ಎರಡೂ ದಡಗಳಲ್ಲಿ ಆಶ್ರಮಗಳ ಸಾಲು ಸಾಲು. ಎರಡೂ ಕಡೆಗಳನ್ನು ಜೋಡಿಸಲು ಜೋಲಿ ಕಟ್ಟಿದ ಹಾಗೆ ಎರಡು ತೂಗು ಸೇತುವೆಗಳನ್ನು ಕಟ್ಟಿದ್ದಾರೆ. ಇದೊಂದು ಸನಾತನ ನಗರ. ಪರಂಪರೆಯ ನೆನಪು ಮತ್ತು ಕೊಳಕುಗಳು ಎಲ್ಲ ಕಡೆ ಮೆತ್ತಿಕೊಂಡೇ ಇವೆ. ಹರಿದ್ವಾರ, ವಾರಾಣಸಿಗಳಂತೆ ಈಗೀಗ ಇಲ್ಲಿಯೂ ಸಂಜೆ ಗಂಗಾ ಆರತಿ ಮಾಡುತ್ತಾರೆ. ಇದು ಭಕ್ತಿಗಿಂತ ಹೆಚ್ಚು ಫಿಲ್ಮಿಯಾಗಿರುತ್ತದೆ. ತಿಥಿ ಆಚರಣೆಗಳು ಅಲ್ಲಲ್ಲಿ ನಡೆಯುತ್ತಿರುತ್ತವೆ. ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶಗಳೆರಡನ್ನೂ ಸೇರಿಸಿ ದೇವಭೂಮಿ ಎನ್ನುತ್ತಾರೆ.

ಸಿಹಿ ಮತ್ತು ಚಾಟ್‌ಗಳು ಇಲ್ಲಿನ ವಿಶೇಷ. ಉತ್ತರ ಭಾರತದ ಹಾಲು, ಮೊಸರಿನ ಬನಿಯೇ ಬೇರೆ. ಹಾಗಾಗಿ ಇಲ್ಲಿನ ರುಚಿಗೆ ಸರಿಗಟ್ಟುವ ಚಾಟ್‌ಗಳನ್ನು ಬೇರೆ ಜಾಗಗಳಲ್ಲಿ ನಿರೀಕ್ಷಿಸಲಾಗದು. ಹೃಷಿಕೇಶದಲ್ಲಿನ ಛೋಟಿವಾಲ ಎಂಬ ಹಾಲು ಮೊಸರಿನ ಮತ್ತು ಸಿಹಿತಿಂಡಿಗಳ ಹೋಟೆಲ್ ಪ್ರಸಿದ್ಧವಾದುದು. ಇಲ್ಲಿನ ಮೊಸರಿನ ಲಸ್ಸಿಗೆ ಬೇಡಿಕೆ ಜಾಸ್ತಿ. ಮತ್ತೊಂದು ವಿಶೇಷವೆಂದರೆ ಈ ಹೋಟೆಲಿನ ಬಾಗಿಲಿನಲ್ಲಿ ಬ್ರಾಹ್ಮಣ ವೇಷಧಾರಿಯೊಬ್ಬನು ಗೊಂಬೆಯಂತೆ ಅಲುಗದೆ ಕುಳಿತಿರುತ್ತಾನೆ. ತನ್ನ ಜುಟ್ಟನ್ನು ಯಾವಾಗಲೂ ಆಂಟೆನಾದಂತೆ ನೆಟ್ಟಗೆ ಇರುವ ಹಾಗೆ ನೋಡಿಕೊಳ್ಳುತ್ತಾನೆ! ಪ್ರವಾಸಿಗರು ಅವನ ಜೊತೆಗೆ ಫೋಟೊ ತೆಗೆಸಿಕೊಂಡು ಆಮೇಲೆ ಹೋಟೆಲ್ ಒಳಕ್ಕೆ ಹೋಗುತ್ತಾರೆ.

ಟೆಂಪೊ ಟ್ರಾವೆಲರ್‌ನಲ್ಲಿ ಗೋವಿಂದಘಾಟ್ ಎಂಬಲ್ಲಿಗೆ ನಮ್ಮ ಪ್ರಯಾಣ ಆರಂಭವಾಯಿತು. ಸುಮಾರು 270 ಕಿಲೊ ಮೀಟರುಗಳ ಹಿಮಾಲಯದ ಪ್ರಯಾಣ. ದೇವಪ್ರಯಾಗ, ರುದ್ರಪ್ರಯಾಗ, ಕರ್ಣಪ್ರಯಾಗಗಳನ್ನು ದಾಟಿ ಹೋಗಬೇಕಿತ್ತು. ಎರಡು ಮೂರು ದಿನಗಳಿಂದ ಮಳೆ ಸುರಿದು ಹಿಮಾಲಯದ ಬೆಟ್ಟಗಳು ಯಾವ ಕ್ಷಣದಲ್ಲಿಯಾದರೂ ರಸ್ತೆಗೆ ಜರುಗಲು ಸಿದ್ಧವಾಗಿದ್ದವು. ಇಲ್ಲಿಯ ಬೆಟ್ಟಗಳು ಮತ್ತು ರಸ್ತೆಗಳ ನಡುವೆ ಒಂದು ರೀತಿಯ ಸಿಟ್ಟುಸೆಡವಿನ ಸಂಬಂಧವಿದೆ! ಬೆಟ್ಟಗಳನ್ನು ಕೊರೆದು ಮಾಡಿರುವ ರಸ್ತೆಗಳು ಕಳ್ಳಗಿಂಡಿಗಳಂತೆ ಬೆಟ್ಟಗಳನ್ನು ಬಗೆದುಕೊಂಡು ಮುಂದಕ್ಕೆ ಹೋಗುತ್ತವೆ. ಆ ಸಿಟ್ಟಿಗೆ ಆ ಬೃಹತ್ ಬೆಟ್ಟಗಳು ಲದ್ದಿ ಹಾಕಿದಂತೆ ತಮ್ಮ ಒಂದು ಭಾಗವನ್ನು ರಸ್ತೆಗೆ ಜರುಗಿಸಿ ತೆಪ್ಪಗೆ ಕೂತುಬಿಡುತ್ತವೆ. ರಸ್ತೆಯ ಮೇಲೆ ಬೀಳುವ ಈ ಬೆಟ್ಟದ ಪಿಸಿಗೆಯನ್ನು ತೆಗೆದುಹಾಕಲು, ಪಕ್ಕಕ್ಕೆ ತಳ್ಳಲು ಅಲ್ಲಲ್ಲಿ ಬೃಹತ್ ಗಾತ್ರದ ಯಂತ್ರಗಳನ್ನು ನಿಲ್ಲಿಸಿರುತ್ತಾರೆ. ಬೆಟ್ಟಗಳಿಂದ ಜಾರಿದ ಮಣ್ಣುಬಂಡೆಗಳನ್ನು ತೆಗೆದುಹಾಕಲು ದಿನಗಟ್ಟಲೆ ಬೇಕಾಗುತ್ತದೆ. ಅಲ್ಲಿಯವರೆಗೆ ಆಕಡೆ ಈಕಡೆ ಅನೇಕ ಮೈಲುಗಳ ವಾಹನ ಸಾಲುಗಟ್ಟುವುದು ಅನಿವಾರ್ಯ.

ಸ್ವಲ್ಪ ದೂರ ಹೋದಮೇಲೆ ನಮ್ಮ ಹೆದ್ದಾರಿ ಇದೇ ಕಾರಣಕ್ಕೆ ಬಂದ್ ಆಗಿರುವುದು ಗೊತ್ತಾಯಿತು. ನಮ್ಮ ಚಾಲಕ ಸುಮಾರು 130 ಕಿ.ಮೀ.ಗಳ ಹೆಚ್ಚಿನ ಸುತ್ತು ಬಳಸಿನ ದಾರಿಯನ್ನು ಅನಿವಾರ್ಯವಾಗಿ ಹಿಡಿದರು. ಐದಾರು ಗಂಟೆ ಸುತ್ತಿ ಮತ್ತೆ ಹೆದ್ದಾರಿ ಸೇರಿಕೊಂಡೆವು. ಇನ್ನೇನು ಗೋವಿಂದಘಾಟ್ ಸೇರಲು ಒಂದೆರಡು ಗಂಟೆಗಳು ಸಾಕು, ರಾತ್ರಿ ಉಣ್ಣುವ ಹೊತ್ತಿಗೆ ಅಲ್ಲಿಗೆ ಸೇರುತ್ತೇವೆ ಎಂದುಕೊಳ್ಳುವಷ್ಟರಲ್ಲಿ ಮುಂದೆ ಹೋಗದಂತೆ ಬೆಟ್ಟವೊಂದು ರಸ್ತೆಗೆ ಕಾಲುಚಾಚಿತ್ತು.

ಕೆಲವು ಸ್ಥಳೀಕರು ಅದು ಜರುಗಿದ ಪರಿಯ ಬಗ್ಗೆ ಮಾತನಾಡುತ್ತಿದ್ದರು. ಇನ್ನೊಂದೆರಡು ಗಂಟೆಗಳಲ್ಲಿ ದಾರಿ ತೆರೆಯುತ್ತದೆ ಎಂಬ ನಿರ್ಧಾರವನ್ನು ಅವರವರೇ ಮಾಡಿಕೊಂಡರು.

(11ನೇ ಪುಟಕ್ಕೆ)

ರೇಖಾಲಾವಣ್ಯದ ಗಣಪ

ಕಾವೆಂಶ್ರೀ







ಪ್ರತಿಯೊಬ್ಬ ಕಲಾವಿದನಿಗೂ ಗಣಪ ಆರಾಧ್ಯ ದೈವ, ಆತ ಎಲ್ಲರಿಗೂ ಪ್ರಿಯಕರ. ಕಲೆಯು ಆರಂಭಗೊಳ್ಳುವುದೇ ಆತನ ಸ್ತುತಿಯಿಂದ, ಚಿತ್ರರಚನೆಯಿಂದ. ರೇಖಾ ಲಾಲಿತ್ಯಕ್ಕೆ ಮೂಲ ಕಥಾವಸ್ತುವನ್ನಾಗಿ ಗಣಪನನ್ನು ಆಯ್ಕೆ ಮಾಡಿಕೊಂಡು ಕಲ್ಪನೆಯ ಕಥಾಹಂದರಕ್ಕೆ ರೇಖೆಯ ಮೂಲಕ ಜೀವಂತಿಕೆಯನ್ನು ತುಂಬಿದ ಕಲಾವಿದ ಬಾಗಲಕೋಟೆಯ ಸತೀಶ್ ಬಿ. ಹಿರೇಮಠ. ದಶಕಗಳ ಹಿಂದೆಯೇ ರೇಖೆಯಲ್ಲಿ ಚಿತ್ರಿಸಲು ಮನಸ್ಸು ಮಾಡಿದ ಅವರು ರೇಖಾವಿನ್ಯಾಸದಲ್ಲಿ ಪ್ರಬುದ್ಧತೆ ಪಡೆದುಕೊಂಡರು. ಅವರ ಕೈಚಳಕದ ಮೂಲಕ ರೇಖೆಗಳಿಂದ ಅರಳುವ ಸಾಂಪ್ರದಾಯಿಕ ಶೈಲಿಯಲ್ಲಿ ಕಲಾಕೃತಿಗಳು ಬೆರಗು ಮೂಡಿಸುತ್ತವೆ. ಗದುಗಿನ ವಿಜಯ ಕಲಾ ಮಂದಿರದಲ್ಲಿ ಬಿ.ಎಫ್.ಎ ಚಿತ್ರಕಲೆ ಪದವಿ ಪಡೆದು, ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಚಿತ್ರಕಲೆಯಲ್ಲಿ ಪ್ರಥಮ ಶ್ರೇಣಿಯೊಂದಿಗೆ ಸ್ನಾತಕೋತ್ತರ ಪದವಿ ಗಳಿಸಿದ ಹಿರೇಮಠರು ವಿಶಿಷ್ಟ ಸೊಗಡಿನ ಕಲಾವಿದ.

ಪೌರಾಣಿಕ ಕಥಾವಸ್ತುವಿದ್ದರೆ ಪ್ರತಿಯೊಂದು ರೇಖಾಚಿತ್ರಕ್ಕೂ ಹೂ, ಗಿಡ, ಬಳ್ಳಿ, ಪಕ್ಷಿ, ಪ್ರಾಣಿಗಳನ್ನು ಸಂಯೋಜಿಸಿ ಚಿತ್ರ ಸೃಷ್ಟಿಸುವ ಕ್ರಮವೊಂದಿದೆ. ಇಂತಹ ಶೈಲಿಯನ್ನು ಬಂಗಾಳ ಕಲಾವಿದರಾದ ಜಾಮಿನಿರಾಯ್, ನಂದಲಾಲ್ ಬೋಸ್, ಮಂಜಿತ್‌ಬಾಬಾರಂತಹ ಕಲಾವಿದರ ಚಿತ್ರಗಳನ್ನು ನೋಡುತ್ತಾ ತಮ್ಮದೇ ಆದ ಶೈಲಿಯನ್ನು ಹಿರೇಮಠ ರೂಢಿಸಿಕೊಂಡರು.

ಒಂದು ಬಿಂದುವಿನಿಂದ ಆರಂಭಗೊಂಡ ಚಲನೆಯ ರೇಖೆ, ಅಂತಿಮ ಬಿಂದುವನ್ನು ತಲುಪುವ ವೇಳೆಗೆ ಸೃಷ್ಟಿಸುವ ಕಲಾಕೃತಿ ಅನನ್ಯ. ರೇಖೆಗಳಲ್ಲಿ ರೂಪ-ಭಾವಗಳು ಅರ್ಥಪೂರ್ಣವಾಗಿ ಸಂಯೋಜನೆಗೊಳ್ಳುವ ಬಗೆಯಂತೂ ಅದ್ಭುತ. ಚಿತ್ರರಚನೆಯಲ್ಲಿ ತನ್ನದೇ ಆದ ಹಿಡಿತವನ್ನು ಸಾಧಿಸಿದರೆ ರೇಖೆಗಳು ವೇಗ ಗತಿಯನ್ನು ಪಡೆದು ಗಾಢ ಪರಿಣಾಮವನ್ನು ಬೀರುತ್ತವೆ. ಪ್ರತಿಯೊಂದು ಚಿತ್ರವೂ ನೈಜತೆಯಲ್ಲಿಯೇ ಅನಾವರಣಗೊಂಡಿದೆ. ಹಾಗಾಗಿಯೇ ಪ್ರತಿಯೊಂದು ರೇಖೆ ಮಹತ್ವಪೂರ್ಣ ಎನಿಸಿದೆ.



ಸತೀಶ್ ಬಿ. ಹಿರೇಮಠ

ರೇಖೆಗಳಲ್ಲರಳಿದ ನಾಟ್ಯ ಗಣಪ, ವಾದ್ಯಗಣಪ, ನಾದ ಗಣಪ, ಮೂಷಕವಾಹನ ಗಣಪ, ಗೋಕುಲ ಗಣಪ, ಶೇಷಶಯನ ಗಣಪ ಮುಂತಾದ ಚಿತ್ರಗಳೆಲ್ಲಾ ಮೂರು ಬಾರಿ ಮುಂಬೈನ ನೆಹರೂ ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶನ ಮತ್ತು ರಾಷ್ಟ್ರೀಯ-ಅಂತರರಾಷ್ಟ್ರೀಯ ಕಲಾ ಪ್ರದರ್ಶನಗಳಲ್ಲಿ ಪ್ರದರ್ಶನಗೊಂಡಿವೆ. ನವದೆಹಲಿ, ಚಂಡೀಗಢ, ಮುಂಬೈ, ಬೆಂಗಳೂರು ನಗರಗಳಲ್ಲಿ ಇವರ ರೇಖಾಚಿತ್ರ ಕಲಾಕೃತಿಗಳು ರಾರಾಜಿಸುತ್ತಿವೆ. ದೆಹಲಿ ಕಲಾ ಅಕಾಡೆಮಿ, ಲಲಿತ ಕಲಾ ಅಕಾಡೆಮಿ ಪ್ರಶಸ್ತಿಗೆ ಅವರು ಭಾಜನರಾಗಿದ್ದಾರೆ.

❖

ಶಿಕ್ಷಕರ ಅನುಭವ

ಕಳೆದದ್ದು ಸಿಗುವುದು ಯಾವಾಗ...?

ಎಂ.ಜೆ.ರಾಜೀವಗೌಡ ಮೇಲೂರು

ಕಲಿಸುವವರು ಮತ್ತು ಕಲಿಯುವವರ ನಡುವೆ ನಡೆಯುವ ನೇರ ಸಂವಹನವೇ ಶಿಕ್ಷಣದ ಮುಖ್ಯವಾದ ಭಾಗ. ಇಂತಹ ಅತಿಮುಖ್ಯ ಅವಕಾಶವೇ ಇಲ್ಲವಾಗಿದ್ದು ಕಲಿಯುವ ಅವಕಾಶಕ್ಕೆ ಬಿದ್ದ ದೊಡ್ಡ ಪೆಟ್ಟು.

ಇದೊಂದು ಸಣ್ಣ ಉದಾಹರಣೆ ಮಾತ್ರ. ಗಣಿತದಲ್ಲಿ ಮಕ್ಕಳು ಸ್ಥಾನ, ಸ್ಥಾನಬೆಲೆಯನ್ನು ಅರಿತುಕೊಳ್ಳಲು ಯಾವುದಾದರೂ ವಸ್ತುಗಳನ್ನು ಮೊದಲು ಬಿಡಿ ಬಿಡಿಯಾಗಿ ಎಣಿಸಬೇಕಾಗುತ್ತದೆ. ನಂತರ ಅವುಗಳನ್ನು ಹತ್ತರ ಗುಂಪುಗಳಲ್ಲಿ ಜೋಡಿಸಬೇಕಾಗುತ್ತದೆ. ಆ ನಂತರ ಹತ್ತು ಹತ್ತರ ಗುಂಪುಗಳನ್ನು ಜೋಡಿಸಬೇಕಾಗುತ್ತದೆ. ಇವೆಲ್ಲವನ್ನೂ ಮಕ್ಕಳು ಸ್ನೇಹಿತರ ಜೊತೆಗೂಡಿ ಆಡುತ್ತಾ, ತಮ್ಮ ತಮ್ಮಲ್ಲೇ ಮಾತಾಡುತ್ತಾ ಮಾಡುವುದರಿಂದ ಕಲಿಕೆಯ ಮಟ್ಟ ಸುಲಭವಾಗಿ ಸಾಧಿತವಾಗುತ್ತದೆ. ಭಾಷಾ ಕಲಿಕೆಯಲ್ಲೂ ಸ್ವರ, ವ್ಯಂಜನ, ಸಂಯುಕ್ತಾಕ್ಷರಗಳನ್ನು ಕಲಿಯುವಾಗ ಅವುಗಳ ಉಚ್ಚಾರವನ್ನು ಆಲಿಸುವ, ಪುನರುಚ್ಚರಿಸುವ, ತಪ್ಪಾದರೆ ಅಲ್ಲಿಯೇ ಸರಿಪಡಿಸಿಕೊಳ್ಳುವ ಅನುಕೂಲಗಳಿವೆ.

ಕಲಿಸುವ ಸಮಯದಲ್ಲೇ ವಿಷಯ ಅರ್ಥವಾಗಿರುವುದು, ಆಗದಿರುವುದು ಆ ಮಕ್ಕಳ ಕಣ್ಣುಗಳಲ್ಲೇ ಪ್ರತಿಫಲಿತವಾಗುತ್ತಿರುತ್ತದೆ. ಇದರಿಂದ ಶಿಕ್ಷಕರೂ ತಕ್ಷಣವೇ ಕಲಿಕಾ ದೋಷಗಳನ್ನು ಸರಿಪಡಿಸುವ ಅಥವಾ ಇನ್ನಿತರ ಮಾರ್ಗಗಳನ್ನು ಹುಡುಕಿಕೊಳ್ಳುವ ಸಂಭವವಿರುತ್ತದೆ. ಆದರೆ ಮಕ್ಕಳನ್ನು ಒಂದೆಡೆ ಸೇರಿಸಿ ಇಂತಹ ವಿಪುಲ ಅವಕಾಶಗಳನ್ನು ಒದಗಿಸುತ್ತಿದ್ದ ಶಾಲೆಗಳನ್ನೇ ಮುಚ್ಚಿದ್ದು ತೊಂದರೆಯಾಗಿದೆ. ವಿದ್ಯಾಗಮವು ನಾನಾ ಕಾರಣಗಳಿಂದ ಎಲ್ಲಾ ಮಕ್ಕಳನ್ನು ತಲುಪಲಿಲ್ಲ. 1ರಿಂದ 3ನೇ ತರಗತಿ ಮಕ್ಕಳಿಗೆ ಅಭ್ಯಾಸದ ಹಾಳೆಗಳನ್ನು ಕೊಟ್ಟು ನಡೆಸುತ್ತಿರುವ ಸೇತುಬಂಧವೂ ಎಲ್ಲಾ ಮಕ್ಕಳನ್ನು ಒಳಗೊಳ್ಳುತ್ತಿಲ್ಲ. ಬಹಳಷ್ಟು ಕಡೆ ಶಿಕ್ಷಕರ ಸೂಚನೆಗಳನ್ನು ಮಕ್ಕಳಿಗೆ ದಾಟಿಸಬೇಕಾದ ಸುಗಮಕಾರರೇ ಇಲ್ಲ!

ಆನ್‌ಲೈನ್ ಕಲಿಕೆ ಎನ್ನುವುದು ದೊಡ್ಡ ಭ್ರಮೆ ಎಂಬುದು ಈಗಾಗಲೇ ಎಲ್ಲರ ಅರಿವಿಗೆ ಬಂದಿದೆ. ಈ ಕಲಿಕೆಗೆ ಮುಖ್ಯವಾಗಿ ಬೇಕಿರುವುದು ಒಂದು ಆ್ಯಂಡ್ರಾಯ್ಡ್ ಫೋನ್, ದುಡ್ಡುಕೊಟ್ಟು ಕೊಳ್ಳಬೇಕಿರುವ ಡೇಟಾ, ಜೊತೆಗೆ ಅದನ್ನು ಬಳಸುವ ವಿವೇಚನೆ. ಈ ಹೊಸ ತಲೆಮಾರಿನ ಸರಕು ಕೊಳ್ಳುವ ಸಾಮರ್ಥ್ಯ ಕೋವಿಡ್ ಬರುವ ಕಾಲಕ್ಕೆ ಬಹಳಷ್ಟು ಗ್ರಾಮಾಂತರ ಜನರಿಗೆ ಇರಲೇ ಇಲ್ಲ. ನಾಡಿನ ಅತಿಹೆಚ್ಚು ವಿದ್ಯಾರ್ಥಿಗಳಿರುವುದು ಗ್ರಾಮಾಂತರದಲ್ಲೇ ಎಂಬುದು ನೆನಪಿರಲಿ. ಆ್ಯಂಡ್ರಾಯ್ಡ್ ಫೋನ್ ಇರುವ ಪೋಷಕರು ಹೊಲದಲ್ಲೋ, ಕೂಲಿ ಕೆಲಸದಲ್ಲೋ ಇದ್ದಾಗಲೇ ಆನ್‌ಲೈನ್ ಪಾಠಗಳು ನಡೆಯುವ ಸಂದರ್ಭಗಳು ಹೆಚ್ಚು. ಇಂತಹ ಆನ್‌ಲೈನ್ ಬೋಧನೆ-ಕಲಿಕೆ ನಡೆಸಬಹುದಾದಷ್ಟು ಪ್ರಬುದ್ಧತೆಯ ಹಂತಕ್ಕೆ ನಾವಿನ್ನೂ ವಿಕಾಸವಾಗಿಲ್ಲ ಎನಿಸುತ್ತದೆ. ನಿಯಂತ್ರಿಸಲು ಕಷ್ಟವಾಗುವ ಸಂತೆ, ಜಾತ್ರೆ ಮುಂತಾದವುಗಳಿಂದ ರೋಗ ಸುಲಭವಾಗಿ ಹರಡಬಹುದು ಎಂಬ ಕಾರಣಕ್ಕೆ ಅವುಗಳ ಮೇಲೆ ನಿಷೇಧ ಹೇರುವುದು ಸರಿ. ಸುಲಭವಾಗಿ ನಿಯಂತ್ರಿಸಬಹುದಾದ ಶಾಲೆಗಳನ್ನು ಮುಚ್ಚಿದ್ದು ಒಪ್ಪಲು ಕಷ್ಟ. ಇದರಿಂದ, ಹೊಸ ಆಲೋಚನೆ, ಜ್ಞಾನ ಪಡೆಯಬೇಕಿದ್ದ ನಾಳಿನ ಜನಾಂಗದ ಅವಕಾಶಗಳನ್ನು ಮೊಟಕುಗೊಳಿಸಿದಂತಾಯಿತು ಅಷ್ಟೆ.

ಶಿಕ್ಷಕ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,
ಚೀಮಂಗಲ (ಚಿಕ್ಕಬಳ್ಳಾಪುರ ಜಿಲ್ಲೆ)

ಫಲ ನೀಡಿದ ಗುಂಪುಗಳು

ದೀಪಾ ದೇವಕತೆ

ಕಳೆದ ಎರಡು ವರ್ಷಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆಯನ್ನು ಸಕ್ರಿಯಗೊಳಿಸಲು ಶಿಕ್ಷಕರು ಎದುರಿಸಿದ ಸವಾಲುಗಳು ಅಷ್ಟಿಷ್ಟಲ್ಲ. ಇಲ್ಲಿ ಕೇವಲ ಬೋಧನೆಯಷ್ಟೇ ಅಲ್ಲ, ಮಕ್ಕಳ ಆರೋಗ್ಯದ ಕುರಿತಾಗಿಯೂ ಕಾಳಜಿ ವಹಿಸುವುದು ಅಗತ್ಯವಾಗಿದೆ. ಶಿಕ್ಷಣದ ತಳಪಾಯದಂತಿರುವ ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಕಲಿಕೆಯ ನಿರಂತರತೆಯನ್ನು ಕಾಯ್ದುಕೊಳ್ಳಲು ಒಬ್ಬ ಶಿಕ್ಷಕಿಯಾಗಿ ನಾನು ಕಂಡುಕೊಂಡ ನೂತನ ಬೋಧನಾ ಉಪಕ್ರಮಗಳು ಹಲವು.

ಎಳವೆಯ ಮಕ್ಕಳೊಂದಿಗೆ ಸದಾ ನಿಕಟತೆಯಿಂದ ಸಂವಹಿಸುವ ಶಿಕ್ಷಕರಿಗೆ ಅಂತರವನ್ನು ಕಾಯ್ದುಕೊಂಡು, ಮುನ್ನೆಚ್ಚರಿಕೆಯ ಕ್ರಮಗಳೊಂದಿಗೆ ಕಲಿಕೆಯನ್ನು ಸಾಧಿಸುವುದು ಎಂದರೆ ಕಡಿವಾಣ ಹಾಕಿದಂತೆಯೇ ಸರಿ! ಕೊರೊನಾ ಕಾಲದಲ್ಲಿ ಶಿಕ್ಷಕರು ವಿದ್ಯಾಗಮ ಯೋಜನೆಯ ಮೂಲಕ, ಮಕ್ಕಳನ್ನು ತಲುಪಲು ಅನುಕೂಲಕರ ಎನಿಸಿತಾದರೂ ಕೆಲವೇ ದಿನಗಳ ಈ ಬಯಲು ಆವರಣದ ತರಗತಿಗಳು ಸ್ಥಗಿತಗೊಂಡು ಪರ್ಯಾಯ ಮಾರ್ಗಗಳ ಮೊರೆ ಹೋಗುವಂತಾಯಿತು.

ಸರ್ಕಾರಿ ಶಾಲೆಯ ಬಡ ಮಕ್ಕಳನ್ನು ತಂತ್ರಜ್ಞಾನ ಆಧಾರಿತ ಶಿಕ್ಷಣದ ಮೂಲಕ ತಲುಪುವುದು ಕಷ್ಟಕರ ಸವಾಲು. ಇದಕ್ಕೊಂದು ಪೂರಕವಾದ ವ್ಯವಸ್ಥೆ ಕಲ್ಪಿಸದೇ ಇದ್ದಲ್ಲಿ ಮಕ್ಕಳು ಕಲಿಕೆಯಲ್ಲಿ ಹಿಂದೆ ಉಳಿಯುವರು ಎಂಬ ಕಾರಣಕ್ಕೆ ಕ್ರಿಯಾಯೋಜನೆಯನ್ನು ಹಾಕಿಕೊಳ್ಳಲಾಯಿತು. ಇದನ್ನು ಕಾರ್ಯರೂಪಕ್ಕೆ ತರಲು ನಾನು ಸೇವೆ ಸಲ್ಲಿಸುತ್ತಿರುವ ಹಳ್ಳಿಯಲ್ಲಿ ಪದವೀಧರ ಸ್ವಯಂ ಸೇವಕರ ನೆರವಿನಿಂದ ಚಿಕ್ಕ ಗುಂಪುಗಳನ್ನು ರಚಿಸಿದೆವು. ಅವರು ವಾಸವಿರುವ ಜನವಸತಿಗಳ ಅಕ್ಕಪಕ್ಕದ ಮನೆಗಳ ವಿದ್ಯಾರ್ಥಿಗಳನ್ನು ಹೊಲ-ಗದ್ದೆಗಳಲ್ಲಿ, ದೇವಸ್ಥಾನಗಳ ಆವರಣಗಳಲ್ಲಿ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ, ಓದು-ಬರಹ-ಸುಲಭ ಲೆಕ್ಕಾಚಾರದ ಪರಿಕಲ್ಪನೆಗಳನ್ನು ಆಧಾರವಾಗಿ ಇಟ್ಟುಕೊಂಡು ಪಾಠ ಮಾಡುವಂತೆ ಸಲಹೆ ನೀಡಿದೆವು.

ತದನಂತರ ಮನೆ ಭೇಟಿಯ ಮೂಲಕ ಪ್ರತಿಯೊಂದು ಮಗುವಿನ ಪ್ರಗತಿಯನ್ನು ಪರಿಶೀಲಿಸಿ, ಸೂಕ್ತ ಮಾರ್ಗದರ್ಶನ ನೀಡಿದೆವು. ಹೀಗೆ ಯುವ ಸಮುದಾಯದ ಸಹಕಾರದಿಂದ ಕಲಿಕೆಯ ನಿರಂತರತೆಯೊಂದಿಗೆ, ಗುಣಾತ್ಮಕ ಶಿಕ್ಷಣದ ಗುರಿಯನ್ನು ಸಾಧಿಸಲು ಇದೊಂದು ಸಣ್ಣ ಪ್ರಯತ್ನವಾಯಿತು. ಈ ಯೋಜನೆ ತಕ್ಕ ಫಲವನ್ನೂ ನೀಡಿತು. ಈಗ ಭೌತಿಕ ತರಗತಿಗಳು ಮತ್ತೆ ಆರಂಭವಾಗುವ ಕಾಲಘಟ್ಟದಲ್ಲಿ ನಾವು ಬಂದು ನಿಂತಿರುವುದು ಸಂತಸ ಕೊಟ್ಟಿದೆ.

ಶಿಕ್ಷಕಿ, ಸರ್ಕಾರಿ ಪ್ರಾಥಮಿಕ ಶಾಲೆ, ಶಿರಗುಪ್ಪಿ
(ಬಾಗಲಕೋಟೆ)

ಹೂವಿನ ಕಣಿವೆಯಲ್ಲಿ...

10ನೇ ಪುಟದಿಂದ...

ನಾವು ಕೂಡ ಖುಲ್ ಜಾ ಸಿಂಸಿಂ ಎನ್ನುತ್ತ ಒಂದು ಗಂಟೆ ಕಾಯ್ದರೂ ಅಲ್ಲಿ ಯಾವ ಚಟುವಟಿಕೆಯೂ ನಡೆದಂತೆ ಕಾಣಲಿಲ್ಲ. ಇಷ್ಟೇ ಅಲ್ಲ ಇದನ್ನು ದಾಟಿದ ಮೇಲೆ ಇನ್ನೆರಡು ಕಡೆ ದಾರಿ ಬಂದ್ ಆಗಿದೆ ಎಂಬ ಸಂಗತಿ ಗೊತ್ತಾಯಿತು. ಹಿಂದೆ ಬರುತ್ತಿದ್ದ ವಾಹನಗಳು ಅಷ್ಟೇ ವೇಗವಾಗಿ ಹಿಂದಕ್ಕೆ ಹೋಗಿ ಹತ್ತಿರದಲ್ಲಿದ್ದ ಚಮೋಲಿ ಎಂಬ ಪಟ್ಟಣದಲ್ಲಿನ ಹೋಟೆಲ್‌ಗಳಿಗೆ ಲಗ್ಗೆ ಹಾಕಿದ್ದವು. ನಮ್ಮ ಟ್ರೆಕ್ ನಾಯಕ ವಿಘ್ನೇಶ್ ತನ್ನ ಸ್ನೇಹಸಂಬಂಧಗಳನ್ನು ಬಳಸಿ ನಮಗೂ ಒಂದು ಹೋಟೆಲ್ ಒದಗಿಸಿದ. ಉಂಡು ಮಲಗುವ ಹೊತ್ತಿಗೆ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ನಮ್ಮ ಪ್ರವಾಸದ ಒಂದು ದಿನದ ಅವಧಿ ಹೆಚ್ಚುವರಿಯಾಗಿ ಬಳಕೆಯಾಗಿತ್ತು.

ಬೆಳಗ್ಗೆ ಎಂಟು ಗಂಟೆಗೆ ರಸ್ತೆ ತೆರೆದಿದೆ ಎಂಬ ಮಾಹಿತಿ ಬಂತು. ತಕ್ಷಣ ಹೊರಟು ಬೆಟ್ಟ ಜಾರಿದ್ದ ಜಾಗಗಳನ್ನು ಉದ್ದಕ್ಕೂ ನೋಡುತ್ತ ಹೋಗುತ್ತಿರುವಾಗ ಬೃಹತ್ ಪೈನ್ ಮರವೊಂದು ನಮ್ಮ ದಾರಿಗೆ ಅಡ್ಡ ಮಲಗಿತು. ಥೇಟ್ ಬೆಟ್ಟವೇ ಹಾಕಿದ ಚೆಕ್‌ಪೋಸ್ಟ್ ಥರಾ ಕಾಣಿಸುತ್ತಿತ್ತು. ಅಲ್ಲೇ ಒಂದು ಸೈನ್ಯದ ಕ್ಯಾಂಪ್ ಇದ್ದುದರಿಂದ ಜೆಸಿಬಿಯೊಂದು ಬಂದು ಆ ಬೃಹತ್ ಮರವನ್ನು ಪಕ್ಕಕ್ಕೆ ಸರಿಸಿತು. ಅಂತೂ ಗೋವಿಂದಘಾಟ್‌ಗೆ ಮಧ್ಯಾಹ್ನ ಹನ್ನೆರಡು ಗಂಟೆಗೆ ತಲುಪಿದೆವು. ನಮ್ಮ ವಾಸ್ತವ್ಯಕ್ಕಾಗಿ ನಿಗದಿಯಾಗಿದ್ದ ಗಂಗಾ ಹೋಮ್‌ಸ್ಟೇ ತಲುಪಿದಾಗ ಎಲ್ಲರಿಗೂ ಹಸಿವಾಗಿತ್ತು. ಅದೊಂದು ಅದ್ಭುತವಾದ ಆವರಣ. ಪಕ್ಕದಲ್ಲಿ ಅಲಕನಂದಾ ನದಿ ಭೋರ್ಗರೆಯುತ್ತ ಹರಿಯುತ್ತದೆ. ಅದರ ದಡದ ಎತ್ತರದ ಜಾಗದಲ್ಲಿ ಕಟ್ಟಿರುವ ಈ ಪುಟ್ಟ ಹೋಟೆಲ್‌ನ ಮಾಲೀಕ ಶರ್ಮಾ ಮತ್ತು ಅವನ ಶ್ರೀಮತಿ ತಾವೇ ಸ್ವತಃ ಕೆಲಸಗಾರರಾಗಿ, ಅಡುಗೆಯವರಾಗಿ ದುಡಿಯುತ್ತಾರೆ. ಸುತ್ತಲಿನ ಜಾಗದಲ್ಲಿ ಹಲವಾರು ತರಕಾರಿಗಳನ್ನು ಬೆಳೆದಿದ್ದಾರೆ. ಅವನ್ನೇ ಅಡುಗೆಗೆ ಬಳಸುತ್ತಾರೆ.

ನಾಲ್ಕು ವರ್ಷಗಳ ಹಿಂದೆ ನಮ್ಮ ಹುಡುಗರು ಕೊಟ್ಟಿದ್ದ ರಾಗಿಯನ್ನು ಬೀಜ ಮಾಡಿಕೊಂಡು ಮತ್ತೆ ಮತ್ತೆ ರಾಗಿ ಬೆಳೆದಿದ್ದಾರೆ. ಕರ್ನಾಟಕದಿಂದ ಬಂದವರಿಗೆ ರಾಗಿರೊಟ್ಟಿ ಮಾಡಿಕೊಡುತ್ತಾರೆ. ಸುಂದರ ಹೂಗಳ ಪ್ರವೇಶದ್ವಾರವಿದೆ. ಒಂದೆರಡು ದಿನಗಳು ತಣ್ಣಗೆ ಕಾಲ ಕಳೆಯಬೇಕಾದ ಜಾಗ. ಊಟದ ಸವಿಯಂತೂ ನೆನಪಿಸಿಕೊಳ್ಳುವ ಹಾಗಿತ್ತು. ಅವರಿಂದ ಗೊತ್ತಾದ ಮತ್ತೊಂದು ಸಂಗತಿ ಎಂದರೆ ಅವರ ಮೊದಲಿನ ಹೋಮ್‌ಸ್ಟೇ ಸೈಟ್ ಸಮೇತ ಕೊಚ್ಚಿ ಹೋಯಿತಂತೆ! ತೀರಾ ಇತ್ತೀಚೆಗೆ ಇದನ್ನು ಕಟ್ಟಿಕೊಂಡಿದ್ದಾರೆ.

ಮಾರನೆಯ ಬೆಳಗ್ಗೆ ನಮ್ಮ ಚಾರಣ ಶುರುವಾಯಿತು. ಹದಿನಾಲ್ಕು ಕಿ.ಮೀ ಚಾರಣಮಾಡಿ ಘಾಂಗೇರಿಯಾ ಎಂಬ ಬೇಸ್ ಕ್ಯಾಂಪ್ ತಲುಪುವುದು ಅವತ್ತಿನ ಕಾರ್ಯಕ್ರಮ. ಕೆಲವರಿಗೆ ಕೈತಪ್ಪಿ ಹೋಗಿರುವ ಒಂದು ದಿನವನ್ನು ಹೇಗಾದರೂ ಮಾಡಿ ಮರುಸಂಪಾದಿಸುವ ಆಸೆ. ಹಾಗಾಗಿ ಇವತ್ತೇ ಘಾಂಗೇರಿಯಾ ತಲುಪಿ ಸಾಧ್ಯವಾದರೆ ಹೂವಿನ ಕಣಿವೆಗೂ ಹೋಗಿಬರೋಣ ಎಂಬ ಠರಾವನ್ನು ಮಂಡಿಸಿದರು. ಎಲ್ಲರೂ ಉಫೇ ಉಫೇ ಎಂದರು. ನಮ್ಮ ಟ್ರೆಕ್ ನಾಯಕರು ಮಾತ್ರ ಒಳಗೊಳಗೇ ನಗುತ್ತಿದ್ದರು. ಆಗಲಿ ಹೋಗೋಣ ಬಿಡಿ ಎಂದರು. ನಾಲ್ಕು ಕಿಲೋಮೀಟರ್ ದೂರದ ಪುಲ್ನಾ ಎಂಬ ಹಳ್ಳಿಯವರೆಗೆ ಜೀಪ್ ಪ್ರಯಾಣವೆಂದೂ ಅಲ್ಲಿಂದ ಮುಂದಕ್ಕೆ ಹತ್ತು ಕಿ.ಮೀ ಚಾರಣವೆಂದೂ ತೀರ್ಮಾನವಾಗಿ ಅದರಂತೆ ಜೀಪಿನಲ್ಲಿ ಪುಲ್ನಾ ತಲುಪಿ ಚಾರಣ ಆರಂಭಿಸಿದೆವು. ಚಾರಣದ ಆರಂಭದ ಎತ್ತರ ಸಮುದ್ರ ಮಟ್ಟದಿಂದ ಸುಮಾರು ಏಳು ಸಾವಿರ ಅಡಿಗಳು. ಆರಂಭದ ಒಂದೆರಡು ಕಿಲೋಮೀಟರುಗಳು ಹೆಚ್ಚೂ ಕಡಿಮೆ ಸಮತಟ್ಟಾದ ದಾರಿ. ನಂತರ ಶುರುವಾಯಿತು ನೋಡಿ. ಒಮ್ಮೆಗೇ ಸುಮಾರು ಹತ್ತುಸಾವಿರ ಅಡಿಗಳಿಗೆ ಏರುವ ಕಡಿದಾದ ದಾರಿ. ಹನ್ನೊಂದು ಗಂಟೆಗೆ ಘಾಂಗೇರಿಯಾ ತಲುಪಿಬಿಡೋಣ ಎಂದು ಹೊರಟ ನಾವು ಅಲ್ಲಿಗೆ ಹೋದಾಗ ಮಧ್ಯಾಹ್ನ ಒಂದೂವರೆ ಗಂಟೆ! ಎಲ್ಲರೂ ಬಸವಳಿದು ಹೋಗಿದ್ದರು. ಯಾರ ಬಾಯಿಂದಲೂ ಹೂವಿನ ಕಣಿವೆಯ ಮಾತೇ ಬರಲಿಲ್ಲ. ಉಂಡು ರೂಂ ಸೇರಿಕೊಂಡೆವು. ಅಲ್ಲಿಯ ಹೋಟೆಲ್ ರೂಂಗಳು ತಣ್ಣಗೆ ಕೊರೆಯುತ್ತಿದ್ದವು.

ಮರುದಿನ ಬೆಳಿಗ್ಗೆ ಏಳು ಗಂಟೆಗೆ ನಮ್ಮ ಹೂವಿನಕಣಿವೆಯ ಚಾರಣ ಆರಂಭವಾಯಿತು. ಉತ್ತರಾಖಂಡ ರಾಜ್ಯದ ಚಮೋಲಿಯ ಭ್ಯುಂದರ್ ಕಣಿವೆಯಲ್ಲಿರುವ ಈ ಹೂವಿನಸಂಪತ್ತು ಇರುವ ಆವರಣವನ್ನು 1980ರಲ್ಲಿ ರಾಷ್ಟ್ರೀಯ ಉದ್ಯಾನವನವೆಂದು ಘೋಷಿಸಲಾಗಿದ್ದು, ಪ್ರವೇಶಿಸುವವರಿಗೆ 150 ರೂಪಾಯಿ ಪ್ರವೇಶ ದರವಿದೆ. ಪ್ರವೇಶ ದರ ಸಂಗ್ರಹಿಸುವುದನ್ನು ಬಿಟ್ಟರೆ ಈ ಪ್ರಾಧಿಕಾರದಿಂದ ಮತ್ಯಾವ ಘನಂದಾರಿ ಕೆಲಸಗಳೂ ಆಗುತ್ತಿಲ್ಲ. ಆರಂಭದಿಂದಲೇ ಕಡಿದಾದ ಏರನ್ನು ಏರುತ್ತಾ ಸಮುದ್ರಮಟ್ಟದಿಂದ ಸುಮಾರು 12,400 ಅಡಿ ಎತ್ತರದಲ್ಲಿರುವ ಕಣಿವೆಯನ್ನು ಸೇರಬೇಕು. ಉದ್ದಕ್ಕೂ ಕಣಿವೆಯ ಆಸುಪಾಸಿನ ಪರ್ವತ ಶಿಖರಗಳಲ್ಲಿರುವ ನೀರ್ಗಲ್ಲುಗಳು ಕರಗಿ ಪುಷ್ಪಾವತಿ ನದಿಯಾಗಿ ಹರಿಯುತ್ತವೆ. ಅದರ ವೇಗವನ್ನು ಕಣ್ತುಂಬಿಕೊಂಡೆವು.

ಕಣಿವೆ ಸೇರಲು ಸುಮಾರು ನಾಲ್ಕು ಕಿ.ಮೀಗಳಷ್ಟು ಕಡಿದಾದ ದಾರಿ ಸವೆಸಬೇಕು. ಇಲ್ಲಿ ಕುದುರೆ ಇತ್ಯಾದಿಗಳ ನೆರವಿಲ್ಲ. ಬುಟ್ಟಿಯಲ್ಲಿ ಹೊತ್ತು ಸಾಗಿಸುವ ವ್ಯವಸ್ಥೆ ಇದೆ. ಸಾಗುವ ದಾರಿಯ ಇಕ್ಕೆಲಗಳಲ್ಲಿ ರಾಶಿರಾಶಿ ಹೂಗಳು ಅರಳಿರುತ್ತವೆ. ಉದ್ದಕ್ಕೂ ರಾಗಾ, ಪೈನ್ ಮತ್ತು ಸ್ಥಳೀಯ ಜಾತಿಯ ನೇಪಲ್ ಮರಗಳು ಸಿಗುತ್ತವೆ. ರಾಗಾ ಮರಗಳು ಹಿಮಾಲಯದ ಒಂದು ಹಂತದಲ್ಲಿ ಕಾಣಸಿಗುತ್ತವೆ. ಇವುಗಳ ತೆಳ್ಳನೆಯ ತೊಗಟೆಯನ್ನು ಭೋಜಪತ್ರ ಎನ್ನುತ್ತಾರೆ. ಕಾಗದದ ಶೋಧನೆಗೆ ಮುನ್ನ ಈ ಭೋಜಪತ್ರವನ್ನು ಕಾಗದದ ಹಾಗೆ ಬಳಸಲಾಗುತ್ತಿತ್ತು. ಬರಹಗಾರನಾದುದರಿಂದ ನನಗೆ ಬೇಕಾಗುತ್ತದೆ ಎಂದು ರಾಣ ಮತ್ತು ರಾವತ್ ಅನೇಕ ಭೋಜಪತ್ರಗಳನ್ನು ತಂದುಕೊಟ್ಟರು!

ಐದು ಗಂಟೆಗಳ ಚಾರಣದ ನಂತರ ಹೂವಿನಕಣಿವೆಯನ್ನು ಪ್ರವೇಶಿಸಿದೆವು. ಸುಮಾರು ಮೂವತ್ತನಾಲ್ಕು ಚದರ ಮೈಲುಗಳ ಈ ಕಣಿವೆಯಲ್ಲಿ ಅನೇಕ ಜಾತಿಯ ಆರ್ಕಿಡ್‌ಗಳು, ನೂರಾರು ಥರದ ಹೂಗಳು ಒಟ್ಟಿಗೇ ಅರಳುತ್ತವೆ. ಜುಲೈ ಮತ್ತು ಆಗಸ್ಟ್ ತಿಂಗಳುಗಳು ಹೂಗಳನ್ನು ನೋಡಲು ಸುಸಮಯ. ಇದನ್ನು ಕುರಿಗಾಹಿಗಳು ಮೊದಲಿಗೆ ನಂದನವನ, ಹೂವಿನಕಣಿವೆ ಎಂದೆಲ್ಲ ಕರೆಯುತ್ತಿದ್ದರಂತೆ. ಆಗೆಲ್ಲ ಇದು ನೋಡಲು ಬರುವ ಜಾಗವಾಗಿರಲಿಲ್ಲ; ಬದಲಿಗೆ ಕುರಿಮೇಕೆಗಳಿಗೆ ಸೊಂಪಾದ ಮೇವಿನ ಜಾಗವಾಗಿತ್ತು. ಹತ್ತು ದಿನಗಳ ಅವಧಿಗೊಮ್ಮೆ ಈ ಆವರಣ ಹೊಸದಾಗುತ್ತದೆ! ಈಗ ಅರಳಿರುವ ಹೂಗಳು ಇನ್ನು ಹತ್ತು ದಿನಗಳ ನಂತರ ಕಾಣಸಿಗುವುದಿಲ್ಲ; ಆಗ ಕಾಣಸಿಗುವ ಎಲ್ಲ ಹೂಗಳೂ ಈಗ ಇರುವುದಿಲ್ಲ. ಇದರ ಬಹುತ್ವವನ್ನು ಕಾಣಲು ಅನೇಕ ಸಲ ಬರಬೇಕು. ಜಗತ್ತಿನ ಸುಂದರ ತಾಣಗಳಲ್ಲಿ ಇದೂ ಒಂದು. ಬಹುಪಾಲು ಎಲ್ಲವೂ ಸಣ್ಣಸಣ್ಣ ಹೂಗಳು. ಬ್ರಹ್ಮಕಮಲವೊಂದೇ ಹಿಮಾಲಯದಲ್ಲಿ ಅರಳುವ ದೊಡ್ಡಗಾತ್ರದ ಹೂ. ಅದು ಹೇಮಕುಂಡ್‌ನಲ್ಲಿ ಹೆಚ್ಚು ಕಾಣಸಿಗುತ್ತದೆ.

ಹೂಕಣಿವೆ ಪ್ರವೇಶಿಸಿದ ನಾವೆಲ್ಲ ಅಲ್ಲಲ್ಲಿ ಕೂತು ನಿಂತು ಮತ್ತೂ ಮುಂದೆ ಹೋಗುವ ಉತ್ಸಾಹದಲ್ಲಿದ್ದೆವು. ಮುಂದೆ ಒಂದು ಜಾಗದಲ್ಲಿ ಬಹಳ ಹೂಗಳು ಅರಳಿವೆ ಎಂಬ ಮಾಹಿತಿ ಬಂತು. ಆದರೆ ನಮ್ಮ ಗುಂಪಿನ ಮೂವರಿಗೆ ಎತ್ತರದ ಜಾಗಗಳಲ್ಲಿ ಉಂಟಾಗುವ ಅನಾರೋಗ್ಯದ ತೊಂದರೆ ಕಾಣಿಸಿಕೊಂಡದ್ದರಿಂದ ಅವರನ್ನು ಸಾಧ್ಯವಾದಷ್ಟು ಬೇಗ ಕೆಳಗೆ ಕರೆತರುವ ಅಗತ್ಯವಿತ್ತು. ಆದರೂ ಸಾಕಾಗುವಷ್ಟು ಹೊತ್ತು ಹೂವಿನ ಕಣಿವೆಯಲ್ಲಿ ಕಳೆದೆವು. ಎತ್ತರದ ಜಾಗವಾಗಿರುವುದರಿಂದ ಆಮ್ಲಜನಕದ ಕೊರತೆ ಇರುವ ಕಾರಣಕ್ಕೆ ಅನೇಕ ರೀತಿಯ ಅನುಭವಗಳು ಆಗುತ್ತವೆ. ತೆಳುವಾದ ಹೂವಿನ ಘಮಲು ಹರಡಿರುತ್ತದೆ. ಮನಸ್ಸೆಲ್ಲ ತಣಿದುಹೋಗಿ ನಿಸರ್ಗದೆದುರಿಗೆ ಸುಮ್ಮನೆ ವಿರಮಿಸುತ್ತದೆ.

ಸುಮಾರು 530 ವಿವಿಧ ರೀತಿಯ ಹೂಗಳ ಈ ಕಣಿವೆಯ ಪ್ರಮುಖ ಹೂಗಳೆಂದರೆ: ಪ್ರಿಮುಲ, ಆಂಡ್ರೋಸೇಸಸ್, ಸ್ಯಾಕ್ರಿಫೇಜಸ್, ಸೆಡಮ್, ಹಳದಿ ಮತ್ತು ಕೆಂಪು ಪೊಟೆಂಟಿಲ್ಲಾಸ್, ಗ್ಯೂಮ್, ಗೆರಾನಿಯಮ್, ಆಸ್ಟರ್ಸ್, ಮುಂತಾದ ನೂರಾರು ಜಾತಿಯ ಹೂಗಳ ರಾಶಿ ರಾಶಿ! ನರ್ತಿಸುವ ಹೂಗಳೆಂದು ಕರೆಯುವ ಕ್ಯಾಂಪನೂಲ ಲ್ಯಾಟಿಪೋಲಿಯಾ ಹೂಗಳು ಯಥೇಚ್ಛ ಅರಳಿದ್ದವು. ಮತ್ತೂ ವಿಶೇಷವೆಂದರೆ ಬ್ರಹ್ಮಕಮಲದ ಜಾತಿಗೆ ಸೇರಿದ ಕಪ್ಪುಹೂಗಳು ಗೊಂಡೆ ಬಿಚ್ಚಿದ್ದವು.

ಅಲ್ಲಿ ಹಿಮಾಲಯದ ರಾಣಿ ಎಂದು ಕರೆಯುವ ಬ್ಲೂ ಪ್ಲಾಪಿ (ಪ್ರಿಮುಲ ಮ್ಯಾಕ್ರೋಫಿಲಾ) ಹೂವುಗಳೇ ಜಾಸ್ತಿ. ಆದರೆ ನಾವು ಹೋದ ಕಾಲಕ್ಕೆ ಅದರ ಅರಳುವಿಕೆಯ ಕಾಲ ಮುಗಿದುಹೋಗಿತ್ತು. ಹೇಮಕುಂಡ್‌ನಲ್ಲಿ ಇನ್ನೂ ಇವೆ ಎನ್ನುವ ಮಾಹಿತಿ ಬಂತು. ಅಲ್ಲಿ ಕಂಡ ಅತ್ಯಂತ ಬೇಸರದ ದೃಶ್ಯವೆಂದರೆ ಅಷ್ಟೊಂದು ಕೋಮಲವಾದ ಹೂಗಿಡಗಳನ್ನು ತುಳಿದು ನುಗ್ಗಿ ತಮ್ಮ ಅದೇ ಮುಖಗಳನ್ನು ದಶದಿಕ್ಕಿಗೆ ತಿರುಗಿಸುತ್ತ ಫೋಟೊ ತೆಗೆಸಿಕೊಳ್ಳುತ್ತಿರುವುದು, ಸೆಲ್ಫಿ ತೆಗೆದುಕೊಳ್ಳುವ ಭರದಲ್ಲಿ ಹಿಗ್ಗಾಮುಗ್ಗ ಹೂಗಿಡಗಳನ್ನು ತುಳಿಯುತ್ತಿರುವುದು. ಹೂಗಳನ್ನು ಕೀಳುತ್ತಿರುವವರನ್ನು ಕಂಡಾಗ ಇವರನ್ನು ಇಲ್ಲಿಗೆ ಬಿಡದಿರುವುದೇ ಮೇಲೆನ್ನಿಸಿತು. ಐದು ಗಂಟೆಯ ಒಳಗೆ ಕೆಳಗೆ ಇಳಿದು ಪ್ರಾಧಿಕಾರದ ಕಚೇರಿಯಲ್ಲಿ ವಾಪಸ್ಸು ಬಂದಿರುವುದನ್ನು ದಾಖಲಿಸಬೇಕಿದ್ದುದರಿಂದ ಅಷ್ಟು ಹೊತ್ತಿಗೆ ಎಲ್ಲರೂ ಕೆಳಗೆ ಬಂದೆವು. ಅಲ್ಲಿಂದ ಕಾಣುವ ಹೇಮಕುಂಡ್ ಸಾಹಿಬ್‌ಗೆ ಮರುದಿನ ಹೋಗಿಬರಲು ಸಮಯದ ಕೊರತೆ ಉಂಟಾದುದರಿಂದ ಅಲ್ಲಿಂದಲೇ ವಂದನೆ ಹೇಳಿದೆವು.

ಮರುದಿನ ವಿಶ್ರಾಂತಿ ಮತ್ತು ಡೆಹ್ರಾಡೂನ್‌ನ ಮಾರುಕಟ್ಟೆಗಳಲ್ಲಿ ಅಡ್ಡಾಡಿ ಅಲ್ಲಿಯ ವಿಶೇಷ ಸವಿತಿಂಡಿಗಳನ್ನು ಸವಿದೆವು. ಎಂಟನೆಯ ದಿನ ಸಂಜೆಯ ವಿಮಾನದಲ್ಲಿ ಬೆಂಗಳೂರಿಗೆ ಬಂದಾಗ ಸಂಜೆ ಏಳು ಗಂಟೆಯಾಗಿತ್ತು. ಮನಸ್ಸಿನ ತುಂಬ ಹೂಗಳೇ ತುಂಬಿಕೊಂಡಿದ್ದವು.

❖

ಮುನ್ನೋಟ 05-09-2021 ರಿಂದ 11-09-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**

ಸ್ವಯಂ ಉದ್ಯೋಗದ ಬಗ್ಗೆ ಸಾಕಷ್ಟು ಚಿಂತನೆ ನಡೆಸಿ ದಿಟ್ಟ ನಿರ್ಧಾರವನ್ನು ತೆಗೆದುಕೊಳ್ಳುವಿರಿ. ಹತ್ತಿರದ ಬಂಧುಗಳಿಂದ ಸೂಕ್ತ ಸಲಹೆಗಳು ದೊರೆಯುತ್ತವೆ. ಹಣಕಾಸಿನ ವಿಷಯದಲ್ಲಿ ಎಚ್ಚರಿಕೆ ಇರಲಿ. ಸರ್ಕಾರಿ ನೌಕರಿಯಲ್ಲಿ ಇರುವವರಿಗೆ ಪ್ರಗತಿಯ ಹಾದಿ ತೆರೆಯುತ್ತದೆ. ಬಹಳ ಚಿಂತಿಸುತ್ತಿದ್ದ ನಿಮಗೆ ಮನಸ್ಸಿಗೆ ಮುದ ನೀಡುವ ಒಂದು ಮಾರ್ಗ ಗೋಚರಿಸುತ್ತದೆ. ವ್ಯಾಪಾರಸ್ಥರಿಗೆ ಲಾಭ ಹೆಚ್ಚುತ್ತದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**

ಕುಟುಂಬದಲ್ಲಿನ ಕ್ಲಿಷ್ಟ ಸಮಸ್ಯೆಗಳನ್ನು ಜಾಣ್ಮೆಯಿಂದ ಬಗೆಹರಿಸಿಕೊಂಡು ಹಿರಿಯರಿಂದ ಮೆಚ್ಚುಗೆ ಗಳಿಸುವಿರಿ. ಸಂಬಂಧವಿಲ್ಲದ ವಿಷಯಗಳಲ್ಲಿ ತಲೆಹಾಕಿ ಗೊಂದಲಕ್ಕೆ ಸಿಲುಕಿಕೊಳ್ಳುವ ಸಾಧ್ಯತೆ ಇದೆ, ಎಚ್ಚರವಾಗಿರಿ. ಉದ್ಯಮವನ್ನು ವಿಸ್ತರಿಸಲು ಅನುಮತಿಗಾಗಿ ಕಾಯುತ್ತಿದ್ದವರಿಗೆ ಈಗ ಅನುಮತಿ ದೊರೆಯುತ್ತದೆ. ಇದಕ್ಕಾಗಿ ಸೂಕ್ತ ತಯಾರಿಯನ್ನು ಮಾಡಿಕೊಳ್ಳುವುದು ಉತ್ತಮ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**

ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಸಿಗುವ ಎಲ್ಲಾ ಸಾಧ್ಯತೆ ಇದೆ. ಉನ್ನತ ಹುದ್ದೆಯಲ್ಲಿರುವವರ ವಿರುದ್ಧ ಸಹೋದ್ಯೋಗಿಗಳು ಪಿತೂರಿ ಮಾಡಬಹುದು. ಈ ಬಗ್ಗೆ ಎಚ್ಚರವಹಿಸಿರಿ. ಕುಟುಂಬದಲ್ಲಿ ಕಾವೇರಿದ ಮಾತುಗಳಾದರೂ ನಂತರ ಎಲ್ಲಾ ತಿಳಿಯಾಗುವುದು. ವಿದೇಶದಲ್ಲಿ ಉದ್ಯೋಗದಲ್ಲಿರುವವರಿಗೆ ಪ್ರಮುಖ ಸುದ್ದಿ ದೊರೆತು ಸಂತಸವಾಗುವುದು. ರೇಷ್ಮೆ ನೂಲು ತೆಗೆಯುವವರ ವ್ಯವಹಾರ ವಿಸ್ತರಿಸುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**

ಉದ್ಯೋಗದಲ್ಲಿ ಮಹತ್ತರ ಬದಲಾವಣೆಯ ವಿಚಾರವಾಗಿ ಹಿರಿಯ ಅಧಿಕಾರಿಗಳೊಡನೆ ಚರ್ಚೆ ಮಾಡುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಾಯ ಒದಗಿಬರುತ್ತದೆ. ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಉತ್ತಮ ಬೆಳೆ ಪಡೆಯುವ ಯೋಗವಿದೆ. ಮಕ್ಕಳ ದುಂದುವೆಚ್ಚಗಳಿಗಾಗಿ ಹಣ ಕೊಡಬೇಕಾಗಬಹುದು. ವಿದೇಶದಲ್ಲಿ ಓದಬೇಕೆನ್ನುವವರಿಗೆ ಅವಕಾಶಗಳು ಸಿಗುವ ಸಾಧ್ಯತೆಗಳಿವೆ.

ಸಿಂಹ — **ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**

ಕಲಾವಿದರುಗಳಿಗೆ ಹೆಚ್ಚಿನ ಸ್ಥಾನಮಾನದ ಜೊತೆಗೆ ಆದಾಯವೂ ಬರುತ್ತದೆ. ನಿಮ್ಮ ಕೈ ಕೆಳಗಿನ ಕೆಲಸಗಾರರ ಕೆಲಸದಲ್ಲಿ ನಂಬಿಕೆಯ ಕೊರತೆಯನ್ನು ಕಾಣಬಹುದು. ವೈಯಕ್ತಿಕ ಜೀವನದಲ್ಲಿ ಸ್ವಲ್ಪ ಅಭಿವೃದ್ಧಿಯನ್ನು ಕಾಣಬಹುದು. ಕೃಷಿ ಬೀಜ ಉತ್ಪಾದಕರಿಗೆ ಉತ್ತಮ ಮಾರುಕಟ್ಟೆ ದೊರೆಯುತ್ತದೆ. ಧನಾದಾಯವು ಪ್ರಗತಿಯಲ್ಲಿರುತ್ತದೆ. ಮಕ್ಕಳ ಬಗ್ಗೆ ಹಿತನುಡಿಗಳನ್ನು ಕೇಳಬಹುದು.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**

ಆತ್ಮಾಭಿಮಾನ ಹೆಚ್ಚಾಗಿ ಇರುತ್ತದೆ. ಅನವಶ್ಯಕ ಆಲಸ್ಯ ನಿಮ್ಮನ್ನು ಕಾಡಬಹುದು. ಹಣದ ಒಳಹರಿವು ಸಾಮಾನ್ಯವಾಗಿದ್ದರೂ ಖರ್ಚು ಹೆಚ್ಚಾಗಿರುತ್ತದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಹಿನ್ನಡೆ ಆಗಬಹುದು. ಸಂಗಾತಿಯ ದುಂದುವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನ ಪಡುವಿರಿ. ವಿದೇಶಿ ಆಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರ ವಿಸ್ತರಿಸುತ್ತದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**

ಹಿತೈಷಿಗಳನ್ನು ಭೇಟಿ ಮಾಡುವ ಸಾಧ್ಯತೆಗಳಿವೆ. ಕೆಲವು ಸ್ಥಾನಮಾನಗಳಿಗಾಗಿ ಒಳಸಂಚನ್ನು ಮಾಡುವಿರಿ ಹಾಗೂ ಅದರಲ್ಲಿ ಅರ್ಧ ಯಶಸ್ಸನ್ನು ಕಾಣುವಿರಿ. ಯೋಜನಾ ಜಾರಿ ವಿಭಾಗದಲ್ಲಿ ಇರುವವರಿಗೆ ಹೊಸ ಯೋಜನೆಯೊಂದನ್ನು ಕಾರ್ಯಗತ ಮಾಡುವ ಜವಾಬ್ದಾರಿ ಹೆಗಲೇರುತ್ತದೆ. ಹಣ್ಣುಗಳನ್ನು ರಫ್ತು ಮಾಡುವವರಿಗೆ ಹೊಸ ರೂಪದ ಅವಕಾಶವೊಂದು ತೆರೆದುಕೊಳ್ಳುತ್ತದೆ.

ವೃಶ್ಚಿಕ — **ವಿಶಾಖೆ 4 ಅನೂರಾಧ, ಜ್ಯೇಷ್ಠ**

ಸಾಮಾಜಿಕ ಚಟುವಟಿಕೆಗಳು ನಿರೀಕ್ಷೆಯಂತೆ ನಡೆಯುತ್ತವೆ. ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸುವವರಿಗೆ ಕೆಲವೊಂದು ಅವಕಾಶಗಳು ತೆರೆದುಕೊಳ್ಳುತ್ತವೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಸಾಕಷ್ಟು ಪ್ರಗತಿ ಇರುತ್ತದೆ. ಸರ್ಕಾರದಿಂದ ನಿಮಗೆ ಆಗಬೇಕಾದ ಕೆಲಸಗಳು ಸರಾಗವಾಗಿ ಆಗುತ್ತವೆ.

ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**

ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸ್ಪಷ್ಟ ನಿಲುವುಗಳನ್ನು ತಳೆಯುವುದರಿಂದ ಸರಾಗವಾಗಿ ಕಾರ್ಯಗಳು ನೆರವೇರುತ್ತವೆ. ಭಾಷಾ ಸಂಶೋಧಕರಿಗೆ ಉತ್ತಮ ಸೌಕರ್ಯ ಮತ್ತು ಭಾಷಾ ಸರಕುಗಳು ದೊರೆತು ಸಂಶೋಧನಾ ಕೆಲಸಕ್ಕೆ ಅನುಕೂಲವಾಗುತ್ತದೆ. ಕೆಲವರೊಂದಿಗೆ ವ್ಯವಹಾರದಲ್ಲಿ ಅತಿಯಾದ ಸ್ನೇಹ ಸಂಬಂಧ ವೃದ್ಧಿಸುವ ಸಾಧ್ಯತೆಗಳಿವೆ. ಮೂಳೆಯ ತೊಂದರೆ ಇರುವವರು ಚಿಕಿತ್ಸೆ ಪಡೆಯಿರಿ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**

ಕಾರ್ಯದೊತ್ತಡದಿಂದಾಗಿ ದೇಹಕ್ಕೆ ಆಯಾಸ ಎನಿಸಬಹುದು. ಸ್ವಲ್ಪ ವಿಶ್ರಾಂತಿ ಅಗತ್ಯ. ಪ್ರೀತಿಪಾತ್ರರೊಂದಿಗೆ ಸಮಯ ಕಳೆಯುವುದರಿಂದ ನಿಮ್ಮ ಒತ್ತಡ ಕಡಿಮೆಯಾಗುತ್ತದೆ. ಮನರಂಜನಾ ಕಾರ್ಯಗಳನ್ನು ಆಯೋಜಿಸುವವರಿಗೆ ಬೇಡಿಕೆ ಹೆಚ್ಚಾಗುತ್ತದೆ. ವಿದೇಶದಲ್ಲಿರುವ ಮಕ್ಕಳಿಂದ ಸಂತಸದ ವಾರ್ತೆ ಕೇಳಬಹುದು. ಭೂ ವ್ಯವಹಾರವನ್ನು ಮಾಡುವವರಿಗೆ ಲಾಭ ಹೆಚ್ಚುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**

ಮಹಿಳಾ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ದೊರೆಯುವ ಸಾಧ್ಯತೆ ಇದೆ. ನಿಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಂಡು ಲಾಭ ಪಡೆಯುವವರು ಇದ್ದಾರೆ. ಅವರ ಬಗ್ಗೆ ಎಚ್ಚರ ವಹಿಸಿರಿ. ಸಂಗಾತಿಯ ಸೂಕ್ತ ಸಹಕಾರದಿಂದ ಸಂಸಾರದಲ್ಲಿ ನೆಮ್ಮದಿ ಇರುತ್ತದೆ. ನಿರೀಕ್ಷಿತ ಮೂಲದಿಂದ ಧನಸಹಾಯ ಒದಗುವ ಸಾಧ್ಯತೆಗಳಿವೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**

ವಾಹನ ವಹಿವಾಟು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಉದ್ಯೋಗ ಕ್ಷೇತ್ರದಲ್ಲಿ ಪ್ರಗತಿಯನ್ನು ಕಾಣಬಹುದು. ಯಾವುದೋ ಸತ್ಯವನ್ನು ಬಯಲುಗೊಳಿಸಲು ಹೋಗಿ ನೀವೇ ಸಿಕ್ಕಿಹಾಕಿಕೊಳ್ಳುವ ಸಂದರ್ಭವಿದೆ ಎಚ್ಚರ. ಇತರರ ಬಗ್ಗೆ ಅನವಶ್ಯಕವಾಗಿ ಮಾತನಾಡಿ ಸಿಕ್ಕಿಹಾಕಿಕೊಳ್ಳುವ ಸಂದರ್ಭವಿದೆ.

ಪದಬಂಧ 2703



ಮೇಲಿನಿಂದ ಕೆಳಕ್ಕೆ

1. ಭಕ್ತಿ ಗೌರವಗಳಿಗೆ ಪಾತ್ರನಾದವ 4
2. ಸಂಪಿಗೆ ಹೂಗಳಿಂದ ಅಲಂಕೃತನಾದ ಸ್ವಾಮಿಯ ಕ್ಷೇತ್ರ 5
3. ಹುಡುಗನಿಗೆ ಬೆಳೆದ ಲಾಂಗೂಲ 2
4. ಉತ್ತರಭಾರತದಲ್ಲಿ ಬಲಿಯಾಗುವ ಪ್ರಾಣಿ 3
5. ಸರೋವರವಾಗಿ ಹರಿವ ಮನಸ್ಸು 3
7. ಕೊನೆಯಲ್ಲಿ ಹುಟ್ಟಿದವ 3
9. ಆರಾಧನೆಗೆ ಹೆಸರಾದ ಪಂಚರತ್ನಗಳ ಕೃತಿಕಾರ 4
10. ಸರ್ಕಾರಿ ಕೆಲಸಗಳನ್ನು ಸಮಯಕ್ಕೆ ಅನುವು ಮಾಡಿದ ಯೋಜನೆ 3
11. ಮಹಾನಗರಗಳ ಸ್ವಚ್ಛತೆಗೆ ಸವಾಲಾಗಿರುವ ತ್ಯಾಜ್ಯದ ಗುಂಪು 4
13. ಕುರುಡಾದ ಮಾನವ 3
16. ಹಣ್ಣಾಗದ ಕಾಯಿ ಮುಖ ಗಂಟಿಕ್ಕಿದೆ 3
18. ಕಷ್ಟ ಕಾರ್ಪಣ್ಯಗಳನ್ನು ನಾಶಗೊಳಿಸುವವ 5
20. ಅಕ್ಕ ಬಸವ ಅಲ್ಲಮರು ನೀಡಿದ ನುಡಿ 3
21. ಹಾದಿ ಬೀದಿಯಲ್ಲಿ ಮಳೆಗಾಲದಲ್ಲಿ ನೀರು ತುಂಬಿಕೊಳ್ಳುವ ತಗ್ಗು ಪ್ರದೇಶಗಳು 4
22. ಕಾವೇರಿಯ ಉಗಮಸ್ಥಾನದ ಜಿಲ್ಲೆ 3
24. ದೊರೆಯಬಹುದಾದ ಅಪಾರ ದ್ರವ್ಯ 2

ಎಡದಿಂದ ಬಲಕ್ಕೆ

1. ಹದಿನೈದು ದಿನಗಳಿಗೊಮ್ಮೆ ಬಾನನ್ನು ಅಲಂಕರಿಸುವ ಸಂಪೂರ್ಣ ಚಂದಿರ 4
3. ಶುಭ ಸಮಾರಂಭಗಳಲ್ಲಿ ಬಾಗಿಲಿಗೆ ಕಟ್ಟುವ ಕದಳಿ 4
5. ವರಸೆಯಲ್ಲಿ ಕೃಷ್ಣನಿಗೆ ಕಂಸ ಹೀಗೆ 3
6. ವಿವಾಹದಲ್ಲಿ ಹೆಣ್ಣು ಹೆತ್ತವರು ವರನಿಗೆ ನೀಡುವ ಕೊಡುಗೆ 4
7. ಆಕಾಶಕ್ಕೆ ಹೋಲಿದ ಬಟ್ಟೆ 3
8. ನಿಜ ಸುಳ್ಳುಗಳು ಒಟ್ಟಿಗೆ ಸೇರಿದೆ 4
10. ಎಲ್ಲವನ್ನೂ ಪರಿಗಣಿಸಿದ್ದು 4
12. ಎಲ್ಲರಿಗೂ ತಂದೆಯಾದ ಸೀತಾ ಪಿತ 3
14. ಆಶ್ರಯ ಕೊಡುವ ಮರಳು ಭೂಮಿ 3
15. ಹಣೆಗೆ ಹಚ್ಚಿದ ನಾಮ 3
17. ಕೃಷ್ಣನಿಂದ ಇಬ್ಭಾಗವಾದ ರಾಜ 4
19. ಯಾವಾಗಲೂ ಈಶ್ವರ ಈಶ್ವರನೇ 4
22. ಕೊರಡಿನ ಚಿಗುರು 3
23. ಎಲ್ಲರೂ ಒಟ್ಟಿಗೆ ಸೇರಿ ಮಾಡುವ ‘ಟೀ ಪಾರ್ಟಿ’ 4
24. ಯೋಚಿಸಿ ಹಾಕುವ ನಡಿಗೆಯ ಗತಿ 3
25. ಅಕಾರ ಉಕಾರ ಸೇರಿ ಎಕಾರವಾಗುವ ವ್ಯಾಕರಣ ಕ್ರಿಯೆ 4
26. ಕತ್ತಿನ ಆಭರಣವನ್ನು ದೋಚುವವ 4

ಪದಬಂಧ ಉತ್ತರ -2702

ಮೇಲಿಂದ ಕೆಳಕ್ಕೆ

1. ಸಮ್ಮಿಶ್ರ 2.ರಕ್ಕಸ 3.ಕಲ್ಯಾಣಿ 4.ತಬ್ಬಲಿ 6.ಮಕರ 8.ಹಾದರ 9.ವಾಮನ 10.ಉದ್ಯಾನ 11.ಹನುಮ 12ಕರಮ 14.ರಮಣ 15.ವರಾಹ 17.ನುಸುಳು 18.ತಡವಿ 19.ಹವನ 20 ಗ್ರಹಣ 21.ಹಾರಂಗಿ 22.ಸನ್ಮಾನ 23.ಸುಜಯ 25.ಕಠಿನ

ಎಡದಿಂದ ಬಲಕ್ಕೆ

1.ಸವಿಸ್ತಾರ 3.ಕರಗತ 5.ಶ್ರಮ 7.ಸಹಾಯವಾಣಿ 10.ಉಲಿ 11.ಹರಶಂಕರ 13.ನರಮಾನವ 16.ಮನುಜಮತ 19.ಹಣಸಂಗ್ರಹ 21.ಹಾಲು 22.ಸವಿಗನಸು 24.ಕಣ 26.ಗಿರಿವನ 27.ಯಮಸ್ಥಾನ

ತೊಗಲಿನ ಹೊದಿಕೆ ಒಳಗಿನ ವಿಸ್ಮಯ

ಎಸ್. ರವಿಪ್ರಕಾಶ್

ಒಳನೋಟ

ಸದಾ ಬಾಹ್ಯಮುಖಿಯಾಗಿ ವ್ಯವಹರಿಸುವ ಮಾನವನಿಗೆ ತನ್ನ ದೇಹದೊಳಗಿನ ಅದ್ಭುತ ‘ಬ್ರಹ್ಮಾಂಡ’ವನ್ನು ಇಣುಕಿ ನೋಡುವ ಮತ್ತು ಅದರ ‘ಅರಿವು’ ಪಡೆಯುವ ಜ್ಞಾನ ಸಿದ್ಧಿಸಿಲ್ಲ ಅಥವಾ ಅದರ ವ್ಯವಧಾನವೂ ಇಲ್ಲ. ತೊಗಲಿನ ಹೊದಿಕೆಯನ್ನು ಹೊದ್ದ ಮೂಳೆ, ಮಾಂಸ, ನರ-ನಾಡಿಗಳು, ರಕ್ತಗಳಿಂದ ಕೂಡಿದ ದೇಹದ ಬಾಹ್ಯ ಚೆಲುವು, ತ್ವಚೆ, ಸೌಷ್ಟವದ ಬಗ್ಗೆಯಷ್ಟೇ ಅಭಿಮಾನ ಇಲ್ಲವೇ ಕೀಳರಿಮೆ ಬೆಳೆಸಿಕೊಂಡಿರುತ್ತಾನೆ. ಆದರೆ, ಇದರ ಒಳಗೊಂದು ವಿಸ್ಮಯದಿಂದ ಕೂಡಿದ ಭವ್ಯ ವಿಶ್ವವೇ ಅಡಗಿರುವುದು ಗೊತ್ತಿಲ್ಲ. ಮಾನವ ತನ್ನ ದೇಹದ ಬಗ್ಗೆ ಅರಿವು ಮೂಡಿಸಿಕೊಳ್ಳುತ್ತಾ ಹೋದಲ್ಲಿ, ಆತನ ಚಿಂತನಾ ವಿಧಾನ ಬೇರೆಯದೇ ಆಯಾಮಕ್ಕೆ ವಿಸ್ತರಿಸಬಲ್ಲದು. ಆತ ಸಹಜೀವಿಗಳೊಂದಿಗೆ ವ್ಯವಹರಿಸುವ ರೀತಿಯೇ ಬೇರೆಯದಾಗಲೂಬಹುದು.

ದೇಹವೆಂದರೆ ಕೇವಲ ನರ-ನಾಡಿ, ರಕ್ತ-ಮಾಂಸ, ಯೋಚನೆ, ತಲೆ ಬೇನೆಗಳ ಮೂಟೆಯಲ್ಲ. ಅದು ವೈದ್ಯ ವಿಜ್ಞಾನ, ಭೌತ ವಿಜ್ಞಾನ, ಮೆಕ್ಯಾನಿಕ್ಸ್, ರಸಾಯನ ವಿಜ್ಞಾನ, ಗಡಿಯಾರ, ಪ್ರಕೃತಿ ಹೀಗೆ ವಿಜ್ಞಾನ ಮತ್ತು ಗಣಿತಗಳ ಸಂಯೋಜಿತ ಸುಸಂಬದ್ಧ ಮೊತ್ತ. ಅಲ್ಲಿ ವಿದ್ಯುತ್ ಪ್ರವಾಹವಿರುತ್ತದೆ. ವಿವಿಧ ಕೋಶಗಳ ಮಧ್ಯೆ ಸಂವಹನ ನಡೆಯುತ್ತದೆ. ಎಲ್ಲವೂ ಅಚ್ಚುಕಟ್ಟು ಮತ್ತು ಶಿಸ್ತುಬದ್ಧ. ಒಂದು ಸಿಗ್ನಲ್ ತಪ್ಪಾದರೆ, ವಿದ್ಯುತ್ ಸರ್ಕಿಟ್‌ನಲ್ಲಿ ವ್ಯತ್ಯಾಸವಾದರೆ, ನಿಗದಿತ ಪ್ರಮಾಣಕ್ಕಿಂತ ಹೆಚ್ಚು ರಾಸಾಯನಿಕ ಸ್ರವಿಸಿದರೆ ಎಲ್ಲವೂ ಅಸ್ತವ್ಯಸ್ತ! ಹೀಗೆ ಇಡೀ ದೇಹವನ್ನು ಬಿಡಿ ಬಿಡಿಯಾಗಿ, ಅದರ ಒಳಲೋಕವನ್ನು ಹೊಕ್ಕು ಮನ ಮುಟ್ಟುವಂತೆ ಅನಾವರಣಗೊಳಿಸುತ್ತಾ ಸಾಗುವ ಮತ್ತು ಸೋಜಿಗ ಹುಟ್ಟಿಸುವ ಕೃತಿಯೇ ‘ನಮ್ಮ ದೇಹದ ವಿಜ್ಞಾನ’. ಮಾನವ ದೇಹದ ಕುರಿತ 40 ಲೇಖನಗಳ ಸಚಿತ್ರ ಸಂಪುಟವನ್ನು ಡಾ.ಟಿ.ಆರ್.ಅನಂತರಾಮು ಮತ್ತು ಡಾ.ನಾ.ಸೋಮೇಶ್ವರ ಸಂಪಾದಿಸಿದ್ದಾರೆ.



ಪು: 554
₹1,500

ನಮ್ಮ ದೇಹದ ವಿಜ್ಞಾನ
ಸಂಪಾದಕರು: ಡಾ.ಟಿ.ಆರ್. ಅನಂತರಾಮು, ಡಾ.ನಾ.ಸೋಮೇಶ್ವರ
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080-22161900

ಧರೆಯ ಸಕಲ ಚರಾಚರ ವಸ್ತುಗಳಿಗೂ ನಮ್ಮ ದೇಹಕ್ಕೂ ಮತ್ತು ನಮ್ಮನ್ನು ಒಡಲಲ್ಲಿ ಹುದುಗಿಸಿಕೊಂಡಿರುವ ವಿಶ್ವಕ್ಕೂ ವ್ಯತ್ಯಾಸವಿಲ್ಲ. ‘ಇಡೀ ವಿಶ್ವವೇ ಪರಮಾಣುಗಳಿಂದ ಆಗಿದೆ. ಈ ವಿಶ್ವವನ್ನು 92 ಪರಮಾಣುಗಳು ರೂಪಿಸಿದ್ದರೆ, ನಮ್ಮ ದೇಹವನ್ನು 60 ಪರಮಾಣುಗಳು ನಿರ್ಮಿಸಿವೆ. ವಿಶ್ವವು ರೂಪುಗೊಂಡ ಸಂದರ್ಭದಲ್ಲಿ ಎಲ್ಲ ಪರಮಾಣುಗಳೂ ಅಂತರಿಕ್ಷದಲ್ಲಿ ತೇಲುತ್ತಿದ್ದವು. ಹೀಗೆ ತೇಲುತ್ತಿದ್ದ ಪರಮಾಣುಗಳಲ್ಲಿ ಆಕ್ಸಿಜನ್, ಕಾರ್ಬನ್, ಹೈಡ್ರೋಜನ್ ಮತ್ತು ನೈಟ್ರೋಜನ್ ಪ್ರಮುಖವಾದವು. ಆದಿ ಅಂತರಿಕ್ಷದಲ್ಲಿ ಸಿಡಿಲು ಹೊಡೆಯಿತು. ಆಗ ಹೊಮ್ಮಿದ ಅಗಾಧ ಶಾಖದಲ್ಲಿ ಪರಮಾಣುಗಳು ವಿವಿಧ ಕ್ರಮಗತಿಯಲ್ಲಿ ಸಂಯೋಜನೆಗೊಂಡವು. ಹೊಸ ಅಣುಗಳನ್ನು ಸೃಷ್ಟಿಸಿದವು’. ಈ ಹಂತದಲ್ಲಿ ಆದಿಜೀವಿಯ ಸೃಷ್ಟಿ ಆಗಿದ್ದು ಹೇಗೆ? ಈ ಮೂಲ ‘ಪುರುಷ’ನಿಂದಲೇ ಆರಂಭಿಸಿ ಈ ಕೃತಿಯ ಯಾನ ಆರಂಭವಾಗುತ್ತದೆ. ಶಾಲೆ ಮತ್ತು ಕಾಲೇಜು ಹಂತಗಳಲ್ಲಿ ಅತ್ಯಂತ ನೀರಸವೆಂದು ಭಾವಿಸಿ ಓದಿದ್ದ ಮಾನವ ದೇಹದ ಕುರಿತ ವಿಜ್ಞಾನದ ಪಾಠಗಳ ಮುಂದುವರೆದ ಮತ್ತು ಆಳವಾದ ತಿಳಿವಳಿಕೆಯನ್ನು ಈ ಕೃತಿ ಕಟ್ಟಿಕೊಡುತ್ತದೆ. ಕೌತುಕಭರಿತ ಬರಹಗಳು, ಅವಕ್ಕೆ ಪೂರಕವಾದ ಚಿತ್ರಗಳಿಂದ ಕೂಡಿದ ಈ ಹೊತ್ತಗೆ ಆಂಗ್ಲ ಭಾಷೆಯ ಯಾವುದೇ ವಿಜ್ಞಾನದ ಎನ್‌ಸೈಕ್ಲೊಪೀಡಿಯಾವನ್ನೂ ಸರಿಗಟ್ಟಬಲ್ಲ ಕೃತಿ.

ಮಾನವ ದೇಹದಲ್ಲಿ ಎಲ್ಲ ಅಂಗಾಂಗಗಳೂ ಬಹುಮುಖ್ಯವೇ ಆದರೂ ಅಗ್ರಪಟ್ಟ ಮಾತ್ರ ಮಿದುಳಿಗೆ. 87 ಲಕ್ಷ ಜೀವರಾಶಿಗಳಲ್ಲಿ ಮಾನವನನ್ನು ಭಿನ್ನವಾಗಿ ಮತ್ತು ಎತ್ತರದಲ್ಲಿ ನಿಲ್ಲಿಸುವುದು ಇದೇ ಕಾರಣಕ್ಕಾಗಿ. ಯೋಚಿಸುವ, ತರ್ಕಿಸುವ, ನಿರ್ಮಿಸುವ ಶಕ್ತಿ ಬಂದಿದ್ದೂ ಮಿದುಳಿನ ವಿಕಾಸದಿಂದಲೇ, ಹೀಗಾಗಿ ಭೂಮಿಯ ಏಳೂ ಅದ್ಭುತಗಳಿಗಿಂತ ಮಿಗಿಲಾದ ಅದ್ಭುತವೆಂದರೆ, ಆ ಏಳೂ ಅದ್ಭುತಗಳನ್ನು ಸೃಷ್ಟಿಸಿದ ಮಾನವ ಮಿದುಳು. ‘ಸೂಪರ್ ಕಂಪ್ಯೂಟರ್’ ಮನುಷ್ಯ ಮಿದುಳಿಗಿಂತಲೂ ಅದ್ಭುತ ರಚನೆ ಎನ್ನುತ್ತಾರೆ. ಆದರೆ, ಮಾನವ ಮಿದುಳು ಸೂಪರ್ ಕಂಪ್ಯೂಟರ್‌ಗೂ ಸಾಟಿಯಿಲ್ಲದ ಸೂಪರ್ ಕಂಪ್ಯೂಟರ್. ಇದನ್ನು ಮನದಟ್ಟು ಮಾಡಿಕೊಂಡರೆ ಮಿದುಳಿನ ವಿರಾಟ್ ರೂಪವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ಅದರ ಸಮಗ್ರ ವಿವರ ಇಲ್ಲಿದೆ.

ದೇಹದಲ್ಲಿ ಜೀವಕೋಶಗಳದ್ದೇ ಒಂದು ಅದ್ಭುತ ಜಗತ್ತು. ಅವು ಯಾವ ಅಥವಾ ಯಾರ ಆಳ್ವಿಕೆಗೂ ಒಳಪಡುವುದಿಲ್ಲ. ಅವು ಸರ್ವಸ್ವತಂತ್ರ. ಈ ಜೀವಕೋಶಗಳು ಪರಸ್ಪರ ಸಂವಹನ ನಡೆಸುತ್ತವೆ. ಸ್ವಯಂ ನಿರ್ಧಾರಗಳನ್ನು ಕೈಗೊಳ್ಳುತ್ತವೆ. ಆ ವ್ಯಕ್ತಿ ಜಗತ್ತಿಗೇ ಸರ್ವಾಧಿಕಾರಿಯಾಗಿದ್ದರೂ ಆತನ ದೇಹದ ಕೋಶಗಳಿಗೆ ಯಾವತ್ತಿಗೂ ಆತ ಒಡೆಯನಾಗಲು ಸಾಧ್ಯವಿಲ್ಲ. ದೇಹವೆಂದರೆ ಅದೊಂದು ಸುವ್ಯವಸ್ಥಿತ ಜೈವಿಕ ಕ್ರಿಯೆಯ ಜಾಲ. ಇದರ ರಕ್ಷಣೆಗೆ ಒಂದು ಸೇನಾ ಪಡೆಯೇ ಇದೆ. ಅದೂ ಬೇರೇನೂ ಅಲ್ಲ, ರೋಗ ನಿರೋಧಕ ವ್ಯವಸ್ಥೆ. ಇವುಗಳಲ್ಲಿ ಎರಡು ವಿಧ. ಒಂದು ಜನ್ಮದತ್ತ ರೋಗರಕ್ಷಣಾ ವ್ಯವಸ್ಥೆ, ಇದು ಪಿತ್ರಾರ್ಜಿತ ಆಸ್ತಿಯಂತೆ. ಇನ್ನೊಂದು ಸ್ವಯಾರ್ಜಿತ ರಕ್ಷಣಾ ವ್ಯವಸ್ಥೆ. ಈ ರಕ್ಷಣೆಯನ್ನು ಪ್ರತಿಯೊಬ್ಬ ವ್ಯಕ್ತಿಯೂ ಸ್ವಪ್ರಯತ್ನದಿಂದ ಗಳಿಸಿಕೊಳ್ಳಬೇಕಾಗುತ್ತದೆ. ಇಂತಹ ಮಾಹಿತಿ ಈ ಕೃತಿಯಲ್ಲಿ ಸಿಕ್ಕುತ್ತದೆ.

ಇನ್ನು ರಸಾಯನ ವಿಭಾಗಕ್ಕೆ ಬಂದರೆ, ಇಡೀ ದೇಹವೇ ರಾಸಾಯನಿಕಗಳ ಸಾಗರ. ಪ್ರೀತಿ, ಕೋಪ, ಅಸೂಯೆ ಸೇರಿದಂತೆ ‘ನವರಸ’ಗಳಿಗೂ ಕೆಮಿಸ್ಟ್ರಿಯೇ ಬಾಸು! ಮನೆಯಲ್ಲಿ ಗಂಡ-ಹೆಂಡತಿಯ ಕದನದಿಂದ ಹಿಡಿದು ಜಾಗತಿಕ ಯುದ್ಧದವರೆಗೆ, ಈಗಿನ ಭಯೋತ್ಪಾದನೆ, ಮತಾಂಧತೆ, ವಿವಿಧ ರೀತಿಯ ‘ಸಂಘರ್ಷ’ಗಳಿಗೆ ಮಾನವ ಮಿದುಳಿನ ಅಖಾಡದಲ್ಲಿ ನಡೆಯುವ ರಾಸಾಯನಿಕಗಳ ಘೋರ ಮಥನವೇ ಕಾರಣ. ಅದೇ ರೀತಿ ಜಗತ್ತಿಗೆ ಶಾಂತಿ, ಪ್ರೀತಿ ಮತ್ತು ಅಹಿಂಸೆಯ ಅನುಭೂತಿ ನೀಡಿದ ಬುದ್ಧನ ‘ಸಾಕ್ಷಾತ್ಕಾರ’ಕ್ಕೂ ಮಿದುಳಿನ ರಾಸಾಯನಿಕವೇ ಕಾರಣ. ಶಾಂತಿ-ಕ್ರಾಂತಿ ಇವೆರಡಕ್ಕೂ ಕಾರಣವಾಗುವ ರಾಸಾಯನಿಕಗಳು ಅಕ್ಕಪಕ್ಕದಲ್ಲೇ ಇವೆ. ಅಂದರೆ ಮಿದುಳಿನಲ್ಲೇ! ಆಯ್ಕೆ ಮಾತ್ರ ನಮ್ಮದು. ಮಾನವ ದೇಹ ನೋಡಲು ಒಂದೇ ಎನಿಸಿದರೂ ಡಿಎನ್‌ಎ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಇದನ್ನು ಆಧರಿಸಿ, ಎತ್ತರ, ಬಣ್ಣ, ಕೂದಲು ಸೇರಿಯೇ ‘ವ್ಯಕ್ತಿತ್ವ’ ರೂಪುಗೊಳ್ಳುತ್ತದೆ. ಹೀಗಾಗಿ ವ್ಯಕ್ತಿತ್ವ, ಬುದ್ಧಿಮತ್ತೆ ಭಿನ್ನವಾಗಿರುತ್ತವೆ. ಕೊನೇ ಅಧ್ಯಾಯ ‘ಪ್ರಕೃತಿ ಎಡವಿದ್ದೆಲ್ಲಿ’ ಹಲವು ಪ್ರಶ್ನೆಗಳಿಗೆ ಕಾರಣವಾಗುತ್ತದೆ. ಪ್ರಕೃತಿ ಎಲ್ಲ ಮನುಷ್ಯರನ್ನು ಅಥವಾ ಜೀವಿಗಳನ್ನು ‘ಪರಿಪೂರ್ಣ’ವಾಗಿ ದೋಷರಹಿತವಾಗಿ ಸೃಷ್ಟಿಸುವಂತಾದರೆ, ಪ್ರಕೃತಿ ಎನ್ನಲು ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ.

ಪ್ರತಿಯೊಂದು ಜ್ಞಾನಶಿಸ್ತಿನ ವಿದ್ಯಾರ್ಥಿಯೂ ಓದಿ ಮತ್ತು ಸಂಗ್ರಹಿಸಿಟ್ಟುಕೊಳ್ಳಬೇಕಾದ ಕೃತಿ ಇದಾಗಿದೆ. ಕನ್ನಡ ಮಾಧ್ಯಮದಲ್ಲಿ ವೈದ್ಯ ವಿಜ್ಞಾನ ಅಥವಾ ಎಂಜಿನಿಯರಿಂಗ್ ಪಠ್ಯ ತಯಾರಿಸುವುದು ಕಷ್ಟ ಎಂದು ಮೂಗು ಮುರಿಯುವವರಿಗೆ, ‘ನಮ್ಮ ದೇಹದ ವಿಜ್ಞಾನ’ ದಿಟ್ಟ ಉತ್ತರವಾಗಿದೆ.

❖

ಬಿ.ಆರ್. ಲಕ್ಷ್ಮಣರಾವ್

‘ಗೋಪಿ ಮತ್ತು ಗಾಂಡಲೀನ’ ಕನ್ನಡ ಕಾವ್ಯ ಪರಂಪರೆಯ ಒಂದು ತುಂಟ ಅಧ್ಯಾಯ. 1971ರಲ್ಲಿ ಪ್ರಕಟವಾದ ಗೋಪಿ ಕಾವ್ಯದ ಸಂಕಲನಕ್ಕೀಗ ಐವತ್ತು ವರ್ಷ. ಕವಿಗೆ ಎಪ್ಪತ್ತೈದರ ಮಾಯದ ಪ್ರಾಯ (ಸೆ. 9, 1946). ಈ ಯುಗಳ ಸಂಭ್ರಮದ ನೆಪದಲ್ಲಿ ಕವಿಯತ್ತ ಹೊರಳುನೋಟ, ಕಾವ್ಯದ ಇಣುಕುನೋಟ.

ಚಿಂತಾಮಣಿಯಲ್ಲಿ ಬೆಳಗಿದ ಮುಖ

ಮಹತಿ

‘ಪ್ರತೀ ಮುಖದ ಹಿಂದೆ ಒಂದೊಂದು ಅಪ್ರತಿಮ ಲೋಕ.’ ವ್ಯಕ್ತಿ ಮತ್ತು ವ್ಯಕ್ತಿತ್ವದ ಚೆಲುವು ಹಾಗೂ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ, ಗೋಪಾಲಕೃಷ್ಣ ಅಡಿಗರ ‘ಚಿಂತಾಮಣಿಯಲ್ಲಿ ಕಂಡ ಮುಖ’ ಕವಿತೆಯ ಈ ಸಾಲು ಸನ್ನೆಗೋಲಿನಂತೆ ಒದಗಿಬರುವಂತಹದ್ದು. ಈ ಸಾಲನ್ನು ಕನ್ನಡಿಯಾಗಿಸಿಕೊಂಡು ಕವಿ ಬಿ.ಆರ್. ಲಕ್ಷ್ಮಣರಾವ್ ಅವರಿಗೆ ಹಿಡಿದರೆ ಕಾಣಿಸುವ ‘ಅಪ್ರತಿಮ ಲೋಕ’ ಎಂತಹದ್ದು?

‘ಚಿಂತಾಮಣಿಯಲ್ಲಿ ಕಂಡ ಮುಖ’ ಕವಿತೆಯೊಂದಿಗೆ ಬಿಆರ್‌ಎಲ್ ಅವರನ್ನು ನೆನಪಿಸಿಕೊಳ್ಳಲಿಕ್ಕೆ ಕಾರಣವಿದೆ. ಬೇಡಿದ್ದೆಲ್ಲ ಕೊಡುವ ಸುರಮಣಿಗೆ ‘ಚಿಂತಾಮಣಿ’ ಎನ್ನುವರಷ್ಟೆ. ಚಿಂತಾಮಣಿ ಎನ್ನುವ ಊರು ಕವಿಯ ಪಾಲಿಗೆ ಸುರಮಣಿಯೇ. ಕವಿ ಮತ್ತು ಕವಿತೆಗೆ ಚಿಂತಾಮಣಿ ಜೀವದ್ರವ್ಯವಾಯಿತು. ಕವಿಯನ್ನು ಹುಡುಕಿಕೊಂಡು ನಾಡಿನ ಖ್ಯಾತನಾಮರು ಚಿಂತಾಮಣಿಗೆ ಬರುವ ಮೂಲಕ ಊರಿನ ವರ್ಚಸ್ಸು ಹೆಚ್ಚಾಯಿತು. ಊರಿನಿಂದ ಕವಿಗೆ ಖ್ಯಾತಿ, ಕವಿಯಿಂದ ಊರಿಗೆ ಕೀರ್ತಿ. ಹೈಸ್ಕೂಲು ಮೇಷ್ಟರಾಗಿ ಪಾಠ ಹೇಳಿದ್ದು, ಟ್ಯುಟೋರಿಯಲ್ ಕಟ್ಟಿದ್ದು ಚಿಂತಾಮಣಿಯಲ್ಲಿಯೇ. ಹ್ಞಾಂ, ಬಿಆರ್‌ಎಲ್ ಅವರಿಗೆ ಸಂದಿರುವ ಅಭಿನಂದನಾ ಗ್ರಂಥದ ಹೆಸರೂ ‘ಚಿಂತಾಮಣಿ.’ ಈ ನಂಟಿನ ಕಾರಣದಿಂದಾಗಿಯೇ ಚಿಂತಾಮಣಿ ಎಂದಕೂಡಲೇ ಬಿಆರ್‌ಎಲ್ ಎನ್ನುವ ಕವಿಯೂ ಅವರ ಕಾವ್ಯಚಿಂತಾಮಣಿಯೂ ಸಾಹಿತ್ಯ ವಿದ್ಯಾರ್ಥಿಗಳಿಗೆ ನೆನಪಾಗುವುದು ಸಹಜ. ಅಡಿಗರಿಗೆ ಚಿಂತಾಮಣಿಯಲ್ಲಿ ಕಂಡ ಮುಖ ಯಾವುದಾದರೂ, ಕನ್ನಡ ಕಾವ್ಯರಸಿಕರಿಗೆ ಚಿಂತಾಮಣಿ ಕಾಣಿಸಿರುವುದು ಬಿಆರ್‌ಎಲ್ ಅವರನ್ನೇ.

ಮತ್ತೆ ಅಪ್ರತಿಮಲೋಕದ ಮಾತಿಗೆ ಬರೋಣ. ಬಿಆರ್‌ಎಲ್ ಅವರ ಲೋಕ ಎಂತಹದ್ದು? ಅದನ್ನು ಕಾವ್ಯಲೋಕ ಹಾಗೂ ಸ್ನೇಹಲೋಕ ಎಂದು ಬೇರೆಯಾಗಿ ನೋಡಬಹುದೇನೊ.

ಬಿಆರ್‌ಎಲ್ ಅವರ ಕಾವ್ಯಲೋಕದಲ್ಲಿ ಇಣುಕುವ ಮುನ್ನ ಅವರ ಪೂರ್ವಾಪರದ ಪ್ರಾಥಮಿಕ ಸಂಗತಿಗಳನ್ನು ತಿಳಿಯಬೇಕು. ಅವರ ಹುಟ್ಟೂರು ಚಿಂತಾಮಣಿಯಲ್ಲ; ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಚೀಮಂಗಲ. ತಂದೆ ರಾಜಾರಾವ್, ತಾಯಿ ವೆಂಕಟಲಕ್ಷ್ಮಮ್ಮ. ಚಿಂತಾಮಣಿಯಲ್ಲಿ ಪ್ರಾಥಮಿಕ ಶಿಕ್ಷಣ. ಬೆಂಗಳೂರು ವಿಶ್ವವಿದ್ಯಾಲಯದಿಂದ ಪದವಿ ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ. ರಾಜಾರಾಯರಿಗಿದ್ದ ಸಂಗೀತದ ಪರಿಶ್ರಮ ಪಿತ್ರಾರ್ಜಿತ ಆಸ್ತಿಯ ರೂಪದಲ್ಲಿ ಮಗನಿಗೂ ಬಂತು. ಹಾಡುವ ಕೊರಳಿನೊಂದಿಗೆ ಕಾವ್ಯದ ಕರುಳು ತಳಕು ಹಾಕಿಕೊಳ್ಳುವುದಕ್ಕೆ ಹೆಚ್ಚು ಕಾಲ ಬೇಕಾಗಲಿಲ್ಲ. ವಿದ್ಯಾರ್ಥಿ ದೆಸೆಯಲ್ಲೇ ಅವರು ಕಾವ್ಯಕನ್ನಿಕೆಗೆ ಮನಸೋತರು. ಕಾವ್ಯದ ಗೀಳು ಎಷ್ಟಿತ್ತೆಂದರೆ, ವಿದ್ಯಾರ್ಥಿ ದಿನಗಳಲ್ಲಿ ಗೆಳೆಯರಿಗೆ, ತಂಗಿಯರಿಗೆ ಪದ್ಯರೂಪದಲ್ಲೇ ಪತ್ರ ಬರೆಯುತ್ತಿದ್ದರಂತೆ.

ಚಿಂತಾಮಣಿಯಲ್ಲೊಂದು ಕಾಲು, ಬೆಂಗಳೂರಿನಲ್ಲೊಂದು ಕಾಲು ಎನ್ನುವಂತೆ ಬಿಆರ್‌ಎಲ್ ಕಾವ್ಯಯಾನ ಆರಂಭವಾಯಿತು. ಚೊಚ್ಚಿಲ ಸಂಕಲನ ‘ಗೋಪಿ ಮತ್ತು ಗಾಂಡಲೀನ’ ಪ್ರಕಟಗೊಂಡಿದ್ದು 1971ರಲ್ಲಿ. ತಾರುಣ್ಯದ ಸಂಭ್ರಮ, ಕಾವು, ಕಸಿವಿಸಿ, ಬಿಚ್ಚು ಮಾತುಗಳೊಂದಿಗೆ ಅಮಾಯಕತೆಯೂ ಸೇರಿಕೊಂಡಿದ್ದ ಗೋಪಿ-ಗಾಂಡಲೀನಳ ಕವಿತೆಗಳು ಬಿಆರ್‌ಎಲ್ ಅವರನ್ನು ಕನ್ನಡ ಕಾವ್ಯಲೋಕದಲ್ಲಿ ‘ಪೋಲಿಕವಿ’ ಎನ್ನುವ ಬಿರುದಿನೊಂದಿಗೆ ಯುವತಾರೆಯನ್ನಾಗಿಸಿದವು. ‘ಕವನ ಯಾಕೆ ಚೆನ್ನಾಗುತ್ತದೆಂದರೆ ಬಟ್ಟೆ ಬಿಚ್ಚುವ ಫ್ಯಾಶನಬಲ್ ಸ್ಥಳದಲ್ಲೂ ನೀನು -ಸ್ವಭಾವತಃ ಗೋಪಿಗಿಂತಲೂ ದೊಡ್ಡ ಗಾಂಪನಾಗಿದ್ದರಿಂದ- snobbish ನಿಲುವು ತೆಗೆದುಕೊಳ್ಳುವುದಿಲ್ಲ, ನೀನಾಗಿಯೇ ಉಳಿಯುತ್ತಿ. ಈ ಪದ್ಯದಲ್ಲಿ ನಿನ್ನ ನವ್ಯತೆ ಕೇವಲ ನವ್ಯ-pose ಆಗದೆ ತನ್ನತನ ತೋರಿದೆ; ಇದನ್ನು ಓದಿದಾಗಲೇ ನನಗೆ ನಿನ್ನ ಬೇರೆ ಪದ್ಯಗಳು ಪ್ರಿಯವಾದ ಪಾಪಗಳಂತೆ ಕಾಡತೊಡಗಿದ್ದು’ ಎಂದು ಲಂಕೇಶರು ಮುನ್ನುಡಿಯಲ್ಲಿ ಹೇಳಿರುವ ಮಾತುಗಳು ಬಿಆರ್‌ಎಲ್ ಅವರಿಗೆ ದೊರೆತಿರುವ ಅತ್ಯುತ್ತಮ ಪ್ರಮಾಣಪತ್ರಗಳಲ್ಲೊಂದು.

‘ಯುವತಾರೆ’ ಎನ್ನುವ ವಿಶೇಷಣ ‘ಗೋಪಿ ಮತ್ತು ಗಾಂಡಲೀನ’ ಸಂಕಲನಕ್ಕೆ ಸೀಮಿತವಾದುದಲ್ಲ. ನಂತರದ ‘ಟುವಟಾರ’, ‘ಲಿಲ್ಲಿ ಪುಟ್ಟಿಯ ಹಂಬಲ’, ‘ಶಾಂಗ್ರಿ-ಲಾ’, ‘ಅಪರಾಧಂಗಳ ಮನ್ನಿಸೊ’ - ಯಾವ ಸಂಕಲನ ತೆರೆದುನೋಡಿದರೂ ಅಲ್ಲಿ ಕವಿಯ ತಾರುಣ್ಯದ ರುಜುವಿದೆ. ಮರಕ್ಕೆ ಮುಪ್ಪಾದರೂ ಹುಳಿ ಉಳಿಸಿಕೊಂಡ ಹುಣಸೆಯಂತೆ ಬಿಆರ್‌ಎಲ್ ತಮ್ಮ ಕಾವ್ಯಕ್ಕೆ ವೃದ್ಧಾಪ್ಯ ಸೋಕದಂತೆ ಎಚ್ಚರವಹಿಸಿರುವುದು ಕನ್ನಡ ಕಾವ್ಯದ ಸೋಜಿಗಗಳಲ್ಲೊಂದು.

ತೇಜಸ್ವಿ ಅವರ ಕ್ಯಾರಿಕೇಚರ್‌ನಲ್ಲಿ ಕ್ಯಾಮೆರಾಕ್ಕೆ ಶಾಶ್ವತಸ್ಥಾನವಷ್ಟೇ. ಆ ಕ್ಯಾಮೆರಾ ಬಿಆರ್‌ಎಲ್ ಅವರ ಲಾಂಛನವೂ ಹೌದು. ಎಲ್ಲರ ರಂಗುರಂಗಿನ ಫೋಟೊ ತೆಗೆದು, ಕಪ್ಪುಬಿಳುಪಿನ ನೆಗೆಟಿವ್‌ಗಳನ್ನು ಉಳಿಸಿಕೊಳ್ಳುವ ಪ್ರಸಂಗದ ‘ಫೋಟೊಗ್ರಾಫರ್’ ಅವರ ಪ್ರಸಿದ್ಧ ಕವಿತೆ. ‘ಕ್ಯಾಮರಾ ಕಣ್ಣು’ ಸಮಗ್ರ ಕಾವ್ಯದ ಶೀರ್ಷಿಕೆ. ಸಾವಿರ ಬಿಂಬಗಳನ್ನು ಮೂಡಿಸಿಕೊಂಡರೂ, ಪ್ರತೀ ಬಾರಿಯೂ ಹೊಸ ಬಿಂಬಕ್ಕಾಗಿ ತನ್ನನ್ನು ಬರಿದಾಗಿಸಿಕೊಂಡು ನಿಲ್ಲುವ ಕ್ಯಾಮೆರಾಕಣ್ಣು ಕವಿಯದೂ ಹೌದು.

ಕಾವ್ಯಮೋಹಿ ಬಿಆರ್‌ಎಲ್ ಕಥೆಗಳನ್ನೂ ಬರೆದಿದ್ದಾರೆ; ವಿಮರ್ಶೆ, ವ್ಯಕ್ತಿಚಿತ್ರ, ಸಾಂದರ್ಭಿಕ ಗದ್ಯವನ್ನೂ ರಚಿಸಿದ್ದಾರೆ. ‘ಕಬ್ಬೆಕ್ಕು’ ಅವರಿಗೆ ಹೆಸರು ತಂದುಕೊಟ್ಟ ಕಥಾಸಂಕಲನ. ಅವರ ಕೆಲವು ಹಾಡುಗಳು ಸಿನಿಮಾಗಳಲ್ಲಿ ಬಳಕೆಯಾಗಿವೆ.

ಕಾವ್ಯದಂತೆಯೇ ಸ್ನೇಹದಲ್ಲೂ ಬಿಆರ್‌ಎಲ್, ಅವರೇ ಹೇಳಿಕೊಂಡಿರುವಂತೆ ‘ಅದೃಷ್ಟವಂತರು.’ ಅವರ ಪಾಲಿಗೆ ಲಂಕೇಶರು ಮೇಷ್ಟ್ರೂ ಹೌದು, ಗೆಳೆಯನೂ ಹೌದು. ಅನಂತಮೂರ್ತಿ, ಅಡಿಗರೊಂದಿಗೂ ಈ ಸ್ನೇಹಜೀವಿಗೆ ಸಖ್ಯವಿತ್ತು. ಈಗಿನ ಬಿಆರ್‌ಎಲ್ ಅವರ ಮಿತ್ರಮಂಡಲಿಯಂತೂ ಮತ್ತಷ್ಟು ಆಕರ್ಷಕ. ಅಲ್ಲಿ ಹಿರಿಯ ಬರಹಗಾರರೊಂದಿಗೆ ತರುಣ ತರುಣಿಯರೂ ಇದ್ದಾರೆ. ಎಳೆಯ ತಲೆಮಾರಿನೊಂದಿಗೆ ಒಡನಾಡುವ ಮೂಲಕ ತಮ್ಮ ಯೌವನಪಾತ್ರೆಯನ್ನು ಬಿಆರ್‌ಎಲ್ ‘ಚಾರ್ಜ್’ ಮಾಡಿಕೊಳ್ಳುತ್ತಿರಬೇಕು!

ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ಪು.ತಿ.ನ. ಕಾವ್ಯ ಪುರಸ್ಕಾರ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಬಿಆರ್‌ಎಲ್ ಅವರಿಗೆ ಹಲವು ಗೌರವಗಳು ದೊರೆತಿವೆ. ಆದರೆ, ಅವರು ಜನಮನದಲ್ಲಿ ಹಸಿರಾಗಿರುವುದು ಪ್ರಶಸ್ತಿ ಪ್ರಭಾವಳಿಗಳ ಮೂಲಕವಲ್ಲ; ಕಾವ್ಯದ ಮೂಲಕ. ‘ಪದ್ಯವಂತರಿಗಿದು ಕಾಲವಲ್ಲ’ ಎಂದ ಕವಿ, ಪದ್ಯಗಳ ಮೂಲಕವೇ ಬದುಕು ಮತ್ತು ನೆಮ್ಮದಿ ಕಂಡುಕೊಂಡಿರುವುದು ಸಾಮಾನ್ಯ ಸಂಗತಿಯಲ್ಲ. ಗೋಪಿಯ ಹಾಡು ಮತ್ತು ಅಳಲು, ನಿಂಬೇಗಿಡದ ತಾತ್ವಿಕತೆ, ಅಮ್ಮನ ಎದೆಯಾಳದಲ್ಲಿ ಗಾಳಕ್ಕೆ ಸಿಕ್ಕ ಮೀನು, ಫೋಟೊಗ್ರಾಫರ್‌ನ ವಿಷಾದ, ಗುಂಡಪ್ಪ ವಿಶ್ವನಾಥ್‌ರ ಕ್ರಿಕೆಟ್ಟು – ಹೀಗೆ, ಕವಿಯನ್ನು ನೆನಪಿಸಿಕೊಳ್ಳಲು ಕಾವ್ಯರಸಿಕರಿಗೆ ಸಾಕಷ್ಟು ಸಂಗತಿಗಳಿವೆ.

‘ವಿಮರ್ಶೆಯ ನಿಕಷಕ್ಕೆ ತನ್ನನ್ನು ಒಡ್ಡಿಕೊಳ್ಳದ ಕವಿ ಬೆಳೆಯಲಾರ’ ಎಂದವರು ಬಿಆರ್‌ಎಲ್. ಅವರ ನೆಳಲಿನಂತಿರುವ ‘ಗೋಪಿ ಮತ್ತು ಗಾಂಡಲೀನ’ರಿಗೀಗ ಐವತ್ತು ತುಂಬಿದೆ. ಕವಿಗೆ ಎಪ್ಪತ್ತೈದು ತುಂಬಿದ ಸಂಭ್ರಮ. ‘ಕೆಂಪು ಸಾಗರವೀಜಿ, ಕಾಡುಮೇಡು ದಾಟಿ ದಣಿದು ಕುಸಿಯದೆ ಮುಂದೆ ಸಾಗಿ ಬರಬೇಕು, ಸುಲಭವಲ್ಲ!’ ಎಂದವರು, ಸರಾಗವಾಗಿ ಐದು ದಶಕಗಳಿಂದ ಕಾವ್ಯಸಾಗರದಲ್ಲಿ ಈಜಿಗೆ ಬಿದ್ದಿದ್ದಾರೆ. ಈ ಐವತ್ತರ ಕಾವ್ಯಸಂಭ್ರಮ ಮತ್ತು ಎಪ್ಪತ್ತೈದರ ಕವಿಸಂಭ್ರಮ ಕನ್ನಡ ಸಾಹಿತ್ಯ ಸಂಭ್ರಮವೂ ಹೌದು.

❖

ಯುಗಳ ಸಂಭ್ರಮ

ಸೆ. 11ರಂದು ‘ಬಿ.ಆರ್.ಎಲ್-75’ ಕಾರ್ಯಕ್ರಮ ಬೆಂಗಳೂರಿನಲ್ಲಿ ನಡೆಯಲಿದೆ. ಆ ಸಂದರ್ಭದಲ್ಲಿ ‘ಗೋಪಿ ಮತ್ತು ಗಾಂಡಲೀನ 50’ ಹೊಸ ಆವೃತ್ತಿ ಪ್ರಕಟಗೊಳ್ಳಲಿದೆ. ‘ಬೆಸ್ಟ್ ಆಫ್ ಬಿಆರ್‌ಎಲ್’, ‘ಗೆಳೆಯ ಲಕ್ಷ್ಮಣ’ ಹಾಗೂ ‘ಮನಸು ಬಾವಲಿಯಂತೆ’ (ಅನುವಾದಿಸಿರುವ ಕವಿತೆಗಳು) ಅಂದು ಪ್ರಕಟಗೊಳ್ಳಲಿರುವ ಉಳಿದ ಕೃತಿಗಳು.

ರಮ್ಯತೆಯ ಹೊಸ ಹುಡುಕಾಟದಲ್ಲಿ

ಆರ್.ತಾರಿಣಿ ಶುಭದಾಯಿನಿ

ತೇಜಶ್ರೀ ಅವರ ‘ಯಕ್ಷಿಣಿ ಕನ್ನಡಿ’ ಸಂಕಲನದ ಕವಿತೆಗಳು ಅವರ ಒಟ್ಟಾರೆ ಕಾವ್ಯಯಾನದ ಇನ್ನೊಂದು ಹೊರಳನ್ನು ಸೂಚಿಸುವಂತಿವೆ. ತೇಜಶ್ರೀ ಕಾವ್ಯ ಎಂದರೆ ಆಳವಾದ ಧ್ಯಾನ; ಇರುವಿಕೆಯನ್ನು ತೀವ್ರವಾಗಿ ಭಾವಿಸುವುದು. ಇದನ್ನು ಅವರು ಕಾವ್ಯಯಾನದ ಗಂಭೀರ ಪಯಣಿಗರಾಗಿ ಮಾಡುತ್ತಾರೆ ಎಂದು ಬೇರೆ ಹೇಳಬೇಕಿಲ್ಲ. ಈಗಾಗಲೇ ಕವಿತೆಗಳನ್ನು ರಚಿಸಿ ಒಂದು ಹದವನ್ನು ಕಂಡುಕೊಂಡಿರುವುದರಿಂದ ಕಾವ್ಯದ ರಚನೆಯ ಬಗ್ಗೆ ಒಂದು ಆದರ, ಸರಾಗವನ್ನು ಅವರಲ್ಲಿ ಕಾಣಬಹುದು. ಇದು ಅವರ ಪಾಲಿಗೆ ಒಂದು ಅಭಯವನ್ನೂ ಆತಂಕವನ್ನೂ ಒಟ್ಟೊಟ್ಟಿಗೆ ತಂದೊಡ್ಡಿರುವಂತೆ ಕಾಣುತ್ತದೆ. ಕವಿತೆ ಎನ್ನುವ ತೀವ್ರತೆಯನ್ನು ರೂಢಿಯಲ್ಲಿ ಹಿಡಿಯುವುದಕ್ಕಿಂತ ಇನ್ನೇನೊ ಬೇರೆ ಇದೆ ಎಂದು ಹುಡುಕಾಟ ಮಾಡುವಲ್ಲಿ ಅವರ ಕಾವ್ಯದ ತೀವ್ರ ಹಂಬಲ ಪ್ರಕಟಗೊಳ್ಳುತ್ತದೆ. ಪ್ರಸ್ತುತ ಸಂಕಲನವಾದರೂ ಅವರ ಕಾವ್ಯದ ಸದ್ಯ ಮತ್ತು ಶಾಶ್ವತಗಳ ಮರೆಸಾಟದ ಕುರಿತಾದ ಧ್ಯಾನವೇ ಆಗಿದೆ.

ತೇಜಶ್ರೀ ಅವರ ಈ ಸಂಕಲನದಲ್ಲಿ ರಮ್ಯತೆಯೆನ್ನುವುದು ಒಂದು ವಿಶಿಷ್ಟ ನೆಲೆಯಲ್ಲಿ ಪ್ರಕಟಗೊಂಡಿದೆ. ಅದು ಒಂದೆಡೆಗೆ ಜೀವದ ತಾದಾತ್ಮ್ಯವನ್ನು ತೀವ್ರವಾಗಿ ಭಾವಿಸುವ ಪರಿಯಲ್ಲಿ ಪ್ರಕಟಗೊಂಡರೆ, ಇನ್ನೊಂದೆಡೆ ಸದ್ಯ ಮತ್ತು ಶಾಶ್ವತದ ಮೇಲಾಟಗಳನ್ನು ಕುರಿತು ಧ್ಯಾನಿಸುವ ರೀತಿಯಲ್ಲಿ ನಿಲ್ಲುತ್ತದೆ. ಇಲ್ಲಿ ಬರುವ ಪ್ರಕೃತಿ ವರ್ಣನೆಯು ಅದಕ್ಕೆ ಹಿನ್ನೆಲೆಯಾಗಿ ಒದಗಿ ಬಂದಿದೆ. ಮರ ಮತ್ತು ಹಕ್ಕಿಗಳ ಒಡನಾಟದ ಕೆಲವು ಪದ್ಯಗಳು ಇಲ್ಲಿ ಗಮನ ಸೆಳೆಯುತ್ತವೆ. ‘ಕರ್ಣಾಟ ಕಾದಂಬರಿ’ಯಲ್ಲಿ ವೈಶಂಪಾಯನ ಗಿಳಿ ಕೆಳಗೆ ಬಿದ್ದಾಗ ಅಲ್ಲಿರುವ ಮರದ ವರ್ಣನೆಯನ್ನು ನೆನಪಿಗೆ ತರುವಂತೆ ಇರುವ ಕವಿತೆ – ಗಿಳಿಮರ. ಹಕ್ಕಿ ಮತ್ತು ಮರದ ತಾದಾತ್ಮ್ಯವು ಜೀವ ಮರದೊಳಗಿಂದ ಹುಟ್ಟುತ್ತಿದೆ ಎನ್ನುವ ಭಾವವನ್ನು ಉಂಟು ಮಾಡುತ್ತದೆ. ಸದಾ ಗಿಳಿಯ ಧ್ಯಾನದಲ್ಲಿರುವ ಮರದ ಕಾಂಡದ ಮೇಲೆ ಹಾವಸೆ ಹಬ್ಬಿ ಮರವೇ ಗಿಳಿಯಾಗಿಬಿಟ್ಟು ಅದರೊಳಗಿನ ಹುಳಗಳ ಗೌಜಿ ನಡೆಯುತ್ತಿದೆ. ಈ ಜೀವದಾಟವನ್ನು ಬಣ್ಣಿಸುವ ಕವಿತೆ ಭವದ ಇರುವಿಕೆಯನ್ನು ಭಾವಿಸಿ ತೋರುತ್ತಿದೆ. ಈ ಇರುವಿಕೆಯ ಚೆಲುವು ಸಕಲ ಜೀವರಾಶಿಗಳೆಲ್ಲದರಲ್ಲಿಯೂ ಪ್ರತಿಬಿಂಬಿತವಾಗುತ್ತಿರುವುದು ಅದರ ಘನತೆಯನ್ನು ಹೆಚ್ಚಿಸಿದೆ.

ಮರದ ಪ್ರತಿಮೆಯು ‘ಸೃಷ್ಟಿ ಸ್ಥಿತಿ ಲಯ’ ಎಂಬ ಕವಿತೆಯಲ್ಲಿಯೂ ಮುಂದುವರೆಯುತ್ತದೆ. ಮರ ಹಕ್ಕಿಯಾಗುವ ಕ್ರಿಯೆ ಇಲ್ಲಿಯೂ ಬಣ್ಣನೆಯಾಗಿದೆ. ‘ಎಲ್ಲ ಹಕ್ಕಿಗಳೂ ಸೇರಿ ಒಂದೇ ಹಕ್ಕಿಯಾಗಿ/ಮರವೆಂದರೀಗ ಒಂದು ಹಕ್ಕಿ’ಯಾಗಿ ಬಿಡುವ ಏಕೀಭವ ಇಲ್ಲಿ ಸಂಭವಿಸುತ್ತದೆ. ಮರದ ಮೇಲೆ ಆಡುವ ಜೀವಸಂಕುಲದ ಚೈತನ್ಯವನ್ನು ತಂದುಕೊಳ್ಳುವಂತೆಯೇ ಮರ ಸಾವಿನ ಭಾರವನ್ನೂ ಅನುಭವಿಸುತ್ತದೆ. ಈ ಹೊರಳಾಟವು ಒಂದೆಡೆಗೆ ಜೀವದ ಕಲರವವನ್ನೂ ಸಾವಿನ ಮೌನವನ್ನೂ ಒಳಗೊಳ್ಳುತ್ತದೆ ಎನ್ನುವುದನ್ನು ಕವಿತೆ ಚಿತ್ರವತ್ತಾಗಿ ಬಣ್ಣಿಸಿದೆ. ಹೀಗೆ ಈ ಸಂಕಲನದಲ್ಲಿ ಮರವನ್ನೇ ಧ್ವನಿಸುವ ಹಲವಾರು ಕವಿತೆಗಳಿವೆ (‘ನೆಲದೆದೆಯಲ್ಲಿ ಮರದ ಬೇರಿನ ಸಿಕ್ಕು’, ‘ಬದುಕು ಬರೆದ ಮರ’ ಇಂಥವು).



ಪು: 80
₹80

ಯಕ್ಷಿಣಿ ಕನ್ನಡಿ
ಲೇ: ಜ.ನಾ.ತೇಜಶ್ರೀ
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ
ಸಂ: 8880087235

ಇರುವಿಕೆ ಎನ್ನುವುದು ನಿರಂತರವಾಗಿ ಬದಲಾಗುತ್ತಿರುವ ಒಂದು ಅಸ್ಮಿತೆ. ಆ ನಿರಂತರತೆಯ ಕ್ಷಣಿಕತೆಯು ಕ್ಷಣಭಂಗುರದ ಚೆಲುವನ್ನೂ ಭ್ರಮನಿರಸನವನ್ನೂ ಒಟ್ಟಿಗೇ ಉಂಟು ಮಾಡುತ್ತದೆ. ನೀಲಾಂಜನೆಯ ನೃತ್ಯದ ಲಾಸ್ಯವು ಸೌಂದರ್ಯೋಪಾಸನೆಯ ಉತ್ತುಂಗಕ್ಕೆ ಒಯ್ಯುವಂತೆಯೇ ಸಾವಿನ ಶೂನ್ಯವನ್ನೂ ಕಾಣಿಸಬಹುದು. ಈ ಕ್ಷಣಕ್ಕೆ ಚಿರಂತನದ ಗಮ್ಯವಿಲ್ಲದಿದ್ದರೂ ಅದನ್ನು ಹಿಡಿದಿಡುವ ಆಸೆ ಆಳದಲ್ಲಿ ತೀವ್ರವಾಗಿರುತ್ತದೆ. ಇದನ್ನು ತೇಜಶ್ರೀ ತಮ್ಮ ಕವಿತೆಗಳಲ್ಲಿ ಹಿಡಿದಿಡುತ್ತಿದ್ದಾರೆ. ಮರ್ತ್ಯದ ತೊಳಲಾಟವು ಅಂತಿಮವಾಗಿ ಇದ್ದೂ ಇಲ್ಲದಾಗುವ ದ್ವಂದ್ವದಲ್ಲಿಯೇ ಇರುವಂತಹದ್ದು ಪ್ರಾಯಶಃ.

ಇಲ್ಲಿ ‘ಶಾಶ್ವತಕ್ಕೆ ಕೈಚಾಚಿ ಕಣ್ಣಾಳದ ಕವಿತೆ’ ಬಣ್ಣಿಸುವಂತೆ ‘ಮಿಡಿನಾಗರಗಳು ಸುತ್ತಿಕೊಂಡ ಬಯಕೆ ಸುಳಿ ಅವನ ಮೈಮೇಲೆಲ್ಲ’ ಎನ್ನುವ ಸಾಲು ಅದನ್ನು ಹೆಚ್ಚಿನದಾಗಿ ಹೇಳಬಲ್ಲದು. ಮುಂದುವರೆದಂತೆ, ‘ಎತ್ತ ನೋಡಿದರೂ ಉತ್ಕಟ ಹೋರಾಟ;/ಮೇಲೆ ಬಾನಲ್ಲಿ, ಇಲ್ಲಿ ನೆಲದಲ್ಲಿ/ಮತ್ತು ಕಂಪಿಸುವ ಪಾತಾಳದೆದೆಯಲ್ಲಿ.. ..ಒಂದೊಂದು ಜೀವವನೂ ಒಂದೊಂದು ಬಗೆಯಲಿ ದಿಟ್ಟಿಸುವ ಸಾವಿಗೆ /ಅದೆಷ್ಟು ಒಳನೋಟಗಳು!....ದೇವರೇ ಶಾಶ್ವತವೆಂಬುದು ಎಷ್ಟು ಕ್ಷಣಿಕ!’ ಎಂದು ಉದ್ಗಾರದಲ್ಲಿ ಕವಿತೆ ಮುಗಿಯುತ್ತದೆ. ‘ಕ್ಷಣರುಚಿಯ ಮಲರಂಬು’ ಕವಿತೆ ಇನ್ನಷ್ಟು ಉತ್ತುಂಗಕ್ಕೆ ಹೋಗಿ ‘ಸೃಷ್ಟಿಯು ಸೃಷ್ಟಿಯನ್ನೇ ಮುಟ್ಟುವ /ಆ ಗಳಿಗೆ ಏನಾಗಿತ್ತು/ಎಲ್ಲಿತ್ತು ಅದು ಇಟ್ಟುಕೊಂಡಿದೆ ಹೇಗೆ/ಕ್ಷಣರುಚಿಯ ಮಲರಂಬು’ ಎಂಬಲ್ಲಿಗೆ ಬಂದು ನಿಲ್ಲುತ್ತದೆ. ಈ ಹುಡುಕಾಟ ತಲತಲಾಂತರದಿಂದ ಬಂದುದೇ. ಆದರೆ ಅದು ಸದ್ಯವೇ ಶಾಶ್ವತವನ್ನು ತೊಡೆಯುತ್ತಿರುವ ದಿನಮಾನದಲ್ಲಿ ಸಂವೇದನೆಯ ಹೊಸ ಹೊರಳಿಗಾಗಿ ಕಾತರಿಸುವುದನ್ನು ಕವಿತೆಗಳು ಸೂಚಿಸುತ್ತಿರಬಹುದು. ಈ ಸಂಕಲನದ ‘ಅಹಲ್ಯೆ’ ಕವಿತೆ ರಮ್ಯತೆಯ ಇನ್ನೊಂದು ಆಯಾಮವನ್ನು ತೆರೆದಿಡುತ್ತದೆ. ಸ್ಪರ್ಶದ ಮೂಲಕ ಇಂದ್ರಿಯ ಗ್ರಾಹ್ಯವಾದ ಚೈತನ್ಯವನ್ನು ಕಂಡುಕೊಳ್ಳುವುದನ್ನು ಈ ಕವಿತೆ ತೋರಿಸಿದೆ.

ವಿಮರ್ಶೆ

ಈ ಸಂಕಲನದ ಕವಿತೆಗಳು ಕಾವ್ಯದ ಬಗ್ಗೆ ಮಾತನಾಡುತ್ತವೆ. ಕವಿತೆ ಕಟ್ಟುವ ಕಲೆಗಾರಿಕೆ ಹಾಗೂ ಕಸುಬುದಾರಿಕೆಗಳನ್ನು ಕುರಿತು ಒಂದು ಹಂತದಲ್ಲಿ ಕವಿ ನಿಂತು ನೋಡಿ ಮತ್ತೆ ಮುಂದಡಿಯಿಡುತ್ತಿರುತ್ತಾನೆ/ಳೆ. ಹೀಗೆ ಅದೊಂದು ‘ಯಕ್ಷಿಣಿ ಕನ್ನಡಿ’. ‘ಬೆಳಕ ಹೀರಿದ ಕನ್ನಡಿ/ಒಳಮನೆಯ ಕತ್ತಲಿಗೆ ಮುತ್ತಿಕ್ಕಿ / ಅಲ್ಲಿ ಒಂದು ಹೊಸ ಬೆಳಗು/ನಿಟ್ಟುನಿಟ್ಟಲ್ಲಿ ಬಚ್ಚಿಟ್ಟುಕೊಂಡ ಗುಟ್ಟುಗಳೆಲ್ಲ ಈಗ ಮಗುವಿನಂಗೈ ಕನ್ನಡಿಯೊಳಗಿನ ಕವಿತೆ’. ಹಾಗೆ ನೋಡಿದರೆ ಯಕ್ಷಿಣಿ ಕನ್ನಡಿ ಎನ್ನುವುದು ಕ್ಲೀಷೆ ಎನ್ನಿಸುವ ಪ್ರತಿಮೆ. ಮಾಯಾಕನ್ನಡಿಯನ್ನು ಸೃಷ್ಟಿಯ ವಿಸ್ಮಯವನ್ನು ಹೇಳುವುದಕ್ಕೆ ಬಳಸುತ್ತಾರೆ ಎನ್ನುವುದನ್ನು ಊಹಿಸಬಹುದು.

ಆದರೆ ‘ಕಂಪಿಸುತ್ತಿದೆ ಒಡಲು’ ಕವಿತೆ ಮಾತ್ರ ಅದುರುವ ದೇಹದ ತೀವ್ರಮೋಹದ ಕಂಪನದಲ್ಲಿ ಕಂಡುಕೊಳ್ಳುವುದು ವಿಶಿಷ್ಟವೆನಿಸುತ್ತದೆ. ಆ ಸಾಲುಗಳು ಹೀಗಿವೆ: ‘ಬಾ ಶಿವನೇ/ಅದುರುತ್ತಿರುವ ನನ್ನ ಈ ಕೈಯ ಹಿಡಿದುಕೋ;/ಬಿಡಿಸಿ ನೋಡು ಯಾವ ಕವಿತೆ/ಅದರೊಳಗೆ ಅಡಗಿ ಕುಳಿತು ಕಂಪಿಸುತ್ತಿದೆ.. .. ಕಾಯುತ್ತಿದೆ ಅದು ಶತಶತಮಾನಗಳಿಂದ/ಬಿಡಿಸುವ ಬೆರಳುಗಳಿಗಾಗಿ ಕಾದು;/ ಕೇಳು ಏನು ಹೇಳುವುದಿದೆ ಅಂಗೈಯೊಳಗಿನ/ಆ ನನ್ನ ಕವಿತೆಗೆ’. ಇಲ್ಲಿರುವ ‘ಕತ್ತು ಹಿಚುಕುವ ಸಿದ್ಧಹಸ್ತ’ ಕವಿತೆ ಕವಿತೆಯೆನ್ನುವುದನ್ನು ಒಲಿಸಿಕೊಳ್ಳಲು ‘ಮೌನದೊಳಗೆ/ಕರಗಿಸುವುದ ಕಲಿಸು ಕವಿತೆ’ ಎಂದು ಬೇಡುತ್ತದೆ. ಮಾಂತ್ರಿಕತೆ ಇಲ್ಲದ ಕವಿತೆ ಏನೂ ಆಗದೆ ಉಳಿಯುವುದನ್ನೂ ಇಲ್ಲಿ ಕಂಡುಕೊಳ್ಳಲಾಗಿದೆ; ‘ಎಲ್ಲೋ ಕೆಲವರಿಗೆ ಮಾತ್ರ ದಕ್ಕಬಹುದು/ಸಿಪ್ಪೆ, ತಿರುಳು, ಬೀಜದ ಪೂರ್ಣದಲಿ/ಉಳಿದವರಿಗೆ ಹಣ್ಣಿನ ಕತ್ತು ಹಿಚುಕುವ ಹುಳ ಮಾತ್ರ’. ‘ಅಡಿಗರಿಂದ ಲಂಕೇಶರಿಗೆ’ ಕವಿತೆ ಕೂಡ ಕಾವ್ಯದ ಆಗುವಿಕೆಯನ್ನು ಕುರಿತಾದ ಕವನವೇ.

ತೇಜಶ್ರೀ ಅವರ ಕವಿತೆಗಳು ಹೀಗೆ ರಮ್ಯತೆಯ ಹೊಸ ಹುಡುಕಾಟದಂತೆ ಕಾಣುತ್ತಿರುವುದು ಕನ್ನಡ ಕವಿತೆ ಮತ್ತೊಮ್ಮೆ ನವೋದಯದ ಕಾವ್ಯಕುತೂಹಲವನ್ನು ಮೈಗೂಡಿಸಿಕೊಳ್ಳುವ ಹಂಬಲದಲ್ಲಿಯೇ ಎನ್ನುವ ಪ್ರಶ್ನೆಯನ್ನು ಹುಟ್ಟುಹಾಕುವಂತಿದೆ. ತೇಜಶ್ರೀಯವರು ತಮ್ಮ ತೀವ್ರ ಕಾವ್ಯಭಾವಕ್ಕೆ ಸಾಥಿಯಾಗಿ ಹೊಸ ರೀತಿಯ ಕಾವ್ಯದ ಲಯಗಳನ್ನು ಪ್ರಯೋಗ ಮಾಡಿದ್ದಿದ್ದರೆ ಅದರ ಮೀಟು ಹೊರಳನ್ನು ಸೃಷ್ಟಿಸಬಹುದಿತ್ತು.

❖

ರಂಗುರಂಗಿನ ಪುಟ್ಟ ಕಥೆಗಳು

ಸಾಹಿತಿ ದೊಡ್ಡರಂಗೇಗೌಡರ ಹೆಸರು ಪ್ರಸ್ತಾಪವಾದೊಡನೆ ಮೊದಲು ನೆನಪಿಗೆ ಬರುವುದು ಅವರ ಕಾವ್ಯಲೋಕ. ಅದಕ್ಕೆ ಮುಖ್ಯ ಕಾರಣ ದಶಕಗಳಿಂದ ಅವರು ಪ್ರಧಾನವಾಗಿ ಕಾವ್ಯ ಕೃಷಿಯನ್ನೇ ಮಾಡಿಕೊಂಡು ಬಂದಿರುವುದು. ಅಲ್ಲಿ ‘ನಮ್ಮೂರ ಮಂದಾರ ಹೂವೆ’ಯಂತಹ ಕಾವ್ಯಪುಷ್ಪಗಳು ಅರಳಿ ಕಂಪು ಬೀರಿದ್ದೂ ಗೌಡರನ್ನು ಕಾವ್ಯಲೋಕದ ಆಸಾಮಿಯನ್ನಾಗಿ ನೋಡುವಂತೆ ಮಾಡಿದೆ. ಆದರೆ, ಕಾವ್ಯದಷ್ಟೇ ಕಥೆಗಳ ಮೇಲೂ ಅವರಿಗೆ ಪರಿಶ್ರಮವಿದೆ. ಎಲೆಮರೆಯ ಕಾಯಿಯಂತಿದ್ದ ಅವರ ಕಥಾಶಕ್ತಿ ‘ಮಧ್ಯವರ್ತಿ’ ಸಂಕಲನದಲ್ಲಿ ದೊಡ್ಡದಾಗಿ ಬೆಳಗಿದೆ.

ದೊಡ್ಡರಂಗೇಗೌಡರ 48 ಪುಟ್ಟ ಪುಟ್ಟ ಕಥೆಗಳ ಗುಚ್ಛವೇ ‘ಮಧ್ಯವರ್ತಿ’. ಕಾಲೇಜು ದಿನಗಳಲ್ಲಿ ಕಥೆ ಬರೆಯುತ್ತಿದ್ದ ಅವರು ಬಳಿಕ ಕಾವ್ಯದ ಕಡೆಗೆ ವಾಲಿದವರು. ನಿವೃತ್ತಿಯ ನಂತರವಷ್ಟೇ ಅವರು ಮತ್ತೆ ಕಥಾಸಾಗರಕ್ಕೆ ಧುಮುಕಿದ್ದಾರೆ. ಗೌಡರ ಅನುಭವ, ಸುತ್ತಮುತ್ತಲಿನ ಸಮಾಜದ ಕುರಿತು ಅವರು ಹೊಂದಿದ ಕೌತುಕ, ಕಥೆ ಹೇಳುವ ಆಸಕ್ತಿ ಎಲ್ಲವೂ ಮೇಳೈಸಿದ್ದರಿಂದ ‘ಮಧ್ಯವರ್ತಿ’ ಅವತರಿಸಲು ಸಾಧ್ಯವಾಗಿದೆ. ಸಮಾಜವನ್ನು ಕಾಡುವ ಭ್ರಷ್ಟಾಚಾರ, ಮೋಸ, ವಂಚನೆ, ಬಡತನ ಇವರ ಕಥೆಗಳಿಗೆ ಮುಖ್ಯ ವಸ್ತುವಾಗಿವೆ.

ಸಂದರ್ಭಕ್ಕೆ ತಕ್ಕಂತೆ ಬಣ್ಣ ಬದಲಾಯಿಸುವ ಜನರ ಕಥೆ ಹೇಳುವ ‘ಗೋಸುಂಬೆಗಳು’, ಆಕಸ್ಮಿಕವಾಗಿ ಒದಗಿಬಂದ ಸಹಾಯದಿಂದ ಬದುಕಿನ ಗತಿಯೇ ಬದಲಾಗುವಂತಹ ಕಥೆ ಹೇಳುವ ‘ಯೋಗಾಯೋಗ’ ಭಿನ್ನ ಕಥಾವಸ್ತುವಿನಿಂದ ಗಮನಸೆಳೆಯುತ್ತವೆ.

ನಿಮ್ಮ ಬಳಿ ದುಡ್ಡು ಇದೆ ಎಂದು ಗೊತ್ತಾದರೆ ಸಾಕು, ಗಾಂಧಿನಗರದ ಮಂದಿ ಹೇಗೆ ಟೋಪಿ ಹಾಕುತ್ತಾರೆ ಎಂಬುದನ್ನು ‘ಮಧ್ಯವರ್ತಿ’ ಕಥೆ ತುಂಬಾ ಸೊಗಸಾಗಿ ಕಟ್ಟಿಕೊಡುತ್ತದೆ. ನಗಾರಿ ನಂಜುಂಡನಂತಹ ಪತ್ರಕರ್ತರ ದಂಡೇ ಚಂದನವನದ ಈ ಬೀದಿಯಲ್ಲಿದೆ. ‘ನಿಮ್ಮ ಮಗನನ್ನು ಹೀರೊ ಮಾಡಿ’ ಎಂದು ಪುಸಲಾಯಿಸುವುದು, ಸಿಕ್ಕಾಪಟ್ಟೆ ದುಡ್ಡು ಪೀಕಿಸುವುದು, ಕೊನೆಗೆ ಕೈಕೊಟ್ಟು ಓಡಿ ಹೋಗುವುದು... ಎಲ್ಲವೂ ಗಾಂಧಿನಗರದಲ್ಲಿ ನಡೆದಿರುವಂಥದೇ ಘಟನೆಗಳು. ಅದಕ್ಕೆ ದೊಡ್ಡರಂಗೇಗೌಡರು ಕಥೆಯ ರೂಪ ನೀಡಿದ್ದಾರೆ.

ಪುಟ್ಟ ಪುಟ್ಟ ಕಥೆಗಳು ಇವಾಗಿದ್ದರಿಂದ ಸುಲಲಿತವಾಗಿ ಓದಿಸಿಕೊಂಡು ಹೋಗುತ್ತವೆ.

❖

ಪು: 252
₹250

ಮಧ್ಯವರ್ತಿ
ಪುಟ್ಟ ಪುಟ್ಟ ಕಥೆಗಳು
ಲೇ: ದೊಡ್ಡರಂಗೇಗೌಡ
ಪ್ರ: ಗೀತಾಂಜಲಿ ಪಬ್ಲಿಕೇಷನ್ಸ್
ಸಂ: 9740066842

ಕಥೆ

ಬೇಲೂರು ರಘುನಂದನ್
ಬರೆದ ಕಥೆ
ಸ್ಕೇರಿ ಹೌಸ್

ಮೊಬೈಲ್‌ನಲ್ಲಿ
ಕಥೆ ಓದಲು
ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.

https://www.prajavani.net/short-story

ಕವಿತೆ

ರಂಗಸ್ವಾಮಿ ಮಾರ್ಲಬಂಡಿ
ಬರೆದ ಕವಿತೆ
ಅದನ್ನು ಮೀರಿದಿದೇನೊ

ಮೊಬೈಲ್‌ನಲ್ಲಿ
ಕವಿತೆ ಓದಲು
ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.

https://www.prajavani.net/poetry

ಮುದ್ದಣನನ್ನು ಕಾಣಿಸಿದ ನಂದಾದೀಪ

ಮೊದಲ ಓದು

‘ಮುದ್ದಣ’ ಕಾವ್ಯನಾಮದ ಲಕ್ಷ್ಮೀನಾರಾಯಣಪ್ಪ ಕವಿಯ 150ನೇ ಜಯಂತಿಯ ನೆಪದಲ್ಲಿ ಸಂಸ್ಮರಣಾ ಗ್ರಂಥವಾಗಿ ಡಾ.ಜಿ.ಎಂ.ಹೆಗಡೆ ಅವರ ಸಂಪಾದಕತ್ವದಲ್ಲಿ ಮೂಡಿಬಂದ ಕೃತಿಯೇ ‘ನಂದಳಿಕೆಯ ನಂದಾದೀಪ’.

ಕೇವಲ ಮೂವತ್ತೊಂದು ವರ್ಷ ಬದುಕಿದ್ದರೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಗಳಿಸುವಂತಹ ಸಾಧನೆಗೈದ ಮುದ್ದಣನ ಕುರಿತು, ಆತನ ಸಾಹಿತ್ಯದ ಕುರಿತು ಮಾಸ್ತಿ, ಹಾಮಾನಾ, ರಂ.ಶ್ರೀ. ಮುಗಳಿ, ಕೀರ್ತಿನಾಥ ಕುರ್ತಕೋಟಿ ಅವರಂತಹ ಘಟಾನುಘಟಿಗಳು ಬರೆದ ಲೇಖನಗಳನ್ನು ಹೆಗಡೆಯವರು ಪರಿಶ್ರಮವಹಿಸಿ ಸಂಪಾದಿಸಿದ್ದಾರೆ.

ಹಾಮಾನಾ ಅವರು ‘ಪ್ರಜಾವಾಣಿ’ ಪತ್ರಿಕೆಗೆ ಬರೆದ ‘ನಂದಳಿಕೆಯ ನಂದಾದೀಪ’ ಎಂಬ ಲೇಖನದಲ್ಲಿ ‘ಮುದ್ದಣ ಬದುಕಿದ್ದು ಕೇವಲ ಮೂವತ್ತೊಂದು ವರ್ಷ. ಅದು ಬಾಳಲ್ಲ, ಬೆಂಕಿ. ಅಸಹಾಯಕ ಪರಿಸ್ಥಿತಿಯಲ್ಲೂ ಮುದ್ದಣನ ಪ್ರತಿಭೆಯೂ ಅರಳಿತು’ ಎಂದಿದ್ದರು. ಇದೇ ಲೇಖನದ ಶೀರ್ಷಿಕೆಯೇ ಗ್ರಂಥದ ಶೀರ್ಷಿಕೆಯೂ ಆಗಿದೆ.

‘ರತ್ನಾವತಿ ಕಲ್ಯಾಣ’, ‘ಕುಮಾರ ವಿಜಯ’ ಎಂಬೆರಡು ಯಕ್ಷಗಾನ ಪ್ರಸಂಗಗಳನ್ನೂ ‘ಶ್ರೀ ರಾಮಪಟ್ಟಾಭಿಷೇಕ’, ‘ಅದ್ಭುತ ರಾಮಾಯಣ’ ಮತ್ತು ‘ಶ್ರೀ ರಾಮಾಶ್ವಮೇಧ’ ಎಂಬ ಮೂರು ಖಂಡ ಕಾವ್ಯಗಳನ್ನೂ ಬರೆದು ನಾಡಿನ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಿದ ಕವಿ ಮುದ್ದಣ. ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದ ಕುಗ್ರಾಮದಲ್ಲಿ ಬಡತನದ ಕುಟುಂಬದಲ್ಲಿ ಜನಿಸಿದರೂ ಓದಿನ ಗುರಿಯೊಂದಿಗೆ ಉಡುಪಿಗೆ ಬಂದ. ವಾರಾನ್ನ ಮಾಡಿಕೊಂಡು ಅಧ್ಯಯನಕ್ಕೆ ನಿಂತರೆ ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸವನ್ನೂ ಆತನಿಗೆ ಮುಗಿಸಲಾಗಲಿಲ್ಲ. ತನ್ನ ಶರೀರ ಬಲವನ್ನು ನಂಬಿ ಮದ್ರಾಸಿಗೆ ಹೋಗಿ ತರಬೇತಿ ಪಡೆದು ಕುಸ್ತಿಪಟು ಎನಿಸಿಕೊಂಡು ಬಂದ. ಆತನ ಬದುಕಿನ ಇಂತಹ ಅಪರೂಪದ ವಿವರಗಳು ಈ ಕೃತಿಯಲ್ಲಿ ಸಿಕ್ಕುತ್ತವೆ.

ಮುದ್ದಣ ಕವಿಯ ಕೃತಿಗಳ ಅಧ್ಯಯನ, ವಿಮರ್ಶೆ ಬಹುಕಾಲದಿಂದಲೂ ನಡೆಯುತ್ತಲೇ ಬಂದಿದೆ. ಇದಕ್ಕೆ ಪೂರಕವಾಗಿ ಈ ಗ್ರಂಥದಲ್ಲಿ ‘ಮುದ್ದಣನ ರಾಮಾಶ್ವಮೇಧ ಮತ್ತು ಪುರಾಣದ ಶೇಷರಾಮಾಯಣ’ ಎಂಬ ಶೀರ್ಷಿಕೆಯ ಲೇಖನದಲ್ಲಿ ಬನ್ನಂಜೆ ಗೋವಿಂದಾಚಾರ್ಯ ಅವರು ಹೀಗೆ ಬರೆಯುತ್ತಾರೆ: ‘ಶೇಷ ರಾಮಾಯಣ ಮತ್ತು ಮುದ್ದಣ ರಾಮಾಯಣ ಎರಡೂ ಮಹತ್ವದ ಕಾವ್ಯ ನಿರ್ಮಾಣಗಳು. ಇವುಗಳ ವಿಸ್ತಾರವಾದ ತುಲನೆ-ವಿಮರ್ಶೆಗಳಿಗೆ ಒಂದು ಮಹಾಪ್ರಬಂಧವೇ ರಚನೆಯಾಗುವಷ್ಟು ಆಹಾರವುಂಟು’. ಹೀಗೆ ಕಾಲಕಾಲಕ್ಕೂ ಮುದ್ದಣ ಹಾಗೂ ಆತನ ಪ್ರತೀ ಕೃತಿಯೂ ಮತ್ತೆಮತ್ತೆ ವಿಮರ್ಶೆಗೆ, ಅಧ್ಯಯನಕ್ಕೆ ಒಳಪಡುತ್ತಿವೆ.

ಮುದ್ದಣನ 125ನೇ ವರ್ಷಾಚರಣೆ ಸಂದರ್ಭದಲ್ಲಿ ಜಯರಾಮ ಕಾರಂತರು ಹಾಗೂ ನಂದಳಿಕೆ ಬಾಲಚಂದ್ರರಾಯರು ‘ಮುದ್ದಣನಿಗೆ ನಮನ’ ಎಂಬ ಗ್ರಂಥವನ್ನು ಜತೆಗೂಡಿ ಸಂಪಾದಿಸಿ ಪ್ರಕಟಿಸಿದ್ದರು. ಬಾಲಚಂದ್ರರಾಯರು ಮುದ್ದಣನ ಹೆಸರಿನಲ್ಲಿ ಮತ್ತೊಂದು ಗ್ರಂಥ ಹೊರತರುವ ಆಸೆಯನ್ನು ಹೆಗಡೆ ಅವರ ಮುಂದಿಟ್ಟ ಫಲವೇ ಈ ಗ್ರಂಥ.

ಉಡುಪಿ ಜಿಲ್ಲೆಯ ನಂದಳಿಕೆ ಎಂಬ ಹಳ್ಳಿಯಲ್ಲಿ ಹುಟ್ಟಿ ಬೋರ್ಡ್ ಶಾಲೆಯಲ್ಲಿ ವ್ಯಾಯಾಮ ಶಿಕ್ಷಕರಾಗಿದ್ದ ಲಕ್ಷ್ಮೀನಾರಾಯಣಪ್ಪ, ‘ಮುದ್ದಣ’ನಾಗಿ ಪರಿವರ್ತಿತರಾದ ಬಗೆ, ಮುದ್ದಣನ ಕೃತಿಗಳ ಬಗ್ಗೆ ವ್ಯಾಖ್ಯಾನ, ವಿಮರ್ಶೆಯ ಲೇಖನಗಳನ್ನು ಪುಸ್ತಕ ಒಳಗೊಂಡಿದೆ. ಈ ಕೃತಿಯು ಮುದ್ದಣನ ಬದುಕಿನ ಕನ್ನಡಿಯಾಗಿ, ಆತನ ಕೃತಿಗಳನ್ನು ಮರು ವ್ಯಾಖ್ಯಾನಕ್ಕೆ ಒಳಪಡಿಸಿ ಸಾಹಿತ್ಯಾನುಸಂಧಾನ ನಡೆಸಲು ಒಂದು ವೇದಿಕೆಯಾಗಿದೆ.



ಪು: 270
₹220

ನಂದಳಿಕೆಯ ನಂದಾದೀಪ- ಮುದ್ದಣ 150 ಸಂಸ್ಮರಣ ಗ್ರಂಥ
ಲೇ: ಡಾ.ಜಿ.ಎಂ. ಹೆಗಡೆ
ಪ್ರ: ಅಕ್ಷರ ಮಂಟಪ
ಸಂ: 080 23403307

ಪಾರ್ಸಿಗಳು ಮತ್ತು ಹದ್ದುಗಳು

ಸರೋಜಾ ಪ್ರಕಾಶ

> ಆಧುನಿಕ ಭಾರತದ ಚರಿತ್ರೆಯಲ್ಲಿ ಪಾರ್ಸಿಗಳಿಗೆ ಮಹತ್ವದ ಸ್ಥಾನ ಇದೆ. ಪರ್ಶಿಯಾದಿಂದ ಬಂದು ಭಾರತದಲ್ಲಿ ನೆಲೆ ನಿಂತು ಶತಮಾನಗಳೇ ಉರುಳಿದರೂ ಈ ಸಮುದಾಯ ಇನ್ನೂ ಹಲವು ವಿಶಿಷ್ಟ ಆಚರಣೆಗಳ ಮೂಲಕ ತನ್ನತನ ಉಳಿಸಿಕೊಂಡಿದೆ. ಹೌದು, ಪಾರ್ಸಿಗಳಿಗೂ ಹದ್ದುಗಳಿಗೂ ಇರುವ ವಿಶಿಷ್ಟ ಸಂಬಂಧದ ಕುರಿತು ನಿಮಗೆ ಗೊತ್ತೆ?

ಪಾರ್ಸಿ ಹೊಸ ವರ್ಷದ ಸಮಯದಲ್ಲಿ ಆ ಸಮುದಾಯದ ಮಹಿಳೆಯರ ಸಂಭ್ರಮ

ಈಗಲ್ಲ, 25 ವರ್ಷಗಳ ಹಿಂದೆಯೇ ಗುಜರಾತಿನ ನವಸಾರಿಯಲ್ಲಿ ನಾವಿರುವಾಗ ಪತಿಯ ಹಿರಿಯ ಸಹೋದ್ಯೋಗಿ ಸುರ್ತಿ ಸಾಬ್ ಒಮ್ಮೆ ಹೇಳಿದ್ರು, 'ನಮ್ಮಲ್ಲಿ ಹೆಣ ಸುಡೋದೂ ಇಲ್ಲ, ಹೂಳೋದೂ ಇಲ್ಲ, ನದಿ ಸಮುದ್ರಕ್ಕೆ ಹಾಕೋದೂ ಇಲ್ಲ' ಎಂದು. ಅಂತಿಮ ಸಂಸ್ಕಾರವೆಂದು ಸತ್ತವರ ದೇಹವನ್ನು ಪ್ರಾಣಿಪಕ್ಷಿಗಳಿಗೆ ಆಹಾರವಾಗಿಸುವ ಅವರ ಪದ್ಧತಿಯ ಬಗ್ಗೆ ಕೇಳಿ ಮೈ ಜುಂ ಎನಿಸಿತ್ತು.

ಯಹೂದಿ ಮತ್ತು ಕ್ರೈಸ್ತ ಧರ್ಮಗಳೆರಡೂ ಮಿಳಿತಗೊಂಡ ಝೊರೊವಾಸ್ಟ್ರಿಯನ್ ತತ್ವವನ್ನು ಅನುಸರಿಸುವ ಜನಾಂಗ ಪಾರ್ಸಿ. ಮೂಲ ಪರ್ಶಿಯಾ ಅಥವಾ ಈಗಿನ ಇರಾನ್ ದೇಶದ ದಂಗೆಕೋರರಿಂದ ತಪ್ಪಿಸಿಕೊಂಡು ದಿಕ್ಕಾಪಾಲಾಗಿ ಚದುರಿ ಒಂದು ತಂಡ ಏಳು ದೋಣಿಗಳಲ್ಲಿ ಗುಜರಾತಿನ ಸಾಂಜನ್ ದಂಡೆಯನ್ನು ತಲುಪಿದ್ದು ಹತ್ತನೇ ಶತಮಾನದಲ್ಲಿ. ಎಲ್ಲ ವಲಸಿಗರಂತೆ ಸೇರಿದ ನೆಲದ ರೀತಿ, ನೀತಿ, ಭಾಷೆ, ದಿರಿಸುಗಳನ್ನು ತಮ್ಮದಾಗಿಸಿಕೊಂಡರೂ ತಮ್ಮ ಮೂಲ ಸಮುದಾಯದೊಳಗಿನ ಕೆಲವು ಆಚಾರ, ಸಂಸ್ಕೃತಿಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ ಈ ಸಮುದಾಯದವರು.

ಅಂದು ಖಾಲಿ ಕೈಯಲ್ಲಿ ಬಂದಿಳಿದ ಪಾರ್ಸಿಗಳು ವ್ಯಾಪಾರ ವಹಿವಾಟಿಗೆ ಕೈ ಹಾಕಿದರು. ಅದೇ ರಕ್ತಗತವಾಗಿ, ಭಾರತದಲ್ಲಿ ವಿವಿಧ ವಸಾಹತುಶಾಹಿಗಳಿದ್ದ ಕಾಲದಲ್ಲಿ ಮನೆಯಲ್ಲಿ ನಾಲ್ವರು ಮಕ್ಕಳಿದ್ದರೆ ಒಬ್ಬ ಫ್ರೆಂಚ್, ಇನ್ನೊಬ್ಬ ಡಚ್, ಮತ್ತೊಬ್ಬ ಪೋರ್ಚುಗೀಸ್, ಮಗದೊಬ್ಬನನ್ನು ಬ್ರಿಟಿಷ್ ಹೀಗೆ ಪಾರ್ಸಿ ಅಪ್ಪ ತನ್ನ ಮಕ್ಕಳನ್ನು ಬೇರೆ ಬೇರೆ ಕಂಪನಿಗಳ ಜೊತೆ ವ್ಯಾಪಾರಕ್ಕೆ ಇಳಿಸುತ್ತಿದ್ದನಂತೆ. ಗುಜರಾತಿ ಮತ್ತು ಇಂಗ್ಲಿಷ್ ಭಾಷೆಗಳ ಮೇಲೆ ಪ್ರಭುತ್ವ ಸಾಧಿಸಿರುವ ಪಾರ್ಸಿಗಳ ಮನೆ ಮಾತಿನ ಮಾಧ್ಯಮ ಕೂಡ ಇವೇ ಭಾಷೆಗಳೇ ಆಗಿವೆ.

ಪಾರ್ಸಿ ಕುಟುಂಬದಲ್ಲಿ ನಿತ್ಯದ ಸೀದಾ–ಸಾದಾ ಊಟ

ಪಾರ್ಸಿಗಳು ಇಂದು ಭಾರತದ ಅತ್ಯಂತ ಯಶಸ್ವಿ ಉದ್ಯಮಿಗಳಾಗಿ, ಕೆಲವರು ಕೋಟ್ಯಧೀಶರಾಗಿದ್ದಾರಷ್ಟೇ ಅಲ್ಲ, ಆಸ್ಪತ್ರೆ, ಅನಾಥಾಶ್ರಮ, ಶಾಲೆ ಕಾಲೇಜು ಮುಂತಾದ ಸಮುದಾಯ ಸೇವೆಗಳಲ್ಲೂ ಹೆಸರು ಗಳಿಸಿದ್ದಾರೆ. ವಿಜ್ಞಾನ, ಬ್ಯಾಂಕಿಂಗ್, ಟೆಕ್ಸ್‌ಟೈಲ್ಸ್, ಹೋಟೆಲ್ ಇತ್ಯಾದಿ ಕ್ಷೇತ್ರಗಳ ಮೂಲಕ ಮುಂಬೈಯನ್ನು ಮಹಾನಗರವಾಗಿಸುವಲ್ಲಿ ಪಾರ್ಸಿಗಳ ಕೊಡುಗೆ ದೊಡ್ಡದು. ಟಾಟಾ, ಭಾಭಾ, ಗೊದ್ರೆಜ್, ವಾಡಿಯಾ, ಮೆಹ್ತಾ ಇಂಥ ಹೆಸರುಗಳನ್ನು ಕೇಳದಿರುವವರು ಯಾರು? ಅವರ ವ್ಯಾಪಾರೀ ಮನೋಭಾವದಿಂದಾಗಿ ಕಾಜೂವಾಲಾ, ಘೀವಾಲಾ, ಮಸಾಲಾವಾಲಾ, ಸೋಡಾಬಾಟ್ಲಿ ಓಪನ್‌ವಾಲಾದಂಥ ಬಿರುದುಗಳೂ ಕೆಲವರಿಗೆ ದೊರಕಿದ್ದು ಅವುಗಳನ್ನು ಹೆಮ್ಮೆಯಿಂದ ಅಡ್ಡಹೆಸರಾಗಿ ಬಳಸಿಕೊಳ್ಳುತ್ತಿದ್ದಾರೆ. ಇಂದು ಜಗತ್ತಿನಲ್ಲಿಯೇ ಅತ್ಯಂತ ಯಶಸ್ವಿ ಮತ್ತು ಸಿರಿವಂತ ವಲಸೆ ಜನಾಂಗವೆಂದರೆ ಅದು ಪಾರ್ಸಿ ಎನ್ನುವುದರಲ್ಲಿ ಉತ್ಪ್ರೇಕ್ಷೆ ಇಲ್ಲ.

ಆದರೆ, ಒಮ್ಮೆ ಲಕ್ಷದಷ್ಟು ಏರಿದ್ದ ಭಾರತೀಯ ಪಾರ್ಸಿಗಳ ಸಂಖ್ಯೆ ಇಂದು ಅರವತ್ತು ಸಾವಿರದ ಆಸುಪಾಸಿಗೆ ಇಳಿದಿದೆ. ಕಾರಣ, ಸಮುದಾಯದ ಸೀಮಿತ ರಕ್ತಸಂಬಂಧಿಗಳ ನಡುವೆ ಮಾತ್ರ ವಿವಾಹ ನಡೆಯುತ್ತಿರುವುದು. ವಂಶಪಾರಂಪರ್ಯ ರೋಗಗಳು ಮುಂದುವರೆದು ಸಂತಾನ ಕಡಿಮೆಯಾಗುತ್ತಿದೆ. ಬೇರೆ ಧರ್ಮದವರೊಡನೆ ವಿವಾಹ ಮಾನ್ಯವಿಲ್ಲ, ಪ್ರೇಮವಿವಾಹ ಆದರೂ 'ಪಾರ್ಸಿ' ಎನಿಸುವುದಕ್ಕೆ ಹಲವು ಕಟ್ಟುಪಾಡುಗಳಿವೆ. ಹೀಗಾಗಿ ನಗರವಾಸಿ ಪಾರ್ಸಿಗಳು ಆಧುನಿಕ ಬುಡಕಟ್ಟು ಜನಾಂಗ ಎನಿಸುತ್ತಿದ್ದಾರೆ.

ಈಗ ಹದ್ದುಗಳ ಬಗ್ಗೆ ನೋಡೋಣ. ಯಾವುದೇ ದೊಡ್ಡ ಪ್ರಾಣಿ ಸತ್ತರೂ ಸರ್ರನೆ ಎರಗಿ ಬಂದು ಕಚ್ಚಿ ತಿಂದು ಖಾಲಿ ಮಾಡುವ ಹಕ್ಕಿ ಹದ್ದು. ಆಗಸದಲ್ಲಿ ಮೊದಲು ಒಂದು ಹದ್ದು ಗಸ್ತು ಹೊಡೆಯುತ್ತ ಮಾಹಿತಿ ಹಂಚುತ್ತದೆ, ಆಮೇಲೆ ಹತ್ತಾರು ಹದ್ದುಗಳು ಹಾರಾಡಿ ಧುತ್ತನೆ ಬಂದಿಳಿಯುತ್ತವೆ. ಕೊಳೆತ, ಬ್ಯಾಕ್ಟೀರಿಯಾ, ಫಂಗಸ್ ತುಂಬಿದ ಮಾಂಸ ತಿಂದರೂ ಜೀರ್ಣಿಸಿಕೊಳ್ಳುವಂಥ ತಾಕತ್ತು ಅವಕ್ಕಿದೆ. ಆ ಮೂಲಕ ನೆಲ ಮತ್ತು ನೀರನ್ನು ಸ್ವಚ್ಛವಾಗಿಸುವ ಹದ್ದುಗಳು ಜೀವಜಾಲದ ಪ್ರಮುಖ ಕೊಂಡಿಯೂ ಹೌದು. 'ಹದ್ದಿನ ಕಣ್ಣು' ನುಡಿಗಟ್ಟು ಹೇಳುವಂತೆ ಹತ್ತು ಕಿಮೀ ಎತ್ತರದಿಂದಲೂ ನೆಲದ ಮೇಲಿದ್ದ ಪ್ರಾಣಿಗಳನ್ನು ಗುರುತಿಸಬಲ್ಲದು. ಒಂಬತ್ತು ಜಾತಿಯ ಹದ್ದುಗಳು ನಮ್ಮಲ್ಲಿದ್ದರೂ ಪದರದ ಗರಿಗಳ, ಉದ್ದ ಕೊಕ್ಕಿನ, ಅಗಲ ರೆಕ್ಕೆಗಳ, ಬೂದು ಬಣ್ಣದ ಇಂಡಿಯನ್ ವಲ್ಚರ್ ನಮ್ಮಲ್ಲಿ ಸಾಮಾನ್ಯವಾಗಿ ಕಂಡುಬರುವಂಥದ್ದು.

ಅಗ್ನಿ ದೇವಾಲಯದ ಮುಂದೆ ಪಂದಕಿಗಳ ಪ್ರತಿಮೆಗಳು

ಹಿಂದೆ ತೊಂಬತ್ತರ ದಶಕದಲ್ಲಿ ಪ್ರಾಣಿಗಳಿಗೆ ನೋವುನಿವಾರಕವಾಗಿ ಡೈಕ್ಲೊಫೆನಾಕ್ ಮಾತ್ರೆಯನ್ನು ಕೊಡಲಾರಂಭಿಸಿದಾಗ ಇದ್ದಕ್ಕಿದ್ದಂತೆಯೇ ಇಡೀ ದಕ್ಷಿಣ ಏಷ್ಯಾದಲ್ಲಿ ಹದ್ದುಗಳ ಸಂತತಿ ಕ್ಷೀಣಗೊಳ್ಳಲಾರಂಭಿಸಿತ್ತು. ಸತ್ತ ಪ್ರಾಣಿಗಳ ದೇಹದ ಅಲ್ಪ ಪ್ರಮಾಣದ ಡೈಕ್ಲೊಫೆನಾಕ್ ಕೂಡ ಹದ್ದಿನ ದೇಹಕ್ಕೆ ಮಾರಕ; ಅದನ್ನು ಜೀರ್ಣಿಸಿಕೊಳ್ಳಲಾಗದೆ ಕಿಡ್ನಿ ಊತ ಉಂಟಾಗಿ ಸಾವನ್ನಪ್ಪುತ್ತವೆ. ಈ ವಿಷಯದ ಬಗ್ಗೆ ಶೋಧ ನಡೆದು ಆ ಔಷಧವನ್ನು ನಿಷೇಧಿಸುವಷ್ಟರಲ್ಲಿ ಆಗಲೇ ನೂರಕ್ಕೆ ತೊಂಬತ್ತರಷ್ಟು ಹದ್ದುಗಳು ಸಾವಿಗೀಡಾಗಿದ್ದವು. ಆಡಳಿತದ ತೆರೆಮರೆಯಲ್ಲಿ ವೆಟರಿನರಿ ಡೈಕ್ಲೊಫೆನಾಕ್ ಮಾರಾಟ, ಬಳಕೆ ಇಂದಿಗೂ ಕೆಲಮಟ್ಟಿಗೆ ಇದ್ದೇ ಇದೆ. ಕಳೆದ ವರ್ಷ ಮಹಾರಾಷ್ಟ್ರದ ರಾಯಗಡದಲ್ಲಿ ಬೀಸಿದ 'ನಿಸರ್ಗ' ಚಂಡಮಾರುತ ಕೂಡ ತಾಳೆಮರಗಳ ತುದಿಗಳಲ್ಲಿ ಗೂಡು ಕಟ್ಟಿಕೊಂಡಿದ್ದ ಅನೇಕ ಹದ್ದುಗಳನ್ನು ಗೂಡು, ಮರಿಗಳ ಸಹಿತ ಹೊಸಕಿ ಹಾಕಿದೆ. ಹೀಗೆ ಹದ್ದುಗಳ ಸಂಖ್ಯೆ ಏರಬೇಕಾದ ಪ್ರಮಾಣದಲ್ಲಿ ಏರುತ್ತಿಲ್ಲ. ಅವುಗಳ ಸಂಖ್ಯೆ ಈಗ ಕೆಲವೇ ಸಾವಿರಕ್ಕೆ ಇಳಿದಿದೆ.

ಪಾರ್ಸಿಗಳು ಹಾಗೂ ಹದ್ದುಗಳ ನಡುವೆ ಒಂದು ವಿಶೇಷವಾದ ಸಂಬಂಧ ಇದೆ. ಪಾರ್ಸಿ ಜನರಲ್ಲಿ ಮಾನವನ ಮೃತದೇಹವನ್ನು ಅಂತಿಮ ಪ್ರಾರ್ಥನೆ ಸಲ್ಲಿಸಿದ ನಂತರ ಸುಡದೆ, ಹೂಳದೆ, ನೀರಿಗೆ ಹಾಕದೆ ಹಾಗೆಯೇ ಪಕ್ಷಿಗಳು ತಿಂದು ಹೋಗುವಂತೆ ಇಡುತ್ತಾರೆ. ಇದೇ 'ಡೊಕ್ಮೆನಿಶಿನಿ' ಸಂಪ್ರದಾಯ. ಅದಕ್ಕಾಗಿಯೇ ನಿರ್ಮಿಸಿರುವ ಎತ್ತರದ, ಮೇಲೆ ಸುತ್ತಲೂ ಗೋಡೆಯಿದ್ದು ಅಗಲ ತಟ್ಟೆಯಂತಿರುವ 'ಮೌನ ಗೋಪುರ'ದಲ್ಲಿ ಶವವನ್ನು ಇಟ್ಟು ಬರುತ್ತಾರೆ. ಹದ್ದುಗಳು ಗುಂಪಾಗಿ ಬಂದು ಅರ್ಧ ತಾಸಿನಲ್ಲಿ ಅದನ್ನು ಭಕ್ಷಿಸಿ ಸ್ವಚ್ಛಗೊಳಿಸುತ್ತವೆ. ಬೇರೆ ಪಕ್ಷಿಗಳೂ ತಮ್ಮ ಪಾಲು ಪಡೆಯಲು ಹಾರಿ ಬರುತ್ತವೆ.

ಲೋಬಾನದ ಹೊಗೆ ಹರಡುವ ಸೊಬಗು

ಪಾರ್ಸಿಗಳು ನೆಲೆಯೂರಿರುವ ನವಸಾರಿ, ಮುಂಬೈ, ಹೈದರಾಬಾದ್‌ಗಳು ಬೆಳೆದು ಪ್ರಮುಖ ನಗರಗಳಾಗಿವೆ. ಹದ್ದುಗಳ ಹಾರಾಟ ಕಡಿಮೆಯಾಗಿದೆ. 'ಮೌನ ಗೋಪುರ'ಗಳಿರುವ ದೂಂದಿಯಾವಾಡಿಗಳ ಆಸುಪಾಸುಗಳಲ್ಲಿ ಕಟ್ಟಡಗಳು ಮೇಲೆದ್ದು ಕೊಳೆತ ಶವಗಳ ವಾಸನೆ, ದೃಶ್ಯಗಳಿಗೆ ಜನರ ಆಕ್ಷೇಪಗಳು ಬರಲಾರಂಭಿಸಿವೆ. ಅವುಗಳ ನಿವಾರಣೆಗೆ ಏರ್ ಪ್ಯೂರಿಫೈಯರ್ ಬಳಸಲಾಗುತ್ತಿದೆ, ಶವಗಳನ್ನು ಒಣಗಿಸಲೆಂದು ಸೌರ ಬಿಸಿಲನ್ನು ಕೇಂದ್ರೀಕೃತಗೊಳಿಸುವ ಸೋಲಾರ್ ಕಾನ್ಸಂಟ್ರೇಟರುಗಳನ್ನು ಹೂಡಲಾಗಿದೆ, ಆದರೆ ಅವುಗಳ ಬಿಸಿಯಿಂದಾಗಿ ಇತರೆ ಪಕ್ಷಿಗಳೂ ಸಮೀಪ ಸುಳಿಯುತ್ತಿಲ್ಲ. ಹಾಗಾಗಿ ಈಗೀಗ ಅಂತ್ಯಸಂಸ್ಕಾರಕ್ಕೆಂದು ಪಾರ್ಸಿಗಳು ವಿದ್ಯುತ್ ಚಿತಾಗಾರವನ್ನಾಗಲೀ, ಹೂಳಲು ಸ್ಥಳವನ್ನಾಗಲೀ ಹುಡುಕಿ ಹೋಗಬೇಕಾದ ಅನಿವಾರ್ಯವನ್ನು ಒಪ್ಪಿಕೊಳ್ಳಲೇಬೇಕಾಗಿದೆ.

ಪಾರ್ಸಿಗಳ ಸಂಖ್ಯೆಯೂ ಕಡಿಮೆ ಆಗುತ್ತಿದೆ, ಹದ್ದುಗಳ ಸಂಖ್ಯೆಯೂ ಅದೇ ಹಾದಿ ಹಿಡಿದಿದೆ. ಇದು ವಿಪರ್ಯಾಸವೋ ಅಥವಾ ಕಾಕತಾಳೀಯವೋ?

❖

[illegible] ಕಥೆಯ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಸೋಮನಗೌಡರ ನಾಯಿ



ಸೋಮನಗೌಡರು ಒಮ್ಮೆ ತಿರುಗಾಡುತ್ತಾ ಬರುವಾಗ ದಾರಿಯಲ್ಲಿ ಒಂದು ನಾಯಿಮರಿಯು ಪ್ರೀತಿಯಿಂದ ಅವರ ಹಿಂದೆಯೇ ಬಂದಿತು



ಗೌಡರನ್ನು ಹಿಂಬಾಲಿಸಿದ ನಾಯಿಮರಿ ಅವರ ಮನೆಯವರೆಗೂ ಬಂದಿತು. ಬಳಿಕ ಅವರ ಮನೆಯಲ್ಲೇ ಇದ್ದು ದನ ಕರು, ಹೊಲವನ್ನೆಲ್ಲಾ ಕಾಯುತ್ತಾ ಬೆಳೆಯಿತು



ನಾಯಿಯ ಕೆಲಸ ಗೌಡರ ಮನೆಯ ಎಲ್ಲರಿಗೂ ಬಹಳ ಅಚ್ಚುಮೆಚ್ಚಾಗಿಬಿಟ್ಟಿತು. ಸೋಮನಗೌಡರ ನಾಯಿ ಎಂದೇ ಕರೆಯಲ್ಪಡುತ್ತಿತ್ತು



ಹೀಗೆ ಎಲ್ಲರ ಪ್ರೀತಿಗೆ ಪಾತ್ರವಾದ ನಾಯಿಯು ಪ್ರತಿದಿನ ಬಹಳ ಎಚ್ಚರದಿಂದ ಹಗಲು ರಾತ್ರಿ ಹೊಲ, ಮನೆ, ತೋಟ ಕಾಯುತ್ತಲೇ ಇತ್ತು



ಒಮ್ಮೆ ತೋಟದ ಮನೆಗೆ ಕಳ್ಳರು ನುಗ್ಗಿ ಕದಿಯಲು ಯತ್ನಿಸಿದರು. ಆಗ ಈ ನಾಯಿ ಕಳ್ಳರನ್ನು ಹಿಮ್ಮೆಟ್ಟಿಸಿತು. ಗಾಬರಿಯಾದ ಕಳ್ಳರು ಕಳವು ಮಾಡಿದ ವಸ್ತುಗಳನ್ನು ಬಿಟ್ಟು ಓಡಿಹೋದರು



ಬೆಳಗ್ಗೆ ನಾಯಿಯು ಸೋಮನಗೌಡರ ಪಂಚೆಯನ್ನು ಕಚ್ಚಿ ಜಗ್ಗುತ್ತಾ ಕಳವು ನಡೆದಲ್ಲಿಗೆ ಕರೆದೊಯ್ದಿತು. ಕಳ್ಳರನ್ನು ಓಡಿಸಿದ ನಾಯಿ ಬಗ್ಗೆ ತುಂಬಾ ಪ್ರೀತಿ ಮೂಡಿ ಅದನ್ನು ತಬ್ಬಿಕೊಂಡು ಮುದ್ದಿಸಿದರು

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

11ರಿಂದ ಗುಣಿಸುವ ಸುಲಭದ ವಿಧಾನ

ಒಂದು ಸಂಖ್ಯೆಯನ್ನು ಬರೆದುಕೊಂಡು ಅದನ್ನು 11ರಿಂದ ಗುಣಿಸುವ ಸುಲಭ ವಿಧಾನ ಹೀಗಿದೆ. ನೀವು ಬರೆದುಕೊಂಡ ಸಂಖ್ಯೆಯ ಎಡ ಹಾಗೂ ಬಲಕ್ಕೆ 0 ಹಾಕಿರಿ. ಬಿಡಿಯಿಂದ ಎರಡೆರಡು ಅಂಕಿಗಳನ್ನು ಕೂಡುತ್ತಾ ಹೋಗಿ. ಕೂಡಿಸಿದಾಗ ಕೈಲೆ ಬಂದರೆ ಅದನ್ನು ಮುಂದಿನ ಸಂಖ್ಯೆಗೆ ಕೂಡಿಸುತ್ತಾ ಮುಂದುವರಿಯಿರಿ.

ಉದಾ: **6789431** ಗುಣ್ಯ

x 11

ಗುಣ್ಯ ಸಂಖ್ಯೆಯ ಎಡ ಹಾಗೂ ಬಲಕ್ಕೆ 0 ಹಾಕಿ

0 6 7 8 9 4 3 1 0

ಬಿಡಿಯಿಂದ ಕೂಡಿಸುತ್ತಾ ಸಾಗಿರಿ

0 + 1 = 1
1 + 3 = 4
3 + 4 = 7
4 + 9 = 3 (ಕೈಲೆ 1)
9 + 8 + 1 (ಕೈಲೆ) = 8 (ಕೈಲೆ 1)
8 + 7 + 1 (ಕೈಲೆ) = 6 (ಕೈಲೆ 1)
7 + 6 + 1 (ಕೈಲೆ) = 4 (ಕೈಲೆ 1)
6 + 0 + 1 (ಕೈಲೆ) = 7

ಈಗ 74683741 ಇದೇ ಉತ್ತರ. ಗುಣಿಸಿ ಖಾತ್ರಿ ಮಾಡಿಕೊಳ್ಳಿ

ಮಜ ಮಜ ಮಜಕೂರದ ಆಗಸ್ಟ್ 29ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಎಡಭಾಗದ ಸಂಗತಿಗಳಿಗೆ ಬಲಭಾಗದ ಸಂಗತಿಗಳನ್ನು ಸರಿಹೊಂದಿಸಿರಿ

ಅ ವಿಭಾಗ - ಆಟಗಳು ಆಟಗಾರರ ಸಂಖ್ಯೆ

1. ವಾಲಿಬಾಲ್	A. 9
2. ಕಬಡ್ಡಿ	B. 11
3. 4x100 ರಿಲೆ	C. 7
4. ಹಾಕಿ	D.6
5. ಕೊಕ್ಕೊ	E. 4

ಬ ವಿಭಾಗ - ಶಬ್ದಗಳು ಅರ್ಥಗಳು

1. ವೃಶ್ಚಿಕ	A. ಗಂಗಾಧರ
2. ಬುಗುಟು	B. ಪೆಟ್ಟಿನಿಂದ ಆಗುವ ಊತ
3. ಧೂಮ	C. ಶಕಟ ಚೇಳು
4. ದರ್ಭೆ	D. ಹೊಗೆಯಿಂದ ಓಡುವ ಗಾಡಿ
5. ತೀರ್ಥ ಮಸ್ತಕ	E. ಮೊನಚಾದ ಎಲೆಯುಳ್ಳ ಹುಲ್ಲು

ಕ ವಿಭಾಗ - ಮಾಸಗಳು ಹಬ್ಬಗಳು

1. ಶ್ರಾವಣ	A. ಬಸವ ಜಯಂತಿ
2. ಭಾದ್ರಪದ	B. ಯುಗಾದಿ
3. ಮಾಘ	C. ಗಣಪತಿ ಹಬ್ಬ
4. ಚೈತ್ರ	D. ಶಿವರಾತ್ರಿ
5. ವೈಶಾಖ	E. ನಾಗರಪಂಚಮಿ

ಶಬ್ದಗಳೊಡನೆ ಸರಸ

ಇಲ್ಲಿ ಕೊಟ್ಟಿರುವ ಸುಳಿವಿಗನುಗುಣವಾಗಿ ನೀವು ಉತ್ತರಿಸಬೇಕಾದ ಪದಗಳು ಇಂಗ್ಲಿಷಿನ 26 ಅಕ್ಷರಗಳಲ್ಲಿ ಎರಡಕ್ಷರಗಳಾಗಿರಬೇಕು. ಉಚ್ಚಾರದಲ್ಲಿ ಅವು ಕನ್ನಡ ಪದಗಳಂತೆ ತೋರುತ್ತವೆ. ಪ್ರಯತ್ನಿಸಿ ಉದಾ: ತಂಪು ಪದದ ವಿರುದ್ಧ ಪದ

1. B C ತಂಪು ಪದದ ವಿರುದ್ಧ ಪದ
2. ☐☐ ಒಂದು ಪ್ರಶ್ನಾರ್ಥಕ ಪದ
3. ☐☐ ಒಂದು ಜಲಚರ ಜೀವಿ
4. ☐☐ ಒಂದು ಪ್ರಾಚೀನಕಾಲದ ಯುದ್ಧಾಸ್ತ್ರ
5. ☐☐ ಉಡಾಳ
6. ☐☐ ಸಂತೋಷದಿಂದ ಹಾಕುವ ಸಿಳ್ಳೆ
7. ☐☐ ಚಿಕ್ಕಮಕ್ಕಳ ಒಂದು ವಾಯುವಾದ್ಯ
8. ☐☐ ಸಂಖ್ಯಾ ಎಣಿಕೆಯಲ್ಲಿನ ಮೊದಲ ಸ್ಥಾನ
9. ☐☐ ಇವಳು ಪದಕ್ಕೆ ಸಮಾನ ಪದ
10. ☐☐ 'ಸಿಲೆಕ್ಟ್' ಎಂಬ ಪದದ ಕನ್ನಡ ಪದ

2. ಹೇಗಾದರೂ ಓದಿ ನೋಡಿ

ಗಜಾನನನ ಜಾಗ
→ ←

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ ಹಿಗ್ಗು

1. ಸವಾರಿ	2. ಗಟಾರ	3. ನಗರ	4. ಸತ್ಕಾರ
5. ಕೊಪ್ಪಳ	6. ಕುಟಿಲ	7. ಕಚೇರಿ	8. ಬೇಲೂರು

ಅದಲು ಬದಲು ಕಂಚಿ ಕದಲು ...

1. Seal	2. Dear	3. Male	4. Tear	5. Mile
6. Lead	7. Spot	8. Heat	9. Rain	10. Mean

ಶಬ್ದಗಳೊಡನೆ ಸರಸ

1. ಬೀದರ	2. ಸೋದರ	3. ಆದರ	4. ಹಂದರ
5. ಚದರ	6. ಸುಂದರ	7. ಪದರ	8. ಉದರ

ಟ್ವೆಂಟಿ 20 ಮ್ಯಾಚ್

1- I, 2-O, 3-E, 4-G, 5- K, 6- M, 7- Q, 8- T, 9- J, 10- R, 11- S, 12- A, 13- P, 14- N, 15- H, 16- C, 17- B, 18- D, 19- F, 20- L

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಕವನ್ ಎಸ್. ಗೌಡ,
ಬೆಂಗಳೂರು

ಕೃತಿ ಕರುಗಲ್,
ಕೊಪ್ಪಳ

ಗ್ರೀಷ್ಮ ತಟ್ಟಿ,
ತಾಂಡವಪುರ (ಮೈಸೂರು)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಶೂಟಿಂಗ್‌ನಲ್ಲಿ ಬೆಳ್ಳಿ ಗೆದ್ದ ಸಿಂಘರಾಜ್; ಬ್ಯಾಡ್ಮಿಂಟನ್‌ನಲ್ಲಿ ಮನೋಜ್‌ಗೆ ಕಂಚಿನ ಪದಕ

ಮನೀಷ್–ಪ್ರಮೋದ್ ಚಿನ್ನದ ಆಮೋದ

ಟೋಕಿಯೊ (ಪಿಟಿಐ): ಬೆಳಿಗ್ಗೆ ಶೂಟಿಂಗ್‌ನಲ್ಲಿ, ಸಂಜೆ ಬ್ಯಾಡ್ಮಿಂಟನ್‌ನಲ್ಲಿ ಪದಕಗಳ ಸಂಭ್ರಮ. ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳ ಅಮೋಘ ಸಾಧನೆ ಶನಿವಾರವೂ ಮುಂದುವರಿಯಿತು. ಶೂಟಿಂಗ್‌ನಲ್ಲಿ ಮನೀಷ್ ನರ್ವಾಲ್ ದಾಖಲೆ ಬರೆದು ಚಿನ್ನ ಗೆದ್ದುಕೊಂಡರೆ ಬ್ಯಾಡ್ಮಿಂಟನ್‌ನಲ್ಲಿ ಪ್ರಮೋದ್ ಭಗತ್ ಐತಿಹಾಸಿಕ ಚಿನ್ನಕ್ಕೆ ಮುತ್ತು ನೀಡಿದರು.

ಶೂಟಿಂಗ್‌ನ ಎಸ್‌ಎಚ್‌–1 ವಿಭಾಗದ ಮಿಶ್ರ 50 ಮೀಟರ್ಸ್ ಪಿಸ್ತೂಲ್ ಸ್ಪರ್ಧೆಯಲ್ಲಿ ಮನೀಷ್ ನರ್ವಾಲ್ 218.2 ಸ್ಕೋರು ಸಂಪಾದಿಸಿ ಚಿನ್ನ ಗೆದ್ದರೆ ಸಿಂಘರಾಜ್ ಅಡಾನ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಬ್ಯಾಡ್ಮಿಂಟನ್‌ನ ಕಂಚಿನ ಪದಕ ಮನೋಜ್ ಸರ್ಕಾರ್ ಪಾಲಾಯಿತು.

ಶೂಟಿಂಗ್‌ನ ಎಸ್‌ಎಚ್‌–1 ವಿಭಾಗದಲ್ಲಿ ವಿಶ್ವ ದಾಖಲೆಯನ್ನು ಹೊಂದಿರುವ 19 ವರ್ಷದ ಮನೀಷ್ ಪ್ಯಾರಾಲಿಂಪಿಕ್ ದಾಖಲೆಯನ್ನೂ ತಮ್ಮದಾಗಿಸಿಕೊಂಡರು. ಪ್ಯಾರಾಲಿಂಪಿಕ್ಸ್‌ನಲ್ಲಿ ಇದು ಅವರ ಚೊಚ್ಚಲ ಸ್ಪರ್ಧೆಯಾಗಿದೆ.

ಚಿಕ್ಕಂದಿನಿಂದಲೇ ಕ್ರೀಡೆಯಲ್ಲಿ ಆಸಕ್ತಿ ಹೊಂದಿದ್ದ ಮನೀಷ್ ಫುಟ್‌ಬಾಲ್ ಆಟಗಾರನಾಗುವ ಆಸೆ ಹೊಂದಿದ್ದರು. ಆದರೆ ಬಲಗಾಲಿನಲ್ಲಿ ಕಾಣಿಸಿಕೊಂಡ ಸಮಸ್ಯೆಯಿಂದಾಗಿ ಕನಸು ನನಸಾಗಲಿಲ್ಲ. ತಂದೆ ಕುಸ್ತಿಪಟು ಆಗಿದ್ದರು. ಮಗನನ್ನು ಹೇಗಾದರೂ ಮಾಡಿ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು ಎಂದುಕೊಂಡಿದ್ದ ಅವರು ಗೆಳೆಯನೊಬ್ಬನ ಸಲಹೆಯಂತೆ ವಲ್ಲಭನಗರದಲ್ಲಿ ರಾಕೇಶ್ ಠಾಕೂರ್ ಅವರ ಶೂಟಿಂಗ್ ರೇಂಜ್‌ಗೆ ಕರೆದುಕೊಂಡು ಹೋದರು. ಅಲ್ಲಿಂದ ಅವರ ಬದುಕಿನ ಗತಿ ಬದಲಾಯಿತು.

ಕೋಚ್ ಜಯಪ್ರಕಾಶ್ ನೌಠಿಯಾಲ್ ಬಳಿ ತರಬೇತಿಗೆ ಸೇರಿದ ನಂತರ ಇನ್ನಷ್ಟು ಪ್ರೌಢಿಮೆ ಬೆಳೆಸಿಕೊಂಡರು. 2017ರಲ್ಲಿ ಬ್ಯಾಂಕಾಕ್ ವಿಶ್ವಕಪ್‌ನಲ್ಲಿ ಚಿನ್ನ ಗೆದ್ದರು. ಮುಂದಿನ ವರ್ಷ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಚಿನ್ನ ಹಾಗೂ ಬೆಳ್ಳಿ ಪದಕ ಅವರದಾಯಿತು.

ಭಾರತಕ್ಕೆ ‘ಮೊದಲ’ ಚಿನ್ನ: ವಿಶ್ವ ಚಾಂಪಿಯನ್ ಮತ್ತು ಏಷ್ಯನ್ ಚಾಂಪಿಯನ್ ಆಗಿರುವ ಪ್ರಮೋದ್ ಭಗತ್ ಫೈನಲ್‌ನಲ್ಲಿ ಬ್ರಿಟನ್‌ನ ಡ್ಯಾನಿಯಲ್ ಬೆತೆಲ್ ವಿರುದ್ಧ ನೇರ ಗೇಮ್‌ಗಳ ಗೆಲುವು ಸಾಧಿಸಿದರು. ಇದು, ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್‌ನ ಬ್ಯಾಡ್ಮಿಂಟನ್‌ನಲ್ಲಿ ಭಾರತ ಗೆದ್ದ ಮೊದಲ ಚಿನ್ನವಾಗಿದೆ. ಪ್ಯಾರಾಲಿಂಪಿಕ್ಸ್‌ನಲ್ಲಿ ಈ ಕ್ರೀಡೆಯನ್ನು ಇದೇ ಮೊದಲ ಬಾರಿ ಸೇರಿಸಲಾಗಿದೆ.

ನಾಲ್ಕನೇ ವಯಸ್ಸಿನಲ್ಲಿ ಪೋಲಿಯೊ ಪೀಡಿತರಾದ ಪ್ರಮೋದ್ ನೆರೆಮನೆಯ ಮಕ್ಕಳು ಆಡುತ್ತಿದ್ದುದನ್ನು ಕಂಡು ಈ ಆಟದ ಮೇಲೆ ಆಸಕ್ತಿ ಹೊಂದಿದ್ದರು. ಅಂಗವೈಕಲ್ಯ ಇಲ್ಲದವರೊಂದಿಗೆ ಆರಂಭದಲ್ಲಿ ಆಡುತ್ತಿದ್ದ ಅವರು 2006ರಲ್ಲಿ ಪ್ಯಾರಾ ಅಥ್ಲೆಟಿಕ್ಸ್ ಕಡೆಗೆ ಹೊರಳಿದ್ದರು. ಬ್ಯಾಡ್ಮಿಂಟನ್ ಕೋಚ್ ಆಗಿಯೂ ಕಾರ್ಯನಿರ್ವಹಿಸಿದ್ದ ಅವರು ಟೋಕಿಯೊ ಪ್ಯಾರಾಲಿಂಪಿಕ್ಸ್ ದೃಷ್ಟಿಯಿಂದ 2019ರಿಂದ ಆಟದ ಮೇಲೆ ಪೂರ್ಣ ಗಮನ ಕೇಂದ್ರೀಕರಿಸಿದರು.

ಅಡಾನಗೆ ಡಬಲ್ ಸಂಭ್ರಮ: ಎಸ್‌ಎಚ್–1 ವಿಭಾಗದ 10 ಮೀಟರ್ಸ್ ಏರ್ ಪಿಸ್ತೂಲು ವಿಭಾಗದಲ್ಲಿ ಎರಡು ದಿನಗಳ ಹಿಂದೆ ಕಂಚಿನ ಪದಕ ಗೆದ್ದಿದ್ದ 39 ವರ್ಷದ ಸಿಂಘರಾಜ್ ಅಡಾನ 216.7 ಸ್ಕೋರು ಗಳಿಸಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಪೋಲಿಯೊದಿಂದಾಗಿ ಸೊಂಟದ ಕೆಳಭಾಗದಲ್ಲಿ ಬಲ ಕಳೆದುಕೊಂಡಿರುವ ಅವರು 40 ಕಿಲೋಮೀಟರ್ ದೂರದ ಶೂಟಿಂಗ್ ರೇಂಜ್‌ಗೆ ಹೋಗಿ ಅಭ್ಯಾಸ ಮಾಡುತ್ತಿದ್ದರು. ಫರಿದಾಬಾದ್‌ನ ಬಡ ಕುಟುಂಬವೊಂದರ ಕುಡಿಯಾಗಿರುವ ಅವರ ಅಜ್ಜ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಅಣ್ಣಂದಿರ ಸೋಲೇ ಗೆಲುವಿನ ಸೋಪಾನ: 31 ವರ್ಷದ ಮನೋಜ್ ಸರ್ಕಾರ್ ಒಂದನೇ ವಯಸ್ಸಿನಿಂದಲೇ ಪೋಲಿಯೊ ಬಾಧಿತರಾಗಿ ಕಾಲಿನ ಸ್ವಾದೀನ ಕಳೆದುಕೊಂಡಿದ್ದರು. ಐದನೇ ವಯಸ್ಸಿನಿಂದ ಬ್ಯಾಡ್ಮಿಂಟನ್ ಆಡಲು ಆರಂಭಿಸಿದರು. ಹಿರಿಯ ಸಹೋದರರನ್ನು ಪ್ರತಿ ಬಾರಿಯೂ ಸೋಲಿಸಿ ಸಂಭ್ರಮಿಸುತ್ತಿದ್ದ ಅವರು ಅದರಿಂದ ಹುರುಪುಗೊಂಡು ಈ ಕ್ರೀಡೆಯನ್ನು ಗಂಭೀರವಾಗಿ ಅಭ್ಯಾಸ ಮಾಡತೊಡಗಿದರು. ಅಂಗವೈಕಲ್ಯ ಇಲ್ಲದವರ ಜೊತೆ 11ನೇ ತರಗತಿ ವರೆಗೆ ಅಂತರ ಶಾಲಾ ಟೂರ್ನಿಗಳಲ್ಲಿ ಆಡುತ್ತಿದ್ದರು. ನಂತರ ಪ್ಯಾರಾ ಬ್ಯಾಡ್ಮಿಂಟನ್ ಆಡಲು ಶುರು ಮಾಡಿದರು. 2016ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.

ಸಿಂಘರಾಜ್ ಅಡಾನ –ರಾಯಿಟರ್ಸ್ ಚಿತ್ರ


ಮನೋಜ್ ಸರ್ಕಾರ್ –ರಾಯಿಟರ್ಸ್ ಚಿತ್ರ

ಸೆಮಿಫೈನಲ್ ಫಲಿತಾಂಶ
- ಎದುರಾಳಿ - ಸತ್ಯವಾನ್ ಫ್ರೆಡಿ
- ದೇಶ: ಇಂಡೊನೇಷ್ಯಾ
- ಸ್ಕೋರು: ***21-9, 21-15***

ಫೈನಲ್ ಪಂದ್ಯ
ಎದುರಾಳಿ - ಲೂಕಾಸ್ ಮಜೂರ್
ದೇಶ: ಫ್ರಾನ್ಸ್
ಆರಂಭ: ಬೆಳಿಗ್ಗೆ ***6.15***
(ಭಾರತೀಯ ಕಾಲಮಾನ)
ನೇರ ಪ್ರಸಾರ: ಯೂರೊ ಸ್ಪೋರ್ಟ್ಸ್

ದಾಖಲೆಯ ಹೊಸ್ತಿಲಲ್ಲಿ ಕನ್ನಡಿಗ ಸುಹಾಸ್

ಬೆಂಗಳೂರು: ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾನುವಾರ ಬೆಳಿಗ್ಗೆ ನಡೆಯುವ ಪುರುಷರ ಬ್ಯಾಡ್ಮಿಂಟನ್ (ಎಸ್‌ಎಲ್–4) ಫೈನಲ್‌ನಲ್ಲಿ ಕನ್ನಡಿಗ ಸುಹಾಸ್ ಯತಿರಾಜ್ ಕಣಕ್ಕೆ ಇಳಿಯುವುದರೊಂದಿಗೆ ದಾಖಲೆ ಬರೆಯಲಿದ್ದಾರೆ. ಈ ಹಣಾಹಣಿಯಲ್ಲಿ ಸುಹಾಸ್ ಗೆದ್ದರೂ ಸೋತರೂ ಪದಕವಂತೂ ಖಚಿತ. ಈ ಮೂಲಕ, ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಭಾರತದ ಮೊದಲ ಅಧಿಕಾರಿ ಎಂಬ ಶ್ರೇಯಸ್ಸು ಅವರದಾಗಲಿದೆ.


ಸುಹಾಸ್ ಯತಿರಾಜ್ –ಫೇಸ್‌ಬುಕ್ ಚಿತ್ರ

ಹಾಸನದಲ್ಲಿ ಜನಿಸಿ ಶಿವಮೊಗ್ಗದಲ್ಲಿ ಬೆಳೆದ ಸುಹಾಸ್ ದಕ್ಷಿಣ ಕನ್ನಡದ ಸುರತ್ಕಲ್‌ನಲ್ಲಿರುವ ಎನ್‌ಐಟಿಯಲ್ಲಿ ಕಂಪ್ಯೂಟರ್ ಎಂಜಿನಿಯರಿಂಗ್ ಮಾಡಿದ್ದಾರೆ. ಈಗ ಉತ್ತರಪ್ರದೇಶದಲ್ಲಿ ಐಎಎಸ್ ಅಧಿಕಾರಿ. ಮಥುರಾದ ಮುಖ್ಯ ಅಭಿವೃದ್ಧಿ ಅಧಿಕಾರಿಯಾಗಿದ್ದ ಅವರು ಆರು ಜಿಲ್ಲೆಗಳ ಡಿಎಂ (ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್) ಆಗಿ ಸೇವೆ ಸಲ್ಲಿಸಿದ ನಂತರ ಈಗ ಗೌತಮ ಬುದ್ಧ ನಗರ ಜಿಲ್ಲೆಯ ದಂಡಾಧಿಕಾರಿ.

2016ರಲ್ಲಿ ಚೀನಾದ ಬೀಜಿಂಗ್‌ನಲ್ಲಿ ನಡೆದ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದು ಇತಿಹಾಸ ನಿರ್ಮಿಸಿದ್ದ ಸುಹಾಸ್ ಯತಿರಾಜ್ ಸೇವೆಯಲ್ಲಿರುವಾಗ ಅಂತರರಾಷ್ಟ್ರೀಯ ಕ್ರೀಡಾಕೂಟವೊಂದರಲ್ಲಿ ಪದಕ ಗಳಿಸಿದ ಭಾರತದ ಮೊದಲ ಐಎಎಸ್ ಅಧಿಕಾರಿ ಎನಿಸಿಕೊಂಡಿದ್ದರು. ಎರಡು ವರ್ಷಗಳ ನಂತರ ವಾರಾಣಸಿಯಲ್ಲಿ ನಡೆದ ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲೂ ಚಿನ್ನ ಗಳಿಸಿದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಹಿಂದೆ ಒಟ್ಟು ನಾಲ್ಕು ಚಿನ್ನ, ಐದು ಬೆಳ್ಳಿ, ಎಂಟು ಕಂಚಿನ ಪದಕಗಳನ್ನು ಗೆದ್ದಿದ್ದಾರೆ.

ಹಿತ ತಂದ ರೋಹಿತ್ ಶತಕ

4ನೇ ಟೆಸ್ಟ್: ಪೂಜಾರ ಅರ್ಧಶತಕ; ರಾಹುಲ್ ದಿಟ್ಟ ಆಟ

ಲಂಡನ್ (ಎಎಫ್‌ಪಿ): ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಬಿಟ್ಟುಕೊಟ್ಟು ಸಂಕಷ್ಟಕ್ಕೆ ಒಳಗಾಗಿದ್ದ ಭಾರತಕ್ಕೆ ರೋಹಿತ್ ಶರ್ಮಾ ಅವರ ‘ಮೊದಲ’ ಶತಕ ಮತ್ತು ಚೇತೇಶ್ವರ್ ಪೂಜಾರ ಅವರ ಅರ್ಧಶತಕ ಚೇತರಿಕೆ ತುಂಬಿತು. ಇಂಗ್ಲೆಂಡ್ ಎದುರಿನ ನಾಲ್ಕನೇ ಟೆಸ್ಟ್ ಪಂದ್ಯದ ಮೂರನೇ ದಿನ ರೋಹಿತ್ (127; 256 ಎ, 14 ಬೌಂಡರಿ, 1 ಸಿಕ್ಸರ್) ಮತ್ತು ಪೂಜಾರ (61; 126 ಎ, 9 ಬೌಂ) ಅವರ ದಿಟ್ಟ ಆಟ ಭಾರತಕ್ಕೆ ಮಹತ್ವದ 171 ರನ್‌ಗಳ ಮುನ್ನಡೆ ತಂದುಕೊಟ್ಟಿತು.

ಆರಂಭಿಕ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ (46; 101 ಎ, 6 ಬೌಂ, 1 ಸಿ) ಕೂಡ ಉತ್ತಮ ಕಾಣಿಕೆ ನೀಡಿದರು. ಇದರ ಪರಿಣಾಮ ತಂಡ ಶನಿವಾರದ ದಿನದಾಟದ ಕೊನೆಗೆ 92 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 270 ರನ್ ಗಳಿಸಿದೆ.

ಮಂದ ಬೆಳಕಿನ ಕಾರಣ ದಿನದಾಟವನ್ನು ನಿಗದಿಗಿಂತ ಬೇಗ ಕೊನೆಗೊಳಿಸಲಾಯಿತು.

ಆತಿಥೇಯರಿಗೆ 99 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ನೀಡಿದ ಭಾರತ ಎರಡನೇ ದಿನವಾದ ಶುಕ್ರವಾರ ವಿಕೆಟ್ ಕಳೆದುಕೊಳ್ಳದೆ 43 ರನ್ ಗಳಿಸಿತ್ತು. ಶನಿವಾರ ರೋಹಿತ್ ಮತ್ತು ರಾಹುಲ್ ಅಮೋಘ ಆಟವಾಡಿ ಮುನ್ನಡೆಯನ್ನು ಚುಕ್ತಾ ಮಾಡುವತ್ತ ಹೆಜ್ಜೆ ಹಾಕಿದ್ದರು. ಆದರೆ ತಂಡದ ಮೊತ್ತ 83 ರನ್‌ಗಳಾಗಿದ್ದಾಗ ರಾಹುಲ್ ಮರಳಿದರು. ಈ ಸಂದರ್ಭದಲ್ಲಿ ಕಾಡಿದ್ದ ಆತಂಕವನ್ನು ಚೇತೇಶ್ವರ ಪೂಜಾರ ದೂರ ಮಾಡಿದರು.

ಚಹಾ ವಿರಾಮದ ವೇಳೆ ರೋಹಿತ್ ಮತ್ತು ಪೂಜಾರ ಎರಡನೇ ವಿಕೆಟ್‌ಗೆ 116 ರನ್‌ಗಳ ಜೊತೆಯಾಟ ಆಡಿ ತಂಡಕ್ಕೆ 100 ರನ್‌ಗಳ ಮುನ್ನಡೆ ಗಳಿಸಿಕೊಟ್ಟರು. ವಿರಾಮಕ್ಕೆ ತೆರಳುವ ಸ್ವಲ್ಪ ಮೊದಲು ರೋಹಿತ್ ಶರ್ಮಾ ಶತಕ ಪೂರೈಸಿದರು. ವಿದೇಶಿ ನೆಲದಲ್ಲಿ ಆಡಿದ 25 ಪಂದ್ಯಗಳಲ್ಲಿ ಇದು ಅವರ ಮೊದಲ ಟೆಸ್ಟ್ ಶತಕವಾಗಿದೆ. ಒಟ್ಟಾರೆ 43 ಪಂದ್ಯಗಳಲ್ಲಿ ಎಂಟನೇ ಶತಕ.

ರೋಹಿತ್ ಅರ್ಧಶತಕ ಪೂರೈಸಲು 145 ಎಸೆತ ವ್ಯಯಿಸಿದರು. ಇದು, ಟೆಸ್ಟ್ ಕ್ರಿಕೆಟ್‌ನಲ್ಲಿ ಅವರ ಅತ್ಯಂತ ನಿಧಾನದ ಅರ್ಧಶತಕವಾಗಿದೆ. 59 ಎಸೆತಗಳಲ್ಲಿ ಮುಂದಿನ 50 ರನ್ ಗಳಿಸಿ ಶತಕ ಬಾರಿಸಿದರು. **ಪೂಜಾರ ಮೋಹಕ ಆಟ:** ಪೂಜಾರ ಆರಂಭದಿಂದಲೇ ಮೋಹಕ ಹೊಡೆತಗಳ ಮೂಲಕ ಮಿಂಚಿದರು. ಚಹಾ ವಿರಾಮಕ್ಕೆ ತೆರಳುವಾಗ 48 ರನ್ ಗಳಿಸಿದ್ದ ಅವರು ನಂತರ ಅರ್ಧಶತಕ ಗಳಿಸಿ ಸಂಭ್ರಮಿಸಿದರು. ಸರಣಿಯಲ್ಲಿ ಈಗಾಗಲೇ ಎರಡು ಅರ್ಧಶತಕ ಗಳಿಸಿರುವ ರೋಹಿತ್ ದಿನದಾಟದ ಮೊದಲ ಓವರ್‌ನ ಆರನೇ ಎಸೆತದಲ್ಲಿ ಜೇಮ್ಸ್ ಆ್ಯಂಡರ್ಸನ್ ಅವರನ್ನು ಬೌಂಡರಿಗೆ ಅಟ್ಟಿದರು. ನಂತರ ಆಗಾಗ ಬೌಂಡರಿಗಳು ಹರಿದು ಬಂದವು. ಕ್ರಿಸ್ ವೋಕ್ಸ್ ಎಸೆತವನ್ನು ಹುಕ್ ಮಾಡಿ ಲಾಂಗ್ ಲೆಗ್ ಮೇಲಿಂದ ಸಿಕ್ಸರ್‌ಗೆ ಅಟ್ಟಿದ ರಾಹುಲ್ 41 ರನ್ ಗಳಿಸಿದ್ದಾಗ ಎಲ್‌ಬಿಡಬ್ಲ್ಯು ಬಲೆಯಿಂದ ತಪ್ಪಿಸಿಕೊಂಡರು.

ಶತಕ ಗಳಿಸಿದ ರೋಹಿತ್ ಶರ್ಮಾ (ಎಡ) ಅವರು ಚೇತೇಶ್ವರ್ ಪೂಜಾರ ಜೊತೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 191 (61.3ಓವರ್)
ಇಂಗ್ಲೆಂಡ್ (ಮೊದಲ ಇನಿಂಗ್ಸ್) 290 (84 ಓವರ್)
ಭಾರತ (ಎರಡನೇ ಇನಿಂಗ್ಸ್) 3 ವಿಕೆಟ್‌ಗೆ 270 (92 ಓವರ್)
(ಶುಕ್ರವಾರ16 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 53)
ರೋಹಿತ್ ಸಿ ವೋಕ್ಸ್ ಬಿ ರಾಬಿನ್ಸನ್ 127 (256 ಎ, 4X14, 6X1),
ರಾಹುಲ್ ಸಿ ಬೇಸ್ಟೊ ಬಿ ಆ್ಯಂಡರ್ಸನ್ 46 (101 ಎ, 4X6)
ಪೂಜಾರ ಸಿ ಅಲಿ ಬಿ ರಾಬಿನ್ಸನ್ 61 (127ಎ, 4X9), ವಿರಾಟ್ ಬ್ಯಾಟಿಂಗ್ 22 (37ಎ, 4X4) ಜಡೇಜ ಬ್ಯಾಟಿಂಗ್ 9 (33ಎ, 4X2)
ಇತರೆ (ಲೆಗ್‌ಬೈ 3, ನೋಬಾಲ್ 2) 5
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 23–8–49–1, ಒಲಿ ರಾಬಿನ್ಸನ್ 21–4–67–2, ಕ್ರಿಸ್ ವೋಕ್ಸ್ 19–5–43–0, ಕ್ರೇಗ್ ಓವರ್ಟನ್ 10–0–38–0, ಮೊಯಿನ್ ಅಲಿ 15–0–63–0, ಜೊ ರೂಟ್ 4–1–7–0

- ವಿದೇಶದಲ್ಲಿ ಶತಕ ಬಾರಿಸುವ ಮುನ್ನ ತವರಿನಲ್ಲಿ ಅತಿ ಹೆಚ್ಚು ಶತಕ ಗಳಿಸಿದ ಭಾರತದ ಆಟಗಾರ ರೋಹಿತ್ ಶರ್ಮಾ. ಈ ವರೆಗೆ ಮೊಹಮ್ಮದ್ ಅಜರುದ್ದೀನ್ ಹೆಸರಿನಲ್ಲಿ ಈ ದಾಖಲೆ ಇತ್ತು.
- ರೋಹಿತ್ ಶರ್ಮಾ ಮೂರನೇ ಬಾರಿ ಸಿಕ್ಸರ್ ಮೂಲಕ ಶತಕ ಪೂರೈಸಿದರು. 7 ಬಾರಿ ಈ ಸಾಧನೆ ಮಾಡಿದ ಸಚಿನ್ ತೆಂಡೂಲ್ಕರ್ ಮೊದಲ ಸ್ಥಾನದಲ್ಲಿದ್ದಾರೆ.
- ಇಂಗ್ಲೆಂಡ್‌ನಲ್ಲಿ ರೋಹಿತ್ ಒಟ್ಟಾರೆ 9 ಶತಕ ಬಾರಿಸಿದ್ದಾರೆ. ಈ ಪೈಕಿ ಎಂಟು ಶತಕಗಳು 2018ರ ನಂತರ ದಾಖಲಾಗಿವೆ.
- ಕೆ.ಎಲ್.ರಾಹುಲ್ ನಂತರ ಇಂಗ್ಲೆಂಡ್ ನೆಲದಲ್ಲಿ ಎಲ್ಲ ಮಾದರಿಯಲ್ಲೂ ಶತಕ ಗಳಿಸಿದ ಆಟಗಾರ ರೋಹಿತ್. ಈ ಸಾಧನೆ ಮಾಡಿದ ಏಕೈಕ ಆರಂಭಿಕ ಬ್ಯಾಟ್ಸ್‌ಮನ್.

ರೋಹಿತ್ ಶರ್ಮಾ

127	ರನ್
256	ಎಸೆತ
14	ಬೌಂಡರಿ
1	ಸಿಕ್ಸರ್
49.60	ಸ್ಟ್ರೈಕ್‌ರೇಟ್

ಮೊದಲ ವಿಕೆಟ್ ಜೊತೆಯಾಟ **83** ರನ್ (**34** ಓವರ್)

ಎರಡನೇ ವಿಕೆಟ್ ಜೊತೆಯಾಟ **153** ರನ್ (**46** ಓವರ್)

ನವೊಮಿ ಒಸಾಕ, ಸಿಟ್ಸಿಪಾಸ್‌ಗೆ ಆಘಾತ

ಅಮೆರಿಕ ಓಪನ್ ಟೆನಿಸ್ ಟೂರ್ನಿ: ಮೆಡ್ವೆಡೆವ್, ಫ್ರಾನ್ಸೆಸ್ ಗೆಲುವಿನ ಓಟ

ನ್ಯೂಯಾರ್ಕ್ (ಎಎಫ್‌ಪಿ/ ಪಿಟಿಐ): ತೀವ್ರ ಪೈಪೋಟಿಯ ನಡುವೆಯೂ ‘ಯುವ’ ಶಕ್ತಿಗೆ ಶರಣಾದ ನವೊಮಿ ಒಸಾಕ ಮತ್ತು ಸ್ಟೆಫನೊಸ್ ಸಿಟ್ಸಿಪಾಸ್ ಅಮೆರಿಕ ಓಪನ್ ಟೆನಿಸ್ ಟೂರ್ನಿಯಿಂದ ಹೊರಬಿದ್ದರು.

ಅರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನಲ್ಲಿ 18 ವರ್ಷದ ಕೆನಡಾ ಆಟಗಾರ್ತಿ ಲೇಲಾ ಫರ್ನಾಂಡೆಜ್ 5-7, 7-6 (7/2), 6-4ರಿಂದ ಹಾಲಿ ಚಾಂಪಿಯನ್, ಜಪಾನ್‌ನ ಒಸಾಕ ಅವರನ್ನು ಮಣಿಸಿದರು. ಫ್ರೆಂಚ್ ಓಪನ್ ರನ್ನರ್‌ಅಪ್, ಗ್ರೀಸ್‌ನ ಸಿಟ್ಸಿಪಾಸ್ ಅವರನ್ನು ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಹಣಾಹಣಿಯಲ್ಲಿ ಸ್ಪೇನ್‌ನ 18ರ ಹರೆಯದ ಕಾರ್ಲೋಸ್ ಅಲ್ಕರಾಜ್ 6-3, 4-6, 7-6 (7/2), 0-6, 7-6 (7/5) ರಿಂದ ಸೋಲಿಸಿದರು.

ಈ ಸೋಲಿನ ಬಳಿಕ ನಾಲ್ಕು ಬಾರಿಯ ಗ್ರ್ಯಾಂಡ್‌ಸ್ಲಾಮ್ ಚಾಂಪಿಯನ್ ಒಸಾಕ, ಕೆಲವು ಕಾಲ ಆಟದಿಂದ ವಿರಾಮ ಪಡೆಯುವುದಾಗಿ ಪ್ರಕಟಿಸಿದ್ದಾರೆ.

ಅಮೆರಿಕ ಓಪನ್‌ನಲ್ಲಿ ಒಸಾಕ ಮೂರನೇ ಬಾರಿ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದರು. ಸತತ ಎರಡನೇ ಬಾರಿ ಗೆಲ್ಲುವ ಹುಮ್ಮಸ್ಸಿನಲ್ಲಿದ್ದರು.

ಎರಡನೇ ಸುತ್ತಿನ ಪಂದ್ಯದಲ್ಲಿ ವಾಕ್‌ಓವರ್ ಪಡೆದಿದ್ದ ಒಸಾಕ, ಈ ಪಂದ್ಯದ ಎರಡನೇ ಸೆಟ್‌ನ ಕೊನೆಯ ಕ್ಷಣಗಳಲ್ಲಿ ಸರ್ವ್ ಉಳಿಸಿಕೊಳ್ಳಲಾಗದೆ ತೀವ್ರ ಹತಾಶರಾದಂತೆ ಕಂಡುಬಂದರು. ಮೊದಲ ಸೆಟ್‌ಅನ್ನು ಅವರು 37 ನಿಮಿಷಗಳಲ್ಲಿ ವಶಪಡಿಸಿಕೊಂಡಾಗ ಆರು ಏಸ್ ಸಿಡಿಸಿದ್ದರು. ಎರಡನೇ ಸೆಟ್‌ನ 12ನೇ ಗೇಮ್‌ನಲ್ಲಿ ಕೆನಡಾ ಆಟಗಾರ್ತಿಯು ಒಸಾಕ ಅವರ ಸರ್ವ್ ಮುರಿದರು. ಟೈಬ್ರೇಕ್‌ಗೆ ಸಾಗಿದ ಸೆಟ್‌ಅನ್ನು ಲೇಲಾ ತಮ್ಮದಾಗಿಸಿಕೊಂಡರು.

ಮೂರನೇ ಸೆಟ್‌ನಲ್ಲಿ ಜಾಣತನದ ಆಟವಾಡಿದ ಲೇಲಾ ಪಂದ್ಯ ಗೆದ್ದು ಬೀಗಿದರು.

ಸಿಟ್ಸಿಪಾಸ್ ಎದುರು ಗೆದ್ದ ಅಲ್ಕರಾಜ್, ಅಮೆರಿಕದ ಮೈಕೆಲ್ ಚಾಂಗ್ (1989, 17 ವರ್ಷ) ಬಳಿಕ ಅಮೆರಿಕ ಓಪನ್‌ನಲ್ಲಿ ನಾಲ್ಕನೇ ಸುತ್ತು ತಲುಪಿದ ಅತಿ ಕಿರಿಯ ಆಟಗಾರ ಎನಿಸಿಕೊಂಡರು.

ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಇತರ ಹಣಾಹಣಿಗಳಲ್ಲಿ ಅಮೆರಿಕದ ಫ್ರಾನ್ಸೆಸ್ ಟೈಫೊಯ್ 4-6, 6-3, 7-6 (8/6), 4-6, 6-1ರಿಂದ ಐದನೇ ಶ್ರೇಯಾಂಕದ ರಷ್ಯಾ ಆಟಗಾರ ಆ್ಯಂಡ್ರೆ ರುಬ್ಲೆವ್ ಎದುರು ಗೆದ್ದರೆ, ರಷ್ಯಾದ ಇನ್ನೋರ್ವ ಆಟಗಾರ ಡ್ಯಾನಿಯಲ್ ಮೆಡ್ವೆಡೆವ್ 6-0, 6-4, 6-3ರಿಂದ ಸ್ಪೇನ್‌ನ ಪ್ಯಾಬ್ಲೊ ಅಂಡುಜರ್ ಎದುರು ಜಯಿಸಿದರು.

ಮಹಿಳಾ ಸಿಂಗಲ್ಸ್‌ನಲ್ಲಿ ಬೆಲಾರಸ್‌ನ ಅರಿನಾ ಸಬಲೆಂಕಾ 6-3, 6-3ರಿಂದ ಅಮೆರಿಕದ ಡ್ಯಾನಿಲ್ಲೆ ಕಾಲಿನ್ಸ್ ಎದುರು ಗೆದ್ದು ನಾಲ್ಕನೇ ಸುತ್ತು ಪ್ರವೇಶಿಸಿದರು.

ಲೇಲಾ ಫರ್ನಾಂಡೆಜ್ ಆಟದ ಶೈಲಿ– ಎಎಫ್‌ಪಿ ಚಿತ್ರ

ಸಾನಿಯಾ–ರಾಮ್‌ಗೆ ಸೋಲು

ಮಿಶ್ರ ಡಬಲ್ಸ್‌ನಲ್ಲಿ ಸ್ಪರ್ಧಿಸಿದ್ದ ಭಾರತದ ಸಾನಿಯಾ ಮಿರ್ಜಾ ಮತ್ತು ಅಮೆರಿಕದ ರಾಜೀವ್ ರಾಮ್ ಜೋಡಿಯು ಉಕ್ರೇನ್‌ನ ಡಯಾನಾ ಯಸ್ತ್ರಮ್‌ಸ್ಕಾ ಮತ್ತು ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ವಿರುದ್ಧ ನಿರಾಸೆ ಅನುಭವಿಸಿದರು.

ಶ್ರೇಯಾಂಕರಹಿತ ಜೋಡಿಯಾಗಿದ್ದ ಸಾನಿಯಾ–ರಾಮ್ ಅವರಿಗೆ ಶುಕ್ರವಾರ 3-6 6-3 7-10ರಿಂದ ಸೋಲು ಎದುರಾಯಿತು. ಮಹಿಳಾ ಡಬಲ್ಸ್‌ನಲ್ಲಿ ಈಗಾಗಲೇ ಸೋಲು ಅನುಭವಿಸಿರುವ ಸಾನಿಯಾ ಅವರ ಅಭಿಯಾನ ಟೂರ್ನಿಯಲ್ಲಿ ಕೊನೆಗೊಂಡಿತು.

ಸದ್ಯ ರೋಹನ್ ಬೋಪಣ್ಣ ಟೂರ್ನಿಯಲ್ಲಿ ಉಳಿದುಕೊಂಡಿದ್ದು, ಕ್ರೊವೇಷ್ಯಾದ ಇವಾನ್ ದೊಡಿಗ್ ಜೊತೆಯಾಗಿ ಪುರುಷರ ಡಬಲ್ಸ್‌ನಲ್ಲಿ ಆಡಲಿದ್ದಾರೆ.

ಆರ್ಚರಿ: 12ರಂದು ಆಯ್ಕೆ ಟ್ರಯಲ್ಸ್

ಬೆಂಗಳೂರು: ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆಯು (ಕೆಎಎ) ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್‌ಗಾಗಿ ಇದೇ 12ರಂದು ಆಯ್ಕೆ ಟ್ರಯಲ್ಸ್ ನಡೆಸಲಿದೆ. ಪುರುಷ ಮತ್ತು ಮಹಿಳೆಯರಿಗಾಗಿ ಕಂಠೀರವ ಕ್ರೀಡಾಂಗಣದಲ್ಲಿ ಟ್ರಯಲ್ಸ್ ಆಯೋಜನೆಯಾಗಲಿದೆ.

ರಾಷ್ಟ್ರೀಯ ಚಾಂಪಿಯನ್‌ಷಿಪ್ ಜಾರ್ಖಂಡ್‌ನಲ್ಲಿ ಅಕ್ಟೋಬರ್ 1ರಿಂದ 10ರವರೆಗೆ ನಡೆಯಲಿದೆ. ಟ್ರಯಲ್ಸ್‌ಗಾಗಿ ಹೆಸರು ನೋಂದಾಯಿಸಲು ಇದೇ 11 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ. ಸಂ. 080-2227-5656 ಸಂಪರ್ಕಿಸಬೇಕು ಎಂದು ಕೆಎಎ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಫುಟ್‌ಬಾಲ್: ಭಾರತಕ್ಕೆ ಜಯದ ವಿಶ್ವಾಸ

ಕಠ್ಮಂಡು (ಪಿಟಿಐ): ಮೊದಲ ಪಂದ್ಯದಲ್ಲಿ ತನಗಿಂತ ಕೆಳ ರ‍್ಯಾಂಕಿನ ನೇಪಾಳ ಎದುರು ಡ್ರಾ ಸಾಧಿಸಿದ್ದ ಭಾರತ ಫುಟ್‌ಬಾಲ್ ತಂಡವು ಭಾನುವಾರ ಎರಡನೇ ಸ್ನೇಹಪರ ಪಂದ್ಯದಲ್ಲಿ ಜಯದ ವಿಶ್ವಾಸದಲ್ಲಿದೆ.

ಮಾಲ್ಡಿವ್ಸ್‌ನಲ್ಲಿ ಅಕ್ಟೋಬರ್ 3ರಿಂದ 13ರವರೆಗೆ ನಿಗದಿಯಾಗಿರುವ ಸ್ಯಾಫ್ ಚಾಂಪಿಯನ್‌ಷಿಪ್‌ನ ಪೂರ್ವಸಿದ್ಧತೆಯಾಗಿ ಸುನಿಲ್ ಚೆಟ್ರಿ ನಾಯಕತ್ವದ ಭಾರತ, ಹಿಮಾಲಯದ ತಂಡದ ಎದುರು ಈ ಪಂದ್ಯ ಆಡುತ್ತಿದೆ. ಇದೇ ವೇಳೆ ಆತಿಥೇಯ ನೇಪಾಳ ಒದಗಿಸಿರುವ ತರಬೇತಿ ಸೌಲಭ್ಯಗಳ ಕುರಿತು ಭಾರತ ಫುಟ್‌ಬಾಲ್ ತಂಡವು ಅಸಮಾಧಾನ ವ್ಯಕ್ತಪಡಿಸಿದೆ.

ಫಿಫಾ ರ‍್ಯಾಂಕಿಂಗ್‌ನಲ್ಲಿ 171ನೇ ಸ್ಥಾನದಲ್ಲಿರುವ ನೇಪಾಳ 105ನೇ ರ‍್ಯಾಂಕಿನ ಭಾರತದ ಎದುರು ಗುರುವಾರ ನಡೆದ ಪಂದ್ಯದಲ್ಲಿ 1–1ರ ಸಮಬಲ ಸಾಧಿಸಿತ್ತು.

ಸುನಿಲ್ ಚೆಟ್ರಿ

ಎಎಸ್‌ಎಫ್‌ಗೆ ಸೈರಸ್ ಉಪಾಧ್ಯಕ್ಷ

ಚೆನ್ನೈ (ಪಿಟಿಐ): ಭಾರತ ಸ್ಕ್ವಾಷ್ ರ‍್ಯಾಕೆಟ್ ಫೆಡರೇಷನ್‌ನ (ಎಸ್‌ಆರ್‌ಎಫ್‌ಐ) ಪ್ರಧಾ ಕಾರ್ಯದರ್ಶಿಯಾಗಿರುವ ಸೈರಸ್ ಪೊಂಚಾ ಅವರು ಏಷ್ಯನ್ ಸ್ಕ್ವಾಷ್ ಫೆಡರೇಷನ್‌ಗೆ (ಎಎಸ್‌ಎಫ್) ಉಪಾಧ್ಯಕ್ಷರಾಗಿ ಶನಿವಾರ ಆಯ್ಕೆಯಾಗಿದ್ದಾರೆ.

ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಪೊಂಚಾ ಅವರನ್ನು ಎಎಸ್‌ಎಫ್‌ನ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಆಯ್ಕೆ ಮಾಡಲಾಗಿದ್ದು, ನಾಲ್ಕು ವರ್ಷಗಳ ಕಾಲ ಉಪಾಧ್ಯಕ್ಷ ಹುದ್ದೆಯಲ್ಲಿರುವರು ಎಂದು ಎಎಸ್‌ಎಫ್ ಪ್ರಕಟಣೆಯಲ್ಲಿ ತಿಳಿಸಿದೆ. ವಿಶ್ವ ಸ್ಕ್ವಾಷ್ ಮಾಜಿ ಅಧ್ಯಕ್ಷ ಎನ್ ರಾಮಚಂದ್ರನ್ ಮತ್ತು ಪ್ರಸ್ತುತ ಎಸ್‌ಆರ್‌ಎಫ್‌ಐನ ಅಧ್ಯಕ್ಷ ದೇವೇಂದ್ರನಾಥ ಸಾರಂಗಿ ಅವರು ಈ ಮೊದಲು ಎಎಸ್‌ಎಫ್ ಉಪಾಧ್ಯಕ್ಷರಾಗಿದ್ದರು.

ವಾಲಿಬಾಲ್: ಕಾರ್ತಿಕ್ ನಾಯಕ

ಕಾರ್ತಿಕ್

ಬೆಂಗಳೂರು: ಕರ್ನಾಟಕದ ಕಾರ್ತಿಕ್ ಅಶೋಕ್ ಭಾರತ ಪುರುಷರ ವಾಲಿಬಾಲ್ ತಂಡದ ನಾಯಕರಾಗಿ ನೇಮಕಗೊಂಡಿದ್ದಾರೆ. ಇದೇ 12 ರಿಂದ 19ರವರೆಗೆ ಜಪಾನಿನ ಚಿಬಾ ಮತ್ತು ಫುನಾಬಶಿಯಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಅವರು ತಂಡ ಮುನ್ನಡೆಸುವರು ಎಂದು ಪ್ರಕಟಣೆ ತಿಳಿಸಿದೆ.

Divisa
www.divisastore.com
Dr. Juneja's ಡಾ.ಆರ್ಥೋ Ayurvedic Oil, Capsules, Spray & Ointment

ನಮಗೆ ಗೆಲುವಿನ ಪಾಠಗಳನ್ನು ಹೇಳಿ ಕೊಟ್ಟವರು, ಯಾವತ್ತೂ ನೋವಿನಿಂದ ಬಳಲಿ ತೊಂದರೆಗೆ ಈಡಾಗಬಾರದು

ಬನ್ನಿ, ಒಟ್ಟಾಗಿ ನಾವೆಲ್ಲ ಒಂದು ಪುಟ್ಟ ಪ್ರಯತ್ನ ಮಾಡೋಣ

ಶಿಕ್ಷಕರ ದಿನಾಚರಣೆ ಆಚರಿಸುವ ಈ ಶುಭ ದಿನದಂದು ಡಾ. ಆರ್ಥೋ ಆಯುರ್ವೇದಿಕ ತೈಲ 120 ಎಂಎಲ್ ಖರೀದಿಯ ಮೇಲೆ, ಡಾ. ಆರ್ಥೋ ಪರಿವಾರ ಅರ್ಪಿಸುತ್ತಿದೆ “ನೋವಿನಿಂದ ಮುಕ್ತಿ ಪಡೆಯುವ ಸದಾವಕಾಶ”

BUY Dr. Ortho Oil 120ml & Get Dr. Ortho 30 Capsules Free

ಪಡೆಯಿರಿ ಡಾ.ಆರ್ಥೋ ಆಯುರ್ವೇದಿಕ 30 ಕ್ಯಾಪ್ಸೂಲ್ಸ್ FREE*

ಹೋಮ್ ಡೆಲಿವರಿ ಕೂಡ ಉಚಿತ#
ಈ ಕೊಡುಗೆ ಇಂದು ಮಾತ್ರ ಉಪಲಬ್ಧ

Terms & Conditions
1. ನಿಮ್ಮ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ ಅಥವಾ ನಮ್ಮ ವೆಬ್‌ಸೈಟ್‌ಗೆ ಭೇಟಿ ಕೊಡಿ www.drorthooil.com
2. ಎಂ.ಆರ್.ಪಿ ರೂ. 295.00 ಬೆಲೆಯ 120 ಎಂಎಲ್; ಡಾ.ಆರ್ಥೋ ಆಯುರ್ವೇದಿಕ ತೈಲ ಖರೀದಿಯ ಮೇಲೆ ಉಚಿತವಾಗಿ ಪಡೆಯಿರಿ, ಎಂ.ಆರ್.ಪಿ ರೂ. 183.00 ಮೌಲ್ಯದ ಡಾ.ಆರ್ಥೋ ಆಯುರ್ವೇದಿಕ ಕ್ಯಾಪ್ಸೂಲ್ಸ್ (30).
3. #Shipping charges are free (PREPAID) inclusive of all taxes.
4. All rights Reserved.
Payment Mode Available : RuPay VISA MasterCard Maestro American Express Paytm G Pay pay

Available at all medical & general stores | www.drorthooil.com | www.facebook.com/drorthooil | 24x7 Helpline: 7876977777
Helpful in Painful Conditions
Dr. Ortho Oil
An Ayurvedic Proprietary Medicine
20% EXTRA
100ml+20ml Extra
डा.ऑर्थो
आयुर्वेदिक कैप्सूल
Dr. Ortho
100% Ayurvedic Capsules
HELPFUL IN PAINFUL CONDITIONS
ASIA'S MOST PROMISING BRAND